ಶುಕ್ರವಾರ, ಡಿಸೆಂಬರ್ 27, 2024 | ಬೆಂಗಳೂರು | ₹ 7.00 | ಸಂಪುಟ 77| ಸಂಚಿಕೆ 358 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ

2024ರಲ್ಲಿ ಸದ್ದು ಮಾಡಿದ ಸಿನಿಮಾಗಳು ಯಾವುವು? ಹೇಗಿತ್ತು ಚಂದನವನಕ್ಕೆ ಈ ವರ್ಷ?

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,472	23,750	₹80,060 (ಬೆಂಗಳೂರು)	₹93,100 (ಬೆಂಗಳೂರು)	85.27

ಆಪತ್ಬಾಂಧವ ಅರ್ಥಮಾಂತ್ರಿಕ



• ನಾರಾಯಣ ಎ.



ಮನಮೋಹನ ಸಿಂಗ್ ಸಾರ್ಥಕ ಬದುಕನ್ನು ಕಂಡ ಅರ್ಥಮಾಂತ್ರಿಕ. ಮಿತಮಾತು ಮತ್ತು ಮೃದುಮಾತಿನ ಶಕ್ತಿ ಏನು ಎಂದು ತೋರಿಸಿಕೊಟ್ಟ ಸಾಧಕ. ಪ್ರಪಂಚದಲ್ಲಿ ಮನಮೋಹನ ಸಿಂಗ್ ಅವರಿಗಿಂತ ಹೆಚ್ಚು ಪ್ರಖ್ಯಾತ ಅರ್ಥಶಾಸ್ತ್ರಜ್ಞರು ಇರಬಹುದು. ಆದರೆ, ಒಬ್ಬ ಅರ್ಥಶಾಸ್ತ್ರಜ್ಞನಾಗಿ ಅರ್ಥವ್ಯವಸ್ಥೆಯ ಎಲ್ಲಾ ಆಯಕಟ್ಟಿನ ಹುದ್ದೆಗಳನ್ನು ಅಲಂಕರಿಸಿದ ಇನ್ನೊಬ್ಬ ಅರ್ಥಶಾಸ್ತ್ರಜ್ಞನನ್ನು ಭಾರತ ಮಾತ್ರವಲ್ಲ, ಯಾವ ದೇಶವೂ ಕಂಡಿರಲಾರದು. ಅರ್ಥಶಾಸ್ತ್ರದ ಪ್ರಾಧ್ಯಾಪಕ, ಪ್ರಧಾನಮಂತ್ರಿಯ ಆರ್ಥಿಕ ಸಲಹೆಗಾರ, ಕೇಂದ್ರ ವಿತ್ತ ಕಾರ್ಯದರ್ಶಿ, ರಿಸರ್ವ್ ಬ್ಯಾಂಕ್ ಗವರ್ನರ್, ಯೋಜನಾ ಆಯೋಗದ ಉಪಾಧ್ಯಕ್ಷ, ಸೌತ್-ಸೌತ್ ಕಮಿಷನ್‌ನ ಅಧ್ಯಕ್ಷ, ವಿಶ್ವವಿದ್ಯಾಲಯ ಅನುದಾನ ಆಯೋಗದ ಅಧ್ಯಕ್ಷ, ನಂತರ ಕೇಂದ್ರ ವಿತ್ತ ಸಚಿವ, ಕೊನೆಗೆ ಪ್ರಧಾನ ಮಂತ್ರಿ, ಅದೂ ಎರಡು ಅವಧಿಗೆ. ಇವುಗಳಲ್ಲಿ ಯಾವುದಾದರೂ ಒಂದು ಹುದ್ದೆಯನ್ನು ಪಡೆದರೆ ಅದೇ ಸಾರ್ಥಕ ಎಂದು ಭಾವಿಸುವವರಿದ್ದಾರೆ. ಮನಮೋಹನ್ ಸಿಂಗ್ ಎಲ್ಲಾ ಹುದ್ದೆಗಳನ್ನು ಅಲಂಕರಿಸಿಯೂ ನಿಗರ್ವಿಯಾಗಿ ಉಳಿದು ನಿರ್ಗಮಿಸಿದರು.

ಮನಮೋಹನ ಸಿಂಗ್ ಅವರು ಅರ್ಥ ಮಂತ್ರಿಯಾದ ಸಂದರ್ಭವೇ ವಿಚಿತ್ರ. ಒಳ್ಳೆಯ ಕಾಲದಲ್ಲಿ ಸವಾಲಿನ ಹುದ್ದೆ ಎಲ್ಲರೂ ಬಯಸುತ್ತಾರೆ. ಅದು1991ರ ಬೇಸಗೆ. ಅದೊಂದು ದಿನ ಯುಜಿಸಿ ಕಚೇರಿಯಲ್ಲಿ ಯಾವುದೋ ಕಡತದ ಪರಿಶೀಲನೆಯಲ್ಲಿ ಮೈಮರೆತಿದ್ದಾಗ ಮನಮೋಹನ ಸಿಂಗ್ ಅವರಿಗೆ ಫೋನ್ ಕರೆಯೊಂದು ಬರುತ್ತದೆ. ಫೋನ್ ಮಾಡಿದವರು ಆಗ ತಾನೇ ಪ್ರಧಾನಿಯಾಗಿದ್ದ ಪಿ.ವಿ. ನರಸಿಂಹ ರಾವ್. ಹೊಸ ಸರ್ಕಾರದಲ್ಲಿ ವಿತ್ತ ಮಂತ್ರಿಯಾಗಬೇಕು ಎಂದು ನರಸಿಂಹ ರಾವ್ ಕೇಳಿಕೊಳ್ಳುತ್ತಾರೆ. ಭಾರತದ ಅರ್ಥವ್ಯವಸ್ಥೆ ರಸಾತಳಕ್ಕೆ ಕುಸಿದಿದ್ದ ದಿನಗಳವು. ಭಾರತದ ರಾಜಕೀಯದ ಮಹಾಮೌನಿಗಳಿಬ್ಬರ ನಡುವೆ ಅದ್ಯಾವ ಮಾತುಕತೆ ನಡೆಯಿತೋ? ಆ ದುರ್ಭರ ಪರಿಸ್ಥಿತಿಯಲ್ಲೂ ಅರ್ಥಮಂತ್ರಿಯಾಗಲು ಸಿಂಗ್ ಒಪ್ಪಿಕೊಳ್ಳುತ್ತಾರೆ. ಆ ನಂತರದ್ದು ಇತಿಹಾಸ.

1991ರ ಜೂನ್ 24ನೆಯ ದಿನ ಸಾಯಂಕಾಲ ಲೋಕಸಭೆಯಲ್ಲಿ ಮನಮೋಹನ ಸಿಂಗ್ ಮಂಡಿಸಿದ ಹೊಸ ಸರ್ಕಾರದ ಹೊಸ ಬಜೆಟ್ ಭಾರತದ ಅರ್ಥ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದನ್ನು ತೆರೆಯಿತು. 'ಯಾವಾಗ ಏನು ಆಗಬೇಕೋ ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ (Nobody power on earth can stop an idea whose time has come) ಎಂದು ಸಿಂಗ್ ಒಬ್ಬ ತತ್ವಶಾಸ್ತ್ರಜ್ಞನ ರೀತಿ ಆ ಸಂದರ್ಭದಲ್ಲಿ ಹೇಳಿದ್ದರು. ಅರ್ಥಶಾಸ್ತ್ರ ಮತ್ತು ತತ್ವಶಾಸ್ತ್ರಕ್ಕೆ ಅನನ್ಯ ನಂಟಿದೆ.

9ನೇ ಪುಟ ನೋಡಿ

ದೇಶ ಗೌರವಾನ್ವಿತ ನಾಯಕರೊಬ್ಬರನ್ನು ಕಳೆದುಕೊಂಡಿದೆ. ಅವರು ದೇಶದ ಆರ್ಥಿಕ ನೀತಿಗೆ ಹೊಸ ರೂಪ ನೀಡಿದವರು. ಹಣಕಾಸು ಸಚಿವರಾಗಿ, ಪ್ರಧಾನಿಯಾಗಿ ದೇಶದ ಜನರ ಜೀವನಮಟ್ಟವನ್ನು ಸುಧಾರಿಸಲು ಗಣನೀಯವಾದ ಕೊಡುಗೆ ನೀಡಿದ್ದಾರೆ

ನರೇಂದ್ರ ಮೋದಿ, ಪ್ರಧಾನಿ

ಮನಮೋಹನ ಸಿಂಗ್ ಅವರ ಅಗಲಿಕೆಯೊಂದಿಗೆ ದೇಶ ಮುತ್ಸದ್ದಿ ನಾಯಕರೊಬ್ಬರನ್ನು ಕಳೆದುಕೊಂಡಿದೆ. ಆರ್ಥಿಕ ಉದಾರೀಕರಣ ಕುರಿತ ಅವರ ನೀತಿಗಳು ಕೋಟ್ಯಂತರ ಜನರ ಬದುಕು ಬದಲಿಸಿದೆ.

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

26.09.1932
26.12.2024

ಮನಮೋಹನ ಸಿಂಗ್ ಇನ್ನಿಲ್ಲ

ನವದೆಹಲಿ (ಪಿಟಿಐ): ಭಾರತದ ಆರ್ಥಿಕ ಸುಧಾರಣೆಗಳ ಹರಿಕಾರ, ಮಾಜಿ ಪ್ರಧಾನಿ ಮನಮೋಹನ ಸಿಂಗ್ (92) ಅವರು ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಏಮ್ಸ್) ಗುರುವಾರ ನಿಧನರಾದರು. ಅವರಿಗೆ ಪತ್ನಿ ಗುರುಶರಣ್ ಸಿಂಗ್ ಹಾಗೂ ಮೂವರು ಪುತ್ರಿಯರು ಇದ್ದಾರೆ. ಅವರು ಕೆಲ ದಿನಗಳಿಂದ ವಯೋಸಹಜ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು.

9ನೇ ಪುಟ ನೋಡಿ

ಇಂದು ರಜೆ

ಬೆಂಗಳೂರು: ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ನಿಧನದ ಗೌರವಾರ್ಥ ರಾಜ್ಯದಲ್ಲಿ 27ರಂದು ಸರ್ಕಾರಿ ರಜೆ ಘೋಷಿಸಲಾಗಿದೆ. ಜೊತೆಗೆ, ಏಳು ದಿನಗಳ ಶೋಕಾಚರಣೆ ಘೋಷಿಸಲಾಗಿದೆ.

ನುಡಿ ನಮನ 3 7 9



ಬೆಳಗಾವಿಯಲ್ಲಿ ಗುರುವಾರ ನಡೆದ ಎಐಸಿಸಿ ಕಾರ್ಯಕಾರಿಣಿ ಸಮಿತಿ ಸಭೆಗೆ, ನಾಯಕರಾದ ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಡಿ.ಕೆ.ಶಿವಕುಮಾರ್, ರಣದೀಪ್‌ಸಿಂಗ್ ಸುರ್ಜೆವಾಲಾ ಮುಂತಾದವರು 'ನವ ಸತ್ಯಾಗ್ರಹ' ಪಥಸಂಚಲನ ನಡೆಸಿದರು – ಚಿತ್ರ: ಗೋವಿಂದರಾಜ ಜವಳಿ

'ಸ್ವಾತಂತ್ರ್ಯ ಸಮರ' ಮಾದರಿ ರಾಜಕೀಯ ಜನಾಂದೋಲನ

ಪಕ್ಷ ಬಲವರ್ಧನೆ ಪಣ

• ರಾಜೇಶ್ ರೈ ಚಟ್ಲ

ಬೆಳಗಾವಿ: 'ಗಾಂಧಿ ಭಾರತ'ದ ಬೆಳಕಿನಲ್ಲಿ, ಅಂಬೇಡ್ಕರ್ ಪ್ರಣೀತ ಸಂವಿಧಾನದ ಹೊಳಪಿನಲ್ಲಿ 'ಸ್ವಾತಂತ್ರ್ಯ ಸಮರ' ಮಾದರಿಯಲ್ಲಿಯೇ ದೇಶವ್ಯಾಪಿ ಆಕ್ರಮಣಕಾರಿ ರಾಜಕೀಯ ಜನಾಂದೋಲನ ರೂಪಿಸಿ ಪಕ್ಷದ ಸಂಘಟನೆಗೆ ಬಲ ತುಂಬುವ ಸಂಕಲ್ಪವನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿ ತೊಟ್ಟಿದೆ.

ಮಹಾತ್ಮ ಗಾಂಧಿ ಅಧ್ಯಕ್ಷತೆಯಲ್ಲಿ 1924ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಸವಿನೆನಪಿನಲ್ಲಿ ಇಲ್ಲಿನ ವೀರಸೌಧದಲ್ಲಿ 'ನವ ಸತ್ಯಾಗ್ರಹ ಬೈಠಕ್' ಹೆಸರಿನಲ್ಲಿ ವಿಸ್ತೃತ ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿ (ಸಿಡಬ್ಲ್ಯುಸಿ) ಸಭೆ ಗುರುವಾರ ನಡೆಯಿತು. ಗಾಂಧೀಜಿಯವರು ಕೊಟ್ಟ ದೀಪ ಹಿಡಿದು, ದೇಶದುದ್ದಕ್ಕೂ ಕಾಂಗ್ರೆಸ್‌ನ ನೆಲೆಯನ್ನು ಮತ್ತೆ ವಿಸ್ತರಿಸಲು ಬೇಕಾದ ಕ್ರಿಯಾತ್ಮಕ ಹಾದಿಗಳೇನಿರಬೇಕು ಎಂಬ ವ್ಯಾಪಕ ಚರ್ಚೆಯೂ ಸಭೆಯಲ್ಲಿ ನಡೆಯಿತು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ 150ಕ್ಕೂ ಹೆಚ್ಚು 'ಕೈ' ನಾಯಕರು ಭಾಗವಹಿಸಿದರು. ಆದರೆ, ಕಾಂಗ್ರೆಸ್ ಸಂಸದೀಯ ಮಂಡಳಿಯ ಅಧ್ಯಕ್ಷರೂ ಆಗಿರುವ ರಾಜ್ಯಸಭೆ ಸದಸ್ಯೆ ಸೋನಿಯಾ ಗಾಂಧಿ ಮತ್ತು ಸಂಸದೆ ಪ್ರಿಯಾಂಕಾ ಗಾಂಧಿ ಗೈರಾದರು.

ಸಭೆಯ ಬಳಿಕ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್ ಮತ್ತು ಜೈರಾಮ್ ರಮೇಶ್ ಅವರು ನಿರ್ಣಯಗಳನ್ನು ಪ್ರಕಟಿಸಿದರು.

'ಗಾಂಧೀಜಿ ಅಧ್ಯಕ್ಷತೆಯಲ್ಲಿ ನೂರು ವರ್ಷಗಳ ಹಿಂದೆ ಅಧಿವೇಶನ ನಡೆದ ಜಾಗದಲ್ಲಿಯೇ ನಮ್ಮ ಕಾರ್ಯಕಾರಿಣಿ ಸಭೆ ನಡೆದಿದೆ. ಅವರು ಈ ಹಿಂದೆ ಯಾವ ವಿಷಯಗಳ ವಿರುದ್ಧ ಹೋರಾಟ ಮಾಡಿದ್ದರೂ ಇಂದಿಗೂ ಅದೇ ವಿಷಯಗಳ ಬಗ್ಗೆ ಹೋರಾಟ ಮಾಡಬೇಕಿದೆ. ಸಭೆಯಲ್ಲಿ ಎರಡು ನಿರ್ಣಯಗಳನ್ನು ತೆಗೆದುಕೊಂಡಿದ್ದೇವೆ' ಎಂದು ವೇಣುಗೋಪಾಲ್ ಹೇಳಿದರು.

11ನೇ ಪುಟ ನೋಡಿ

ಎರಡು ನಿರ್ಣಯಗಳೇನು?

- ಮಹಾತ್ಮ ಗಾಂಧಿ ಪ್ರತಿಪಾದಿಸಿದ ಆಶಯಗಳನ್ನು ಮತ್ತೆ ಜನರ ಬಳಿಗೆ ಕೊಂಡೊಯ್ಯುವುದು. ಗಾಂಧೀಜಿಯವರು ವಿರೋಧಿಸಿದ್ದ ಅಸಮಾನತೆ, ಅಸ್ಪೃಶ್ಯತೆ ಇನ್ನೂ ತಾಂಡವವಾಡುತ್ತಿದ್ದು, ಅದನ್ನು ಹೋಗಲಾಡಿಸಿ ಪ್ರೀತಿ–ಅನುಕಂಪ, ಭ್ರಾತೃತ್ವ ನೆಲೆಗೊಳಿಸಲು ಯತ್ನ
- ಪಕ್ಷ ಸಂಘಟನೆ, ಬಲವರ್ಧನೆಗೆ ಡಿ. 27ರಿಂದ 2026ರ ಜನವರಿ 26ರವರೆಗೆ 13 ತಿಂಗಳು ದೇಶವ್ಯಾಪಿ ದೊಡ್ಡ ಮಟ್ಟದಲ್ಲಿ ರಾಜಕೀಯ ಆಂದೋಲನ. 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಯಾತ್ರೆ. ಬೆಲೆ ಏರಿಕೆ, ಬಿಜೆಪಿ ಸರ್ಕಾರಗಳ ಭ್ರಷ್ಟಾಚಾರ, ದುರಾಡಳಿತದಿಂದಾಗಿ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಮುಂದಿಟ್ಟು ಯಾತ್ರೆ

ವಿಶ್ವದ ಅತಿ ದೊಡ್ಡ ಅಣೆಕಟ್ಟು ನಿರ್ಮಾಣಕ್ಕೆ ಚೀನಾ ನಿರ್ಧಾರ

ಬೀಜಿಂಗ್ (ಪಿಟಿಐ): ವಿಶ್ವದಲ್ಲೇ ಅತಿ ದೊಡ್ಡದಾದ ಅಣೆಕಟ್ಟು ನಿರ್ಮಾಣಕ್ಕೆ ಚೀನಾ ನಿರ್ಧರಿಸಿದೆ. 137 ಬಿಲಿಯನ್ ಡಾಲರ್ (₹11.67 ಲಕ್ಷ ಕೋಟಿ) ವೆಚ್ಚದಲ್ಲಿ ಈ ಅಣೆಕಟ್ಟು ನಿರ್ಮಾಣವಾಗಲಿದೆ. ಬ್ರಹ್ಮಪುತ್ರ ನದಿಗೆ ಈ ಅಣೆಕಟ್ಟು ನಿರ್ಮಿಸಲು ಉದ್ದೇಶಿಸಿದ್ದು, ಈ ನದಿ ನೀರಿನಲ್ಲಿ ಪಾಲು ಹೊಂದಿರುವ ಭಾರತ ಹಾಗೂ ಬಾಂಗ್ಲಾದೇಶ ಕಳವಳ ವ್ಯಕ್ತಪಡಿಸಿವೆ.

10

ಚಿನಕುರುಳಿ

ಪ್ರಕಾಶ್ ಶೆಟ್ಟಿ



'ಚಾರಿತ್ರಿಕ ಸತ್ಯ ಹುಡುಕುವ ಹೋರಾಟ'

ನವದೆಹಲಿ (ಪಿಟಿಐ): ಸೋಮನಾಥದಿಂದ ಆರಂಭಗೊಂಡು ಸಂಭಲ್‌ವರೆಗೆ ಹಾಗೂ ಅದರಾಚೆಗಿನ ವಿವಾದಗಳು 'ಐತಿಹಾಸಿಕ ಸತ್ಯ' ಮತ್ತು 'ನಾಗರಿಕತೆಯ ನ್ಯಾಯ' ಹುಡುಕುವ ಹೋರಾಟವಾಗಿದೆ ಎಂದು 'ಆರ್ಗನೈಸರ್' ನಿಯತಕಾಲಿಕದ ಸಂಪಾದಕೀಯದಲ್ಲಿ ವಿಶ್ಲೇಷಿಸಲಾಗಿದೆ.

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ದೇಶದಲ್ಲಿ ಹೊಸದಾಗಿ ಮಂದಿರ–ಮಸೀದಿಗಳ ವಿವಾದಗಳನ್ನು ಕೆದಕುತ್ತಿರುವುದಕ್ಕೆ ತೀವ್ರ ಕಳವಳ ವ್ಯಕ್ತಪಡಿಸಿದ ಕೆಲವು ದಿನಗಳ ಬಳಿಕ ಸಂಘದ ಮುಖವಾಣಿಯಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿದೆ.

'ಸಂಭಲ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಜನರ ಹೃದಯವನ್ನು ತಟ್ಟಿವೆ' ಎಂದಿದೆ.

11ನೇ ಪುಟ ನೋಡಿ

ದೇಶದಾದ್ಯಂತ ವಿಎಚ್‌ಪಿ ಅಭಿಯಾನ

ದೇವಸ್ಥಾನಗಳನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸಬೇಕು ಎಂದು ಆಗ್ರಹಿಸಿ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ದೇಶದಾದ್ಯಂತ ಅಭಿಯಾನ ಕೈಗೊಳ್ಳಲು ನಿರ್ಧರಿಸಿದೆ.

'ಜಾಗರಣ್ ಅಭಿಯಾನ'ಕ್ಕೆ ಆಂಧ್ರಪ್ರದೇಶದ ವಿಜಯವಾಡದಲ್ಲಿ ಜನವರಿ 5 ರಂದು ಚಾಲನೆ ನೀಡಲಾಗುವುದು ಎಂದು ವಿಎಚ್‌ಪಿ ಪ್ರಧಾನ ಕಾರ್ಯದರ್ಶಿ (ಸಂಘಟನಾ) ಮಿಲಿಂದ್ ಪರಾಂಡೆ ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಎಲ್ಲಾ ರಾಜ್ಯ ಸರ್ಕಾರಗಳು ದೇವಾಲಯಗಳ ಮೇಲಿನ ನಿಯಂತ್ರಣ, ನಿರ್ವಹಣೆ ಮತ್ತು ಅದರ ದೈನಂದಿನ ಚಟುವಟಿಕೆಗಳಿಂದ ದೂರ ಸರಿಯಬೇಕು' ಎಂದು ಹೇಳಿದರು.

'ದೇಶದಲ್ಲಿರುವ ಯಾವುದೇ ಮಸೀದಿ ಅಥವಾ ಚರ್ಚ್ ಸರ್ಕಾರದ ನಿಯಂತ್ರಣದಲ್ಲಿಲ್ಲ. ಹೀಗಿರುವಾಗ, ಹಿಂದೂಗಳ ವಿಚಾರದಲ್ಲಿ ಏಕೆ ಈ ತಾರತಮ್ಯ' ಎಂದು ಪ್ರಶ್ನಿಸಿದರು.

'ಶೇ 30ಕ್ಕಿಂತ ಹೆಚ್ಚಿನ ಬಡ್ಡಿ ವಿಧಿಸಬಹುದು'



ನವದೆಹಲಿ (ಪಿಟಿಐ): 'ಕ್ರೆಡಿಟ್ ಕಾರ್ಡ್‌ನ ಬಾಕಿಗಳ ಮೇಲೆ ಬ್ಯಾಂಕುಗಳು ಶೇ 30ಕ್ಕಿಂತ ಹೆಚ್ಚಿನ ಬಡ್ಡಿಯನ್ನು ವಿಧಿಸಬಹುದು. ಇಂತಿಷ್ಟೇ ಬಡ್ಡಿ ವಿಧಿಸಬೇಕು ಎಂದು ಕಡ್ಡಾಯ ಮಾಡುವುದು 1949ರ ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆಯ ಉದ್ದೇಶಕ್ಕೆ ವಿರುದ್ಧವಾದ ನಿಲುವಾಗುತ್ತದೆ' ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

'ವರ್ಷಕ್ಕೆ ಶೇ 30ಕ್ಕಿಂತ ಹೆಚ್ಚಿನ ಬಡ್ಡಿ ವಿಧಿಸಬಾರದು. ಹಾಗೆ ಮಾಡುವುದು ಗ್ರಾಹಕರ ಶೋಷಣೆಯಾಗುತ್ತದೆ' ಎಂದು ರಾಷ್ಟ್ರೀಯ ಗ್ರಾಹಕ ವಿವಾದ ಪರಿಹಾರ ಆಯೋಗ (ಎನ್‌ಸಿಡಿಆರ್‌ಸಿ) 16 ವರ್ಷಗಳ ಹಿಂದೆ ನೀಡಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದು ಮಾಡಿದೆ.

'ಎನ್‌ಸಿಡಿಆರ್‌ಸಿ ನೀಡಿದ್ದ ತೀರ್ಪು, ಆರ್‌ಬಿಐ ಅಧಿಕಾರದಲ್ಲಿ ಮೂಗು ತೂರಿಸಿದಂತಾಗುತ್ತಿತ್ತು. ಜೊತೆಗೆ ಬ್ಯಾಂಕು ಹಾಗೂ ಗ್ರಾಹಕರ ಮಧ್ಯೆ ನಡೆದಿರುವ ಒಪ್ಪಂದದ ಕರಾರುಗಳನ್ನು ಬದಲಿಸಲು ಎನ್‌ಸಿಡಿಆರ್‌ಸಿಗೆ ಅಧಿಕಾರವಿಲ್ಲ' ಎಂದು ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಹಾಗೂ ಸತೀಶ್ ಚಂದ್ರ ಶರ್ಮಾ ಅವರಿದ್ದ ಪೀಠ ಹೇಳಿದೆ.

11ನೇ ಪುಟ ನೋಡಿ



ದೈನಂದಿನ ಶೈಕ್ಷಣಿಕ, ವ್ಯಾವಹಾರಿಕ ಚಟುವಟಿಕೆಗಳಿಗೆ ತೊಡಕು

927 ಗ್ರಾಮಕ್ಕಿಲ್ಲ 4ಜಿ ಸಂಪರ್ಕ



• ಜಯಸಿಂಹ ಆರ್.

ಬೆಂಗಳೂರು: ರಾಜ್ಯದ ಹಲವು ನಗರ ಮತ್ತು ಪಟ್ಟಣಗಳು ಐದನೇ ತಲೆಮಾರಿನ (5ಜಿ) ಇಂಟರ್‌ನೆಟ್ ಸೇವೆ ಪಡೆಯುತ್ತಿದ್ದರೆ, ರಾಜ್ಯದ 927 ಕಂದಾಯ ಗ್ರಾಮಗಳಲ್ಲಿ 4ನೇ ತಲೆಮಾರಿನ (4ಜಿ) ಇಂಟರ್‌ನೆಟ್ ಸೇವೆಯೂ ಲಭ್ಯವಿಲ್ಲ. ಭಾರತ್‌ನೆಟ್ ಯೋಜನೆ ಅಡಿ 'ಸಾರ್ವಜನಿಕ ವೈಫೈ' ಸಂಪರ್ಕವೂ ತಲುಪಿಲ್ಲ.

ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಸಾರ್ವಜನಿಕ ಸಂಪರ್ಕ ಸಚಿವಾಲಯವು ಈಚೆಗೆ ರಾಜ್ಯಸಭೆಗೆ ಸಲ್ಲಿಸಿರುವ ಲಿಖಿತ ಉತ್ತರದಲ್ಲಿ ಈ ಮಾಹಿತಿ ಇದೆ.



ಸರ್ಕಾರದ ಸೇವೆಗಳು, ವಿವಿಧ ಸವಲತ್ತುಗಳು, ವಿದ್ಯಾರ್ಥಿಗಳ ಪಠ್ಯ ಪೂರಕ ಚಟುವಟಿಕೆಗಳು ಸಂಪೂರ್ಣ ಡಿಜಿಟಲೀಕರಣವಾಗಿರುವ ಈ ಹೊತ್ತಿನಲ್ಲಿ, 4ಜಿ ನೆಟ್‌ವರ್ಕ್ ಇಲ್ಲದ ಗ್ರಾಮ ಮತ್ತು ಕಾಲೊನಿಗಳ ಜನರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ವಿವಿಧ ಅರ್ಜಿಗಳ ಸಲ್ಲಿಕೆ, ಅರ್ಜಿಗಳ ಡೌನ್‌ಲೋಡ್, ದೈನಂದಿನ ವ್ಯವಹಾರದಲ್ಲಿ ಯುಪಿಐ ಬಳಕೆ, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ದತ್ತಾಂಶಗಳನ್ನು ಸಂಬಂಧಿತ ಪೋರ್ಟಲ್‌ಗಳಿಗೆ ಅಳವಡಿಸುವಲ್ಲಿ ತೊಡಕಾಗುತ್ತಿದೆ.

ಡಿಜಿಟಲ್ ಭಾರತದ ಭಾಗವಾಗಿ, 'ಡಿಜಿಟಲ್ ಭಾರತ ನಿಧಿ' ಯೋಜನೆ ಅಡಿಯಲ್ಲಿ ದೇಶದ ಎಲ್ಲ ಗ್ರಾಮಗಳಿಗೂ ಕನಿಷ್ಠ 4ಜಿ ನೆಟ್‌ವರ್ಕ್ ಸಂಪರ್ಕ ಕಲ್ಪಿಸುವ ಗುರಿಯನ್ನು ಸಚಿವಾಲಯ ಹಾಕಿಕೊಂಡಿತ್ತು. ರಾಜ್ಯದ ಎಲ್ಲ ಗ್ರಾಮಗಳಿಗೆ 4ಜಿ ಸಂಪರ್ಕ ಕಲ್ಪಿಸುವ ಸಂಬಂಧ ಸಚಿವಾಲಯವು 2017ರಲ್ಲಿ ಯೋಜನೆ ರೂಪಿಸಿತ್ತು.

11ನೇ ಪುಟ ನೋಡಿ

ಮುಖ್ಯಾಂಶಗಳು

- ಬಿಹಾರ, ರಾಜಸ್ಥಾನ, ಛತ್ತೀಸಗಡ, ಆಂಧ್ರಕ್ಕೆ ವಿಶೇಷ ಯೋಜನೆ ಅಡಿ ಸವಲತ್ತು
- ರಾಜ್ಯದ 175 ಗ್ರಾಮಗಳಲ್ಲಿ ಕಾಮಗಾರಿ
- ರಾಜ್ಯದ 752 ಗ್ರಾಮಗಳಿಗೆ 4ಜಿ ಸಂಪರ್ಕದ ಪ್ರಸ್ತಾವ ಈವರೆಗೆ ಇಲ್ಲ

29,818 ರಾಜ್ಯದಲ್ಲಿನ ಗ್ರಾಮಗಳ ಸಂಖ್ಯೆ

28,891 4ಜಿ ಸಂಪರ್ಕ ಇರುವ ಗ್ರಾಮಗಳು

ಬಹುತೇಕ ಸಂದರ್ಭದಲ್ಲಿ ಯುಪಿಐ ಮೂಲಕ ಹಣ ಕಳುಹಿಸಲು ಸಾಧ್ಯವಾಗುವುದೇ ಇಲ್ಲ. ಹೆದ್ದಾರಿ ಅಥವಾ ಪಕ್ಕದ ಹಳ್ಳಿಯತ್ತ ಹೋಗಿ ಯುಪಿಐ ಬಳಸಬೇಕಾಗಿದೆ

ಹರಿಪ್ರಸಾದ್ ಆರ್.ವಿ.
ನಾಗೇನಹಳ್ಳಿ, ದೊಡ್ಡಬಳ್ಳಾಪುರ, ಬೆಂ.ಗ್ರಾ

ನಮ್ಮ ಕಾಲೊನಿಯಲ್ಲಿ 4ಜಿ ನೆಟ್‌ವರ್ಕ್ ಇಲ್ಲ. ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್ ಇದ್ದರೂ ಪಕ್ಕದ ಹಳ್ಳಿಗೆ ಹೋಗಿ ಸರ್ಕಾರಿ ಅರ್ಜಿಗಳನ್ನು ಸಲ್ಲಿಸಬೇಕಾಗಿದೆ

ಭವ್ಯ ಎಂ.ಜಿ.
ಉಪ್ಪನಾಯಕನಹಳ್ಳಿ, ಚಿತ್ರದುರ್ಗ

ಶುಕ್ರವಾರದ ಉಷ್ಣಾಂಶ 27° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಇಂದು ಮಂಜು ಮುಸುಕಿದ ವಾತಾವರಣ ಇರಲಿದೆ.

ಮುನ್ಸೂಚನೆ	ಶನಿವಾರ	ಭಾನುವಾರ	ಸೋಮವಾರ
	28° 18°	28° 18°	28° 18°

ಜ.6ರಂದು ಹಾಸನ ಸಾಹಿತ್ಯೋತ್ಸವ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ಹಾಸನ ಜಿಲ್ಲಾ ಘಟಕದಿಂದ 'ಹಾಸನ ಸಾಹಿತ್ಯೋತ್ಸವ' ಜ.6 ಮತ್ತು 7ರಂದು ಹಾಸನಾಂಬ ಕಲಾಕ್ಷೇತ್ರದಲ್ಲಿ ನಡೆಯಲಿದೆ.

ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಎಚ್.ಎಲ್. ಮಲ್ಲೇಶಗೌಡ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಾಹಿತಿ ಹಂ.ಪ. ನಾಗರಾಜಯ್ಯ ಸಮ್ಮೇಳನ ಉದ್ಘಾಟಿಸುವರು. ಸಾಹಿತಿ ಚಂದ್ರಶೇಖರ ಕಂಬಾರ ಅಧ್ಯಕ್ಷತೆ ವಹಿಸುವರು' ಎಂದು ಮಾಹಿತಿ ನೀಡಿದರು. ಮಾಹಿತಿ ಮತ್ತು ನೋಂದಣಿಗಾಗಿ ಮೊಬೈಲ್ ಸಂಖ್ಯೆ 91088 47480, 74114 77149 ಸಂಪರ್ಕಿಸಬಹುದು ಎಂದರು.

ಹೊಸ ವರ್ಷದ ಪಾರ್ಟಿಗಳ ಮೇಲೆ ನಿಗಾ


ಪಾರ್ಟಿಗಳಿಗೆ ಪೂರೈಸಲು ಡ್ರಗ್ಸ್ ದಾಸ್ತಾನು: ಹೊರ ರಾಜ್ಯದಿಂದ ಪೂರೈಕೆ • ಹಲವರ ಬಂಧನ • ಸಿಂಥೆಟಿಕ್ ಡ್ರಗ್ಸ್ ವಶ

• ಆದಿತ್ಯ ಕೆ.ಎ

ಬೆಂಗಳೂರು: ಹೊಸ ವರ್ಷಾಚರಣೆಗೆ ನಗರದ ಪಬ್, ರೆಸ್ಟೋರೆಂಟ್, ತಾರಾ ಹೋಟೆಲ್‌ಗಳು, ಮಾಲ್‌ಗಳಲ್ಲಿ ಭರ್ಜರಿ ಸಿದ್ಧತೆಗಳು ನಡೆಯುತ್ತಿವೆ. ಪಾರ್ಟಿ ಆಯೋಜಕರು ಹಲವು ಕೊಡುಗೆಗಳನ್ನು ಘೋಷಣೆ ಮಾಡಿದ್ದು, ಗ್ರಾಹಕರನ್ನು ಸೆಳೆಯುತ್ತಿದ್ದಾರೆ. ಹೊರ ವಲಯದಲ್ಲೂ ಸೆಟ್ ಹಾಕಿ ಪಾರ್ಟಿ ಆಯೋಜಿಸಲು ಸಿದ್ಧತೆಗಳು ನಡೆದಿದೆ. ಈ ರೀತಿಯ ಪಾರ್ಟಿಗಳ ಮೇಲೆ ವಿವಿಧ ಠಾಣೆ ಪೊಲೀಸರು, ಸಿಸಿಬಿ ಘಟಕದ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳು ಹದ್ದಿನ ಕಣ್ಣಿಟ್ಟಿದ್ದಾರೆ.

ಕೆಲವು ದಿನಗಳ ಹಿಂದೆ ಆನೇಕಲ್ ತಾಲ್ಲೂಕಿನ ಹೆಬ್ಬಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯ ಫಾರ್ಮ್‌ವೊಂದರಲ್ಲಿ ನಡೆದಿದ್ದ ಪಾರ್ಟಿಯಲ್ಲಿ ಗ್ರಾಹಕರಿಗೆ ಡ್ರಗ್ಸ್ ಪೂರೈಸಲಾಗಿತ್ತು. ಖಚಿತ ಮಾಹಿತಿ ಆಧರಿಸಿ ಪಾರ್ಟಿ ಮೇಲೆ ದಾಳಿ ನಡೆಸಿದ್ದ ಸಿಸಿಬಿ ಪೊಲೀಸರು, ಹಲವರನ್ನು ಬಂಧಿಸಿದ್ದರು. ಈ ಪ್ರಕರಣ ನಡೆದ ಬಳಿಕ ಪಾರ್ಟಿಗಳ ಮೇಲೆ ಪೊಲೀಸರು ನಿಗಾ ವಹಿಸಿದ್ದಾರೆ.

ಅದರಲ್ಲೂ ಹೊಸ ವರ್ಷದ ಅಂಗವಾಗಿ ಕೆಲವು ಸ್ಥಳಗಳಲ್ಲಿ ನಡೆಯುವ ಪಾರ್ಟಿಗಳಿಗೆ ಸಿಂಥೆಟಿಕ್ ಹಾಗೂ ನೈಸರ್ಗಿಕ ಗಾಂಜಾ ಪೂರೈಕೆ ಆಗುವ ಮಾಹಿತಿ ಬಾತ್ಮೀದಾರರಿಂದ ಪೊಲೀಸರಿಗೆ ಸಿಕ್ಕಿದ್ದು, ದಿಢೀರ್ ದಾಳಿಗೂ ಸಿದ್ದತೆ ಮಾಡಿಕೊಂಡಿದ್ದಾರೆ.



ಆರೋಪಿಗಳಿಂದ ಜಪ್ತಿ ಮಾಡಿಕೊಂಡಿದ್ದ ಎಂಡಿಎಂಎ ಕ್ರಿಸ್ಟಲ್



ಕೆಲ ದಿನಗಳಿಂದ ನಗರ ಪೊಲೀಸರು ಡ್ರಗ್ಸ್ ಮಾರಾಟಗಾರರ ವಿರುದ್ಧ ಅತ್ಯುತ್ತಮ ಕಾರ್ಯಾಚರಣೆ ನಡೆಸಿದ್ದಾರೆ. ಇದರಿಂದ ಶಾಂತಿಯುತ ಹೊಸ ವರ್ಷಾಚರಣೆ ಸಾಧ್ಯವಾಗಲಿದೆ
ಬಿ.ದಯಾನಂದ,
ನಗರ ಪೊಲೀಸ್ ಕಮಿಷನರ್

ನಗರದ ಎಲ್ಲ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಎರಡು ತಿಂಗಳಿಂದ ಡ್ರಗ್ಸ್ ಪೆಡ್ಲರ್‌ಗಳು, ಗ್ರಾಹಕರು ಹಾಗೂ ಮಾರಾಟಗಾರರ ವಿರುದ್ಧ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಹಲವರನ್ನು ಬಂಧಿಸಿ ಅಂದಾಜು ₹30 ಕೋಟಿಗೂ ಅಧಿಕ ಮೊತ್ತದ ಸಿಂಥೆಟಿಕ್ ಡ್ರಗ್ಸ್ ಹಾಗೂ ಗಾಂಜಾವನ್ನು ವಶಕ್ಕೆ ಪಡೆದುಕೊಂಡಿದ್ದಾರೆ.



ಡ್ರಗ್ಸ್ ಬಚ್ಚಿಟ್ಟಿದ್ದ ಆಹಾರದ ಪೊಟ್ಟಣಗಳನ್ನು ಸಿಸಿಬಿ ಪೊಲೀಸರು ಜಪ್ತಿ ಮಾಡಿಕೊಂಡಿದ್ದರು

ಡಿ.31ರಂದು ನಡೆಯುವ ಪಾರ್ಟಿಗಳಿಗೆ ಪೂರೈಸಲು ಕಳೆದ ಕೆಲವು ದಿನಗಳಿಂದ ಆಂಧ್ರಪ್ರದೇಶ, ಗುಜರಾತ್, ತೆಲಂಗಾಣ ಹಾಗೂ ಮಹಾರಾಷ್ಟ್ರದಿಂದ ಸಿಂಥೆಟಿಕ್ ಹಾಗೂ ನೈಸರ್ಗಿಕ ಗಾಂಜಾ ನಗರಕ್ಕೆ ಪೂರೈಕೆ ಆಗುತ್ತಿರುವ ಮಾಹಿತಿ ಪೊಲೀಸರಿಗೆ ಲಭ್ಯವಾಗಿದೆ.

ನೈಸರ್ಗಿಕ ಮಾದಕ ವಸ್ತುಗಳಾದ ಅಫೀಮು, ಗಾಂಜಾವನ್ನು ಆಂಧ್ರಪ್ರದೇಶ, ಕೇರಳ, ಅಸ್ಸಾಂ, ಒಡಿಶಾ ಹಾಗೂ ಕರ್ನಾಟಕದ ಬೇರೆ ಜಿಲ್ಲೆಗಳಿಂದ ನಗರಕ್ಕೆ ಪೆಡ್ಲರ್‌ಗಳು ಪೂರೈಸುತ್ತಿದ್ದಾರೆ. ಇದರ ಜತೆಗೆ ಅರೆ ಸಿಂಥೆಟಿಕ್ ಡ್ರಗ್ಸ್‌ಗಳಾದ ಮಾರ್ಫಿನ್, ಹೆರಾಯಿನ್, ಕೊಡೈನ್ ಹಾಗೂ ಸಿಂಥೆಟಿಕ್ ಡ್ರಗ್ಸ್‌ಗಳಾದ ಎಂಡಿಎಂಎ, ಎಲ್‌ಎಸ್‌ಡಿ, ಕೊಕೇನ್‌ಗಳಿಗೆ ಗ್ರಾಹಕರಿಂದ ಹೆಚ್ಚಿನ ಬೇಡಿಕೆಯಿದೆ. ಹೀಗಾಗಿ ಕೆಲವು ಸ್ಥಳಗಳಲ್ಲಿ ನಡೆಯುವ ಪಾರ್ಟಿಗಳ ಮೇಲೆ ನಿಗಾ ವಹಿಸಲಾಗಿದೆ. ಪಾರ್ಟಿ ನೆಪದಲ್ಲಿ ಕಾನೂನು ಬಾಹಿರ ಚಟುವಟಿಕೆಗಳಿಗೆ ಅವಕಾಶ ನೀಡದಂತೆ ಆಯೋಜಕರಿಗೂ ಸೂಚನೆ ನೀಡಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು. ಹೊಸ ವರ್ಷಾಚರಣೆ ವೇಳೆ ವಿದೇಶಿ ಪ್ರಜೆಗಳು ನಡೆಸುವ ಪಾರ್ಟಿಗಳಿಗೆ ಪೂರೈಸಲು ಅಂಗಡಿಯಲ್ಲಿ ಸಂಗ್ರಹ ಮಾಡಿಕೊಂಡಿದ್ದ ₹24 ಕೋಟಿ ಮೌಲ್ಯದ ಎಂಡಿಎಂಎ ಕ್ರಿಸ್ಟಲ್ ಅನ್ನು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳು ಡಿ.17ರಂದು ಜಪ್ತಿ ಮಾಡಿಕೊಂಡಿದ್ದರು. ನೈಜೀರಿಯಾದ ಮಹಿಳೆಯನ್ನು ಬಂಧಿಸಿದ್ದರು. ಇತ್ತೀಚಿನ ವರ್ಷಗಳಲ್ಲಿ ನಗರದಲ್ಲಿ ಡ್ರಗ್ಸ್ ವಿರುದ್ಧ ನಡೆದ ದೊಡ್ಡ ಕಾರ್ಯಾಚರಣೆ ಇದಾಗಿತ್ತು. ಪೇಸ್ಟ್ ಹಾಗೂ ಸೋಪು ಬಾಕ್ಸ್‌ಗಳಲ್ಲಿ ಮಹಾರಾಷ್ಟ್ರದಿಂದ ಬಸ್‌ನಲ್ಲಿ ತಂದು ಟಿ.ಸಿ ಪಾಳ್ಯದ ಅಂಗಡಿಯಲ್ಲಿ ಡ್ರಗ್ಸ್ ದಾಸ್ತಾನು ಮಾಡಿ, ಮಾರಾಟ ಮಾಡಲಾಗುತ್ತಿತ್ತು.

ಅಂದೇ ಯಲಹಂಕ ಠಾಣೆ ಪೊಲೀಸರು ₹74.53ಲಕ್ಷ ಮೌಲ್ಯದ ಗಾಂಜಾ, ಅಶೋಕ ನಗರ ಪೊಲೀಸರು ₹30.68 ಲಕ್ಷದ ಮಾದಕ ವಸ್ತು, ಬಾಣಸವಾಡಿ ಪೊಲೀಸರು ₹15 ಲಕ್ಷ ಹಾಗೂ ಅಮೃತಹಳ್ಳಿ ಠಾಣೆ ಪೊಲೀಸರು ₹1.5 ಲಕ್ಷ ಮೌಲ್ಯದ ಗಾಂಜಾವನ್ನು ವಶಕ್ಕೆ ಪಡೆದುಕೊಂಡು ಆರೋಪಿಗಳನ್ನು ಬಂಧಿಸಿದ್ದರು. ಅಕ್ಟೋಬರ್‌ನಲ್ಲೂ ಕಾರ್ಯಾಚರಣೆ ನಡೆಸಿದ್ದ ಸಿಸಿಬಿ ಪೊಲೀಸರು ₹2.99 ಕೋಟಿ ಮೌಲ್ಯದ ಗಾಂಜಾ, ಹೆರಾಯಿನ್, ಎಂಡಿಎಂಎ ಕ್ರಿಸ್ಟಲ್, ಎಂಡಿಎಂಎ ಎಕ್ಸ್‌ಟೇಸಿ ಫಿಲ್ಸ್, ಎಲ್‌ಎಸ್‌ಡಿ ಸ್ಟ್ರಿಪ್ಸ್ ಹಾಗೂ ಹೈಡ್ರೊ ಗಾಂಜಾ ವಶಕ್ಕೆ ಪಡೆದುಕೊಂಡಿದ್ದರು.

ನಾಲ್ಕು ಸ್ಥಳ: ಬಂದೋಬಸ್ತ್ ಹೆಚ್ಚಳ

ಮಹಾತ್ಮ ಗಾಂಧಿ ರಸ್ತೆ, ಚರ್ಚ್ ಸ್ಟ್ರೀಟ್, ಬ್ರಿಗೇಡ್ ರಸ್ತೆ ಹಾಗೂ ಕೋರಮಂಗಲದಲ್ಲಿ ನಡೆಯುವ ಹೊಸ ವರ್ಷದ ಸಂಭ್ರಮಾಚರಣೆಗೆ 10 ಲಕ್ಷಕ್ಕೂ ಹೆಚ್ಚು ಜನರು ಜಮಾವಣೆಗೊಳ್ಳುವಮಾಹಿತಿ ಸಿಕ್ಕಿದೆ. ನಾಲ್ಕು ಸ್ಥಳಗಳಲ್ಲೂ ಡಿಸೆಂಬರ್ 31ರ ರಾತ್ರಿ ಹೆಚ್ಚಿನ ಬಂದೋಬಸ್ತ್ ಕೈಗೊಳ್ಳಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಸಂಭ್ರಮಾಚರಣೆ ನಡೆಯುವ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಮಾಡಲಾಗುತ್ತಿದೆ. ಸೂಕ್ಷ್ಮ ಪ್ರದೇಶಗಳಲ್ಲಿ ಮಂಗಳವಾರ ಮಧ್ಯಾಹ್ನ ದಿಂದಲೇ ಹೆಚ್ಚಿನ ಪೊಲೀಸರು ಕಾಣಿಸಿಕೊಳ್ಳುತ್ತಿದ್ದಾರೆ.

ಕಂಬಕ್ಕೆ ಕಟ್ಟಿ ವ್ಯಕ್ತಿಯ ಕೊಲೆ

ಹಾವೇರಿ: ಜಿಲ್ಲೆಯ ಹಾನಗಲ್ ತಾಲ್ಲೂಕಿನ ಕೊಪ್ಪರಸಿಕೊಪ್ಪ ಗ್ರಾಮದಲ್ಲಿ ಪ್ರಕಾಶ ವಾಲೀಕಾರ (35) ಎಂಬುವವರನ್ನು ವಿದ್ಯುತ್ ಕಂಬಕ್ಕೆ ಕಟ್ಟಿ ಚಿತ್ರಹಿಂಸೆ ನೀಡಿ ಕೊಲೆ ಮಾಡಲಾಗಿದ್ದು, ಆರೋಪಿಗಳ ಪತ್ತೆಗಾಗಿ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

'ಕೊಪ್ಪರಸಿಕೊಪ್ಪದ ನಿವಾಸಿ ಪ್ರಕಾಶ, ಕೃಷಿಕ. ಗ್ರಾಮದ ಮಹಿಳೆ ಒಬ್ಬರ ಜೊತೆ ಸಲುಗೆ ಇಟ್ಟುಕೊಂಡಿದ್ದರೆಂಬ ಮಾಹಿತಿ ಇದೆ. ಮಹಿಳೆಯ ಪತಿ ಹಾಗೂ ಆತನ ಕಡೆಯವರು, ಪ್ರಕಾಶ್ ಅವರನ್ನು ಕೊಲೆ ಮಾಡಿರುವುದು ಸ್ಥಳೀಯರಿಂದ ಗೊತ್ತಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ವಂಚನೆ ಪ್ರಕರಣ: ತನಿಖೆ ಚುರುಕುಗೊಳಿಸಿದ ಪೊಲೀಸರು

ಶ್ವೇತಾಗೌಡ ಐಷಾರಾಮಿ ಜೀವನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಚಿವ ವರ್ತೂರು ಪ್ರಕಾಶ್ ಅವರ ಹೆಸರು ಬಳಸಿಕೊಂಡು ಆಭರಣ ಅಂಗಡಿ ಮಾಲೀಕರಿಗೆ ₹2.42 ಕೋಟಿ ವಂಚಿಸಿದ್ದ ಪ್ರಕರಣದ ತನಿಖೆಯನ್ನು ಕಮರ್ಷಿಯಲ್ ಸ್ಟ್ರೀಟ್ ಠಾಣೆ ಪೊಲೀಸರು ಚುರುಕುಗೊಳಿಸಿದ್ದಾರೆ.

ಈ ಪ್ರಕರಣದಲ್ಲಿ ಬಾಗಲಗುಂಟೆ ನಿವಾಸಿ ಶ್ವೇತಾಗೌಡ ಅವರನ್ನು ಬಂಧಿಸಿದ್ದು, ಸದ್ಯ ಅವರು ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ. ವಂಚನೆಯಿಂದ ಬಂದಿದ್ದ ಹಣದಲ್ಲಿ ಆರೋಪಿ ಐಷಾರಾಮಿ ಜೀವನ ನಡೆಸುತ್ತಿದ್ದರು ಎಂಬುದು ತನಿಖೆಯಿಂದ ಬಯಲಾಗಿದೆ.

ಚಿತ್ರದುರ್ಗ ರೇಣುಕಸ್ವಾಮಿ ಕೊಲೆ ಪ್ರಕರಣದ ಮೊದಲನೇ ಆರೋಪಿ ಪವಿತ್ರಾಗೌಡ ಅವರ ಸ್ನೇಹಿತೆ ಸಮತಾ ಅವರೊಂದಿಗೆ ಶ್ವೇತಾಗೌಡ ಕಾಣಿಸಿಕೊಂಡಿರುವ ವಿಡಿಯೊಗಳು ಹರಿದಾಡುತ್ತಿವೆ.



ಶ್ವೇತಾಗೌಡ

ಈ ವಿಡಿಯೊಗಳನ್ನು ಗಮನಿಸಿರುವ ಪೊಲೀಸರು ಮಾಹಿತಿ ಕಲೆ ಹಾಕುತ್ತಿದ್ದಾರೆ. ಇದರ ಬೆನ್ನಲ್ಲೇ ಸಮತಾ ಅವರು ಮಾಧ್ಯಮಗಳಿಗೆ ಸ್ಪಷ್ಟನೆ ನೀಡಿದ್ದಾರೆ.

'ಶ್ವೇತಾಗೌಡಗೂ ನನಗೂ ಯಾವುದೇ ಸಂಬಂಧ ಇಲ್ಲ. ಪವಿತ್ರಾಗೌಡ ಜೈಲಿನಲ್ಲಿದ್ದಾಗ ಅವರನ್ನು ಭೇಟಿ ಮಾಡಲು ತೆರಳಿದ್ದೆ. ಆಗ ಶ್ವೇತಾಗೌಡ ಬಂದು ಪರಿಚಯ ಮಾಡಿಕೊಂಡಿದ್ದರು. ಅಂದೇ ಮೊದಲು ನಾನು ಅವರನ್ನು ಭೇಟಿ ಮಾಡಿದ್ದು' ಎಂದು ಸಮತಾ ಅವರು ತಿಳಿಸಿದ್ದಾರೆ.

'ಇನ್‌ಸ್ಟಾಗ್ರಾಂ ಹಾಕಿದ್ದ ನಿಮ್ಮ ರೀಲ್ಸ್‌ಗಳನ್ನು ವೀಕ್ಷಿಸಿದ್ದೇನೆ ಎಂದು ಪರಪ್ಪನ ಅಗ್ರಹಾರದ ಬಳಿ ಶ್ವೇತಾಗೌಡ ಹೇಳಿದ್ದರು. ಅದಕ್ಕೆ ಹೌದಾ ಎಂದು ಉತ್ತರಿಸಿದ್ದೆ. ಸ್ಥಳದಲ್ಲಿದ್ದ ಮಾಧ್ಯಮದವರನ್ನು ಕಂಡು ನನ್ನ ಜತೆಗೆ ಬರಲು ಆರಂಭಿಸಿದ್ದರು. ನನ್ನ ಜತೆಗೆ ಏಕೆ ಬರುತ್ತೀಯಾ ಎಂದು ಕೇಳಿದ್ದೆ. ಅದಾದ ಮೇಲೆ ನನ್ನೊಂದಿಗೆ ಆಟೊದಲ್ಲಿ ಬಂದು ದೂರದಲ್ಲಿ ಇಳಿದು ಹೋಗಿದ್ದರು' ಎಂದು ಸಮತಾ ತಿಳಿಸಿದ್ದಾರೆ.

ವರ್ತೂರು–ಶ್ವೇತಾ ಚಾಟಿಂಗ್?: ವರ್ತೂರು ಪ್ರಕಾಶ್ ಹಾಗೂ ಆರೋಪಿ ಶ್ವೇತಾಗೌಡ ಅವರ ನಡುವೆ ವಾಟ್ಸ್‌ಆ್ಯಪ್‌ನಲ್ಲಿ ನಡೆದಿತ್ತು ಎನ್ನಲಾದ ಚಾಟಿಂಗ್ ಬಹಿರಂಗವಾಗಿದೆ.

'ಗುಲಾಬ್ ಜಾಮೀನು' ಎಂದು ವರ್ತೂರು ಪ್ರಕಾಶ್ ಅವರ ನಂಬರ್ ಅನ್ನು ಶ್ವೇತಾಗೌಡ ಅವರು ತಮ್ಮ ಮೊಬೈಲ್‌ನಲ್ಲಿ ಸೇವ್ ಮಾಡಿಕೊಂಡಿದ್ದರು. 'ಗುಡ್ ಮಾರ್ನಿಂಗ್ ಚಿನ್ನು...' ಎಂದು ಪ್ರಕಾಶ್ ಸಂದೇಶ ಕಳುಹಿಸಿದ್ದರು. ಅಲ್ಲದೇ ಚಿನ್ನದ ಉಂಗುರದ ಚಿತ್ರ ಕಳುಹಿಸಿರುವುದು ಗೊತ್ತಾಗಿದೆ.

ಶ್ವೇತಾಗೌಡ ಅವರಿಗೆ ಕೆಲವು ರಾಜಕಾರಣಿಗಳ ಸ್ನೇಹ ಇರುವುದು ತನಿಖೆಯಿಂದ ಗೊತ್ತಾಗಿದೆ. ಜತೆಗೆ ಐಷಾರಾಮಿ ಜೀವನ ನಡೆಸುತ್ತಿದ್ದರು. ವಂಚನೆಯಿಂದ ಬಂದ ಹಣದಿಂದ ಶ್ವೇತಾ ಅವರು ಪ್ರವಾಸಿ ತಾಣಕ್ಕೆ ತೆರಳಿ ಮೋಜು–ಮಸ್ತಿ ಮಾಡುತ್ತಿದ್ದರು ಎಂದು ಮೂಲಗಳು ಹೇಳಿವೆ.

ವಿಚಾರಣೆ ವೇಳೆ ಶ್ವೇತಾಗೌಡ ನೀಡಿದ್ದ ಮಾಹಿತಿ ಆಧರಿಸಿ ವರ್ತೂರು ಪ್ರಕಾಶ್ ಅವರಿಗೆ ಮೂರು ಬಾರಿ ನೋಟಿಸ್ ನೀಡಲಾಗಿತ್ತು. ಪುಲಕೇಶಿನಗರ ಉಪ ವಿಭಾಗದ ಎಸಿಪಿ ಗೀತಾ ಅವರು ವರ್ತೂರು ಪ್ರಕಾಶ್ ಅವರನ್ನು ವಿಚಾರಣೆ ನಡೆಸಿದ್ದರು.

'ಬಿಜೆಪಿ ಸದಸ್ಯತ್ವ 12 ಕೋಟಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ನೇತೃತ್ವದಲ್ಲಿ ಬಿಜೆಪಿ ಸದಸ್ಯತ್ವ ಸಂಖ್ಯೆ 12 ಕೋಟಿ ದಾಟುವ ಮೂಲಕ ಇಡೀ ವಿಶ್ವದಲ್ಲೇ ಅತಿದೊಡ್ಡ ಪಕ್ಷವಾಗಿ ಬಿಜೆಪಿ ಹೊರಹೊಮ್ಮಿದೆ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹರ್ಷ ವ್ಯಕ್ತಪಡಿಸಿದರು.

ಕೆ.ಆರ್.ಪುರ ಸಮೀಪದ ಶೀಗೆಹಳ್ಳಿಯಲ್ಲಿ ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದಲ್ಲಿ ಅತಿಹೆಚ್ಚು ಬಿಜೆಪಿ ಸದಸ್ಯತ್ವ ನೋಂದಣಿ ಮಾಡಿಸಿದ ಮುಖಂಡರ ಮನೆಗಳಿಗೆ ಭೇಟಿ ನೀಡಿ ಅವರನ್ನು ಸನ್ಮಾನಿಸಿ ಮಾತನಾಡಿದರು. ದೇಶಾದ್ಯಂತ ಬಿಜೆಪಿ ಕಾರ್ಯಕರ್ತರು ಅತ್ಯಂತ ಉತ್ಸಾಹದಿಂದ ಸದಸ್ಯತ್ವವನ್ನು ಮಾಡುವಲ್ಲಿ ನಿರತರಾಗಿದ್ದಾರೆ. ಇದರಿಂದ ಕಳೆದ ಬಾರಿ ಹನ್ನೊಂದು ಕೋಟಿ ಇದ್ದ ಸದಸ್ಯತ್ವ ನೊಂದಣಿ ಇದೀಗ ಹನ್ನೆರಡು ಕೋಟಿ ದಾಟಿದೆ. ಹೆಚ್ಚು ಸದಸ್ಯತ್ವ ನೊಂದಣಿ ಮಾಡಿಸಿದ ಕಾರ್ಯಕರ್ತರನ್ನು ಗೌರವಿಸುವ ಕಾರ್ಯ ಮಾಡಲಾಗುತ್ತಿದೆ ಎಂದು ತಿಳಿಸಿದರು.

₹8.41 ಕೋಟಿ ಸಾಲ ಪಡೆದು ವಂಚನೆ ಪ್ರಕರಣ

ಐ.ಟಿಗೆ ಮಾಹಿತಿ ನೀಡಲು ಸಿದ್ಧತೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಮಾಜಿ ಸಂಸದರೊಬ್ಬರ ಸಹೋದರಿಯೆಂದು ಹೇಳಿಕೊಂಡು ಚಿನ್ನಾಭರಣ ಮಳಿಗೆ ಮಾಲೀಕನಿಗೆ ₹8.41 ಕೋಟಿ ಸಾಲ ಪಡೆದು ವಂಚಿಸಿದ್ದ ಪ್ರಕರಣದ ತನಿಖೆಯನ್ನು ಚಂದ್ರಾಲೇಔಟ್ ಠಾಣೆ ಪೊಲೀಸರು ಚುರುಕುಗೊಳಿಸಿದ್ದು, ಈ ಪ್ರಕರಣದಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಗೂ ಮಾಹಿತಿ ನೀಡಲು ನಿರ್ಧರಿಸಿದ್ದಾರೆ.

ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಚಿನ್ನದಂಗಡಿ ಮಾಲೀಕರಾದ ವನಿತಾ ಎಸ್.ಐತಾಳ್ ಅವರು ನೀಡಿದ ದೂರಿನ ಮೇರೆಗೆ ಐಶ್ವರ್ಯಾಗೌಡ, ಇವರ ಪತಿ ಹರೀಶ್, ಚಿತ್ರನಟ ಧರ್ಮೇಂದ್ರ ಅಲಿಯಾಸ್ ಧರ್ಮ ವಿರುದ್ಧ ವಂಚನೆ, ನಂಬಿಕೆ ದ್ರೋಹ, ಬೆದರಿಕೆ ಆರೋಪದಡಿ ಚಂದ್ರಾಲೇಔಟ್ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದರು. ನಾಪತ್ತೆ ಆಗಿರು ಧರ್ಮನಿಗೆ ಪೊಲೀಸರು ಶೋಧ ಮುಂದುವರೆಸಿದ್ದಾರೆ.

ಇನ್ನೊಂದೆಡೆ ಐಶ್ವರ್ಯಾಗೌಡ ಅವರು ಗುರುವಾರ ಉತ್ತರ ವಿಭಾಗದ ಡಿಸಿಪಿ ಸೈದುಲ್ ಅದಾವಾತ್ ಅವರನ್ನು ಭೇಟಿ ಆಗಿದ್ದರು ಎಂದು ಗೊತ್ತಾಗಿದೆ.



ಧರ್ಮ



ಐಶ್ವರ್ಯಾ ಗೌಡ

ಘಟನೆಯೊಂದರ ಸಂಬಂಧ ದೂರು ನೀಡಲು ಅವರು ಡಿಸಿಪಿ ಅವರನ್ನು ಭೇಟಿಯಾಗಿದ್ದರು. ಘಟನಾ ಸ್ಥಳದ ವ್ಯಾಪ್ತಿಯ ಪೊಲೀಸ್ ಠಾಣೆಗೆ ತೆರಳಿ ದೂರು ನೀಡುವಂತೆ ಡಿಸಿಪಿ ಸೂಚಿಸಿದರು. ಹೀಗಾಗಿ ಶುಕ್ರವಾರ ಆರೋಪಿ ಬೇರೊಂದು ಠಾಣೆಗೆ ತೆರಳಿ ದೂರು ನೀಡುವ ಸಾಧ್ಯತೆ ಇದೆ ಎಂದು ಗೊತ್ತಾಗಿದೆ.

ಈ ವೇಳೆ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಐಶ್ವರ್ಯಾಗೌಡ, 'ಕೆಲವೊಂದು ಪ್ರಕ್ರಿಯೆಗಳು ನಡೆಯುತ್ತಿವೆ. ಅವು ಮುಗಿದ ಬಳಿಕ ಮಾತನಾಡುತ್ತೇನೆ' ಎಂದರು

'ನನ್ನ ವಿರುದ್ಧ ದೂರು ನೀಡಿದ ವಿಷಯ ತಿಳಿದಾಗ ಆಕೆ ಜತೆಗೆ ಮಾತನಾಡಿದ್ದೆ. ಅದನ್ನು ತಡವಾಗಿ ಸಾಮಾಜಿಕ ಜಾಲತಾಣಕ್ಕೆ ಅಪ್‌ಲೋಡ್ ಮಾಡಲಾಗಿದೆ. ನಾನು ಉತ್ತರ ನೀಡುತ್ತೇನೆ. ಹಣ ಕೊಡಬೇಕು. ಕುಳಿತು ಮಾತನಾಡೋಣ ಎಂದು ಆಕೆಯ ಜತೆಗೆ ಮಾತನಾಡಿದ್ದೇನೆ. ಅಷ್ಟರಲ್ಲಿ ಅವರು ದೂರು ನೀಡಿದ್ದಾರೆ' ಎಂದು ಐಶ್ವರ್ಯಾಗೌಡ ಪ್ರತಿಕ್ರಿಯೆ ನೀಡಿದರು.

ಐಶ್ವರ್ಯಾಗೌಡ ಹಾಗೂ ದೂರುದಾರರ ನಡುವೆ ನಡೆದಿದೆ ಎನ್ನಲಾದ ಮೊಬೈಲ್ ಸಂಭಾಷಣೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

'ಇನ್ನೆರಡು ದಿನಗಳ ಕಾಯಿ, ನಾನು ಹಣ ಕೊಡುತ್ತೇನೆ. ಮಗಳು ಮನೆಗೆ ಬಂದಿದ್ದಾಳೆ. ನಿನ್ನ ಕಾಲು ಕಟ್ಟಿಕೊಳ್ಳುತ್ತೇನೆ. ನಿನ್ನೆಯಿಂದಲೇ ಈ ಕೆಲಸ ಮಾಡುತ್ತಿದ್ದೇನೆ' ಎಂದು ಐಶ್ವರ್ಯಾ ಹೇಳಿತ್ತಾರೆ. ಆಗ ದೂರುದಾರೆ, 'ನಾನು ಒಂದು ತಿಂಗಳಿಂದ ಕೇಳುತ್ತಿದ್ದೇನೆ. ಆದರೂ ಹಣ ಕೊಡದಿದ್ದರೆ ಹೇಗೆ' ಎಂದು ಪ್ರಶ್ನಿಸುತ್ತಾರೆ.

ಅಪಘಾತ: ಟೆಕಿ ಸಾವು, ಸವಾರನಿಗೆ ಗಂಭೀರ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಡಿವಾಳ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಡಬಲ್ ಡೆಕರ್ ಮೇಲ್ಸೇತುವೆಯಲ್ಲಿ ಬುಲೆಟ್ ಬೈಕ್ ಹಾಗೂ ಕ್ಯಾಬ್ ನಡುವೆ ಸಂಭವಿಸಿದ ಅಪಘಾತದಲ್ಲಿ ಟೆಕಿಯೊಬ್ಬರು ಮೃತಪಟ್ಟಿದ್ದು, ಸವಾರ ಗಂಭೀರವಾಗಿ ಗಾಯಗೊಂಡಿದ್ದಾರೆ.

ಜೆ.ಪಿ.ನಗರ ನಿವಾಸಿ ಶ್ರೀನಿವಾಸ್ ರಾಜು(27) ಮೃತರು. ಇವರ ಸ್ನೇಹಿತ, ಸವಾರ ವಿಜಯದಾಸ್ ರೆಡ್ಡಿ(27) ಅವರಿಗೆ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಆಂಧ್ರಪ್ರದೇಶದ ಶ್ರೀನಿವಾಸ್ ರಾಜು ಮತ್ತು ವಿಜಯದಾಸ್ ರೆಡ್ಡಿ ಅವರು ಜೆ.ಪಿ. ನಗರದಲ್ಲಿ ವಾಸವಾಗಿದ್ದರು. ನಗರದ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಕ್ರಿಸ್‌ಮಸ್ ರಜೆ ಹಿನ್ನೆಲೆಯಲ್ಲಿ ಸ್ನೇಹಿತರ ಜತೆ ಪಾರ್ಟಿಗೆ ತೆರಳಿದ್ದರು. ಪಾರ್ಟಿ ಮುಗಿಸಿಕೊಂಡು ಬುಲೆಟ್ ಬೈಕ್‌ನಲ್ಲಿ ಎಚ್‌ಎಸ್‌ಆರ್ ಲೇಔಟ್‌ನಿಂದ ರಾಗಿಗುಡ್ಡದ ಕಡೆಗೆ ಹೋಗಲು ಡಬಲ್ ಡೆಕರ್ ಮೇಲ್ಸೇತುವೆಯ ಏಕಮುಖ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ತೆರಳುತ್ತಿದ್ದರು. ಈ ವೇಳೆ ಎದುರು ಬರುತ್ತಿದ್ದ ಕ್ಯಾಬ್‌ಗೆ ಬುಲೆಟ್ ಡಿಕ್ಕಿಯಾಗಿದ್ದು, ಇಬ್ಬರು ಕೆಳಗೆ ಬಿದ್ದಿದ್ದರು. ಇಬ್ಬರಿಗೂ ತಲೆಗೆ ಗಾಯವಾಗಿತ್ತು. ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶ್ರೀನಿವಾಸ್ ರಾಜು ಅವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ' ಎಂದು ಸಂಚಾರ ಪೊಲೀಸರು ಹೇಳಿದರು.

ಹೆಲ್ಮೆಟ್ ರಹಿತ ಪ್ರಯಾಣ: ಬುಲೆಟ್ ಚಾಲನೆ ವೇಳೆ ಇಬ್ಬರು ಹೆಲ್ಮೆಟ್ ಧರಿಸಿಲ್ಲ ಎಂಬುದು ಗೊತ್ತಾಗಿದೆ. ಅಲ್ಲದೆ, ಏಕಮುಖ ಸಂಚಾರ ರಸ್ತೆಯಲ್ಲಿ ಬಂದ ಆರೋಪದ ಮೇಲೆ ಬುಲೆಟ್ ಚಾಲನೆ ಮಾಡುತ್ತಿದ್ದ ವಿಜಯದಾಸ್ ರೆಡ್ಡಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಹೈಕೋರ್ಟ್ ನ್ಯಾಯಮೂರ್ತಿ ಹೆಸರು ದುರ್ಬಳಕೆ ಆರೋಪ

ವಕೀಲೆ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರಾಧ ಪ್ರಕರಣವೊಂದರಲ್ಲಿ ಆರೋಪಿಗೆ ಜಾಮೀನು ಮಂಜೂರು ಮಾಡುವ ಸಂಬಂಧ ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರ ಹೆಸರನ್ನು ದುರ್ಬಳಕೆ ಮಾಡಿಕೊಂಡಿದ್ದ ಆರೋಪದ ಅಡಿ ವಕೀಲೆ ದಯೀನಾಭಾನು ಅವರ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಹೈಕೋರ್ಟ್‌ನ ಕಾನೂನು ವಿಭಾಗದ ಜಂಟಿ ರಿಜಿಸ್ಟ್ರಾರ್ ಎಂ. ರಾಜೇಶ್ವರಿ ಅವರು ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರೆಸಲಾಗಿದೆ ಎಂದು ಪೊಲೀಸರು ಹೇಳಿದರು.

'ಅಪರಾಧ ಪ್ರಕರಣವೊಂದರಲ್ಲಿ ಬಂಧಿತನಾಗಿದ್ದ 24 ವರ್ಷದ ವಿಷ್ಣುದೇವನ್ ಎಂಬಾತ ಜಾಮೀನು ಸಿಗದೇ ಮೂರು ವರ್ಷಗಳಿಂದ ಜೈಲಿನಲ್ಲಿದ್ದ. ಪುತ್ರನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿಸಲು ತಾಯಿ ಥೆರೆಸಾ ಅವರು ಆರಂಭದಲ್ಲಿ ವಕೀಲೆ ಮರೀನಾ ಫರ್ನಾಂಡಿಸ್ ಅವರನ್ನು ಭೇಟಿ ಮಾಡಿದ್ದರು. ವಾದ ಮಂಡಿಸಿ ಜಾಮೀನು ಕೊಡಿಸುವಂತೆ ಕೋರಿದ್ದರು. ಜಾಮೀನು ಪ್ರಕ್ರಿಯೆಗೆ ಮರೀನಾ ಅವರು ₹10 ಲಕ್ಷ ಪಡೆದಿದ್ದರು. ಆರೋಪಿಗೆ ಜಾಮೀನು ಸಿಕ್ಕಿರಲಿಲ್ಲ. ಬಳಿಕ ಥೆರೆಸಾ ತಾವು ನೀಡಿದ ಹಣವನ್ನು ವಾಪಸ್ ನೀಡುವಂತೆ ಕೇಳಿಕೊಂಡಿದ್ದರು. ಆಗ ವಕೀಲೆ ₹9 ಲಕ್ಷ ಮೊತ್ತದ 3 ಚೆಕ್ ನೀಡಿದ್ದರು. ಉಳಿದ ಹಣ ವಾಪಸ್ ನೀಡಿರಲಿಲ್ಲ' ಎಂಬ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಕೆಲ ದಿನಗಳ ಬಳಿಕ ಮರೀನಾ ಆರತಿ ಅವರನ್ನು ಥೆರೆಸಾಗೆ ಪರಿಚಯಿಸಿದ್ದರು. ಆರತಿಗೆ ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರ ಪರಿಚಯವಿದೆ ಎಂದು ಹೇಳಿ ಮರೀನಾ ಅವರು ₹72 ಸಾವಿರ ಪಡೆದಿದ್ದರು. ನಂತರ ಮರೀನಾ ಕಡೆಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಈ ಮಧ್ಯೆ ವಕೀಲೆ ದಯೀನಾಭಾನು ಅವರು, ಥೆರೆಸಾ ಅವರನ್ನು ಸಂಪರ್ಕಿಸಿ, 'ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರು ಜಾಮೀನು ಕೊಡಿಸಲು ₹ 50 ಲಕ್ಷ ನಿರೀಕ್ಷಿಸುತ್ತಿದ್ದಾರೆ' ಎಂದು ಹೇಳಿದ್ದರು' ಎಂದು ಎಫ್‌ಐರ್‌ನಲ್ಲಿ ನಮೂದಿಸಲಾಗಿದೆ.



'ಈವಿಚಾರವನ್ನುಥೆರೆಸಾಅವರುಹೈಕೋರ್ಟ್‌ನ ಕಾನೂನು ವಿಭಾಗದ ಜಂಟಿ ರಿಜಿಸ್ಟ್ರಾರ್ ಅವರ ಗಮನಕ್ಕೆ ತಂದಿದ್ದರು. ಅದಾದ ಮೇಲೆ ನ್ಯಾಯಮೂರ್ತಿಯೊಬ್ಬರ ಹೆಸರನ್ನು ದುರ್ಬಳಕೆ ಮಾಡಿಕೊಂಡಿದ್ದ ಆರೋಪದ ಅಡಿ ದೂರು ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

ನಾಯಿ ದಾಳಿ: ಮಾಲೀಕನ ವಿರುದ್ಧ ಎಫ್‌ಐಆರ್

ಬೆಂಗಳೂರು: ಎರಡು ವರ್ಷದ ಮಗುವಿನ ಮೇಲೆ ನಾಯಿ ದಾಳಿ ನಡೆಸಿದ್ದು, ನಾಯಿಯ ಮಾಲೀಕರ ಮೇಲೆ ಬಾಣಸವಾಡಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಡಿಸೆಂಬರ್ 23ರಂದು ಬಾಣಸವಾಡಿಯ ವೆಂಕಟಸ್ವಾಮಿ ಲೇಔಟ್‌ನಲ್ಲಿ ಮಗುವಿನ ಮೇಲೆ ಪಿಟ್‌ಬುಲ್ ನಾಯಿ ದಾಳಿ ನಡೆಸಿದೆ ಎಂಬ ದೂರು ಆಧರಿಸಿ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ. 'ನಾಯಿ ದಾಳಿಯಿಂದ ಎರಡು ವರ್ಷದ ಹೆಣ್ಣು ಮಗುವಿನ ಭುಜಕ್ಕೆ ಗಂಭೀರವಾದ ಗಾಯಗಳಾಗಿವೆ' ಎಂದು ತಂದೆ ನಬ್ರಾಜ್ ದಮಾಲ್ ಆರೋಪಿಸಿದ್ದಾರೆ.

'ಮಗುವಿನ ಪೋಷಕರು ನೇಪಾಳದವರಾಗಿದ್ದು, ಬಾಣಸವಾಡಿಯ ವೆಂಕಟಸ್ವಾಮಿ ಲೇಔಟ್‌ನಲ್ಲಿ ವಾಸವಿದ್ದಾರೆ. ಅವರ ಮನೆಯ ಪಕ್ಕದಲ್ಲೇ ವಾಸವಿರುವವರು ಪಿಟ್‌ಬುಲ್ ನಾಯಿ ಸಾಕಿದ್ದಾರೆ. ಅಂದು ಸಂಜೆ 5.30ರ ವೇಳೆ ಮಗು ಎತ್ತಿಕೊಂಡು ತಾಯಿ ನಿಂತಿದ್ದರು. ಆಗ ನಾಯಿ ಏಕಾಏಕಿ ದಾಳಿ ನಡೆಸಿದೆ' ಎಂದು ಆರೋಪಿಸಲಾಗಿದೆ. 'ಮಗುವಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಚಿಕಿತ್ಸೆಗೆ ₹ 80 ಸಾವಿರ ವೆಚ್ಚವಾಗಿದೆ. ಮಾಲೀಕನ ನಿರ್ಲಕ್ಷ್ಯದಿಂದ ಘಟನೆ ನಡೆದಿದೆ' ಎಂದು ದೂರಿನಲ್ಲಿ ವಿವರಿಸಲಾಗಿದೆ.

ರೌಡಿಶೀಟರ್ ಕಾಲಿಗೆ ಗುಂಡು

ಪ್ರಜಾವಾಣಿ ವಾರ್ತೆ

ಆನೇಕಲ್: ಅನೇಕ ದಿನಗಳಿಂದ ತಲೆಮರೆಸಿಕೊಂಡು ಓಡಾಡುತ್ತಿದ್ದ ಆನೇಕಲ್‌ನ ರೌಡಿಶೀಟರ್ ಸುನೀಲ್ ಅಲಿಯಾಸ್ ಹಾವೇರಿಯನ್ನು (25) ಪೊಲೀಸರು ಗುರುವಾರ ಬೆಳಗ್ಗೆ ತಾಲ್ಲೂಕಿನ ಬಂಡಾಪುರ ಸಮೀಪದ ನಿರ್ಜನ ಪ್ರದೇಶದಲ್ಲಿ ಕಾಲಿಗೆ ಗುಂಡು ಹೊಡೆದು ಬಂಧಿಸಿದ್ದಾರೆ.

ಕೊಲೆ, ಕೊಲೆ ಯತ್ನ, ದರೋಡೆ ಸೇರಿದಂತೆ ಹಲವು ಗುರುತರ ಅಪರಾಧ ಪ್ರಕರಣಗಳಲ್ಲಿ ಪೊಲೀಸರಿಗೆ ಬೇಕಾಗಿದ್ದ ಆನೇಕಲ್ ಪಂಪ್‌ಹೌಸ್ ನಿವಾಸಿ ಸುನೀಲ್ ವಿರುದ್ಧ ಸೂರ್ಯಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಕೊಲೆ ಯತ್ನ ಪ್ರಕರಣ ದಾಖಲಾಗಿತ್ತು.

ಆತನ ಬಂಧನಕ್ಕೆ ಸೂರ್ಯಸಿಟಿ ಮತ್ತು ಅತ್ತಿಬೆಲೆ ಪೊಲೀಸ್ ಠಾಣೆಯ ಪೊಲೀಸರು ಬಲೆ ಬೀಸಿದ್ದರು. ಬಂಡಾಪುರ ನಿರ್ಜನ ಪ್ರದೇಶದಲ್ಲಿ ಸುನೀಲ್ ಅಡಗಿರುವುದನ್ನು ಖಚಿತಪಡಿಸಿಕೊಂಡ ಸೂರ್ಯಸಿಟಿ ಮತ್ತು ಅತ್ತಿಬೆಲೆ ಪೊಲೀಸರು ದಾಳಿ ನಡೆಸಿದರು.



ನರೇಗಾ, ಆರ್‌ಟಿಇ, ಆರ್‌ಟಿಐ ಮತ್ತು ಆಹಾರ ಭದ್ರತೆ ಕಾಯ್ದೆ: ಯುಪಿಎ ಕಲ್ಯಾಣ ಕಾರ್ಯಕ್ರಮ

ಸಾಮಾನ್ಯನ ಬಲಪಡಿಸಿದ ಮನಮೋಹನ

ಪ್ರಜಾವಾಣಿ ವಾರ್ತೆ

> ಮನಮೋಹನ ಸಿಂಗ್ ಅವರನ್ನು ಟೀಕೆ, ಅವಹೇಳನ, ಲೇವಡಿ ಮತ್ತು ನಿರ್ಲಕ್ಷ್ಯಕ್ಕೆ ಗುರಿ ಮಾಡುವಲ್ಲಿ, ಅವರು ಜಾರಿಗೆ ತಂದ ಕೆಲ ಮಹತ್ವದ ಬದಲಾವಣೆಗಳನ್ನು ಬಹುತೇಕರು ಮರೆತದ್ದೇ ಹೆಚ್ಚು

ಮೌನಿ ಸಿಂಗ್, ಆ್ಯಕ್ಸಿಡೆಂಟಲ್ ಪ್ರೈಮ್ ಮಿನಿಸ್ಟರ್, ಮೌನಿ ಬಾಬಾ... ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರನ್ನು ಜರಿಯಲು ವಿರೋಧ ಪಕ್ಷಗಳು ಬಳಸಿದ ಟೀಕಾನಾಮಗಳಿವು. ದೇಶದ ಬೇರೆಲ್ಲಾ ಪ್ರಧಾನಿಗಳಂತೆ ಮನಮೋಹನ ಸಿಂಗ್ ಅವರು ಜನಪ್ರಿಯ ನಾಯಕರಾಗಿರಲಿಲ್ಲ. ಈಚಿನ ದಶಕದಲ್ಲಿ ಮನಮೋಹನ ಸಿಂಗ್ ಕುರಿತ ಸುದ್ದಿಗಳಲ್ಲಿ ಬಹುತೇಕವು ಅವರ ವಿರುದ್ಧ ಟೀಕೆಗಳೇ ಆಗಿದ್ದವು ಬಿಟ್ಟರೆ, ಅವರು ಮಾತನಾಡಿದ ಸುದ್ದಿಗಳು ಜನರಿಗೆ ತಲುಪಿದ್ದು ಕಡಿಮೆ. ಒಮ್ಮೆಯೂ ಚುನಾವಣೆ ಎದುರಿಸಿ ಸಂಸತ್ತು ಪ್ರವೇಶಿಸದ ಸಿಂಗ್ ಅವರನ್ನು, ಆ ಕಾರಣಕ್ಕೇ ವಿಪಕ್ಷಗಳು ಸದಾ ಜರಿಯುತ್ತಿದ್ದದ್ದೂ ಇದೆ. ತೀರಾ ಈಚಿನ ವರ್ಷಗಳಲ್ಲಿ ಅವರು ಟ್ವಿಟರ್ ಖಾತೆ ಆರಂಭಿಸಿದಾಗ, ಅವರನ್ನು ಅಲ್ಲಿ ಹಿಂಬಾಲಿಸಿದವರ ಸಂಖ್ಯೆ ತೀರಾ ಕಡಿಮೆ. ಹೀಗೆ ಅವರನ್ನು ಟೀಕೆ, ಅವಹೇಳನ, ಲೇವಡಿ ಮತ್ತು ನಿರ್ಲಕ್ಷ್ಯಕ್ಕೆ ಗುರಿ ಮಾಡುವಲ್ಲಿ, ಅವರು ಜಾರಿಗೆ ತಂದ ಕೆಲ ಮಹತ್ವದ ಬದಲಾವಣೆಗಳನ್ನು ಬಹುತೇಕರು ಮರೆತದ್ದೇ ಹೆಚ್ಚು.

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಮನಮೋಹನ ಸಿಂಗ್ ಅವರ ನೇತೃತ್ವದ ಸರ್ಕಾರ ಜಾರಿಗೆ ತಂದಿದ್ದ ಮಹತ್ವದ ಕಾರ್ಯಕ್ರಮಗಳಲ್ಲಿ ಒಂದು. ಗ್ರಾಮೀಣ ಭಾಗದ ಜನರಿಗೆ ಉದ್ಯೋಗ ನೀಡಿದ್ದಲ್ಲದೆ, ಸ್ವತ್ತು ನಿರ್ಮಾಣ, ಕೃಷಿ ಜಮೀನು ಅಭಿವೃದ್ಧಿಯಂತಹ ಅತ್ಯಂತ ಮಹತ್ವದ ಸುಧಾರಣೆಗಳನ್ನು ಈ ಯೋಜನೆ ಸಾಧ್ಯವಾಗಿಸಿದೆ. ಕೋವಿಡ್ ಲಾಕ್‌ಡೌನ್‌ನ ಅವಧಿಯಲ್ಲಿ ದೇಶದ ಗ್ರಾಮೀಣ ಪ್ರದೇಶದ ಬಹುಪಾಲು ಜನರಿಗೆ ಅನ್ನ-ಧನ ಒದಗಿಸಿದ್ದು ಇದೇ ಯೋಜನೆ. ಪ್ರತಿ ಕುಟುಂಬಕ್ಕೆ ಉದ್ಯೋಗ ನೀಡುವ ಮೂಲಕ ಅವರ ಆರ್ಥಿಕ ಅಗತ್ಯಗಳನ್ನು, ಆಹಾರದ ಅಗತ್ಯಗಳನ್ನು ಪೂರೈಸಬೇಕು ಎಂಬ ಉದ್ದೇಶದ ಈ ಯೋಜನೆಯ ಮೇಲೆ ವಿಶ್ವಬ್ಯಾಂಕ್ ಸಹ ಅಧ್ಯಯನ ನಡೆಸಿದೆ.

2013ರಲ್ಲಿ ಸಿಂಗ್ ಅವರ ಸರ್ಕಾರ ಜಾರಿಗೆ ತಂದ ಆಹಾರ ಭದ್ರತಾ ಕಾಯ್ದೆಯು ದೇಶದ ಅತ್ಯಂತ ದೊಡ್ಡ ಕಲ್ಯಾಣ ಕಾರ್ಯಕ್ರಮಗಳಲ್ಲಿ ಒಂದು. ದೇಶದ ಎಲ್ಲ ರಾಜ್ಯಗಳಲ್ಲೂ ಪಡಿತರ ಪೂರೈಕೆ ವ್ಯವಸ್ಥೆ ಏಕರೂಪದಲ್ಲಿ ಇಲ್ಲದೇ ಇದ್ದ ಸಂದರ್ಭದಲ್ಲಿ, ಯಾವೊಬ್ಬ ನಾಗರಿಕನೂ ಹಸಿವಿನಿಂದ ಮಲಗಬಾರದು ಎಂಬ ಉದ್ದೇಶದಿಂದ ಈ ಕಾಯ್ದೆ ರೂಪಿಸಲಾಗಿತ್ತು. ಅಂದು ಲಭ್ಯವಿದ್ದ 2011ರ ಜನಗಣತಿಯ ದತ್ತಾಂಶಗಳ ಆಧಾರದಲ್ಲಿ ಸುಮಾರು 80 ಕೋಟಿ ಜನರಿಗೆ ಆಹಾರ ಒದಗಿಸಲು ಸಿಂಗ್ ಸರ್ಕಾರ ಕಾರ್ಯಕ್ರಮ ರೂಪಿಸಿತ್ತು. ಕೋವಿಡ್ ಅವಧಿಯಲ್ಲಿ ಎನ್‌ಡಿಎ ಸರ್ಕಾರ ದೇಶದ ಜನರಿಗೆ ಉಚಿತ ಪಡಿತರ ಒದಗಿಸಿದ್ದು ಇದೇ ಯೋಜನೆ ಅಡಿಯಲ್ಲಿ. 2013ರಲ್ಲಿ ಎಷ್ಟು ಜನರನ್ನು ಫಲಾನುಭವಿಗಳು ಎಂದು ಗುರುತಿಸಲಾಗಿತ್ತೂ, ಅಷ್ಟೇ ಫಲಾನುಭವಿಗಳು ಈಗಲೂ ಇದ್ದಾರೆ. ಅರ್ಹರಿದ್ದರೂ ಫಲಾನುಭವಿಗಳ ಸಂಖ್ಯೆಯಲ್ಲಿ ಹೆಚ್ಚಿಸಲಾಗಿಲ್ಲ ಎಂದು ಹಿಂದಿನ ಎನ್‌ಡಿಎ ಸರ್ಕಾರ ಒಪ್ಪಿಕೊಂಡಿತ್ತು.

ಮಾಹಿತಿ ಹಕ್ಕು ಕಾಯ್ದೆ ಎಂದರೆ ಎಲ್ಲರಿಗೂ ಥಟ್ಟನೆ ಗೊತ್ತಾಗುವುದಿಲ್ಲ. ಬದಲಿಗೆ 'ಆರ್‌ಟಿಐ' ಎಂದರೆ ಪ್ರತಿಯೊಬ್ಬರಿಗೂ ಅದರ ಮಹತ್ವ ಗೊತ್ತಾಗುತ್ತದೆ. ಜನ ಸಾಮಾನ್ಯನ ಕೈಗೂ ಮಾಹಿತಿ ಹಕ್ಕನ್ನು ನೀಡಿದ ಕಾಯ್ದೆಯನ್ನು ಜಾರಿಗೆ ತಂದಿದ್ದು ಇದೇ ಮನಮೋಹನ ಸಿಂಗ್ ಅವರ ಸರ್ಕಾರ. ದೇಶದಲ್ಲಿ ಪತ್ರಿಕೋದ್ಯಮ, ಸಾಮಾಜಿಕ ಕಾರ್ಯಕರ್ತರ ಹೋರಾಟದ ದಿಕ್ಕು ಮತ್ತು ತೀವ್ರತೆಯನ್ನೇ ಬದಲಿಸಿದ ನಿರ್ಧಾರವದು. ಹಲವು ರಾಜ್ಯಗಳಲ್ಲಿ ಸರ್ಕಾರದ ಭ್ರಷ್ಟಾಚಾರಗಳು, ಜನವಿರೋಧಿ ನೀತಿಗಳು ಮತ್ತು ಸುಳ್ಳುಗಳನ್ನು ಬೆತ್ತಲುಗೊಳಿಸುವಲ್ಲಿ ಆರ್‌ಟಿಐ ಕಾಯ್ದೆಯ ಪಾತ್ರ ಮಹತ್ವದ್ದು.

ಇವುಗಳಂತೆಯೇ ಮನಮೋಹನ ಸಿಂಗ್ ಅವರ ಸರ್ಕಾರ ಜಾರಿಗೆ ತಂದ ಮತ್ತೊಂದು ಮಹತ್ವದ ಕಾಯ್ದೆ ಆರ್‌ಟಿಇ. ಬಡವರು ಮತ್ತು ವಂಚಿತರಿಗೂ ಖಾಸಗಿ ಶಾಲೆಗಳಲ್ಲಿ ಉಚಿತ ಶಿಕ್ಷಣ ನೀಡುವುದನ್ನು ಈ ಕಾಯ್ದೆ ಕಡ್ಡಾಯ ಮಾಡಿತ್ತು. ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಕುಟುಂಬದ ಕೋಟ್ಯಂತರ ಮಕ್ಕಳು ಆರ್‌ಟಿಇ ಮೂಲಕ ಉತ್ತಮ ಗುಣಮಟ್ಟದ ಶಿಕ್ಷಣ ಪಡೆದಿದ್ದಾರೆ. ಶಿಕ್ಷಣ ವ್ಯವಸ್ಥೆಯಲ್ಲಿ ಇದ್ದ 'ಸಾಮಾಜಿಕ ಮತ್ತು ಆರ್ಥಿಕ ಅಂತರ'ವನ್ನು ತುಸುಮಟ್ಟಿಗೆ ಹೋಗಲಾಡಿಸಿದ ಶ್ರೇಯವನ್ನು ಈ ಕಾಯ್ದೆಗೆ ಕೊಡಲೇಬೇಕು. ವಿಸ್ತರಿಸುತ್ತಲೋ ಅಥವಾ ದುರ್ಬಲಗೊಳಿಸುತ್ತಲೋ ಅಂತೂ ಈಗಿನ ಸರ್ಕಾರ ಈ ಯೋಜನೆಗಳನ್ನು ಮುಂದುವರೆಸುತ್ತಲೇ ಇದೆ. ದೇಶದ ಆರ್ಥಿಕ, ಸಾಮಾಜಿಕ ಜೀವನದ ಪ್ರಮುಖ ಭಾಗವಂತೆ ಆಗಿರುವ ಈ ಯೋಜನೆಗಳ ಫಲಾನುಭವಿಗಳು ಮನಮೋಹನ ಸಿಂಗ್ ಅವರನ್ನು ನೆನಪಿಸಿಕೊಳ್ಳಬೇಕಾದುದು ಅತ್ಯಗತ್ಯ.



ಮಾಜಿ ಐಎಎಸ್ ಅಧಿಕಾರಿ ಎಂ.ಎನ್‌.ಬುಚ್ ಸ್ಮರಣಾರ್ಥ 2015ರಲ್ಲಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಮನಮೋಹನ ಸಿಂಗ್ ಹಾಗೂ ಬಿಜೆಪಿ ನಾಯಕ ಎಲ್‌.ಕೆ.ಅಡ್ವಾಣಿ



ಕಾರ್ಯಕ್ರಮವೊಂದರಲ್ಲಿ ಎಸ್‌.ಎಂ.ಕೃಷ್ಣ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಪಾಲ್ಗೊಂಡಿದ್ದ ಮನಮೋಹನ ಸಿಂಗ್ ಅವರು ಜನರತ್ತ ಕೈಬೀಸಿದ್ದು ಹೀಗೆ



ಮೈಸೂರಿನಲ್ಲಿ ನಡೆದಿದ್ದ ಇನ್ಫೊಸಿಸ್ ಸಂಸ್ಥೆಯ ನೂತನ ಕಟ್ಟಡ ಉದ್ಘಾಟನೆ ಸಮಾರಂಭದಲ್ಲಿ ಇನ್ಫೊಸಿಸ್ ಮುಖ್ಯಸ್ಥ ಎನ್‌.ಆರ್‌.ನಾರಾಯಣಮೂರ್ತಿ ತಮ್ಮ ಪತ್ನಿ ಸುಧಾ ಮೂರ್ತಿ ಅವರನ್ನು ಮನಮೋಹನ ಸಿಂಗ್ ಅವರಿಗೆ ಪರಿಚಯಿಸಿದ್ದ ಸಂದರ್ಭ

'ಗಾಂಧಿ ಭಾರತ' ತಾತ್ಕಾಲಿಕ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಅಗಲಿಕೆ ಹಿನ್ನೆಲೆಯಲ್ಲಿ, ಬೆಳಗಾವಿಯಲ್ಲಿ ಶುಕ್ರವಾರ ನಡೆಯಬೇಕಿದ್ದ 'ಗಾಂಧಿ ಭಾರತ' ಕಾರ್ಯಕ್ರಮವನ್ನು ರದ್ದು ಮಾಡಲಾಗಿದೆ. ಈಗಾಗಲೇ ನಗರಕ್ಕೆ ಬಂದಿರುವ ಎಲ್ಲ ನಾಯಕರು ಬೆಳಿಗ್ಗೆ 10.30ಕ್ಕೆ ಅದೇ ವೇದಿಕೆಯಲ್ಲಿ ಮನಮೋಹನ ಸಿಂಗ್ ಅವರಿಗೆ ಗೌರವ ವಂದನೆ ಸಲ್ಲಿಸುತ್ತೇವೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ನಗರದಲ್ಲಿ ಗುರುವಾರ ರಾತ್ರಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, '1924ರ ಕಾಂಗ್ರೆಸ್ ಅಧಿವೇಶನಕ್ಕೆ ನೂರು ವರ್ಷ ತುಂಬಿದ ಹಿನ್ನೆಲೆಯಲ್ಲಿ ಗುರುವಾರದ ಕಾರ್ಯಕ್ರಮಗಳು ಯಶಸ್ವಿಯಾದವು. ಪಕ್ಷದ ವತಿಯಿಂದ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಎಂಬ ಜನಾಂದೋಲನ ಕಾರ್ಯಕ್ರಮ ಶುಕ್ರವಾರ ಆಯೋಜಿಸಲಾಗಿತ್ತು. ಅದನ್ನು ಸದ್ಯಕ್ಕೆ ಮುಂದೂಡುತ್ತೇವೆ. ಮುಂದಿನ ಕ್ರಮ ಏನು ಮಾಡಬೇಕು ಎಂದು ವರಿಷ್ಠರೊಂದಿಗೆ ಚರ್ಚಿಸಿ ತಿಳಿಸುತ್ತೇನೆ' ಎಂದರು.

'ನಮ್ಮ ನಾಯಕಿ ಸೋನಿಯಾ ಗಾಂಧಿ ಅವರು ಅಧಿಕಾರ ತ್ಯಾಗ ಮಾಡಿ ಮನಮೋಹನ ಸಿಂಗ್ ಅವರನ್ನು ಪ್ರಧಾನಿ ಮಾಡಿದ್ದರು. ನಮಗೆ ಅಧಿಕಾರ ಮುಖ್ಯವಲ್ಲ; ದೇಶದ ಆರ್ಥಿಕ ಸುಧಾರಣೆ ಮುಖ್ಯ ಎಂದು ಹೇಳಿದ್ದರು.



ಡಿ.ಕೆ. ಶಿವಕುಮಾರ್

ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಆ ಘಟನೆ ಮೈಲುಗಲ್ಲಾಗಿ ಉಳಿಯಿತು. ಮನಮೋಹನ ಸಿಂಗ್ ಅವರು ನಿರೀಕ್ಷೆಗಿಂತ ಹೆಚ್ಚಾಗಿ, ವೇಗವಾಗಿ ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ದರು' ಎಂದರು.

'ಮನರೇಗಾ'ದಂಥ ಯೋಜನೆ ಆರಂಭಿಸುವ ಮೂಲಕ ಅವರು ಬಡವರಿಗೆ ಕೆಲಸ ಕೊಟ್ಟು, ಸಬಲರಾಗಿ ಮಾಡಿದರು. ಶಿಕ್ಷಣ ಹಕ್ಕು, ಮಾಹಿತಿ ಹಕ್ಕು ಮುಂತಾದ ಅವರ ನೀತಿಗಳು ದೇಶದ ಗತಿಯನ್ನೇ ಬದಲಿಸಿದವು. ರೈತರ ಸಾಲ ಮನ್ನಾ ಮಾಡುವ ಮೂಲಕ ಅವರೊಬ್ಬ ದೊಡ್ಡ ಆರ್ಥಿಕ ತಜ್ಞ ಎಂಬುದನ್ನು ಜಗತ್ತಿಗೆ ತೋರಿಸಿದ್ದರು. ಇಡೀ ಪ್ರಪಂಚದ ರಾಷ್ಟ್ರಗಳು ಆರ್ಥಿಕವಾಗಿ ಜರ್ಜರಿತವಾದಾಗ ಭಾರತ ಮಾತ್ರ ಪ್ರಬಲವಾಗಿ ನಿಂತಿದ್ದು ಮನಮೋಹನಸಿಂಗ್ ಅವರ ಕೃತ್ರ್ಯತ್ವ ಶಕ್ತಿಯ ಪ್ರತೀಕ' ಎಂದರು.

'ಜವಾಹರಲಾಲ್ ನೆಹರೂ ಅವರ ಹೆಸರಿನಲ್ಲಿ 'ನರ್ಮ್' ಯೋಜನೆ ಆರಂಭಿಸಿ ದೇಶದಲ್ಲಿ ಫ್ಲೈಓವರ್‌ಗಳ ಕಲ್ಪನೆ ಸಾಕಾರ ಮಾಡಿದರು. ಅವರ ಕಾರಣಕ್ಕಾಗಿಯೇ ಇಂದು ಬೆಂಗಳೂರು ಇಷ್ಟೊಂದು ಅಭಿವೃದ್ಧಿ ಆಗಿದೆ. ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಅವರ ಕೊಡುಗೆ ಅಪಾರ' ಎಂದೂ ಸ್ಮರಿಸಿದರು.

ಗುತ್ತಿಗೆದಾರನ ಆತ್ಮಹತ್ಯೆ ಪ್ರಕರಣ: ಬಿ.ವೈ ವಿಜಯೇಂದ್ರ ಆಗ್ರಹ

'ಪ್ರಿಯಾಂಕ್ ರಾಜೀನಾಮೆ ನೀಡಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದರ್‌ನ ಗುತ್ತಿಗೆದಾರ ಸಚಿನ್ ಆತ್ಮಹತ್ಯೆಗೆ ಸಚಿವ ಪ್ರಿಯಾಂಕ್ ಖರ್ಗೆ ಅವರೇ ಹೊಣೆಗಾರರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಿಯಾಂಕ್ ಅವರ ರಾಜೀನಾಮೆ ಪಡೆಯಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದ್ದಾರೆ.

ಸಚಿವರ ಆಪ್ತನಾಗಿರುವ ರಾಜು ಕಪನೂರರ ಕಿರುಕುಳ ಮತ್ತು ಬೆದರಿಕೆಯಿಂದಾಗಿ, ಗುತ್ತಿಗೆದಾರ ಸಚಿನ್ ಸುದೀರ್ಘ ಪತ್ರ ಬರೆದು ಆತ್ಮಹತ್ಯೆಗೆ ಶರಣಾಗಿದ್ದಾರೆ. ಪಂಚ ಗ್ಯಾರಂಟಿಗಳ ಜತೆಗೆ ಕಾಂಗ್ರೆಸ್ ಸರ್ಕಾರ 'ಆತ್ಮಹತ್ಯೆಯ ಗ್ಯಾರಂಟಿ'ಯನ್ನೂ ಕರುಣಿಸಿದೆ ಎಂದು ಅವರು ಕಿಡಿಕಾರಿದ್ದಾರೆ.

'ಪೊಲೀಸ್ ಅಧಿಕಾರಿಗಳು ಪಕ್ಷ-ಪಾತಿಗಳಂತೆ ವರ್ತಿಸುವುದನ್ನು ಬಿಟ್ಟು ಪಾರದರ್ಶಕವಾಗಿ ತನಿಖೆ ನಡೆಸದಿದ್ದರೆ, ಈ ವಿಷಯವನ್ನು ಬಿಜೆಪಿ ಅತ್ಯಂತ ಗಂಭೀರವಾಗಿ ಪರಿಗಣಿಸಿ ಪ್ರಿಯಾಂಕ್ ಖರ್ಗೆ ರಾಜೀನಾಮೆವರೆಗೂ ಹೋರಾಟ ನಡೆಸಲಿದೆ. ಮೃತ ಗುತ್ತಿಗೆದಾರ ಸಚಿನ್ ಕುಟುಂಬಕ್ಕೆ ಸೂಕ್ತ ಪರಿಹಾರ ಘೋಷಿಸಿ, ಸಚಿನ್ ಪಡೆದಿದ್ದ ಗುತ್ತಿಗೆ ಕೆಲಸಗಳ ಬಾಕಿ ಉಳಿದಿರುವ ಹಣವನ್ನು ಪಾವತಿಸಬೇಕು ಮತ್ತು ತಪ್ಪಿ-ತಸ್ಥರಿಗೆ ಶಿಕ್ಷೆ ಆಗಬೇಕು' ಎಂದು ಆಗ್ರಹಿಸಿದ್ದಾರೆ.



ಬಿ. ವೈ. ವಿಜಯೇಂದ್ರ

'ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದಲೂ ಗುತ್ತಿಗೆದಾರರು ಆತಂಕ ಸ್ಥಿತಿ ಎದುರಿಸುತ್ತಿದ್ದಾರೆ. ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ನಲುಗಿ ಹೋಗಿದ್ದಾರೆ. ವಿಪರೀತ ಆರ್ಥಿಕ ಒತ್ತಡ ಅವರನ್ನು ಆತ್ಮಹತ್ಯೆಗೆ ಪ್ರೇ-ರೇಪಿಸುತ್ತಿದೆ. ಸಚಿವರ ಕೈ ಕೆಳಗಿನ ಅಧಿಕಾರಿಗಳು ಹಾಗೂ ಆಪ್ತರ ಒತ್ತಡಗಳು ಗುತ್ತಿಗೆದಾರರನ್ನು ಉಸಿರುಗಟ್ಟಿಸುತ್ತಿವೆ' ಎಂದು ಹೇಳಿದ್ದಾರೆ.

'ಕಾಂಗ್ರೆಸ್ ಸರ್ಕಾರದಲ್ಲಿ ಕೆಲವು ಮಂತ್ರಿಗಳು ತಮ್ಮ ಬಲಗೈ ಬಂಟರು ಹಾಗೂ ಆಪ್ತ ಸಹಾಯಕರಿಗೆ ಜನರಲ್ ಪವರ್ ಆಫ್ ಅಟಾರ್ನಿ ನೀಡಿದಂತಿದೆ. ಇತ್ತೀಚೆಗಷ್ಟೇ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ಆಪ್ತ ಸಹಾಯಕನ ಕಿರುಕುಳಕ್ಕೆ ತಹಶೀಲ್ದಾರ್ ಕಚೇರಿಯ ಎಸ್‌ಡಿಎ ರುದ್ರೇಶ್ ಆತ್ಮಹತ್ಯೆ, ಬೆಳಗಾವಿ ಸುವರ್ಣಸೌಧದಲ್ಲಿ ಶಾಸಕ ಸಿ.ಟಿ. ರವಿ ಅವರ ಮೇಲೆ ಗೂಂಡಾಗಿರಿ ಪ್ರದರ್ಶಿಸಿದ್ದ ಘಟನೆ ಇನ್ನು ಹಸಿಯಾಗಿಯೇ ಇದೆ' ಎಂದಿದ್ದಾರೆ.

'ಗುತ್ತಿಗೆದಾರರ ವಿಷಯದಲ್ಲಿ ಸರ್ಕಾರ ಚೆಲ್ಲಾಟ'

ಮಂಡ್ಯ: 'ಬೆಳಗಾವಿಯಲ್ಲಿ ಮಹಾತ್ಮ ಗಾಂಧೀಜಿಯನ್ನು ಕಾಂಗ್ರೆಸ್ ಸ್ಮರಿಸುತ್ತಿರುವಾಗಲೇ, ಬೀದರ್‌ನಲ್ಲಿ ಯುವ ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು ರಾಜ್ಯದಲ್ಲಿ ಅರಾಜಕತೆಗೆ ಸಾಕ್ಷಿ' ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಟೀಕಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ರಾಜ್ಯದಲ್ಲಿ ತಮ್ಮನ್ನು ಬಿಟ್ಟರೆ ಸಚ್ಚಾರಿತ್ರ್ಯವುಳ್ಳವರೇ ಇಲ್ಲವೆಂದು ಪ್ರಿಯಾಂಕ್ ಖರ್ಗೆ ಹೇಳಿಕೊಂಡು ತಿರುಗುತ್ತಿದ್ದಾರೆ. ಈಗ ಅವರ ಆಪ್ತ ಸಹಾಯಕನ ಹೆಸರೇ ಬಂದಿದೆ. ಸರ್ಕಾರ ಗುತ್ತಿಗೆದಾರರ ವಿಷಯದಲ್ಲಿ ಚೆಲ್ಲಾಟ ಮುಂದುವರಿಸುತ್ತಿದೆ' ಎಂದು ದೂರಿದರು. 'ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ಅವರು ಪದೇ ಪದೇ ಹೇಳುತ್ತಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ನಿರಂತರವಾಗಿ ಅಧಿಕಾರದಲ್ಲಿದ್ದಾರೆ. ಈಗ ಅವರ ಮಗ ಮಂತ್ರಿ. ಕಲ್ಯಾಣ ಕರ್ನಾಟಕಕ್ಕೆ ಅನ್ಯಾಯ ಅಂತಾರೆ. ನಿಮ್ಮನ್ನು ಹಿಡಿದುಕೊಂಡವರು ಯಾರು? ಉತ್ತರ ಕರ್ನಾಟಕಕ್ಕೆ ನಿಮ್ಮ ಕೊಡುಗೆ ಏನು' ಎಂದು ಪ್ರಶ್ನಿಸಿದರು. 'ಸರ್ಕಾರದಲ್ಲಿ ನಡೆಯುತ್ತಿರುವ ಪರ್ಸೆಂಟೇಜ್ ಬಗ್ಗೆ ಯಾವ ಆಯೋಗ ಮಾಡುತ್ತೀರಾ? ರಾಜ್ಯದಲ್ಲಿರುವುದು ಮಾನವೀಯತೆ ಮತ್ತು ಅಭಿವೃದ್ಧಿಯ ಕಾಳಜಿಯೇ ಇಲ್ಲದ ಅನಾಗರಿಕ ಸರ್ಕಾರ. ಇಷ್ಟು ದಿವಸ ಅಂಬೇಡ್ಕರ್ ಆಯಿತು, ಈಗ ಗಾಂಧಿ ಹೆಸರು ಹೇಳಿಕೊಂಡು ರಾಜಕೀಯ ಮಾಡುತ್ತಿದ್ದಾರೆ' ಎಂದರು.



'ಬೆಳಗಾವಿಯಲ್ಲಿ ಸಿದ್ದರಾಮಯ್ಯರ ಪ್ರತಿಮೆ'

ಬೆಂಗಳೂರು: 'ಬೆಳಗಾವಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 50 ಅಡಿ ಎತ್ತರದ ಕಂಚಿನ ಪ್ರತಿಮೆ ಸ್ಥಾಪಿಸಲಾಗುತ್ತದೆ' ಎಂದು ಸರ್ವೋದಯ ಮುಖಂಡ ಪಂಚಾಕ್ಷರಯ್ಯ ನೀಲಕಂಠಯ್ಯ ಗುಣಾಚಾರಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದ ಅವರು, 'ಮಹಾತ್ಮ ಗಾಂಧೀಜಿ ಕನಸಿನ ಭಾರತವನ್ನು ನನಸು ಮಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ, ಸರ್ವೋದಯ ಸಮಾಜ ರಚನೆಯ ಹರಿಕಾರ, ಹಿಂದುಳಿದ ವರ್ಗಗಳ ಅಗ್ರನಾಯಕ ಸಿದ್ದರಾಮಯ್ಯ ಅವರಿಗೆ ಈ ಮೂಲಕ ಗೌರವ ಸಲ್ಲಿಸಲಾಗುವುದು' ಎಂದು ಹೇಳಿದರು.

'ಬೆಳಗಾವಿಯಲ್ಲಿ ಗಾಂಧೀಜಿ ಅಧ್ಯಕ್ಷತೆಯಲ್ಲಿ 100 ವರ್ಷಗಳ ಹಿಂದೆ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆದಿತ್ತು. ಈ ನೆನಪಿನಲ್ಲಿ ಗಾಂಧೀಜಿ ಪ್ರತಿಮೆ ಅನಾವರಣಗೊಳಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಗಾಂಧೀಜಿ ತತ್ವಗಳನ್ನು ಅಳವಡಿಸಿಕೊಂಡು ಕೆಲಸ ಮಾಡುತ್ತಿರುವ ಸಿದ್ದರಾಮಯ್ಯ ಅವರ ಪ್ರತಿಮೆ ನಿಲ್ಲಿಸಲು ಇದು ಸಕಾಲ. ಅದಕ್ಕಾಗಿ ₹1 ಕೋಟಿ ವೆಚ್ಚದಲ್ಲಿ ಈ ಯೋಜನೆ ಹಮ್ಮಿಕೊಳ್ಳಲಾಗಿದೆ' ಎಂದರು.

ಚಿತ್ರಾವಳಿ



ಅಕ್ಷಯ ಬ್ರಾಹ್ಮಣ ಮಹಾಸಂಘದ 6ನೇ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿದ್ದ 'ಸೀತಾರಾಮ ಕಲ್ಯಾಣ' ಉದ್ಘಾಟನಾ ಸಮಾರಂಭದಲ್ಲಿ ಸಂಘದ ಅಧ್ಯಕ್ಷ ಜಿ. ಅಂಬರೀಶ್ ಮತ್ತು ಡಾ. ಸಿ.ಎನ್‌. ಅಶ್ವತ್ಥ ನಾರಾಯಣ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಬಿಬಿಎಂಪಿ ಮಾಜಿ ಸದಸ್ಯರಾದ ಎನ್‌.ಜೈಪಾಲ್, ಮುನಿಸ್ವಾಮಿ ಗೌಡ, ಸಂಘದ ಗೌರವ ಅಧ್ಯಕ್ಷ ಗಣೇಶ ದೀಕ್ಷಿತ್, ಪುರೋಹಿತರಾದ ವೆಂಕಟರಮಣ ಶಾಸ್ತ್ರಿ, ಭಾನುಪ್ರಕಾಶ್ ಶರ್ಮ ಭಾಗವಹಿಸಿದ್ದರು



ಆರೋಹಣ ಸಂಸ್ಥೆಯ ತಿಂಗಳ ಸಂಗೀತ ಕಾರ್ಯಕ್ರಮ 'ಸಮ್ಮಿಲನ ಮಿಕ್ಸ್ ಮ್ಯೂಸಿಕ್ 16'ರಲ್ಲಿ, ಡಾ. ರಾಜಶೇಖರ್ ಮೈಸೂರು ಅವರನ್ನು ಸನ್ಮಾನಿಸಲಾಯಿತು. ವಿದುಷಿ ಮಹಿಮಾ ಹರೀಶ್, ಸಂಸ್ಥೆಯ ಮುಖ್ಯಸ್ಥ ಸುಧೀಂದ್ರ ಉಪಸ್ಥಿತರಿದ್ದರು



ಜೆ.ಪಿ.ನಗರದ ಇಂಡಿಯನ್ ಮ್ಯೂಸಿಕ್ ಮ್ಯೂಸಿಯಂನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಗಿರಿಧರ್ ಉಡುಪ ಅವರು ಜಾಕೀರ ಹುಸೇನ್ ಅವರ ಭಾವಚಿತ್ರಕ್ಕೆ ಗೌರವ ನಮನ ಸಲ್ಲಿಸಿದರು. ಸಂಗೀತ ಕಲಾವಿದರಾದ ಗಾಯತ್ರಿ ಕೃಷ್ಣ, ಸುಮಾ ಸುಧೀಂದ್ರ, ಪ್ರವೀಣ್ ಗೋಡ್ಖಿಂಡಿ, ಕುಮಾರೇಶ್ ರಾಜ ಗೋಪಾಲನ್ ಮತ್ತು ರವೀಂದ್ರ ಯಾವಗಲ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ದಳವಾಯಿ ಕೃಷಿ ಬೆಲೆ ಆಯೋಗ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತ ಐಎಎಸ್ ಅಧಿಕಾರಿ ಅಶೋಕ ದಳವಾಯಿ ಅವರನ್ನು ಕೃಷಿ ಬೆಲೆ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರೈತರ ಆದಾಯವನ್ನು ದುಪ್ಪಟ್ಟು ಮಾಡುವ ಕುರಿತು ಶಿಫಾರಸು ಮಾಡಲು ಕೇಂದ್ರ ಸರ್ಕಾರ 2017ರಲ್ಲಿ ರಚಿಸಿದ್ದ ಸಮಿತಿಯ ಅಧ್ಯಕ್ಷರಾಗಿ ದಳವಾಯಿ ಅವರು ಕಾರ್ಯನಿರ್ವಹಿಸಿದ್ದರು. ಈ ಕುರಿತು ಸಿದ್ಧಪಡಿಸಿದ್ದ ವರದಿಯನ್ನು 2018ರಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದರು.



ಅಶೋಕ ದಳವಾಯಿ

ಬಳ್ಳಾರಿ ಜಿಲ್ಲೆಯ ಸಿಂಧುವಾಳದ ಎಸ್‌.ಆರ್‌. ಗಾದಿಲಿಂಗನಗೌಡ, ಕೊಪ್ಪಳದ ಡಿ.ಎಚ್‌. ಪೂಜಾರ್ ಅವರು ಸದಸ್ಯರಾಗಿ ನೇಮಕವಾಗಿದ್ದಾರೆ. ಕೃಷಿ ಇಲಾಖೆಯ ಬೆಳೆ ಅಭಿವೃದ್ಧಿ ಮತ್ತು ಯೋಜನೆ ವಿಭಾಗದ ಹೆಚ್ಚುವರಿ ಕೃಷಿ ನಿರ್ದೇಶಕರು ಪದನಿಮಿತ್ತ ಸದಸ್ಯ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಕೃಷಿ ಇಲಾಖೆ ಹೇಳಿದೆ.

ಹೆಚ್ಚು ವಿಸ್ತಾರದಲ್ಲಿ ಪೂರ್ವ–ಪಶ್ಚಿಮ ಕಾರಿಡಾರ್ ಸುರಂಗ ರಸ್ತೆ; ದೀರ್ಘಕಾಲದ ಸುಗಮ ಸಂಚಾರಕ್ಕೆ ಯೋಜನೆ

6 ಪಥದಲ್ಲಿ 'ಟ್ವಿನ್ ಟ್ಯೂಬ್ ಟನಲ್'

• ಆರ್. ಮಂಜುನಾಥ್

28.181 ಕಿ.ಮೀ
ಕೆ.ಆರ್.ಪುರದಿಂದ ನಾಯಂಡಹಳ್ಳಿವರೆಗಿನ ಸುರಂಗ ರಸ್ತೆ ಉದ್ದ

₹899 ಕೋಟಿ
ಪ್ರತಿ ಕಿ.ಮೀ ಸುರಂಗ ರಸ್ತೆ ನಿರ್ಮಾಣ ವೆಚ್ಚ

10.5 ಮೀಟರ್
ಪ್ರತಿ ಡೆಕ್‌ನಲ್ಲಿರುವ ಮೂರು ಪಥದ ಅಗಲ



ಪೂರ್ವ– ಪಶ್ಚಿಮ 'ಟ್ವಿನ್ ಟ್ಯೂಬ್ ಟನಲ್' ನಕ್ಷೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಎರಡನೇ ಹಂತದಲ್ಲಿ ಯೋಜಿಸಲಾಗಿರುವ ಪೂರ್ವ–ಪಶ್ಚಿಮ ಕಾರಿಡಾರ್ ಸುರಂಗ ಮಾರ್ಗವನ್ನು 'ಟ್ವಿನ್ ಟ್ಯೂಬ್ ಟನಲ್'ನಲ್ಲಿ (ಡಬಲ್ ಡೆಕ್) ಆರು ಪಥಗಳ ರಸ್ತೆ ನಿರ್ಮಿಸಲು ಉದ್ದೇಶಿಸಲಾಗಿದೆ.


'ಬೆಂಗಳೂರು ಸಮಗ್ರ ಸಂಚಾರ ನಿರ್ವಹಣೆ ಯೋಜನೆ'ಯಡಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಮತ್ತು ನಿರ್ವಹಣೆಗಾಗಿ ಮೂಲಸೌಕರ್ಯ ಒದಗಿಸುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ದೆಹಲಿಯ ಆಲ್ವಿನೋಕ್ ಸಂಸ್ಥೆ ಸಲ್ಲಿಸಿರುವ ಕಾರ್ಯಸಾಧ್ಯತಾ ವರದಿಯಲ್ಲಿ, ಐದು ಪಥ ಮತ್ತು ಆರು ಪಥ ನಿರ್ಮಿಸಿದರೆ, ಅದರಿಂದಾಗುವ ಪ್ರಯೋಜನಗಳನ್ನು ವಿವರಿಸಲಾಗಿದೆ.

ಕೆ.ಆರ್. ಪುರದಿಂದ ಜವಾಹರಲಾಲ್ ನೆಹರೂ ಉದ್ಯಾನ, ಸಿ.ವಿ. ರಾಮನ್ ಆಸ್ಪತ್ರೆ, ಇಂದಿರಾನಗರ, ದೊಮ್ಮಲೂರು, ಲಾಲ್‌ಬಾಗ್, ನ್ಯಾಷನಲ್ ಕಾಲೇಜ್, ಚಾಮರಾಜಪೇಟೆ, ಕಾರ್ಯಸಿದ್ಧಿ ಆಂಜನೇಯ ದೇವಸ್ಥಾನದ ಮೂಲಕ ನಾಯಂಡಹಳ್ಳಿ ಬಳಿಯ ನೈಸ್ ರಸ್ತೆ ಜಂಕ್ಷನ್‌ವರೆಗೆ ಪೂರ್ವ–ಪಶ್ಚಿಮ ಕಾರಿಡಾರ್ ಸುರಂಗ ಮಾರ್ಗ ನಿರ್ಮಿಸುವ ನಕ್ಷೆ ಸಿದ್ಧವಾಗಿದೆ.

'ಟ್ವಿನ್ ಟ್ಯೂಬ್ ಟನಲ್' ಅನ್ನು ಐದು ಪಥವಾಗಿ ನಿರ್ಮಿಸಿದರೆ, ಮೇಲೆ ಎರಡು ಪಥ ಹಾಗೂ ಕೆಳಗೆ ಮೂರು ಪಥವಿರಲಿವೆ. 15.6 ಮೀಟರ್ ಸುತ್ತಳತೆ ಹೊಂದಿರಲಿದ್ದು, ಪ್ರತಿ ಗಂಟೆಗೆ 4,500 ವಾಹನಗಳು (ಪಿಸಿಯು/ಗಂಟೆ) ಸಂಚರಿಸಬಹುದು. ಯಾವುದಾದರೂ ರಸ್ತೆಯಲ್ಲಿ ತೊಂದರೆಯಾದಾಗ ತುರ್ತು ಸಂದರ್ಭಕ್ಕಾಗಿಯೇ ಒಂದು ಪಥವನ್ನು ಹೊಂದಿರುತ್ತದೆ. ಸುತ್ತಳತೆ ಕಡಿಮೆ ಇರುವುದರಿಂದ ನಿರ್ಮಾಣ, ಸಾಮಗ್ರಿ ವೆಚ್ಚ ಕಡಿಮೆಯಾಗಲಿದೆ.

ಆರು ಪಥದ ಸುರಂಗ ಮಾರ್ಗ ನಿರ್ಮಿಸಿದರೆ ಮೇಲೆ ಹಾಗೂ ಕೆಳಗೆ ತಲಾ ಮೂರು ಪಥಗಳಿರುತ್ತವೆ. 17.2 ಮೀಟರ್ ಸುತ್ತಳತೆಯನ್ನು ಹೊಂದಿದ್ದು, ಪ್ರತಿ ಗಂಟೆಗೆ 5,400 ವಾಹನಗಳು (ಪಿಸಿಯು/ಗಂಟೆ) ಸಂಚರಿಸಬಹುದಾಗಿದೆ. ಸುತ್ತಳತೆ ಹೆಚ್ಚಿರುವುದರಿಂದ ಹೆಚ್ಚು ಪ್ರದೇಶವಿರಲಿದೆ. ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸುವುದಕ್ಕೂ ಅವಕಾಶವಾಗುತ್ತದೆ. ತುರ್ತು ಹಾಗೂ ನಿರ್ವಹಣೆಗೆ ವಿಸ್ತಾರ ಮಾರ್ಗಗಳು ಇರಲಿವೆ. ಸುರಕ್ಷೆಗೆ ಒತ್ತು ದೊರಕಲಿದ್ದು, ಕಾರ್ಯಾಚರಣೆಯೂ ದಕ್ಷತೆಯಿಂದ ಕೂಡಿರಲು ಸಾಧ್ಯವಾಗುತ್ತದೆ. ಸುತ್ತಳತೆ ಹೆಚ್ಚಿರುವುದರಿಂದ ನಿರ್ಮಾಣ ವೆಚ್ಚ ಹೆಚ್ಚಾದರೂ, ಸಾಮರ್ಥ್ಯ ಮತ್ತು ಕಾರ್ಯನಿರ್ವಹಣೆಯಲ್ಲಿ ಅನುಕೂಲವಾಗಲಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

'ಉತ್ತರ–ದಕ್ಷಿಣ ಕಾರಿಡಾರ್ ಸುರಂಗ ರಸ್ತೆಯ ಯೋಜನೆಯನ್ನು ಮೂರು ಪಥದಲ್ಲಿ ನಿರ್ಮಿಸಲಾಗುತ್ತಿದ್ದು, ಅದರಲ್ಲಿ ಸಾರ್ವಜನಿಕ ಬಸ್ ಹಾಗೂ ತುರ್ತು ಸಂದರ್ಭಕ್ಕೆ ಪ್ರತ್ಯೇಕ ರಸ್ತೆಗಳಿರಲಿವೆ. ಪೂರ್ವ– ಪಶ್ಚಿಮ ಕಾರಿಡಾರ್‌ನಲ್ಲಿ ಐದು ಅಥವಾ ಆರು ಪಥದ ಟ್ವಿನ್ ಟ್ಯೂಬ್ ಟನ್ ನಿರ್ಮಿಸುವ ಪ್ರಸ್ತಾಪವಿದೆ. ಈ ಸಂದರ್ಭದಲ್ಲೇ ರಸ್ತೆಗಳು ವಿಸ್ತಾರವಾಗಿ ನಿರ್ಮಾಣವಾದರೆ ದೀರ್ಘಕಾಲಕ್ಕೆ ಅನುಕೂಲವಾಗಲಿದೆ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.



ಪೂರ್ವ– ಪಶ್ಚಿಮ 'ಟ್ವಿನ್ ಟ್ಯೂಬ್ ಟನಲ್'ನ ಆರು ಪಥಗಳ ವಿನ್ಯಾಸ

ಭೂಸ್ವಾಧೀನಕ್ಕೆ ₹800 ಕೋಟಿ

ಉತ್ತರ– ದಕ್ಷಿಣ ಕಾರಿಡಾರ್ ಸುರಂಗ ರಸ್ತೆ ನಿರ್ಮಾಣದ ಸಂದರ್ಭದಲ್ಲಿ ಸುಮಾರು 56 ಎಕರೆಯಷ್ಟು ಜಮೀನುಗಳ ಸ್ವಾಧೀನದ ಅಗತ್ಯವಿದೆ. ಇದಕ್ಕಾಗಿ ₹800 ಕೋಟಿಯನ್ನು ಮೀಸಲಿಡಬೇಕು ಎಂದು ಕಾರ್ಯಸಾಧ್ಯತಾ ವರದಿಯಲ್ಲಿ ತಿಳಿಸಲಾಗಿದೆ.

ಯಾವುದೇ ಮರವನ್ನು ಕಡಿಯಬೇಕಾದ ಅಗತ್ಯವಿಲ್ಲ ಎಂದು ಹೇಳಲಾಗಿದ್ದರೂ, ಮರಗಳನ್ನು ಮತ್ತೊಂದು ಕಡೆ ಸ್ಥಳಾಂತರಿಸಲು, ಲ್ಯಾಂಡ್‌ಸ್ಕೇಪಿಂಗ್‌ಗೆ ₹65 ಕೋಟಿ ವೆಚ್ಚ ತೋರಿಸಲಾಗಿದೆ. ಸುರಂಗ ಕೊರೆಯುವ ಯಂತ್ರದ (ಟಿಬಿಎಂ) ಕಾರ್ಯಾಚರಣೆಗೆ ₹6,044 ಕೋಟಿ ಸೇರಿದಂತೆ ನಿರ್ಮಾಣ ಕಾಮಗಾರಿಗೆ ಒಟ್ಟು ₹11,637 ಕೋಟಿ ವೆಚ್ಚವಾಗಲಿದೆ. ₹2,094 ಕೋಟಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ), ಭೂಸ್ವಾಧೀನಕ್ಕೆ ₹800 ಕೋಟಿ ಹಾಗೂ ಇತರೆ ವೆಚ್ಚ ಸೇರಿ ಯೋಜನೆಯ ಒಟ್ಟಾರೆ ವೆಚ್ಚ ₹14,981 ಕೋಟಿಯಾಗಿದೆ.

₹19 ಸಾವಿರ ಕೋಟಿ ಸಾಲ: 'ಬೆಂಗಳೂರು ಟ್ವಿನ್ ಟನಲ್ ಪ್ರಾಜೆಕ್ಟ್'ಗಾಗಿ ಹಣಕಾಸು ಸಂಸ್ಥೆಗಳಿಂದ ₹19 ಸಾವಿರ ಕೋಟಿ ಸಾಲ ಪಡೆಯಲು ಆಸ್ತಿಗಳನ್ನು ಅಡಮಾನವಿಡಲು ಬಿಬಿಎಂಪಿ ನಿರ್ಧರಿಸಿದೆ. ಇದಕ್ಕಾಗಿ 'ಬಂಡವಾಳ ಹೂಡಿಕೆಗಾಗಿ ಆಸಕ್ತಿ ವ್ಯಕ್ತಪಡಿಸುವಿಕೆ' ಪ್ರಕಟಣೆ ಹೊರಡಿಸಿದೆ. ಡಿಸೆಂಬರ್ 19ಕ್ಕೆ ಅಂತ್ಯಗೊಂಡಿದ್ದ ಅವಧಿಯನ್ನು ಜನವರಿ 8ರವರೆಗೆ ವಿಸ್ತರಿಸಲಾಗಿದೆ.

ಪ್ರತಿ ಕಿ.ಮೀಗೆ ₹16 ಶುಲ್ಕ

ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗಿನ ಸುರಂಗ ರಸ್ತೆಯನ್ನು (ಉತ್ತರ–ದಕ್ಷಿಣ ಕಾರಿಡಾರ್) ಮೊದಲ ಹಂತದಲ್ಲಿ ನಿರ್ಮಿಸುವ ಯೋಜನೆಯನ್ನು ಬಿಬಿಎಂಪಿ ಹೊಂದಿದೆ. ಮೂರು ಪಥದ 18 ಕಿ.ಮೀ ಉದ್ದದ ರಸ್ತೆಯಲ್ಲಿ ಸಂಚರಿಸಬೇಕಾದರೆ ಪ್ರತಿ ಕಿ.ಮೀಗೆ ₹16 ಶುಲ್ಕ ನಿಗದಿಪಡಿಸಲು ಅಂದಾಜು ಮಾಡಲಾಗಿದೆ. ಆಲ್ವಿನೋಕ್ ಸಂಸ್ಥೆ ನೀಡಿರುವ ಕಾರ್ಯಸಾಧ್ಯತಾ ವರದಿಯಲ್ಲಿ ಈ ಶುಲ್ಕ ಸಂಗ್ರಹಿಸಲು ಪ್ರಸ್ತಾಪಿಸಲಾಗಿದೆ.

2031 ಮತ್ತು 2041ರ ವೇಳೆಗೆ ಸುರಂಗ ರಸ್ತೆಯಲ್ಲಿ ಸಂಚರಿಸುವ ವಾಹನಗಳ ಸಂಖ್ಯೆಯನ್ನು ವಿಮರ್ಶೆ ಮಾಡಿ, ಒಂದು ಕಿ.ಮೀಗೆ ₹16 ಶುಲ್ಕ ನಿಗದಿ ಮಾಡಿದರೆ ಸೂಕ್ತ ಎಂಬ ಅಭಿಪ್ರಾಯವನ್ನು ನೀಡಲಾಗಿದೆ. ಇದರಂತೆ 18 ಕಿ.ಮೀ ಉದ್ದದ ಸುರಂಗದಲ್ಲಿ ಪೂರ್ಣವಾಗಿ ಸಂಚರಿಸಿದರೆ ₹288 ಪಾವತಿಸಬೇಕಾಗುತ್ತದೆ.

ಸುದ್ದಿ 2 ನಿಮಿಷ

ಬಿಜೆಪಿಗರು ಗೋಡ್ಸೆ ಚಿತ್ರ ಹಾಕಿಕೊಳ್ಳಲಿ: ರಮೇಶ್ ಬಾಬು

ಬೆಂಗಳೂರು: 'ಗಾಂಧಿ ಭಾರತ ಕಾರ್ಯಕ್ರಮದ ವಿರುದ್ಧ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಧರಣಿ ನಡೆಸುವುದಾಗಿ ಹೇಳಿದ್ದಾರೆ. ಧರಣಿ ವೇಳೆ ಅವರು ಕೊರಳಿಗೆ ನಾಥೂರಾಮ್ ಗೋಡ್ಸೆಯ ಚಿತ್ರ ನೇತುಹಾಕಿಕೊಳ್ಳಲಿ' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಸಲಹೆ ನೀಡಿದ್ದಾರೆ.

ಗುರುವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಕೋಮುದ್ವೇಷ ಬಿತ್ತುತ್ತಿರುವ ಮತೀಯ ಶಕ್ತಿಗಳಿಗೆ ಗಾಂಧೀವಾದವನ್ನು ಅರ್ಥಮಾಡಿಸಲು 'ಗಾಂಧಿ ಭಾರತ' ಕಾರ್ಯಕ್ರಮ ಆಯೋಜಿಸಲಾಗಿದೆ. ಗಾಂಧಿ ಪ್ರತಿಮೆ ಎದುರು ಕೂತು ಈ ಕಾರ್ಯಕ್ರಮದ ವಿರುದ್ಧ ಬಿಜೆಪಿಯವರು ಧರಣಿ ನಡೆಸುತ್ತಾರಂತೆ. ಧರಣಿಯಲ್ಲಿ ಗೋಡ್ಸೆ ಚಿತ್ರ ಇದ್ದರೆ, ಗಾಂಧೀಜಿ ಆತ್ಮಕ್ಕೆ ಶಾಂತಿ ದೊರೆಯುತ್ತದೆ' ಎಂದಿದ್ದಾರೆ.



'ಯಾವ ವಿಚಾರಧಾರೆಯೂ ಇಲ್ಲದ ಎಳಸು ಮತ್ತು ಬಿಜೆಪಿ ಬಾಲಭವನದ ನಾಯಕ ವಿಜಯೇಂದ್ರ ಅವರು, ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಉಳಿಸಿಕೊಳ್ಳಲು ಪರದಾಡುತ್ತಿದ್ದಾರೆ. ಅವರ ರಾಜೀನಾಮೆಗೆ ಬಿಜೆಪಿ ನಾಯಕರು ಕಾಯುತ್ತಿದ್ದಾರೆ. ಈ ಧರಣಿಗೆ ಅವರು ಎಲ್ಲ ಬಿಜೆಪಿಗರನ್ನೂ ಸೇರಿಸಲಿ ನೋಡೋಣ' ಎಂದು ಸವಾಲು ಹಾಕಿದ್ದಾರೆ.

ನಾಳೆಯಿಂದ ರಾಜ್ಯಮಟ್ಟದ ವೈಜ್ಞಾನಿಕ ಸಮ್ಮೇಳನ

ಯಲಹಂಕ: ಬಾಗಲೂರಿನ ವಿ.ಜೆ ಇಂಟರ್ ನ್ಯಾಷನಲ್ ಶಾಲೆಯ ಮೈದಾನದಲ್ಲಿ ಡಿ.28 ಮತ್ತು 29ರಂದು ರಾಜ್ಯಮಟ್ಟದ 4ನೇ ವೈಜ್ಞಾನಿಕ ಸಮ್ಮೇಳನ ನಡೆಯಲಿದೆ.

ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು, ದೊಡ್ಡಬಳ್ಳಾಪುರ, ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆ, ಕರ್ನಾಟಕ ರಾಜ್ಯ ಖಾಸಗಿ ಶಾಲಾ-ಕಾಲೇಜುಗಳ ಆಡಳಿತ ಮಂಡಳಿಗಳ ಒಕ್ಕೂಟದ ಆಶ್ರಯದಲ್ಲಿ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಹುಲಿಕಲ್ ನಟರಾಜ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಟಿ ಉಮಾಶ್ರೀ ಅಧ್ಯಕ್ಷತೆಯಲ್ಲಿ ನಡೆಯುವ ಸಮ್ಮೇಳದಲ್ಲಿ ಹಲವು ಗೋಷ್ಠಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಇರಲಿವೆ ಎಂದರು.

ವಸ್ತುಪ್ರದರ್ಶನ, ಆಹಾರಮೇಳ, ಕರಕುಶಲಮೇಳ ಹಾಗೂ ವಿದ್ಯಾರ್ಥಿಗಳಿಂದ ವಿಜ್ಞಾನ ಮಾದರಿಗಳ ಪ್ರದರ್ಶನ ಇರಲಿದೆ. ವಿವಿಧ ಕ್ಷೇತ್ರಗಳ ಸಾಧಕರಿಗೆ ರಾಜ್ಯಮಟ್ಟದ 'ಜೀವಮಾನಶ್ರೇಷ್ಠ ಸಾಧನೆ' ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಒಟ್ಟು 37 ಜನರಿಗೆ 'ಎಚ್.ಎನ್' ಪ್ರಶಸ್ತಿ ನೀಡಲಾಗುವುದು. ಮಹಿಳಾ ಸಾಧಕರನ್ನು ಗುರುತಿಸಿ, 'ಚೈತನ್ಯ ಸ್ತ್ರೀ' ಪ್ರಶಸ್ತಿ ವಿತರಿಸಲಾಗುವುದು ಎಂದರು.

'ನರ್ಸಿಂಗ್ ಪ್ರಶಸ್ತಿ'ಗೆ ನಾಮನಿರ್ದೇಶನ ಪ್ರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಟರ್ ಡಿಎಂ ಹೆಲ್ತ್ ಕೇರ್ ಸಂಸ್ಥೆಯು 'ಆಸ್ಟರ್ ಗಾರ್ಡಿಯನ್ಸ್ ಗ್ಲೋಬಲ್ ನರ್ಸಿಂಗ್ ಪ್ರಶಸ್ತಿ'ಗೆ ನಾಮನಿರ್ದೇಶನ ಪ್ರಾರಂಭಿಸಿದೆ.

ನಾಲ್ಕನೇ ಆವೃತ್ತಿಯ ಪ್ರಶಸ್ತಿಯು ₹ 2 ಕೋಟಿ ನಗದು ಒಳಗೊಂಡಿದೆ. ಅರ್ಜಿ ಸಲ್ಲಿಕೆಗೆ ಮುಕ್ತ ಅವಕಾಶ ನೀಡಲಾಗಿದೆ. ವೈದ್ಯಕೀಯ ಕ್ಷೇತ್ರಕ್ಕೆ ನೀಡಿದ ಅಸಾಧಾರಣ ಕೊಡುಗೆಯನ್ನು ಪರಿಗಣಿಸಿ, ಆಯ್ಕೆ ಮಾಡಲಾಗುತ್ತದೆ. ಇದಕ್ಕೆ ತಜ್ಞ ತೀರ್ಪುಗಾರರ ಸಮಿತಿ ಇರಲಿದೆ. ಅಂತಿಮವಾಗಿ 10 ಮಂದಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ವಿಜೇತರ ಹೆಸರನ್ನು 2025ರ ಮೇ ತಿಂಗಳಲ್ಲಿ ಅಂತರರಾಷ್ಟ್ರೀಯ ಶುಶ್ರೂಷಕರ ದಿನದಂದು ಘೋಷಿಸಲಾಗುತ್ತದೆ ಎಂದು ಸಂಸ್ಥೆ ತಿಳಿಸಿದೆ.

ಅರ್ಹ ಶುಶ್ರೂಷಕರು www.asterguardians.com ಮೂಲಕ ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದು. ಶುಶ್ರೂಷಕರು ಸಮಾಜಕ್ಕೆ ನೀಡುತ್ತಿರುವ ಕೊಡುಗೆಯನ್ನು ಗೌರವಿಸುವ ಉದ್ದೇಶದಿಂದ ಈ ಪ್ರಶಸ್ತಿ ಸ್ಥಾಪಿಸಲಾಗಿದೆ. ಭವಿಷ್ಯದಲ್ಲಿ ಈ ವೃತ್ತಿಗೆ ಬರುವವರಿಗೆ ಪ್ರೇರಣೆಯೂ ಆಗಲಿದೆ ಎಂದು ಸಂಸ್ಥೆಯ ಸಂಸ್ಥಾಪನಾಧ್ಯಕ್ಷ ಆಜಾದ್ ಮೂಪೆನ್ ಪ್ರಕಟಣೆಯಲ್ಲಿ ಹೇಳಿದ್ದಾರೆ.

ದೊಡ್ಡಬಳ್ಳಾಪುರ ತಾಲ್ಲೂಕು ಕಚೇರಿಗೆ ಸಚಿವ ಕೃಷ್ಣ ಬೈರೇಗೌಡ ದಿಢೀರ್ ಭೇಟಿ

ಸಮಯಕ್ಕೆ ಬಾರದ ಸಿಬ್ಬಂದಿಗೆ ತರಾಟೆ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಕಂದಾಯ ಸಚಿವ ಕೃಷ್ಣ ಬೈರೇಗೌಡ ಗುರುವಾರ ಇಲ್ಲಿಯ ತಾಲ್ಲೂಕು ಕಚೇರಿ, ಉಪವಿಭಾಗಾಧಿಕಾರಿಗಳ ಹಾಗೂಉಪನೋಂದಣಿ ಅಧಿಕಾರಿಗಳ ಕಚೇರಿಗೆ ದಿಢೀರ್ ಭೇಟಿ ನೀಡಿದರು.

ಬೆಳಗ್ಗೆ 10.20ಕ್ಕೆ ಭೇಟಿ ನೀಡಿದಾಗ ಸಾರ್ವಜನಿಕರ ಹೊರತಾಗಿ ಯಾವ ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕಚೇರಿಯಲ್ಲಿ ಇರಲಿಲ್ಲ. ಎಲ್ಲಾ ಖುರ್ಚಿಗಳು ಖಾಲಿ ಇರುವುದನ್ನು ಕಂಡ ಸಚಿವರು ಗರಂ ಆದರು. ಕೂಡಲೇ ಜಿಲ್ಲಾಧಿಕಾರಿಗೆ ಕರೆ ಮಾಡಿ ತರಾಟೆಗೆ ತೆಗೆದುಕೊಂಡರು. ಕಚೇರಿಯಲ್ಲಿ ತಾವು ಕಂಡ ದೃಶ್ಯವನ್ನು ಖಾರವಾಗಿಯೇ ಹೇಳಿದರು.

ಅಲ್ಲಿದ್ದ ಹಾಜರಾತಿ ಪುಸ್ತಕ ಕೈಗೆತ್ತಿಕೊಂಡ ಸಚಿವರು ಪರಿಶೀಲಿಸಲು ಕುಳಿತುಕೊಂಡ ಅರ್ಧ ತಾಸಿನ ನಂತರ ಒಬ್ಬೊಬ್ಬರೇ ಅಧಿಕಾರಿಗಳು ಮತ್ತು ಸಿಬ್ಬಂದಿ ಕಚೇರಿಗೆ ಬರತೊಡಗಿದರು.

ತಾಲ್ಲೂಕು ಕಚೇರಿಯಿಂದ ಸಚಿವರು 11.30ಕ್ಕೆ ಹೊರಡುವಾಗಲೂ ಭೂ ದಾಖಲೆಗಳ(ಅಭಿಲೇಖನಾಲಯ) ವಿತರಣೆ ಕೊಠಡಿ ಬಾಗಿಲು ಮುಚ್ಚಿಯೇ ಇತ್ತು. ತಾಲ್ಲೂಕು ಕಚೇರಿಯ ಅರ್ಧಕ್ಕೂ ಹೆಚ್ಚಿನ ಅಧಿಕಾರಿಗಳು 11 ಗಂಟೆ ನಂತರ ಬರುತ್ತಿರುವುದನ್ನು ಕಂಡು ತೀವ್ರ ತರಾಟೆಗೆ ತೆಗೆದುಕೊಂಡರು.

ಸರ್ವೇ ಇಲಾಖೆ, ಕಂದಾಯ ಇಲಾಖೆಯ ಬಹುತೇಕ ಅಧಿಕಾರಿಗಳು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡದೆ ಹಾಗೂ ಕಚೇರಿ ಕೆಲಸದ ಮೇಲೆ ಹೊರಗೆ ಹೋಗಿರುವ ಕುರಿತು ಪುಸ್ತಕದಲ್ಲಿ ನಮೂದಿಸಿರುವುದನ್ನು ಕಂಡು ಸಿಟ್ಟಾದರು. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸ್ಥಳಕ್ಕೆ ಬಂದ ಜಿಲ್ಲಾಧಿಕಾರಿಗೆ ಸೂಚನೆ ನೀಡಿದರು.

ತಾಲ್ಲೂಕು ಕಚೇರಿಯ ಭ್ರಷ್ಟಾಚಾರ, ರೈತರ ಜೊತೆ ಅಧಿಕಾರಿಗಳು ಮತ್ತು ಸಿಬ್ಬಂದಿಯ ದರ್ಪದ ವರ್ತನೆ ಸೇರಿದಂತೆ ಹಲವು ದೂರುಗಳನ್ನು ಸಾರ್ವಜನಿಕರು ಸಚಿವರ ಗಮನಕ್ಕೆ ತಂದರು.



ಅಧಿಕಾರಿಗಳನ್ನು ತರಾಟೆಗೆ ತೆಗದುಕೊಂಡ ಕಂದಾಯ ಸಚಿವ ಕೃಷ್ಣ ಬೈರೇಗೌಡ

ಜನವರಿಯಿಂದ 'ಭೂ ಸುರಕ್ಷ' ಜಾರಿ

ಜನವರಿ 1 ರಿಂದ ರಾಜ್ಯದ ಎಲ್ಲಾ ಕಂದಾಯ ಭೂ ದಾಖಲೆಗಳ ಡಿಜಿಟಲಿಕರಣ 'ಭೂ ಸುರಕ್ಷ' ಯೋಜನೆ ಆರಂಭವಾಗಲಿದೆ. ಎಲ್ಲಾ ದಾಖಲೆಗಳು ಆನ್‌ಲೈನ್‌ನಲ್ಲಿ ದೊರೆಯಲಿವೆ. ದಾಖಲೆಗಳನ್ನು ತಿದ್ದಲು ಅವಕಾಶ ಇರುವುದಿಲ್ಲ. ಈ ಹಿಂದೆ ಸಾಕಷ್ಟು ದಾಖಲೆಗಳನ್ನು ತಿದ್ದಿರುವ ಬಗ್ಗೆ ದೂರು ಇವೆ. ಮುಂದಿನ ದಿನಗಳಲ್ಲಾದರೂ ಕಂದಾಯ ದಾಖಲೆಗಳು ಸಾರ್ವಜನಿಕರಿಗೆ ಸಮರ್ಪಕವಾಗಿ ದೊರೆಯಬೇಕು. ಕಂದಾಯ ಇಲಾಖೆಯಲ್ಲಿ ಜಾರಿಗೆ ತರಲಾಗುತ್ತಿರುವ ಸುಧಾರಣೆಗಳು ಮತ್ತಷ್ಟು ತೀವ್ರವಾಗಲಿವೆ. ಕಂದಾಯ ಇಲಾಖೆಯಲ್ಲಿನ ಭ್ರಷ್ಟಾಚಾರ ತೊಡೆದು ಹಾಕಲು ಎಲ್ಲಾ ರೀತಿಯ ಪ್ರಯತ್ನ ಮಾಡಲಾಗುತ್ತಿದೆ.

– **ಕೃಷ್ಣ ಬೈರೇಗೌಡ,** ಕಂದಾಯ ಸಚಿವ

ಸಚಿವ ಕೃಷ್ಣ ಬೈರೇಗೌಡ ತರಾಟೆಗೆ ತೆಗೆದುಕೊಂಡ ಝಲಕ್

• **ಫೋನ್‌ನಲ್ಲಿ ಜಿಲ್ಲಾಧಿಕಾರಿ ಎನ್. ಶಿವಶಂಕರ್ ಅವರಿಗೆ**
ಏನಿದು ಇಲ್ಲಿನ ಅಧಿಕಾರಿಗಳ ಅವ್ಯವಸ್ಥೆ ಡಿ.ಸಿಯವರೆ? ಇಡೀ ತಾಲ್ಲೂಕು ಕಚೇರಿ ಸುತ್ತಾಡಿದರೂ ಎಲ್ಲಾ ಅಧಿಕಾರಿಗಳ ಖುರ್ಚಿಗಳು ಖಾಲಿ ಇವೆ. ಬೆಳಗ್ಗೆ 10.20 ಆಗಿದ್ದರೂ ಸಹ ತಾಲ್ಲೂಕು ಕಚೇರಿ, ಎ.ಸಿ ಕಚೇರಿಯಲ್ಲಿ ನೊಣಗಳ ಹೊರತು ಒಬ್ಬ ಅಧಿಕಾರಿ, ಕಸ ಗುಡಿಸುವವರ ಸುಳಿವೂ ಇಲ್ಲ. ಇಂತಹವರಿಂದ ನಾವು ಹೇಗೆ ಕೆಲಸ ನಿರೀಕ್ಷೆ ಮಾಡಲು ಸಾಧ್ಯ? ಇದನ್ನು ಯಾರಾದರು ತಾಲ್ಲೂಕು ಕಚೇರಿ, ಎ.ಸಿ ಕಚೇರಿ ಅಂತ ಕರೆಯುವ ಅರ್ಹತೆ ಉಳಿಸಿಕೊಂಡಿದೆಯೇ? ತಾವೇ ಬಂದು ನೋಡಿ ಇಲ್ಲಿನ ಆನಂದವನ್ನ...

• **ತಹಶೀಲ್ದಾರ್ ವಿಭಾವಿದ್ಯಾ ರಾಥೋಡ್ ಅವರಿಗೆ**
ಮಹಿಳಾ ಅಧಿಕಾರಿಗಳು ಅಂತ ಹೆಚ್ಚಿನ ಮರ್ಯಾದೆಯಿಂದ ಮಾತನಾಡುತ್ತಿರುವೆ. ತಾವು ಮಾತ್ರ ಬಾಯಿಗೆ ಬಂದಂತೆ ಉತ್ತರ ಕೊಡುವುದನ್ನು ಬಿಟ್ಟು ನಾನು ಒಬ್ಬ ಜನಪ್ರತಿನಿಧಿ ಎಂದು ನನ್ನ ಮಾತಿಗೆ ಕನಿಷ್ಠ ಮರ್ಯಾದೆ ನೀಡಿ. ಕಚೇರಿಯ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡುವ ಕನಿಷ್ಠ ಸಮಯ ಇಲ್ಲಿನ ಅಧಿಕಾರಿಗಳಿಗೆ ಇಲ್ಲದಾಗಿದೆ. ತಾವೊಬ್ಬ ಸಾರ್ವಜನಿಕ ಸೇವಕರು ಅನ್ನುವುದನ್ನೇ ಇಲ್ಲಿನ ಅಧಿಕಾರಿಗಳು ಮರೆತಿದ್ದಾರೆ.

• **ಉಪವಿಭಾಗಾಧಿಕಾರಿ ಎನ್. ದುರ್ಗಶ್ರೀ ಅವರನ್ನು ಉದ್ದೇಶಿಸಿ...**
ಯಾವ ಕೆಲಸಕ್ಕೆ ಎಷ್ಟು ಹಣ ನೀಡಬೇಕು, ಇದರಲ್ಲಿ ಮಂತ್ರಿಗಳಿಗೆ ಎಷ್ಟು, ಡಿ.ಸಿ ಸೇರಿದಂತೆ ಯಾವ ಅಧಿಕಾರಿಗಳಿಗೆ ಎಷ್ಟು ಹಣ ಹೋಗುತ್ತದೆ ಅನ್ನುವ ಪಟ್ಟಿಯನ್ನು ಬರೆದುಹಾಕಿದರೆ ಸಾರ್ವಜನಿಕರಿಗೂ ಇಲ್ಲಿನ ಪಾರದರ್ಶಕ ಆಡಳಿತ ಅರ್ಥವಾಗುತ್ತದೆ. ಇದರಿಂದ ಸಾರ್ವಜನಿಕರು ಚೌಕಾಸಿ ಮಾಡಲ್ಲ. ಅವರ ಕೆಲಸಗಳೂ ಸಕಾಲದಲ್ಲಿ ನಡೆಯುತ್ತವೆ. ಎ.ಸಿ ಕಚೇರಿ ವ್ಯಾಪಾರದ ಸಂತೆಯಾಗಿರುವ ಬಗ್ಗೆ ಸಾರ್ವಜನಿಕರು ಪ್ರತಿ ದಿನವೂ ಹೇಳುತ್ತಿದ್ದಾರೆ. ನನ್ನಿಂದ ಏನಾದರು ತಪ್ಪಾಗಿದ್ದಾರೆ ಹೇಳಿ ಬಿಡಿ ತಿದ್ದಿಕೊಳ್ಳುತ್ತೇನೆ. ಆದರೆ ಸರ್ಕಾರಕ್ಕೆ, ನನ್ನ ಖಾತೆಗೆ ಕೆಟ್ಟ ಹೆಸರು ಬರುವಂತೆ ಮಾಡಬೇಡಿ.

• **ಉಪನೋಂದಣಾಧಿಕಾರಿ ಕಚೇರಿಯ ಎಫ್‌ಡಿಎಗೆ**
ನಾನು ಸಹ ಬೆಂಗಳೂರಿನಿಂದ ಖಾಸಗಿ ವಾಹನದಲ್ಲೇ ಬಂದಿರುವೆ. ಯಾವುದೇ ವಾಹನ ದಟ್ಟಣೆ ಇರಲಿಲ್ಲ. ಆದರೆ ಇಲ್ಲಿನ ಅಧಿಕಾರಿಗಳು ಟ್ರಾಫಿಕ್ ಜಾಮ್ ನೆಪ ಹೇಳುತ್ತಲೇ 11 ಗಂಟೆಗೆ ಬಂದರೆ ಸಾರ್ವಜನಿಕರ ಕೆಲಸ ಹೇಗೆ ನಡೆಯಲು ಸಾಧ್ಯ? ಬೆಳಗ್ಗೆ 10 ಗಂಟೆಗೆ ನೋಂದಣಿ ಸರ್ವರ್ ಓಪನ್ ಆಗುತ್ತದೆ. ನೋಂದಣಿ ಅಧಿಕಾರಿಗಳು ಒಂದು ತಾಸು ತಡವಾಗಿ 11 ಗಂಟೆಗೆ ಕಚೇರಿಗೆ ಬಂದರೆ ಸರ್ಕಾರಕ್ಕೆ ಆಗುವ ನಷ್ಟವನ್ನು ಯಾರು ತುಂಬಿಕೊಡುತ್ತಾರೆ?

ಗಿಗ್ ಕಾರ್ಮಿಕರ ಹಿತರಕ್ಷಣೆ ಮಸೂದೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಿಗ್ ಕಾರ್ಮಿಕರ ಹಿತರಕ್ಷಣೆಗೆ ರಾಜ್ಯ ಸರ್ಕಾರ ರೂಪಿಸಿರುವ 'ಕರ್ನಾಟಕ ಪ್ಲಾಟ್‌ಫಾರ್ಮ್ ಬೇಸಡ್ ಗಿಗ್ ವರ್ಕರ್ಸ್ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆಯನ್ನು ಅಧಿವೇಶನದಲ್ಲಿ ಮಂಡಿಸದೇ ಸರ್ಕಾರವು ವಿಳಂಬ ನೀತಿ ಅನುಸರಿಸುತ್ತಿದೆ. ಮುಂದಿನ ಬಜೆಟ್ ಅಧಿವೇಶನದಲ್ಲಿ ಮಂಡಿಸಬೇಕು' ಎಂದು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯು ಒತ್ತಾಯಿಸಿದೆ.


'ಗಿಗ್ ಕಾರ್ಮಿಕರಾಗಿ ದುಡಿಯುವ ಸಂಸ್ಥೆಯಲ್ಲಿ ಉದ್ಯೋಗದಾತ-ಉದ್ಯೋಗಿ ಸಂಬಂಧವೇ ಇಲ್ಲ. ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಕೆಲಸ ಮಾಡಿಸಿಕೊಳ್ಳುವುದಾಗಿದ್ದು, ಯಾರಿಗೆ ಎಷ್ಟು ವೇತನ ನೀಡುತ್ತಾರೆ ಎಂಬುದೇ ಗೊತ್ತಾಗುವುದಿಲ್ಲ. ಈ ಅನೌಪಚಾರಿಕ ಉದ್ಯೋಗ ಕ್ಷೇತ್ರದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಯುವಕ, ಯುವತಿಯರು ದುಡಿಯುತ್ತಿದ್ದಾರೆ. 2030ರ ವೇಳೆಗೆ ದೇಶದಲ್ಲಿ ಇಂಥ ಕಾರ್ಮಿಕರ ಸಂಖ್ಯೆ 3 ಕೋಟಿ ದಾಟಲಿದೆ' ಎಂದು ಎಐಯುಟಿಯುಸಿ ಸಂಚಾಲಕ ಕೆ.ವಿ. ಭಟ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಗಿಗ್ ಕಾರ್ಮಿಕರ ಹಿತರಕ್ಷಣೆಗಾಗಿ ರಚಿಸಿದ್ದ ಮಸೂದೆಗೆ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯು ಜುಲೈ 8ರಂದು ಸಲಹೆಗಳನ್ನು ಲಿಖಿತ ರೂಪದಲ್ಲಿ ಕಾರ್ಮಿಕ ಇಲಾಖೆಗೆ ಸಲ್ಲಿಸಿತ್ತು. ಕಾರ್ಮಿಕ ಸಚಿವ ಬೆಳಗಾವಿ ಅಧಿವೇಶನದಲ್ಲಿ ಮಸೂದೆ ಮಂಡಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಮಸೂದೆ ಮಂಡಿಸಿಲ್ಲ ಎಂದು ಎಐಸಿಸಿಟಿಯು ಮುಖಂಡೆ ಮೈತ್ರೇಯಿ ಕೃಷ್ಣನ್ ಬೇಸರ ವ್ಯಕ್ತಪಡಿಸಿದರು.

ಜೊಮೆಟೊ, ಸ್ವಿಗ್ಗಿ, ಓಲಾ, ಊಬರ್ ಮುಂತಾದ ಹೆಸರಿನಲ್ಲಿ ಕೆಲಸ ಮಾಡುವ ಯುವಕ, ಯುವತಿಯರಿಗೆ ಯಾವುದೇ ಸೇವಾ ಭದ್ರತೆಯಿಲ್ಲ. ಕೆಲಸಗಳೆಲ್ಲವೂ ಮೊಬೈಲ್‌ನಲ್ಲಿಯೇ ನಡೆಯುವುದು. ದಿನವಿಡೀ ವಿರಾಮರಹಿತ ದುಡಿಮೆಗೆ ಸಿಗುವುದು ಅತ್ಯಲ್ಪ ಆದಾಯ. ಡೆಲಿವರಿ ಪಾರ್ಟನರ್ ಅಂತ ಕರೆಯಲಾಗುತ್ತಿದ್ದು, ಇವರಿಗೆ ಕಂಪನಿಯ ಲಾಭಾಂಶ ದೊರಕುವುದಿಲ್ಲ ಎಂದು ಐಎನ್‌ಟಿಯುಸಿಯ ಶಾಮಣ್ಣ ರೆಡ್ಡಿ, ಸಿಐಟಿಯುನ ಮಹಂತೇಶ್, ಟಿಯುಸಿಸಿಯ ಜಿ.ಆರ್.ಶಿವಶಂಕರ್, ಎಚ್‌ಎಂಕೆಪಿಯ ಎಲ್.ಕಾಳಪ್ಪ ಹಾಗೂ ಯುಎಫ್‌ಡಿಪಿಯುನ ವಿನಯ್ ಸಾರಥಿ ತಿಳಿಸಿದರು.



ತುಂತುರು ಮಳೆಯ ನಡುವೆ ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಹೊಸವರ್ಷಕ್ಕೆ ಖರೀದಿ ಜೋರಾಗಿ ನಡೆಯಿತು ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್



ನಗರದಲ್ಲಿ ಗುರುವಾರ ದಿನವಿಡೀ ಮೋಡಕವಿದ ವಾತಾವರಣವಿತ್ತು. ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಬೆಳಿಗ್ಗಿನಿಂದಲೇ ಮೋಡ ಕವಿದ ವಾತಾವರಣ

ದಿನವಿಡೀ ತುಂತುರು ನೀರಹನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರ ದಿನವಿಡಿ ತುಂತುರು ನೀರಹನಿ ಚೆಲ್ಲಿದಂತೆ ಮಳೆ ಆಗಾಗ್ಗೆ ಸುರಿಯಿತು. ಬೆಳಿಗ್ಗಿನಿಂದಲೇ ಮೋಡ ಕವಿದ ವಾತಾವರಣ ಇದ್ದು, ಸಂಜೆವರೆಗೂ ಸೂರ್ಯದರ್ಶನವಾಗಲಿಲ್ಲ.

ಗಾಳಿಯಲ್ಲಿ ತೇಲುವಂತೆ ಬೀಳುತ್ತಿದ್ದ ಹನಿಗಳು ಒದ್ದೆ ಮಾಡುವುದಕ್ಕಿಂತ ಹೆಚ್ಚಾಗಿ ಚಳಿ ಹಿಡಿಸಿತು. ಕೆಲವರು ಛತ್ರಿ ಹಿಡಿದುಕೊಂಡು ಸಾಗಿದರೆ, ಹೆಚ್ಚಿನವರು ಮಳೆ ಲೆಕ್ಕಿಸದೇ ಎಂದಿನಂತೆ ಸಂಚರಿಸಿದರು.



ಚಳಿಯ ವಾತಾವರಣವು ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ ಎಂದು ಹಿರಿಯರು ಎಚ್ಚರಿಸುತ್ತಿದ್ದರು. ಯುವಜನರು ತುಂತುರು ನಡುವೆಸಾಗಿ ಸಂಭ್ರಮಿಸಿದರು. ಶೇಂಗಾಬೀಜ, ಕರಿದ ತಿಂಡಿಗಳಿಗೆ ಬೇಡಿಕೆ ಜಾಸ್ತಿಯಾಗಿತ್ತು.

ನಗರದಲ್ಲಿ ಆಗಾಗ್ಗೆ ಮಳೆ ಸುರಿದಿದ್ದರಿಂದ ದ್ವಿಚಕ್ರ ವಾಹನ ಸವಾರರು ಪರದಾಡಿದರು. ಮಳೆಯಿಂದ ರಕ್ಷಿಸಿಕೊಳ್ಳಲು ರಸ್ತೆ ಪಕ್ಕದ ಬಸ್ ತಂಗುದಾಣ, ಅಂಗಡಿಗಳ ಮೊರೆ ಹೋದರು.

ಮೋಡ ಮುಸುಕಿದ ವಾತಾವರಣ

ದಾಬಸ್ ಪೇಟೆ: ಸೋಂಪುರ ಹೋಬಳಿಯಾದ್ಯಂತ ಗುರುವಾರ ಬೆಳಿಗ್ಗೆನಿಂದಲೇ ಮೋಡ ಮುಸುಕಿದ ವಾತಾವರಣ, ತುಂತುರು ಮಳೆ, ಶೀತಗಾಳಿ ಕಂಡುಬಂತು.

ರೈತರು ರಾಗಿ ಹುಲ್ಲು ಕಟ್ಟಿಕೊಳ್ಳಲು ಈ ವಾತಾವರಣ ಅಡ್ಡಿಯಾಗಿದೆ. ಕೆಲವರು ರಾಗಿ, ಹುಲ್ಲು ಒಣಗಿಸಲು ಆಗದೆ ತೇವಾಂಶ ಇರುವುದನ್ನು ಕೂಡಿಟ್ಟುಕೊಂಡಿದ್ದಾರೆ. ಇನ್ನು ಕೆಲವು ರೈತರ ಹುಲ್ಲು ಹೊಲಗಳಲ್ಲಿ ಇದೆ.

'ತುಂತುರು ಮಳೆ ಶೀತ ಗಾಳಿ ಮುಖ್ಯವಾಗಿ ಅವರೆಕಾಯಿ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ. ಇಳುವರಿ ಕುಸಿದು, ಹೂ ಉದುರುತ್ತದೆ, ಸೊಗಡಿನ ಗಮ್ಮತ್ತು ಇರುವುದಿಲ್ಲ' ಎಂದು ರೈತ ಚನ್ನಪ್ಪ ತಿಳಿಸಿದರು.

ಶಶಿ ತರೀಕೆರೆಗೆ ಬಿ.ಎಂ.ಶ್ರೀ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ 'ಸಾರಂಗಿ ವೆಂಕಟರಾಮಯ್ಯ ಪುಟ್ಟಚ್ಚಮ್ಮ ದತ್ತಿ ಪುಸ್ತಕ ಬಹುಮಾನ'ಕ್ಕೆ ಶಶಿ ತರೀಕೆರೆ ಅವರ 'ತಿರಾಮಿಸು' ಕಥಾ ಸಂಕಲನ ಆಯ್ಕೆಯಾಗಿದೆ.



ಈ ಬಹುಮಾನವು ₹ 3 ಸಾವಿರ ನಗದು ಹಾಗೂ ಅಭಿನಂದನಾ ಪತ್ರ ಒಳಗೊಂಡಿದೆ. ಪ್ರೇಮಾ ಸಿದ್ಧರಾಜು ಮತ್ತು ರುದ್ರೇಶ್ ಅದರಂಗಿ ಅವರನ್ನು ಒಳಗೊಂಡ ಈ ಸಮಿತಿ ಆಯ್ಕೆ ಮಾಡಿದೆ.

ಇದೇ 27ರಂದು ಪ್ರತಿಷ್ಠಾನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಾಹಿತಿ ಪಿ.ವಿ. ನಾರಾಯಣ ಅವರು ಬಹುಮಾನ ವಿತರಣೆ ಮಾಡಲಿದ್ದಾರೆ ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯೇಸು ಅವಹೇಳನ; ದೂರು ದಾಖಲು


ಮಡಿಕೇರಿ: ಯೇಸುಕ್ರಿಸ್ತರ ಕುರಿತು ಫೇಸ್ ಬುಕ್‌ನಲ್ಲಿ ಅವಹೇಳನಕಾರಿ ಸಂದೇಶ ಹಾಕಿದ ಕುರಿತು ಕೊಡಗು ಜಿಲ್ಲಾ ರೋಮನ್ ಕ್ಯಾಥೋಲಿಕ್ ಅಸೋಸಿಯೇಷನ್ ಮತ್ತು ಅಸೋಸಿಯೇಷನ್‌ನ ಘಟಕಗಳು ಜಿಲ್ಲೆಯ ವಿವಿಧ ಠಾಣೆಗಳಿಗೆ ದೂರು ನೀಡಿವೆ. ಇಲ್ಲಿನ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದಲ್ಲಿ ಇಂದು

ತೃತೀಯ ವಿಶ್ವ ಹವ್ಯಕ ಸಮ್ಮೇಳನ: ಸಾನ್ನಿಧ್ಯ: ರಾಘವೇಶ್ವರಭಾರತೀ ಸ್ವಾಮೀಜಿ, ಸುಬುಧೇಂದ್ರ ತೀರ್ಥ ಸ್ವಾಮೀಜಿ, ನಿರ್ಮಲಾನಂದನಾಥ ಸ್ವಾಮೀಜಿ, ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಯತಿರಾಜ ಜೀಯರ್ ಸ್ವಾಮೀಜಿ, ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ, ಉದ್ಘಾಟನೆ: ಪ್ರಲ್ಹಾದ ಜೋಶಿ, ಮುಖ್ಯ ಅತಿಥಿಗಳು: ಸದಾನಂದ ಗೌಡ, ಮಂಕಾಳ ವೈದ್ಯ, ಕೋಟ ಶ್ರೀನಿವಾಸ ಪೂಜಾರಿ, ವಿಜಯೇಂದ್ರ, ಡಾ.ಸಿ. ಎನ್. ಅಶ್ವತ್ಥನಾರಾಯಣ, ಶಿವರಾಮ ಹೆಬ್ಬಾರ್, ಭೀಮಣ್ಣ ನಾಯ್ಕ, ಅಸಗೋಡು ಜಯಸಿಂಹ, ವಿಶ್ವೇಶ್ವರ ಹೆಗಡೆ ಕಾಗೇರಿ, ಪ್ರಶಸ್ತಿ ಪ್ರದಾನ ದಿಕ್ಸೂಚಿ ಭಾಷಣ: ರಮೇಶ್ ಅರವಿಂದ್, ಚಕ್ರವರ್ತಿ ಸೂಲಿಬೆಲೆ, ಗೋಷ್ಠಿಗಳು: '21ನೇ ಶತಮಾನದ ಹವ್ಯಕರು', 'ಹವ್ಯಕರ ಸಾರ್ವಕಾಲಿಕ ಕೊಡುಗೆಗಳು', 'ಹವ್ಯಕರ ಬುದುಕು ಮತ್ತು ಭವಿಷ್ಯ', ಸಾಧಕರಿಗೆ ಸನ್ಮಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ: ಅಖಿಲ ಹವ್ಯಕ ಮಹಾಸಭಾ, ಸ್ಥಳ: ರಾಯಲ್ ಸೆನೆಟ್ ಹಾಗೂ ಗ್ರ್ಯಾಂಡ್ ಕ್ಯಾಸಲ್ (ಗೇಟ್ ಸಂಖ್ಯೆ 6), ಅರಮನೆ ಮೈದಾನ, ಬೆಳಿಗ್ಗೆ 9ರಿಂದ

ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ–21: ಉದ್ಘಾಟನೆ: ಮನು ಬಳಿಗಾರ್, ಗಾಯನ: ಆನಂದ ಮಾದಲಗೆರೆ, ಉಪನ್ಯಾಸ: ಚಂದ್ರಶೇಖರ ನಾದೂರು, ಉಪಸ್ಥಿತಿ: ರಾಧಾ ಕುಲಕರ್ಣಿ, ರಾ.ನಂ. ಚಂದ್ರಶೇಖರ, ಆಯೋಜನೆ: ಕನ್ನಡ ಗೆಳೆಯರ ಬಳಗ, ಸ್ಥಳ: ಬಿ.ಎಂ.ಶ್ರೀ. ಪ್ರತಿಮೆ ಎದುರು, ನ್ಯಾಷನಲ್ ಕಾಲೇಜು ವೃತ್ತ, ಬಸವನಗುಡಿ, ಬೆಳಿಗ್ಗೆ 11

'ಮುಕುಂದರಾಜ್ 65': ಎಸ್.ಜಿ. ಸಿದ್ಧರಾಮಯ್ಯ, ಡಾ. ವಸುಂಧರಾ ಭೂಪತಿ, ಕಾ.ತ. ಚಿಕ್ಕಣ್ಣ, ಮಾತು ಮಂಥನ: ಕೆ.ವಿ. ನಾಗರಾಜಮೂರ್ತಿ, ಕಾ.ವೆಂ. ಶ್ರೀನಿವಾಸಮೂರ್ತಿ, ಬಿ.ಎಂ. ಹನೀಫ್, ಜಯಶ್ರೀ ಸಿ. ಕಂಬಾರ, ಬೇಲೂರು ರಘುನಂದನ್, ಎಚ್. ಲಕ್ಷ್ಮೀನಾರಾಯಣಸ್ವಾಮಿ, ನಾದ ನವನೀತ: ಆನಂದ ಮಾದಲಗೆರೆ, ಮೃತ್ಯುಂಜಯ ದೊಡ್ಡವಾಡ, ಆಯೋಜನೆ: ಸಾಕ್ಷಾತ್ಕಾರ ಚಾರಿಟಬಲ್ ಸೊಸೈಟಿ, ಸ್ಥಳ: ಜ್ಞಾನಸೌಧ, ಕಲ್ಯಾಣನಗರ, ಮಧ್ಯಾಹ್ನ 3.30



ಎಲ್.ಎನ್. ಮುಕುಂದರಾಜ್

'ಅಂಗಳದಲ್ಲಿ ತಿಂಗಳ ಪುಸ್ತಕ': ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಮೆಲುಕು: ಸಿ.ಪಿ. ಕೃಷ್ಣಕುಮಾರ್, ಅಧ್ಯಕ್ಷತೆ: ಮಾನಸ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

ಹಳಗನ್ನಡ ರಸಗ್ರಹಣ ತರಗತಿಗಳ ಪ್ರಮಾಣಪತ್ರ ಪ್ರದಾನ: ಮುಖ್ಯ ಅತಿಥಿಗಳು: ಪಿ.ವಿ. ನಾರಾಯಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 4

'ಕುವೆಂಪು ವಿಚಾರ ಸಮಕಾಲೀನ ಪ್ರಸ್ತುತತೆ' ವಿಷಯದ ಬಗ್ಗೆ ಉಪನ್ಯಾಸ: ವತ್ಸಲಾ ಮೋಹನ್, ಆಯೋಜನೆ ಹಾಗೂ ಸ್ಥಳ: ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ಪ್ರಾದೇಶಿಕ ಕಚೇರಿ, ಮಲ್ಲತ್ತಹಳ್ಳಿ, ಸಂಜೆ 5

'ಕನ್ನಡದ ಪ್ರಸಿದ್ಧ ಕವಿ–ಸಾಹಿತಿಗಳು' ಹಾಗೂ 'ಕ್ರೀಡಾ ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ ಕ್ರೀಡಾಪಟುಗಳು' ಪುಸ್ತಕ ಬಿಡುಗಡೆ: ಉದ್ಘಾಟನೆ: ಮಹೇಶ ಜೋಶಿ, ಪುಸ್ತಕ ಬಿಡುಗಡೆ: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ಎಂ. ತಿಮ್ಮಯ್ಯ, 'ಕುವೆಂಪು ಸಾರ್ವಕಾಲಿಕತೆ' ವಿಷಯದ ಬಗ್ಗೆ ಉಪನ್ಯಾಸ: ಶಾಂತರಾಜು, ಆಯೋಜನೆ: ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ4.30

ಶಿವಮೊಗ್ಗ ಸುಬ್ಬಣ್ಣ ಸ್ಮರಣಾರ್ಥ ಸಂಗೀತ ಸಂಜೆ: ಗಾಯನ: ಕೌಶಿಕ್ ಐತಾಳ್, ಆಯೋಜನೆ: ಡಾ.ಶಿವಮೊಗ್ಗ ಸುಬ್ಬಣ್ಣ ಪ್ರತಿಷ್ಠಾನ, ಸ್ಥಳ: ಶಾಸಕರ ಕಚೇರಿ ಸಭಾಂಗಣ, ಬನಶಂಕರಿ 2ನೇ ಹಂತ, ಸಂಜೆ 6.30



ಕೌಶಿಕ್ ಐತಾಳ್


ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಮೊಟ್ಟೆ ಎಸೆತ ಪ್ರಕರಣ: ಕೆ.ಸಿ. ಜನರಲ್ ಆಸ್ಪತ್ರೆಯಿಂದ ಶಾಸಕ ಮುನಿರತ್ನ ಬಿಡುಗಡೆ

‘ಕೈ’ ಕಾರ್ಯಕರ್ತರ ಸೆರೆ, ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರ ಮೇಲೆ ಮೊಟ್ಟೆ ಎಸೆತ ಪ್ರಕರಣದಲ್ಲಿ ನಂದಿನಿಲೇಔಟ್ ಠಾಣೆ ಪೊಲೀಸರು ಗುರುವಾರ ಮೂವರನ್ನು ಬಂಧಿಸಿ, ಬಿಡುಗಡೆ ಮಾಡಿದ್ದಾರೆ.



ಮುನಿರತ್ನ

ಮೊಟ್ಟೆ ಎಸೆದ ಆರೋಪದಡಿ ಲಗ್ಗೆರೆಯ ಬೈರವೇಶ್ವರನಗರದ ಕೆ. ವಿಶ್ವಮೂರ್ತಿ, ಪಾಪರೆಡ್ಡಿ ಪಾಳ್ಯದ ವಿಶ್ವಕಿರಣ್ ಹಾಗೂ ಲಗ್ಗೆರೆ ನಿವಾಸಿ ಅಶೋಕ್ ಕುಮಾರ್ ಅವರನ್ನು ಪೊಲೀಸರು ಬಂಧಿಸಿದ್ದರು.

ಅಟಲ್ ಬಿಹಾರಿ ವಾಜಪೇಯಿ ಜನ್ಮದಿನದ ಅಂಗವಾಗಿ ಲಕ್ಷ್ಮಿದೇವಿ ನಗರದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ವಾಪಸ್ ಬರುತ್ತಿದ್ದ ವೇಳೆ ಮುನಿರತ್ನ ಮೇಲೆ ಮೊಟ್ಟೆ ಎಸೆಯಲಾಗಿತ್ತು. ಸ್ಥಳದಲ್ಲಿದ್ದ ಪೊಲೀಸರು ತಕ್ಷಣವೇ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು.

‘ಕೆಲವು ಸಾಕ್ಷ್ಯಗಳು ಲಭಿಸಿದ್ದರಿಂದ ಮೂವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು. ಮೂವರು ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿದ್ದರು ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ. ಈ ಪ್ರಕರಣದಲ್ಲಿ ವಿಧಿಸಬಹುದಾದ ಶಿಕ್ಷೆ ಪ್ರಮಾಣ ಕಡಿಮೆಯಿದ್ದು, ಮೂವರಿಗೂ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಗುರುವಾರ ಸಂಜೆ ಅವರನ್ನು ಬಿಡುಗಡೆ ಮಾಡಲಾಯಿತು’ ಎಂದು ಪೊಲೀಸರು ತಿಳಿಸಿದರು.

ಕೃತ್ಯ ನಡೆದ ಸ್ಥಳ ಹಾಗೂ ಲಕ್ಷ್ಮಿದೇವಿ ನಗರದ ಬಿಜೆಪಿ ಕಚೇರಿಯಲ್ಲಿ ನಂದಿನಿ ಲೇಔಟ್ ಠಾಣೆ ಪೊಲೀಸರು ಸ್ಥಳ ಮಹಜರು ನಡೆಸಿದರು. ಸ್ಥಳಕ್ಕೆ ತಾಂತ್ರಿಕ ತಜ್ಞರು ಭೇಟಿ ನೀಡಿ ಮಾದರಿ ಸಂಗ್ರಹಿಸಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಘಟನೆಯ ಬಳಿಕ ಮುನಿರತ್ನ ಅವರು ಮಲ್ಲೇಶ್ವರ ಕೆ.ಸಿ.ಜನರಲ್ ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆ ಪಡೆದು ಗುರುವಾರ ಬೆಳಿಗ್ಗೆ ಮನೆಗೆ ತೆರಳಿದರು ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

‘ಕಾರಿಗೆ ಬೆಂಕಿ ಹಾಕಿ ಸುಡುವ ಬೆದರಿಕೆ’

‘ಈ ಹಿಂದೆಯೇ ನನಗೆ ಬಂದಿದ್ದ ಮಾಹಿತಿಯಂತೆಯೇ ಆ್ಯಸಿಡ್ ತುಂಬಿದ್ದ ಮೊಟ್ಟೆ ಎಸೆಯಲಾಯಿತು. ತಲೆಗೆ ಪೆಟ್ಟು ಬಿದ್ದು ಊತ ಬಂದಿದೆ. ಕೂದಲು ಸಹ ಕಿತ್ತು ಬಂದಿದೆ. ನನ್ನ ಮೇಲೆ ದಾಳಿಗೆ 150 ಮಂದಿ ಬಂದಿದ್ದರು’ ಎಂದು ಆರೋಪಿಸಿ ಮುನಿರತ್ನ ನೀಡಿದ ದೂರು ಆಧರಿಸಿ, ನಂದಿನಿಲೇಔಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಅಕ್ಟೋಬರ್ 22ರಂದು ರಾಜ್ಯಪಾಲರನ್ನು ಭೇಟಿಯಾಗಿ ನನ್ನನ್ನು ಕೊಲೆ ಮಾಡಲು ಸಂಚು ನಡೆಯುತ್ತಿದ್ದು, ಅಂಗರಕ್ಷಕರನ್ನು ಒದಗಿಸುವಂತೆ ಸರ್ಕಾರ ನಿರ್ದೇಶನ ನೀಡಬೇಕೆಂದು ಮನವಿ ಮಾಡಿದ್ದೆ. ನ.1ರಂದು ರಾಜ್ಯ ಗುಪ್ತಚರ ವಿಭಾಗಕ್ಕೂ ಪತ್ರ ಬರೆದು ಗನ್‌ಮ್ಯಾನ್ ನೀಡುವಂತೆ ಕೋರಿಕೆ ಸಲ್ಲಿಸಿದ್ದೆ. ಆದರೂ, ಗನ್‌ಮ್ಯಾನ್ ನಿಯೋಜಿಸಿಲ್ಲ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಡಿ.5ರಂದು ಇಬ್ಬರು ವಕೀಲರೆಂದು ಹೇಳಿಕೊಂಡು ಬಂದು, ‘ಈಗಲೂ ಕಾಲ ಮಿಂಚಿಲ್ಲ. ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸು. ಇಲ್ಲದಿದ್ದರೆ ಅತ್ಯಾಚಾರ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸುತ್ತೇವೆ. ನಮ್ಮ ಅಣ್ಣ ಡಿ.ಕೆ. ಸುರೇಶ್ ಸಂತೋಷವಾಗಿರಬೇಕು. ಲೋಕಸಭೆ ಚುನಾವಣೆಯಲ್ಲಿ ನಮ್ಮ ಅಣ್ಣನನ್ನು ಒಂದು ಲಕ್ಷ ಮತಗಳ ಅಂತರದಿಂದ ಸೋಲಿಸಿರುವೆ. ಅಣ್ಣ ಬಹಳ ನೊಂದಿದ್ದಾರೆ. ರಾಜೀನಾಮೆ ನೀಡಿದರೆ ಜೀವ ಉಳಿಯುತ್ತದೆ ಎಂಬುದಾಗಿಯೂ ಬೆದರಿಕೆ ಹಾಕಿದ್ದರು’ ಎಂದು ಶಾಸಕರು ನೀಡಿರುವ ದೂರು ಆಧರಿಸಿ ದಾಖಲಿಸಿರುವ ಎಫ್‌ಐಆರ್ ನಲ್ಲಿ ಉಲ್ಲೇಖಿಸಲಾಗಿದೆ.

‘ರಾಜೀನಾಮೆ ನೀಡದಿದ್ದರೆ ಬಟ್ಟೆ ಹರಿದು ಹಾಕುತ್ತೇವೆ. ಆ್ಯಸಿಡ್ ತುಂಬಿದ ಮೊಟ್ಟೆ ಎಸೆಯುತ್ತೇವೆ. ಕಾರಿಗೆ ಬೆಂಕಿ ಹಾಕುತ್ತೇವೆ. ಈ ಕೃತ್ಯಗಳು ನಡೆಯುವುದಕ್ಕೂ ಮೊದಲು ರಾಜೀನಾಮೆ ಸಲ್ಲಿಸುವಂತೆ ವಕೀಲರ ವೇಷದಲ್ಲಿ ಬಂದಿದ್ದವರು ಬೆದರಿಕೆ ಹಾಕಿದ್ದರು’ ಎಂದು ದೂರಿನಲ್ಲಿ ವಿವರಿಸಲಾಗಿದೆ.

‘ಬೆದರಿಕೆ ಸಂಬಂಧ ರಾಷ್ಟ್ರಪತಿ, ಪ್ರಧಾನಿ, ಮಾನವ ಹಕ್ಕುಗಳ ಆಯೋಗ, ಸಿಬಿಐ, ಎನ್‌ಐಎ ಹಾಗೂ ಇ.ಡಿಗೆ ದೂರು ನೀಡಿದ್ದೇನೆ’ ಎಂದು ದೂರಿನ ಪ್ರತಿಯಲ್ಲಿ ವಿವರಿಸಲಾಗಿದೆ.

ಮುನಿರತ್ನ ಬೆಂಬಲಿಗರ ವಿರುದ್ಧವೂ ದೂರು

ಮುನಿರತ್ನ ಬೆಂಬಲಿಗರ ವಿರುದ್ಧವೂ ಕೆ.ವಿಶ್ವಮೂರ್ತಿ ಅವರು ದೂರು ನೀಡಿದ್ದು, ನಂದಿನಿಲೇಔಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಡಿ.25ರಂದು ಮಧ್ಯಾಹ್ನ 12 ಗಂಟೆ ಸುಮಾರಿಗೆ ಲಕ್ಷ್ಮಿದೇವಿ ನಗರದ ಹೊರವರ್ತುಲ ರಸ್ತೆಯಲ್ಲಿ ತೆರಳುತ್ತಿದ್ದ ವೇಳೆ ಮುನಿರತ್ನ ಬೆಂಬಲಿಗರು ಹಲ್ಲೆ ನಡೆಸಿದರು. ಶಾಸಕರ ವಿರುದ್ಧ ಪ್ರತಿಭಟನೆ ಮಾಡುತ್ತೀಯಾ ಎಂದು ಬೆದರಿಸಿ ಥಳಿಸಿದರು. ಪೊಲೀಸರೇ ರಕ್ಷಿಸಿ ಬೌರಿಂಗ್ ಆಸ್ಪತ್ರೆಗೆ ದಾಖಲಿಸಿದ್ದರು. ಶಾಸಕರ 15 ಮಂದಿ ಬೆಂಬಲಿಗರು ಹಲ್ಲೆ ನಡೆಸಿದ್ದಾರೆ’ ಎಂದು ವಿಶ್ವಮೂರ್ತಿ ದೂರು ನೀಡಿದ್ದಾರೆ.

‘ಮೊಟ್ಟೆ ಎಸೆತ ರಾಜಕೀಯ ನಾಟಕ’

ಬೆಂಗಳೂರು: ‘ಆಂಟಿ ಪ್ರೀತ್ಸೆ’ ಸಿನಿಮಾದ ನಿರ್ಮಾಪಕರಾಗಿರುವ ಶಾಸಕ ಮುನಿರತ್ನ ಅವರು ಮೊಟ್ಟೆ ಎಸೆತ ಪ್ರಕರಣದಲ್ಲಿ ನಿರ್ಮಾಪಕ, ನಿರ್ದೇಶಕ ಮತ್ತು ನಟ ಕೂಡ ಆಗಿದ್ದಾರೆ. ಮೊಟ್ಟೆ ಎಸೆತ ರಾಜಕೀಯ ನಾಟಕ’ ಎಂದು ಕಾಂಗ್ರೆಸ್ ಮುಖಂಡ ಲಗ್ಗೆರೆ ನಾರಾಯಣ ಸ್ವಾಮಿ ದೂರಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ‘ಒಕ್ಕಲಿಗ ಹೆಣ್ಣು ಮಕ್ಕಳ ಬಗ್ಗೆ ಕೀಳುಮಟ್ಟದ ಹೇಳಿಕೆ ನೀಡಿದ, ದಲಿತ ಸಮುದಾಯವನ್ನು ನಿಂದನೆ ಮಾಡಿದ ಪ್ರಕರಣದ ಆಡಿಯೊದಲ್ಲಿ ಇರುವುದು ಮುನಿರತ್ನ ಅವರದ್ದೇ ಧ್ವನಿ ಎಂದು ಸಾಬೀತಾಗಿದೆ. ಇದರಿಂದ ಬಂಧನದ ಭೀತಿ ಎದುರಾಗಿದೆ. ಜೊತೆಗೆ ಮತದಾರರ ವಿಶ್ವಾಸವನ್ನೂ ಕಳೆದುಕೊಂಡಿದ್ದಾರೆ. ಒಳ್ಳೆಯವ ಎಂದು ಸಾಬೀತು ಮಾಡಿ ಜನರ ಅನುಕಂಪ ಗಿಟ್ಟಿಸಿಕೊಳ್ಳಲು ತನ್ನ ಮೇಲೆ ಮೊಟ್ಟೆ ಹಾಕಿಸಿಕೊಂಡಿದ್ದಾರೆ’ ಎಂದು ಆರೋಪಿಸಿದರು.

‘ಮೊಟ್ಟೆ ಎಸೆತ ಆಗುವ ಮೊದಲೇ ಆ್ಯಸಿಡ್ ದಾಳಿ ಎಂದು ಕೂಗಿರುವುದು, ದಲಿತ ಯುವಕರೊಬ್ಬರ ಕಾರನ್ನು ಪುಡಿಗಟ್ಟಿ ಶಾಸಕರ ಕಾರಿನ ಮೇಲೆ ದಾಳಿ ಎಂದು ಹೇಳಿಕೊಂಡಿರುವುದು ಮುನಿರತ್ನ ಮತ್ತು ತಂಡದ ನಾಟಕಕ್ಕೆ ಸಾಕ್ಷಿ. ಈ ಪ್ರಕರಣದಲ್ಲಿ ಹಲವರ ವಿರುದ್ಧ ಸುಳ್ಳು ದೂರು ದಾಖಲಾಗಿದೆ’ ಎಂದು ದೂರಿದರು.

69 ಪುಸ್ತಕಗಳ ಬಿಡುಗಡೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಪ್ನ ಬುಕ್ ಹೌಸ್ ಸಂಸ್ಥೆಯು ನಗರದ ಗಾಂಧಿ ಭವನದಲ್ಲಿ ಇದೇ 28ರಂದು ಬೆಳಿಗ್ಗೆ 10ಕ್ಕೆ 69 ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಂಡಿದೆ.

69ನೇ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಅಷ್ಟೇ ಸಂಖ್ಯೆಯಲ್ಲಿ ಪುಸ್ತಕಗಳನ್ನು ಪ್ರಕಟಿಸಲಾಗಿದೆ. ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ ಅವರು ಪುಸ್ತಕಗಳನ್ನು ಬಿಡುಗಡೆ ಮಾಡಲಿದ್ದಾರೆ. ಸಾಹಿತಿ ಹಂ.ಪ. ನಾಗರಾಜಯ್ಯ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅವರು ‘ನಾಡುನುಡಿಯ ದೃಷ್ಟಿಯಲ್ಲಿ ಪುಸ್ತಕಗಳು’ ವಿಷಯದ ಬಗ್ಗೆ ಭಾಷಣ ಮಾಡಲಿದ್ದಾರೆ.

ಅತಿಥಿಯಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಭಾಗವಹಿಸುತ್ತಾರೆ. ಕೃತಿಗಳ ಬಗ್ಗೆ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ಮಾತನಾಡುತ್ತಾರೆ.

69 ಪುಸ್ತಕಗಳೂ ಕನ್ನಡ ಸಂಸ್ಕೃತಿಯನ್ನು, ಕನ್ನಡ ಭಾಷೆಯ ಶ್ರೀಮಂತಿಕೆಯನ್ನು ವಿಸ್ತರಿಸಲು ಸಹಕಾರಿಯಾಗಲಿವೆ. ಈ ಪುಸ್ತಕಗಳು ನಾಡಿನ ಎಲ್ಲ ಭಾಗದ ಲೇಖಕರನ್ನು ಹೊಂದಿದ್ದು, ಸಮಗ್ರ ನಾಡಿನ ಸಾಹಿತ್ಯವನ್ನು ಪ್ರಾತಿನಿಧಿಕವಾಗಿ ಪ್ರಕಟಿಸುವ ಪ್ರಯತ್ನವಾಗಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ ಮತ್ತು ವ್ಯವಸ್ಥಾಪಕ ಆರ್. ದೊಡ್ಡೆಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಾರ್ಯಕ್ರಮದಲ್ಲಿ ಎಚ್‌.ಎನ್‌. ದೀಪಕ್ ಅವರು ಪೌರಕಾರ್ಮಿಕರಿಗೆ ಸೀರೆಗಳನ್ನು ವಿತರಿಸಿದರು. ಕರುನಾಡ ವಿಜಯ ಸೇನೆ ಪದಾಧಿಕಾರಿಗಳು ಉಪಸ್ಥಿತರಿದ್ದರು

‘ಭುವನಗಿರಿಯಲ್ಲಿಯೇ ಉತ್ಸವ ಆಚರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರವು ಭುವನಗಿರಿಯಲ್ಲಿಯೇ ಪ್ರತಿ ವರ್ಷ ಭುವನಗಿರಿ ಉತ್ಸವ ಆಚರಿಸಬೇಕು. ಭುವನಗಿರಿಯನ್ನು ಜಿಲ್ಲಾ ಕೇಂದ್ರವೆಂದು ಘೋಷಿಸಬೇಕು’ ಎಂದು ಕರುನಾಡ ವಿಜಯ ಸೇನೆ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಎನ್‌. ದೀಪಕ್ ಅವರು ಸರ್ಕಾರಕ್ಕೆ ಆಗ್ರಹಿಸಿದರು.

ಘಟಕವು ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ, ಶಂಕರ್ ನಾಗ್ ಉತ್ಸವ, ಪೌರಕಾರ್ಮಿಕರು ಮತ್ತು ಬಡವರಿಗೆ ಸೀರೆ ಹಾಗೂ ಆಟೊರಿಕ್ಷಾ ಚಾಲಕರಿಗೆ ಸಮವಸ್ತ್ರ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

‘ರಾಜ್ಯದಲ್ಲಿ ಹಿಂದಿ ಭಾಷೆ ಹೇರಿಕೆಗೆ ಕಡಿವಾಣ ಹಾಕಬೇಕು. ರಾಜ್ಯ ಸರ್ಕಾರದ ವಿವಿಧ ಇಲಾಖೆ, ಖಾಸಗಿ ಕಂಪನಿಗಳಲ್ಲಿ ಶೇ 75ರಷ್ಟು ಉದ್ಯೋಗಗಳನ್ನು ಕನ್ನಡಿಗರಿಗೆ ನೀಡಬೇಕು. ನ್ಯಾಯಾಲಯದಲ್ಲಿ ತೀರ್ಪುಗಳನ್ನು ಕನ್ನಡದಲ್ಲಿಯೇ ಹೊರಡಿಸಬೇಕು. ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂಪನಿಗಳು ಕನ್ನಡಿಗರಿಗೆ ಉದ್ಯೋಗ ನೀಡದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಶಾಸಕ ಎಸ್‌.ಟಿ. ಸೋಮಶೇಖರ್ ಅವರು ಕರುನಾಡ ವಿಜಯ ಸೇನೆಯ ಕಾರ್ಯಚಟುವಟಿಕೆಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತದ (ಕೆಆರ್ ಐಡಿಎಲ್) ಮಾಜಿ ಅಧ್ಯಕ್ಷ ಎಂ. ರುದ್ರೇಶ್ ಅವರು ಜಾನಪದ ಕಲಾ ಉತ್ಸವ ಮತ್ತು ಭುವನೇಶ್ವರಿ ದೇವಿಯ ಮೆರವಣಿಗೆಗೆ ಚಾಲನೆ ನೀಡಿದರು. ಕರುನಾಡ ವಿಜಯಸೇನೆ ರಾಜ್ಯ ಕಾರ್ಯದರ್ಶಿ ಗಿರಿಜೇಶ್ ಅವರು ಆಟೊ ರಿಕ್ಷಾ ಚಾಲಕರನ್ನು ಸನ್ಮಾನಿಸಿದರು.

ಅಕ್ರಂ ಪಾಶಾ ಕೆಎಚ್‌ಬಿ ಆಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಎಎಸ್ ಅಧಿಕಾರಿ ಅಕ್ರಂ ಪಾಶಾ ಅವರನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಆಯುಕ್ತರ ಹುದ್ದೆಗೆ ವರ್ಗಾಯಿಸಲಾಗಿದೆ.

ರವಿ ಎಂ.ಆರ್ ಅವರನ್ನು ಕೋಲಾರದ ಜಿಲ್ಲಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ. ಕವಿತಾ ಮನ್ನಿಕೇರಿ ಅವರನ್ನು ಕಬ್ಬು ಅಭಿವೃದ್ಧಿ ಆಯುಕ್ತೆ ಮತ್ತು ಸಕ್ಕರೆ ನಿರ್ದೇಶಕಿ ಹುದ್ದೆಗೆ ವರ್ಗಾಯಿಸಲಾಗಿದೆ.

‘ಸಾರಿಗೆ ನೌಕರರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾರಿಗೆ ನೌಕರರ ವೇತನ ಹೆಚ್ಚಳಕ್ಕಾಗಿ ನಾಲ್ಕು ವರ್ಷಕ್ಕೊಮ್ಮೆ ಸರ್ಕಾರದೊಂದಿಗೆ ಚೌಕಾಸಿ ನಡೆಸುವ ಬದಲು, ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು’ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಸೇನೆ ಆಗ್ರಹಿಸಿದೆ.

‘ಡಿ.31ರಂದು ಚೌಕಾಸಿಗಾಗಿ ನಡೆಸುವ ಮುಷ್ಕರಕ್ಕೆ ಬೆಂಬಲವಿಲ್ಲ’ ಎಂದು ಸೇನೆಯ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ತಿಳಿಸಿದಂತೆ ಸಾರಿಗೆ ನೌಕರರಿಗೂ 7ನೇ ವೇತನ ಆಯೋಗದ ಶಿಫಾರಸುಗಳನ್ನು ಜಾರಿ ಮಾಡಬೇಕು. 2020ರ ಜ.1ರಿಂದ ಶೇ 15 ವೇತನ ಹೆಚ್ಚಳದ 38 ತಿಂಗಳು ಹಿಂಬಾಕಿ ಹಣವನ್ನು ಒಂದೇ ಕಂತಿನಲ್ಲಿ ಪಾವತಿ ಮಾಡಬೇಕು’ ಎಂದು ಒತ್ತಾಯಿಸಿದರು. ‘ಸಾರಿಗೆ ನಿಗಮಗಳಿಗೆ ಖಾಸಗಿ ಎಲೆಕ್ಟ್ರಿಕ್ ಬಸ್ ಒದಗಿಸುವುದನ್ನು ನಿಲ್ಲಿಸಬೇಕು. ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಖಾಸಗಿ ಕಂಪನಿಗಳಿಗೆ ಸಬ್ಸಿಡಿ ಒದಗಿಸುವ ಬದಲು ನಿಗಮಗಳಿಗೇ ನೀಡಬೇಕು. ಸಂಸ್ಥೆಯು ಖರೀದಿಸುತ್ತಿರುವ ಡೀಸೆಲ್ ವಾಹನಗಳ ಬದಲಿಗೆ ಎಲೆಕ್ಟ್ರಿಕ್ ವಾಹನಗಳನ್ನು ಖರೀದಿಸಬೇಕು. 2021ರ ಮುಷ್ಕರದಲ್ಲಿ ಭಾಗಿಯಾದ ಕಾರಣಕ್ಕೆ ವಜಾ ಮಾಡಿದವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕು. ವರ್ಗಾವಣೆ ಮಾಡಿದವರನ್ನು ಮೂಲ ಸ್ಥಳಕ್ಕೆ ಮತ್ತೆ ವರ್ಗಾಯಿಸಬೇಕು. ಕೆಲಸದಿಂದ ವಜಾಗೊಂಡು, ಆತ್ಮಹತ್ಯೆ ಮಾಡಿಕೊಂಡವರ, ಇನ್ನಿತರ ಕಾರಣಗಳಿಂದ ಮೃತರಾದ ನೌಕರರ ಕುಟುಂಬದ ಸದಸ್ಯರಿಗೆ ಅನುಕಂಪದ ಆಧಾರದಲ್ಲಿ ಕೆಲಸ ನೀಡಬೇಕು. ಸುಳ್ಳು ಮೊಕದ್ದಮೆಗಳನ್ನು ಹಿಂಪಡೆಯಬೇಕು’ ಎಂದು ಆಗ್ರಹಿಸಿದರು.

‘ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಚಾಲನಾ ಸಿಬ್ಬಂದಿಯ ಪರವಾನಗಿ ನವೀಕರಣಗಳನ್ನು ಮಾಡಿಸುವ ಜವಾಬ್ದಾರಿ ಸಂಸ್ಥೆಯದಾಗಬೇಕು. ಟಿಸಿ, ಎಟಿಐ, ಟಿಐ, ಮತ್ತು ಎಟಿಎಸ್ ಅಧಿಕಾರಿ ಸಿಬ್ಬಂದಿಗೆ 8 ಗಂಟೆಗಳ ಕರ್ತವ್ಯ ಸಮಯವನ್ನು ನಿಗದಿಪಡಿಸಿ, ಹೆಚ್ಚುವರಿ ಕೆಲಸಕ್ಕೆ ಅಧಿಕ ವೇತನ ನೀಡಬೇಕು’ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಸೇನೆ ಅಧ್ಯಕ್ಷೆ ಜಮೀಲ ಬಿ., ಕಾರ್ಯಾಧ್ಯಕ್ಷ ಯೋಗೇಶ ಸಿ.ಎಚ್‌., ಸಂಘಟನಾ ಕಾರ್ಯದರ್ಶಿ ಜಗನ್ನಾಥ ಕೆ.ಕೆ. ಇದ್ದರು.



ಹೃತಿಕಾ, ಪ್ರದೀಪ್

ಇಂದು 'ಔಟ್ ಆಫ್ ಸಿಲಬಸ್' ಬಿಡುಗಡೆ

ಪ್ರದೀಪ್ ದೊಡ್ಡಯ್ಯ ನಟಿಸಿ, ನಿರ್ದೇಶನ ಮಾಡಿರುವ 'ಔಟ್ ಆಫ್ ಸಿಲಬಸ್' ಸಿನಿಮಾ ಇಂದು(ಡಿ.27)ಬಿಡುಗಡೆಯಾಗಿದೆ.

ಪ್ರದೀಪ್ ಕನ್ನಡದ ಹಲವು ನಿರ್ದೇಶಕರ ಜೊತೆ ಕೆಲಸ ಮಾಡಿದ ಅನುಭವಹೊಂದಿದ್ದಾರೆ. ವಿಜಯಕಲಾ ಸುಧಾಕರ್, ತನುಷ್ ಎಸ್.ವಿ. ಹಾಗೂ ದೇಸಾಯಿ ಗೌಡ ಜಂಟಿಯಾಗಿ ನಿರ್ಮಾಣ ಮಾಡಿರುವ ಈ ಸಿನಿಮಾದಲ್ಲಿ ಪ್ರದೀಪ್ ದೊಡ್ಡಯ್ಯಗೆ ನಾಯಕಿಯಾಗಿ ಹೃತಿಕಾ ಶ್ರೀನಿವಾಸ್ ನಟಿಸಿದ್ದಾರೆ. 'ಯುವ ಜನತೆಯನ್ನು ಕೇಂದ್ರವಾಗಿಟ್ಟು, ಭರ್ಜರಿ ಮನರಂಜನೆ ಕೊಡುವ ಎಲ್ಲ ಅಂಶಗಳನ್ನು ಈ ಸಿನಿಮಾ ಒಳಗೊಂಡಿದೆ' ಎಂದಿದೆ ಚಿತ್ರತಂಡ. ಅಚ್ಯುತ್ ಕುಮಾರ್, ಯೋಗರಾಜ್ ಭಟ್, ರಾಮಕೃಷ್ಣ, ಚಿತ್ಕಲಾ ಬಿರಾದಾರ್, ಮಂಜು ಪಾವಗಡ, ಮಹಾಂತೇಶ್ ಹಿರೇಮಠ್ ಮತ್ತಿತರ ಕಲಾವಿದರು ಈ ಚಿತ್ರದಲ್ಲಿದ್ದಾರೆ. ದೇವ ವಡ್ಡೆ ಛಾಯಾಚಿತ್ರಗ್ರಹಣ, ಉಮೇಶ್ ಆರ್. ಬಿ. ಸಂಕಲನ ಚಿತ್ರಕ್ಕಿದೆ.

ಕನ್ನಡ ಚಿತ್ರರಂಗಕ್ಕಿದು

ಕಹಿ ಸಿಹಿಯ ವರ್ಷ



2024ರಲ್ಲಿ ಇಲ್ಲಿಯವರೆಗೆ ಸುಮಾರು 210 ಕನ್ನಡ ಸಿನಿಮಾಗಳು ಬಿಡುಗಡೆಯಾಗಿದ್ದು, ಇವುಗಳಲ್ಲಿ ಲಾಭ ಕಂಡಿದ್ದು ಬೆರಳೆಣಿಕೆಯಷ್ಟೇ ಸಿನಿಮಾಗಳು. ಈ ವರ್ಷದ ಚಂದನವನದ ಹಿನ್ನೋಟ ಇಲ್ಲಿದೆ...

ಅಭಿಲಾಷ್ ಪಿ.ಎಸ್.

2024 ಕನ್ನಡ ಚಿತ್ರರಂಗಕ್ಕೆ ಎಳ್ಳು ಬೆಲ್ಲದ ಮಿಶ್ರಣದಂತಿತ್ತು. ವರ್ಷದ ಮೊದಲಾರ್ಧ ತಾರಾ ವರ್ಚಸ್ಸಿನ ನಟರ ಸಿನಿಮಾಗಳಿಲ್ಲದೆ ಸೊರಗಿದ ಬೆಳ್ಳಿತೆರೆಗಳು ದ್ವಿತೀಯಾರ್ಧದಲ್ಲಿ ಪರಭಾಷಾ ಚಿತ್ರಗಳ ಪೈಪೋಟಿ ನಡುವೆಯೂ ಕನ್ನಡದ ಸ್ಟಾರ್ ನಟರ ಸಿನಿಮಾಗಳಿಂದ ತುಂಬಿದವು.

2023ರ ಅಂತ್ಯದಲ್ಲಿ ತೆರೆಕಂಡ ದರ್ಶನ್ ನಟನೆಯ 'ಕಾಟೇರ' ಸಿನಿಮಾದ ಯಶಸ್ಸಿನೊಂದಿಗೇ ಕನ್ನಡ ಚಿತ್ರರಂಗ 2024ಕ್ಕೆ ಹೆಜ್ಜೆ ಇಟ್ಟಿತ್ತು. ಜನವರಿ 26ಕ್ಕೆ ಒಟ್ಟು ಆರು ಸಿನಿಮಾಗಳು ತೆರೆಕಂಡರೂ 'ಉಪಾಧ್ಯಕ್ಷ' ಸಿನಿಮಾವಷ್ಟೇ ತೆರೆಗಳಲ್ಲಿ ಕೆಲ ವಾರ ಉಳಿದುಕೊಂಡಿತು. ಫೆಬ್ರುವರಿಯಲ್ಲಿ ತೆರೆಕಂಡ 'ಒಂದು ಸರಳ ಪ್ರೇಮಕಥೆ' ಚಿತ್ರಮಂದಿರಗಳಲ್ಲಿ 25 ದಿನ ಪೂರೈಸಿತು. ಈ ವರ್ಷ ಸಂಕ್ರಾಂತಿ–ಯುಗಾದಿ ಕಳೆದರೂ ತೆರೆಗಳತ್ತ ಸ್ಟಾರ್ ನಟರ ಚಿತ್ರಗಳ ಸುಳಿವು ಇರಲಿಲ್ಲ. ಮಾರ್ಚ್ 8ರಂದು ಬಿಡುಗಡೆಯಾಗಿದ್ದ ಯೋಗರಾಜ್ ಭಟ್ ನಿರ್ದೇಶನದ, ಪ್ರಭುದೇವ ಹಾಗೂ ಶಿವರಾಜ್‌ಕುಮಾರ್ ಅವರಂತಹ ಖ್ಯಾತನಾಮರಿದ್ದ 'ಕರಟಕ ದಮನಕ' ಸಿನಿಮಾ ನಿರೀಕ್ಷೆ ಹುಟ್ಟಿಸಿದರೂ ಹಿನ್ನಡೆ ಅನುಭವಿಸಿತು.

ಬಳಿಕ ಐಪಿಎಲ್ ಭರಾಟೆ, ಲೋಕಸಭೆ ಚುನಾವಣೆಯ ಕಾವು ಚಿತ್ರರಂಗಕ್ಕೆ ತಟ್ಟಿತು. ಜೂನ್‌ವರೆಗೂ ಚಿತ್ರಮಂದಿರದತ್ತ ತಲೆಹಾಕಲೂ ಚಿತ್ರತಂಡಗಳು ಹಿಂಜರಿದವು. ಒಟಿಟಿ, ಸ್ಯಾಟಲೈಟ್ ವ್ಯವಹಾರದಲ್ಲಿ ವಿಳಂಬ, ಏಕಕಾಲದಲ್ಲಿ ಎಲ್ಲಾ ಭಾಷೆಗಳಲ್ಲಿ ಸಿನಿಮಾ ಬಿಡುಗಡೆ, ಪ್ಯಾನ್ ಇಂಡಿಯಾ ಯುಗದಲ್ಲಿ ಅತ್ಯುತ್ತಮ ಗುಣಮಟ್ಟದ ಸಿನಿಮಾವನ್ನೇ ನೀಡಬೇಕು ಎನ್ನುವ ಅಂಶಗಳೂ ಹಲವು ಸಿನಿಮಾಗಳ ವಿಳಂಬಕ್ಕೆ ಕಾರಣವಾದವು. ಜನವರಿ–ಏಪ್ರಿಲ್ ಅವಧಿಯಲ್ಲಿ ಕೆಲ ಪ್ರಯೋಗಾತ್ಮಕ, ಸದಭಿರುಚಿಯ, ಬಜೆಟ್‌ಗಿಂತಲೂ ಕಂಟೆಂಟ್‌ಗೆ ಒತ್ತು ನೀಡಿದ ಸಿನಿಮಾಗಳು ಬಿಡುಗಡೆಯಾದರೂ, ಚಿತ್ರಮಂದಿರಗಳಲ್ಲಿ ಅವುಗಳು ಹೆಚ್ಚು ಕಾಲ ಉಸಿರಾಡಲಿಲ್ಲ. ಸಂದೀಪ್ ಸುಂಕದ್ ನಿರ್ದೇಶನದ 'ಶಾಖಾಹಾರಿ', ಶ್ರೀನಿಧಿ ಬೆಂಗಳೂರು ನಿರ್ದೇಶನದ 'ಬ್ಲಿಂಕ್' ಈ ಪಟ್ಟಿಯಲ್ಲಿವೆ. ಅವೇ ಸಿನಿಮಾಗಳು ಒಟಿಟಿಯಲ್ಲಿ ಬಂದ ಬಳಿಕ ಸಾಮಾಜಿಕ ಮಾಧ್ಯಮಗಳಲ್ಲಿ ಜನರಿಂದ ಪ್ರಶಂಸೆಗೆ ಒಳಗಾದವು.

ಚಂದನವನದಲ್ಲಿ 2024ರಲ್ಲಿ ಸುಮಾರು 210 ಕನ್ನಡ ಸಿನಿಮಾಗಳು ಬಿಡುಗಡೆಯಾಗಿವೆ ಎಂದು ಮಾಹಿತಿ ನೀಡುತ್ತಾರೆ ಪಿಆರ್‌ಒ ಆಗಿರುವ ವಿಜಯ್‌ಕುಮಾರ್. ಇವುಗಳಲ್ಲಿ ಯಶಸ್ಸು ಕಂಡ ಚಿತ್ರಗಳ ಸಂಖ್ಯೆ ಬೆರಳೆಣಿಕೆಯಷ್ಟೇ. ದುನಿಯಾ ವಿಜಯ್ ನಟನೆಯ 'ಭೀಮ', ಗಣೇಶ್ ನಟನೆಯ 'ಕೃಷ್ಣಂ ಪ್ರಣಯ ಸಖಿ', ಶ್ರೀಮುರಳಿ ನಟನೆಯ 'ಬಘೀರ', ಶಿವರಾಜ್‌ಕುಮಾರ್ ನಟನೆಯ 'ಭೈರತಿ ರಣಗಲ್', ವರ್ಷಾಂತ್ಯಕ್ಕೆ ತೆರೆಕಂಡ ಉಪೇಂದ್ರ ನಟನೆಯ 'ಯುಐ' ಹಾಗೂ ಸುದೀಪ್ ನಟನೆಯ 'ಮ್ಯಾಕ್ಸ್' ಸಿನಿಮಾಗಳಷ್ಟೇ ಸದ್ದು ಮಾಡಿದ ಸಿನಿಮಾಗಳು. ಅಂತರರಾಷ್ಟ್ರೀಯ ಮಟ್ಟಕ್ಕೆ ಹೆಜ್ಜೆ ಇಟ್ಟ 'ಮಾರ್ಟಿನ್' ಎಡವಿದ್ದು ನಿರೀಕ್ಷಿತವೆಂಬಂತಿತ್ತು. ಧನಂಜಯ ನಟನೆಯ 'ಕೋಟಿ' ಮನರಂಜನೆ ನೀಡುವಲ್ಲಿ ವಿಫಲವಾಯಿತು. 'ಯುವ' ಸಿನಿಮಾ ಯುವರಾಜ್‌ಕುಮಾರ್‌ಗೆ ಉತ್ತಮ ವೇದಿಕೆ ಹಾಕಿಕೊಟ್ಟಿತು. ಜುಲೈನಲ್ಲಿ ತೆರೆಕಂಡ ಮಿಥಿಲೇಶ್ ನಿರ್ದೇಶನದ, ರಾಜ್ ಬಿ.ಶೆಟ್ಟಿ ನಟನೆಯ 'ರೂಪಾಂತರ' ಸಿನಿಮಾ ಭಿನ್ನವಾದ ನಿರೂಪಣೆ, ಚಿತ್ರಕಥೆಯಿಂದ ಮೆಚ್ಚುಗೆ ಪಡೆಯಿತು. ಶರಣ್ ನಟನೆಯ 'ಅವತಾರ ಪುರುಷ–2' ಸಿನಿಮಾ ಸೀಕ್ವೆಲ್ ಎನ್ನುವ ಕಾರಣಕ್ಕಷ್ಟೇ ಬಿಡುಗಡೆಯಾಯಿತು.

ಈ ವರ್ಷ 'ಕರಟಕ ದಮನಕ'(ಮಾರ್ಚ್ 8) ಬಿಡುಗಡೆ ಬಳಿಕ ಸ್ಟಾರ್ ನಟರೊಬ್ಬರ ಚಿತ್ರ ಬಿಡುಗಡೆಯಾಗಿದ್ದು ಆಗಸ್ಟ್‌ನಲ್ಲಿ. ಆ.9ಕ್ಕೆ ತೆರೆಕಂಡ 'ಭೀಮ' ಸಿನಿಮಾ ಮೂಲಕ ಪ್ರೇಕ್ಷಕರು ಮತ್ತೆ ಚಿತ್ರಮಂದಿರಗಳತ್ತ ಹೆಜ್ಜೆ ಇಟ್ಟರು. ಈ ಸಿನಿಮಾ ಯುವಜನತೆಯನ್ನು ಥಿಯೇಟರ್‌ಗಳಿಗೆ ಕರೆತಂದರೆ ಕುಟುಂಬಗಳನ್ನು ಚಿತ್ರಮಂದಿರಗಳತ್ತ ಸೆಳೆದಿದ್ದು ಗಣೇಶ್ ನಟನೆಯ 'ಕೃಷ್ಣಂ ಪ್ರಣಯ ಸಖಿ'(ಆ.15). ಈ ಸಿನಿಮಾದ 'ದ್ವಾಪರ' ಹಾಡು ಚಿತ್ರಕ್ಕಿಂತಲೂ ಹಿಟ್ ಆಯಿತು. ಈ ಎರಡು ಸಿನಿಮಾಗಳು ಚಿತ್ರಮಂದಿರಗಳಿಗೆ ಉಸಿರು ತುಂಬಿದ ಬೆನ್ನಲ್ಲೇ 'ಪೌಡರ್', 'ಲಾಫಿಂಗ್ ಬುದ್ಧ', 'ಪೆಪೆ', 'ಇಬ್ಬನಿ ತಬ್ಬಿದ ಇಳೆಯಲಿ', 'ಮಾರ್ಟಿನ್', 'ಬಘೀರ', 'ಭೈರತಿ ರಣಗಲ್', 'ಯುಐ' ಹಾಗೂ 'ಮ್ಯಾಕ್ಸ್' ಸಿನಿಮಾಗಳು ಲಗ್ಗೆ ಇಟ್ಟವು. ಡಿ.20ಕ್ಕೆ ಬಿಡುಗಡೆಗೊಂಡ 'ಯುಐ' ಸಿನಿಮಾದ 5 ಲಕ್ಷ ಟಿಕೆಟ್‌ಗಳು ಬುಕ್ ಮೈಶೋ ಮೂಲಕ ಮೂರು ದಿನಗಳಲ್ಲಿ (ಡಿ.22ರವರೆಗೆ) ಮಾರಾಟವಾಯಿತು. ಈ ಬೆಳವಣಿಗೆ ವರ್ಷಾಂತ್ಯದಲ್ಲಿ ಕನ್ನಡ ಚಿತ್ರರಂಗಕ್ಕೆ ಹೊಸ ಹುರುಪು ನೀಡಿದೆ.

'ಕೆರೆಬೇಟೆ', 'ಶಿವಮ್ಮ', ಫೋಟೋ', 'ಲೈನ್‌ಮ್ಯಾನ್', 'O2', 'ಸಪ್ತೈಯರ್ ಶಂಕರ', 'ಮರ್ಫಿ', 'ಮರ್ಯಾದೆ ಪ್ರಶ್ನೆ', 'ಮೂರನೇ ಕೃಷ್ಣಪ್ಪ', 'ಬಿಟಿಎಸ್', 'ಜೂನಿ', 'ಕೇಸ್ ಆಫ್ ಕೊಂಡಾಣ', 'ಕಾಲಾಪತ್ಥರ್', 'ಪೆಪೆ', 'ರಂಗಸಮುದ್ರ', 'ಚಿಲ್ಲಿ ಚಿಕನ್' ವರ್ಷದ ಹೊಸ ಪ್ರಯತ್ನ, ಭಿನ್ನ ಪ್ರಯೋಗಗಳ ಮೂಲಕ ಭರವಸೆ ಮೂಡಿಸಿದ ಸಿನಿಮಾಗಳು.

ಸರ್ಕಾರ ಸಿನಿಮಾ ಟಿಕೆಟ್ ದರ ನಿಗದಿ ಮಾಡಬೇಕು ಎಂದು ಆಗ್ರಹಿಸಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ(ಕೆಎಫ್‌ಸಿಸಿ) ಮುಂದೆ 'ಕನ್ನಡ ಚಲನಚಿತ್ರ ಸಂರಕ್ಷಣಾ ವೇದಿಕೆ' ಸದಸ್ಯರು ಪ್ರತಿಭಟನೆ ನಡೆಸಿದರು. ಈ ವಿಷಯವನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯುವಲ್ಲಿ ವಾಣಿಜ್ಯ ಮಂಡಳಿ ವಿಫಲವಾಯಿತು. 'ಪುಷ್ಪ–2' ಸಿನಿಮಾದ ತಡರಾತ್ರಿ ಹಾಗೂ ಮುಂಜಾನೆಯ ಪ್ರದರ್ಶನಗಳ ವಿರುದ್ಧ ದೂರು ನೀಡಿ ಅದನ್ನು ತಡೆಯುವಲ್ಲಿ ನಿರ್ಮಾಪಕರ ಸಂಘ ಗೆದ್ದಿತು! ಆದರೆ ಟಿಕೆಟ್ ದರ ನಿಗದಿ ವಿಚಾರದಲ್ಲಿ ಸೋತಿತು.

ನಟ ದ್ವಾರಕೀಶ್, ಕೆ.ಶಿವರಾಂ, ಟಿ.ತಿಮ್ಮಯ್ಯ, ನಿರ್ದೇಶಕ ಚಿ.ದತ್ತರಾಜ್, ನಟಿ–ನಿರೂಪಕಿ ಅಪರ್ಣಾ ಅಗಲಿಕೆ ಚಿತ್ರರಂಗಕ್ಕೆ ಆಘಾತ ತಂದವು. ನಟ, ನಿರ್ದೇಶಕ ಗುರುಪ್ರಸಾದ್ ಹಾಗೂ ನಿರ್ದೇಶಕ ವಿನೋದ್ ದೋಂಡಾಳೆ ಆತ್ಮಹತ್ಯೆ ಚಿತ್ರರಂಗವನ್ನು ಆತ್ಮವಿಮರ್ಶೆಗೆ ದೂಡಿದೆ.

'ಪ್ಯಾನ್ ಇಂಡಿಯಾ ಎನ್ನುವುದು ಪ್ಯಾನ್ ಕಾರ್ಡ್ ಇದ್ದವರ ಕಥೆ. ಅಚ್ಚಕನ್ನಡದ ಚಿತ್ರಗಳು ಹೆಚ್ಚು ಜನರನ್ನು ಸೆಳೆಯಲಿ. ಕನ್ನಡದಲ್ಲಿ ಅದ್ಭುತವಾದ ಸಿನಿಮಾಗಳು ಬರುತ್ತಿವೆ. ಆದರೆ ಅವುಗಳಿಗೆ ವಿತರಣೆ, ಚಿತ್ರಮಂದಿರಗಳಲ್ಲಿ ಅವುಗಳನ್ನು ಇಟ್ಟು ಜನರು ಬರುವವರೆಗೆ ಸಲಹುವ ಒಂದು ಅವಕಾಶ ಬೆಳೆಯುತ್ತಿಲ್ಲ. ಒಂದೊಳ್ಳೆಯ ಚಿತ್ರ ಎರಡು ಮೂರು ಚಿತ್ರಮಂದಿರಗಳಲ್ಲಾದರೂ ಎರಡು ಮೂರು ವಾರ ಇರಬೇಕಾದ ವ್ಯವಸ್ಥೆಯಾಗಬೇಕು. ಸಿನಿಮಾ ಲಾಟರಿ ರೀತಿ ಆಗಬಾರದು' ಎನ್ನುವ ಜಯಂತ ಕಾಯ್ಕಿಣಿ ಅವರ ಮಾತುಗಳು ಪ್ರಸ್ತುತ ಕನ್ನಡ ಚಿತ್ರರಂಗದ ಸ್ಥಿತಿಯನ್ನು ಸೂಕ್ಷ್ಮವಾಗಿ ಬಿಚ್ಚಿಟ್ಟಿದೆ.

ವರ್ಷಕ್ಕೆ ಕನಿಷ್ಠ ಎರಡು ಸಿನಿಮಾಗಳನ್ನು ತೆರೆಗೆ ತರುವ ಶಿವರಾಜ್‌ಕುಮಾರ್ ಅವರ ಅನಾರೋಗ್ಯದ ಸುದ್ದಿ ವರ್ಷಾಂತ್ಯದಲ್ಲಿ ಕಳವಳ ಹುಟ್ಟಿಸಿದರೂ, 'ಭೈರತಿ ರಣಗಲ್'ನ ಯಶಸ್ಸು ಅದನ್ನು ಮರೆಮಾಚಿತು. ಶಸ್ತ್ರಚಿಕಿತ್ಸೆ ಬಳಿಕ ಶಿವರಾಜ್‌ಕುಮಾರ್ ಚೇತರಿಸಿಕೊಳ್ಳುತ್ತಿದ್ದಾರೆ. ಅನಾರೋಗ್ಯದ ನಡುವೆಯೂ '45' ಚಿತ್ರವನ್ನು ಪೂರೈಸಿ, ಶಸ್ತ್ರಚಿಕಿತ್ಸೆಗೆ ಅಮೆರಿಕಕ್ಕೆ ತೆರಳುವ ಮುನ್ನ ಮತ್ತೆರಡು ಹೊಸ ಚಿತ್ರಗಳನ್ನು ಒಪ್ಪಿಕೊಂಡಿರುವ ಅವರ ಇಚ್ಛಾಶಕ್ತಿ, ಸಿನಿಮಾ ಪ್ರೀತಿ ಮುಂದಿನ ದಿನಗಳಲ್ಲಿ ಕನ್ನಡ ಚಿತ್ರರಂಗಕ್ಕೆ ಅದರಲ್ಲೂ ನಟರಿಗೆ ಮಾದರಿಯಾಗಬೇಕು ಎಂದರೆ ತಪ್ಪಲ್ಲ.

ಭಿನ್ನ ಪ್ರಯೋಗ

ಈ ವರ್ಷ ಭಿನ್ನ ಪ್ರಯೋಗವೊಂದರ ಮೂಲಕ ಜನರೆದುರಿಗೆ ಬಂದಿದ್ದು 'ಕೋಳಿ ಎಸ್ರು' ಹಾಗೂ 'ಹದಿನೇಳೆಂಟು' ಸಿನಿಮಾಗಳು. ನಿರ್ದೇಶಕರಾದ ಚಂಪಾ ಪಿ.ಶೆಟ್ಟಿ ಹಾಗೂ ಪೃಥ್ವಿ ಕೊಣನೂರು ಜೊತೆಯಾಗಿ ಎರಡೂ ಸಿನಿಮಾಗಳನ್ನು ಜನವರಿ 26ರಂದು ಬಿಡುಗಡೆ ಮಾಡಿದರು. ಬಿಡುಗಡೆಗೆ ಲಕ್ಷಾಂತರ ರೂಪಾಯಿ ಖರ್ಚು ಬೀಳುವ ಕಾರಣ, ಹೊಸ ಮಾದರಿಯ ಪ್ರಯೋಗವೊಂದಕ್ಕೆ ಕೈಹಾಕಿ ₹400ಕ್ಕೆ ಈ ಎರಡೂ ಸಿನಿಮಾದ ಟಿಕೆಟ್‌ಗಳನ್ನು ಆಸಕ್ತರಿಗೆ ಮಾರಾಟ ಮಾಡಿದವು. 'ಧೂಮಂ' ಹಾಗೂ 'ಹದಿನೇಳೆಂಟು' ಸಿನಿಮಾಗಳು ಯುಟ್ಯೂಬ್‌ನಲ್ಲಿ ಬಿಡುಗಡೆಗೊಂಡು, ಒಟಿಟಿಗೆ ಪರ್ಯಾಯ ವೇದಿಕೆ ಎಂಬಂತೆ ಹೊಸ ಭಾಷ್ಯ ಬರೆದವು.

ಪರಭಾಷೆಗಳಲ್ಲಿ ಹಿಟ್ ಆದ ಚಿತ್ರಗಳು

ಹಿಂದಿಯಲ್ಲಿ ಈ ವರ್ಷ 'ಸ್ತ್ರೀ–2', 'ಭೂಲ್ ಬುಲಯ್ಯ–3', 'ಸಿಂಗಮ್ ಅಗೈನ್' ಹಾಗೂ 'ಫೈಟರ್' ಸಿನಿಮಾ, ಮಲಯಾಳದಲ್ಲಿ 'ಮಂಜುಮಲ್ ಬಾಯ್ಸ್', 'ಆವೇಶಂ', 'ದಿ ಗೋಟ್ ಲೈಫ್', 'ಪ್ರೇಮಲು', 'ಎಆರ್‌ಎಂ', 'ಗುರುವಾಯುರು ಅಂಬಲನಡಯಿಲ್', 'ಭ್ರಮಯುಗಂ' ಸಿನಿಮಾ, ತೆಲುಗಿನಲ್ಲಿ 'ಪುಷ್ಪ–2', 'ಕಲ್ಕಿ 2898 ಎಡಿ', 'ದೇವರ', 'ಹನುಮ್ಯಾನ್' ಸಿನಿಮಾ ಹಾಗೂ ತಮಿಳಿನಲ್ಲಿ 'ಗೋಟ್', 'ಅಮರನ್', 'ವೇಟ್ಟಯನ್' ಹಾಗೂ 'ಮಹಾರಾಜ' ಸಿನಿಮಾಗಳು ಸದ್ದು ಮಾಡಿದವು.


2024ರ ವಿವಾದಗಳು

- ಕೊಲೆ ಆರೋಪದಲ್ಲಿ ನಟ ದರ್ಶನ್ ಬಂಧನ. 2024ರ ಜೂನ್‌ನಲ್ಲಿ ಜೈಲಿಗೆ, ಡಿಸೆಂಬರ್‌ನಲ್ಲಿ ಜಾಮೀನು.
- 'ಮಾರ್ಟಿನ್' ಚಿತ್ರದ ನಿರ್ದೇಶಕ–ನಿರ್ಮಾಪಕರ ನಡುವೆ ಕ್ರೆಡಿಟ್ ವಾರ್
- ಗೋವಾದಲ್ಲಿ ನಿರ್ಮಾಪಕರಿಬ್ಬರ ಗಲಾಟೆ, ಹೊಡೆದಾಟ
- ಚಿತ್ರರಂಗದ ಉಳಿವು ಮತ್ತು ಏಳಿಗೆಗಾಗಿ ಆಗಸ್ಟ್‌ನಲ್ಲಿ ಕಲಾವಿದರ ಸಂಘದಲ್ಲಿ ನಡೆಸಿದ ಹೋಮ ಚರ್ಚೆಗೆ ಗ್ರಾಸವಾಯಿತು
- ಚಿತ್ರರಂಗದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಅಧ್ಯಯನಕ್ಕೆ ಕೇರಳದ ಹೇಮಾ ಸಮಿತಿ ಮಾದರಿಯಲ್ಲಿ ಕರ್ನಾಟಕದಲ್ಲೂ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿ ರಚಿಸಲು ಕೂಗು. ಪಾಶ್ ಸಮಿತಿ ರಚಿಸಿ ಹಿಂದಡಿ ಇಟ್ಟ ಕೆಎಫ್‌ಸಿಸಿ

2025ರ ನಿರೀಕ್ಷಿತ ಸಿನಿಮಾಗಳು

- ರಿಷಬ್ ಶೆಟ್ಟಿ ನಟನೆಯ 'ಕಾಂತಾರ–2': 2025 ಅ.2
- ಯಶ್ ನಟನೆಯ 'ಟಾಕ್ಸಿಕ್': 2025 ಏ.10
- ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ನಟನೆಯ '45'
- ಧ್ರುವ ಸರ್ಜಾ ನಟನೆಯ 'ಕೆಡಿ'
- ರಮೇಶ್–ಗಣೇಶ್ ನಟನೆಯ 'Yours's sincerely ರಾಮ್'
- ಪ್ರಜ್ವಲ್ ದೇವರಾಜ್ ನಟನೆಯ 'ಕರಾವಳಿ'
- ಯುವ ರಾಜ್‌ಕುಮಾರ್ ನಟನೆಯ 'ಎಕ್ಕ': ಜೂನ್ 6
- ಕಿಚ್ಚ ಸುದೀಪ್ ನಟನೆಯ 'ಬಿಲ್ಲಾ ರಂಗ ಬಾಷಾ'
- ಉಪೇಂದ್ರ ನಟನೆಯ 'ಬುದ್ಧಿವಂತ–2'

ನೀ ನಂಗೆ ಅಲ್ಲವಾ ಎಂದ ಕಾಶಿಮಾ



ಕಾಶಿಮಾ

ಮನೋಜ್ ಪಿ.ನಡಲುಮನೆ ನಿರ್ದೇಶನದಲ್ಲಿ ರಾಹುಲ್ ಅರ್ಕಾಟ್ ನಾಯಕನಾಗಿ ನಟಿಸುತ್ತಿರುವ 'ನೀ ನಂಗೆ ಅಲ್ಲವಾ' ಸಿನಿಮಾಗೆ ನಾಯಕಿಯಾಗಿ ಕಾಶಿಮಾ ಆಯ್ಕೆಯಾಗಿದ್ದಾರೆ.

ಈ ಸಿನಿಮಾವನ್ನು ನಟ ಶ್ರೀಮುರಳಿ ಹಾಗೂ ವಿದ್ಯಾ ಶ್ರೀಮುರಳಿ ಅವರು ಅರ್ಪಿಸುತ್ತಿದ್ದಾರೆ. ಈ ಹಿಂದೆ ಎಫ್ 3 ಪ್ರೊಡಕ್ಷನ್ಸ್ ಲಾಂಛನದಲ್ಲಿ 'ಮ್ಯಾಟ್ನಿ' ಚಿತ್ರವನ್ನು ನಿರ್ಮಿಸಿದ್ದ ಎಸ್. ಪಾರ್ವತಿ ಗೌಡ, ಪವನ್ ಪರಮಶಿವಂ ಹಾಗೂ ಮನೋಹರ್ ಕಾಂಪಲ್ಲಿ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ರಾಹುಲ್‌ಗೆ ಇದು ಚೊಚ್ಚಲ ಸಿನಿಮಾ. ಚಿತ್ರತಂಡ ಪೋಸ್ಟರ್ ಮೂಲಕ ನಾಯಕಿಯನ್ನು ಪರಿಚಯಿಸಿದೆ. ಸೂರಜ್ ಜೋಯಿಸ್ ಈ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡಿದ್ದು, ನಾಗೇಂದ್ರ ಉಜ್ಜನಿ ಅವರ ಸಂಕಲನ ಈ ಚಿತ್ರಕ್ಕಿದೆ. ಸಂಕ್ರಾಂತಿ ನಂತರ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ.



ಧ್ರುವ ಸರ್ಜಾ, ರೀಷ್ಮಾ ನಾಣಯ್ಯ

ಯುಗಾದಿ ವೇಳೆಗೆ ತೆರೆಗಳಲ್ಲಿ 'ಕೆಡಿ'

2025ರ ನಿರೀಕ್ಷಿತ ಚಿತ್ರಗಳಲ್ಲಿ ಒಂದಾದ ಪ್ರೇಮ್ ನಿರ್ದೇಶನದ, ಧ್ರುವ ಸರ್ಜಾ ನಟನೆಯ 'ಕೆಡಿ' ಯುಗಾದಿ ವೇಳೆಗೆ ತೆರೆಗೆ ಬರುವ ಸಾಧ್ಯತೆ ಇದೆ. ಚಿತ್ರದ ಮೊದಲ ಲಿರಿಕಲ್ ಹಾಡು ಜನಪದ ಶೈಲಿಯ 'ಶಿವ ಶಿವ' ಬಿಡುಗಡೆಯಾಗಿದ್ದು, ಕೈಲಾಶ್ ಖೇರ್ ಹಾಗೂ ಪ್ರೇಮ್ ಧ್ವನಿಯಾಗಿದ್ದಾರೆ.

ಇತ್ತೀಚೆಗೆ ಹಾಡಿನ ಬಿಡುಗಡೆ ಸಮಾರಂಭ ನಡೆಯಿತು. ಈ ವೇಳೆ ಮಾತನಾಡಿದ ಪ್ರೇಮ್, 'ಚಿತ್ರದಲ್ಲಿ ಒಟ್ಟು ಆರು ಹಾಡುಗಳಿದ್ದು, ಪ್ರತಿ ಹಾಡನ್ನು ಅಳೆದು ತೂಗಿ ಹಾಕಿದ್ದೇವೆ. ಈ ಸಿನಿಮಾ ಆಲ್ಬಂಗೇ ಒಂದು ಸಿನಿಮಾ ಮಾಡುವಷ್ಟು ದುಡ್ಡು ಹಾಕಿದ್ದೇವೆ. 'ಕೆಡಿ' ಎಂದರೆ ಕಾಳಿದಾಸ. 'ಶಿವ ಶಿವ' ಹಾಡನ್ನು 5 ಭಾಷೆಯಲ್ಲಿ ಬಿಡುಗಡೆ ಮಾಡಿದ್ದೇವೆ. ಪೂರ್ತಿ ಹಾಡು ಮುಂದೆ ಬಿಡುಗಡೆಯಾಗಲಿದೆ. 1970ರ ಕಾಲಘಟ್ಟದಲ್ಲಿ ನಡೆಯುವ ಕಥೆಯನ್ನು ಈ ಸಿನಿಮಾ ಹೊಂದಿದ್ದು, ಆಗಿನ ಬೆಂಗಳೂರಿನ ವಾತಾವರಣವನ್ನು ಮೋಹನ್ ಬಿ.ಕೆರೆ ಅದ್ಭುತ ಸೆಟ್ ಹಾಕುವ ಮೂಲಕ ಸೃಷ್ಟಿಸಿದ್ದಾರೆ. ಕಾಳಿದಾಸ ಎಷ್ಟು ಮುಗ್ಧನೋ ಅಷ್ಟೇ ರಾ ಆಗಿರುತ್ತಾನೆ. ಆ ಪಾತ್ರವನ್ನು ಧ್ರುವ ಅದ್ಭುತವಾಗಿ ನಿಭಾಯಿಸಿದ್ದಾರೆ. ಇವರನ್ನು ಶಿವಣ್ಣ, ಅಪ್ಪು ಅವರಿಗೆ ಹೋಲಿಸುತ್ತೇನೆ. ಏಕೆಂದರೆ ಅಷ್ಟು ಎನರ್ಜಿ ಅವರಲ್ಲಿದೆ. ಚಲಿಸುವ ಕಾರ್ ಮೇಲೆ ನಿಂತು ಡ್ಯಾನ್ಸ್ ಮಾಡಿದ್ದಾರೆ. ಮುಂಬೈನಲ್ಲಿ ಚಿತ್ರದ ಟೀಸರ್ ಬಿಡುಗಡೆ ಮಾಡುವ ಯೋಚನೆ ಇದೆ' ಎಂದರು.

ಇದೇ ವೇಳೆ ತಮ್ಮ ಮುಂದಿನ ಪ್ರಾಜೆಕ್ಟ್ ಬಗ್ಗೆ ಮಾತನಾಡಿದ ಪ್ರೇಮ್, 'ದರ್ಶನ್ ನನ್ನ ಕುಟುಂಬದ ಸದಸ್ಯ. ನಾವಿಬ್ಬರೂ ಅಣ್ಣತಮ್ಮಂದಿರು. ಅವರ ಜೊತೆ ಈಗಾಗಲೇ ಘೋಷಿಸಿದ ಸಿನಿಮಾವನ್ನು ಖಂಡಿತವಾಗಿಯೂ ಮಾಡುತ್ತೇನೆ. ಸದ್ಯಕ್ಕೆ 'ಕೆಡಿ' ಚಿತ್ರೀಕರಣ ನಡೆಯುತ್ತಿದೆ. ಅದಾದ ಬಳಿಕ ಆ ಸಿನಿಮಾ ಕೈಗೆತ್ತಿಕೊಳ್ಳುತ್ತೇನೆ. ದರ್ಶನ್ ಅವರು ಆರೋಗ್ಯವಾಗಿದ್ದರೆ ಈ ಹಾಡು ಬಿಡುಗಡೆ ಕಾರ್ಯಕ್ರಮಕ್ಕೆ ಕರೆಯುತ್ತಿದ್ದೆ' ಎಂದರು.

'ಏಕ್ ಲವ್ ಯಾ' ಸಿನಿಮಾ ನಂತರ ಪ್ರೇಮ್ ನಿರ್ದೇಶನದ ಪ್ಯಾನ್ ಇಂಡಿಯಾ ಚಿತ್ರ ಇದಾಗಿದ್ದು, ಚಿತ್ರವನ್ನು ಕೆ.ವಿ.ಎನ್. ಪ್ರೊಡಕ್ಷನ್ಸ್ ನಿರ್ಮಿಸುತ್ತಿದೆ. 'ಕೆಡಿ' ಮಾತಿನ ಭಾಗದ ಚಿತ್ರೀಕರಣ ಮುಗಿದು, ಎರಡು ಹಾಡುಗಳ ಶೂಟಿಂಗ್ ಮಾತ್ರವೇ ಬಾಕಿ ಇದೆ. 20 ಎಕರೆ ಪ್ರದೇಶದಲ್ಲಿ ಪುರಭವನ, ಕೆ.ಆರ್.ಮಾರ್ಕೆಟ್, ಮೈಸೂರು ಬ್ಯಾಂಕ್, ಧರ್ಮರಾಯ ದೇವಸ್ಥಾನ, ಶಿವಾಜಿ ಟಾಕೀಸ್ ಸೆಟ್ ಹಾಕಿ ಚಿತ್ರದ ಬಹುತೇಕ ಭಾಗ ಚಿತ್ರೀಕರಣಗೊಂಡಿದೆ. ರೀಷ್ಮಾ ನಾಣಯ್ಯ ನಾಯಕಿಯಾಗಿ ನಟಿಸಿದ್ದಾರೆ. ಚಿತ್ರದ ತಾರಾಬಳಗದಲ್ಲಿ ಬಾಲಿವುಡ್‌ನ ಸಂಜಯ್ ದತ್, ಶಿಲ್ಪಾ ಶೆಟ್ಟಿ, ರವಿಚಂದ್ರನ್, ರಮೇಶ್ ಅರವಿಂದ್ ಮತ್ತಿತರರು ಇದ್ದಾರೆ.

ಮನದ ಕಡಲಿನಲ್ಲಿ 'ಹೂ ದುಂಬಿ'


ಮುಂದಿನ ಭಾನುವಾರ ಎಂದರೆ ಡಿ.29ಕ್ಕೆ ಯೋಗರಾಜ್ ಭಟ್ ನಿರ್ದೇಶನದ 'ಮುಂಗಾರು ಮಳೆ' ಸಿನಿಮಾ ಬಿಡುಗಡೆಯಾಗಿ 18 ವರ್ಷವಾಗಲಿದೆ. ಅದೇ ದಿನದಂದು ಯೋಗರಾಜ್ ಭಟ್ ನಿರ್ದೇಶನದ ಹೊಸ ಚಿತ್ರ 'ಮನದ ಕಡಲು' ಸಿನಿಮಾದ ಮೊದಲ ಹಾಡು ಬಿಡುಗಡೆಯಾಗಲಿದೆ.

'ಮುಂಗಾರು ಮಳೆ' ಚಿತ್ರವನ್ನು ನಿರ್ಮಾಣ ಮಾಡಿದ್ದ ಇ.ಕೃಷ್ಣಪ್ಪ ಅವರೇ 'ಮನದ ಕಡಲು' ಸಿನಿಮಾವನ್ನು ನಿರ್ಮಾಣ ಮಾಡಿದ್ದು, ಇದು ಯೋಗರಾಜ್ ಭಟ್ ಅವರ ಹದಿನಾರನೇ ಸಿನಿಮಾ. ಚಿತ್ರದ ಮೊದಲ ಹಾಡು 'ಹೂ ದುಂಬಿ'ಗೆ ಯೋಗರಾಜ್ ಭಟ್ ಸಾಹಿತ್ಯವಿದ್ದು, ವಿ.ಹರಿಕೃಷ್ಣ ಸಂಗೀತ ನೀಡಿದ್ದಾರೆ. ಸಂಜಿತ್ ಹೆಗಡೆ ಧ್ವನಿಯಾಗಿದ್ದಾರೆ. ಚಿತ್ರದಲ್ಲಿ ನಾಯಕನಾಗಿ ಸುಮುಖ ನಟಿಸಿದ್ದು, ನಾಯಕಿಯರಾಗಿ ರಾಶಿಕಾ ಶೆಟ್ಟಿ ಹಾಗೂ ಅಂಜಲಿ ಅನೀಶ್ ಬಣ್ಣಹಚ್ಚಿದ್ದಾರೆ. ದತ್ತಣ್ಣ, ರಂಗಾಯಣ ರಘು, ಶಿವಧ್ವಜ್ ತಾರಾಬಳಗದಲ್ಲಿದ್ದಾರೆ.

ಚಿತ್ರದಲ್ಲಿ ಆದಿವಾಸಿಗಳ ನಾಯಕನಾಗಿ ರಂಗಾಯಣ ರಘು ನಟಿಸಿದ್ದಾರೆ. ಕರ್ನಾಟಕ, ಮಹಾರಾಷ್ಟ್ರದ ಜಿಲ್ಲೆಗಳಲ್ಲಿ ಚಿತ್ರದ ಚಿತ್ರೀಕರಣ ನಡೆದಿದೆ. ಮೊದಲ ಬಾರಿ ಮಹಾರಾಷ್ಟ್ರದ ಮುರುಡ್ ಜಂಜೀರ ಎಂಬ ಸಮುದ್ರದ ಮಧ್ಯದ ಕೋಟೆಯಲ್ಲಿ ಶೂಟಿಂಗ್ ನಡೆಸಲಾಗಿದೆ. ಚಿತ್ರಕ್ಕೆ ಸಂತೋಷ್ ರೈ ಪಾತಾಜೆ ಛಾಯಾಚಿತ್ರಗ್ರಹಣವಿದೆ. ಜಯಂತ ಕಾಯ್ಕಿಣಿ ಎರಡು ಹಾಡುಗಳನ್ನು ಬರೆದಿದ್ದಾರೆ.



ರಾಶಿಕಾ, ಸುಮುಖ, ಅಂಜಲಿ



ಪೃಥ್ವಿ, ಧನ್ಯಾ

'ಚೌಕಿದಾರ್' ಚಿತ್ರೀಕರಣ ಪೂರ್ಣ

'ದಿಯಾ' ಖ್ಯಾತಿಯ ಪೃಥ್ವಿ ಅಂಬಾರ್ ಹಾಗೂ ಧನ್ಯಾ ರಾಮ್‌ಕುಮಾರ್ ನಟಿಸಿರುವ 'ಚೌಕಿದಾರ್' ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದೆ. ಈ ಚಿತ್ರಕ್ಕೆ 'ರಥಾವರ' ಸಿನಿಮಾ ನಿರ್ದೇಶಿಸಿದ್ದ ಚಂದ್ರಶೇಖರ್ ಬಂಡಿಯಪ್ಪ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಮೇ ತಿಂಗಳಲ್ಲಿ ಸಿನಿಮಾ ಬಿಡುಗಡೆ ಮಾಡುವ ಯೋಚನೆಯಲ್ಲಿದ್ದೇವೆ. ಸಂಕ್ರಾಂತಿಗೆ ಚಿತ್ರದ ಟೀಸರ್ ಬಿಡುಗಡೆಯಾಗಲಿದೆ. ಪ್ರತಿಯೊಬ್ಬರ ಮನೆಯಲ್ಲಿಯೂ ಚೌಕಿದಾರ್ ಇರುತ್ತಾರೆ. ಅವರ ಕಥೆಯನ್ನು ನಾವು ಇಲ್ಲಿ ಹೇಳಿದ್ದೇವೆ. ಗ್ರಾಮಾಂತರ ಪ್ರದೇಶದಿಂದಲೇ ಚಿತ್ರ ಶುರುವಾಗುತ್ತದೆ. ಸಾಯಿಕುಮಾರ್ ಹಾಗೂ ಪೃಥ್ವಿ ತಂದೆ ಮಗನಾಗಿ ಈ ಸಿನಿಮಾದಲ್ಲಿ ನಟಿಸಿದ್ದಾರೆ. ಕನ್ನಡ, ತೆಲುಗು, ತಮಿಳು ಹಾಗೂ ಮಲಯಾಳದಲ್ಲಿ ಚಿತ್ರ ಏಕಕಾಲದಲ್ಲಿ ಬಿಡುಗಡೆಯಾಗಲಿದೆ' ಎಂದು ತಿಳಿಸಿದರು ಚಂದ್ರಶೇಖರ್.

ಈ ಸಿನಿಮಾ ಕೌಟುಂಬಿಕ ಭಾವನಾತ್ಮಕ ಕಥೆಯನ್ನು ಹೊಂದಿದೆ. ಶ್ವೇತಾ, ಸುಧಾರಾಣಿ, ಧರ್ಮ ಸೇರಿದಂತೆ ಹಲವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಸಿನಿಮಾವನ್ನು ಕಲ್ಲಹಳ್ಳಿ ಚಂದ್ರಶೇಖರ್ ನಿರ್ಮಾಣ ಮಾಡುತ್ತಿದ್ದು, ಸಚಿನ್ ಬಸ್ರೂರು ಸಂಗೀತ, ವಿ. ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ, ಸಂತೋಷ್ ನಾಯಕ್ ಸಾಹಿತ್ಯ ಬರೆದಿದ್ದಾರೆ.

ಸೇನಾ ವಾಹನವು ಕಂದಕಕ್ಕೆ ಉರುಳಿ ಸಂಭವಿಸಿದ್ದ ಅಪಘಾತದಲ್ಲಿ ಸಾವು

ಯೋಧರಿಗೆ ಸಿ.ಎಂ ಅಂತಿಮ ನಮನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಮಂಗಳವಾರ ಸೇನಾ ವಾಹನವು ಕಂದಕಕ್ಕೆ ಉರುಳಿ ಸಂಭವಿಸಿದ್ದ ಅಪಘಾತದಲ್ಲಿ ಮೃತಪಟ್ಟ ಇಬ್ಬರು ಯೋಧರಿಗೆ, ಇಲ್ಲಿನ ಮರಾಠಾ ಲಘು ಪದಾತಿ ದಳ ಕೇಂದ್ರದಲ್ಲಿ (ಎಂಎಲ್ಐಆರ್‌ಸಿ) ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಅಂತಿಮ ನಮನ ಸಲ್ಲಿಸಿದರು.

ತಾಲ್ಲೂಕಿನ ಸಾಂಬ್ರಾ ಗ್ರಾಮದ ಸುಬೇದಾರ್ ದಯಾನಂದ ತಿರಕಣ್ಣವರ (45), ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರ ಪಟ್ಟಣದ ಕೆಂಗೇರಿಮಡ್ಡಿಯ ಮಹೇಶ ನಾಗಪ್ಪ ಮರಿಗೊಂಡ(25) ಅವರಿಗೆ ಪುಷ್ಪ ನಮನದ ಮೂಲಕ ಗೌರವ ಸಲ್ಲಿಸಿದರು. ಮೃತ ಯೋಧರ ಕುಟುಂಬದವರಿಗೆ ಸಾಂತ್ವನ ಹೇಳಿದರು. ಸಚಿವರಾದ ಎಚ್.ಸಿ.ಮಹದೇವಪ್ಪ, ಲಕ್ಷ್ಮೀ ಹೆಬ್ಬಾಳಕರ, ಸರ್ಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ ಮತ್ತಿತರರು ಇದ್ದರು.

ಇದಕ್ಕೂ ಮುನ್ನ, ಮಹಾರಾಷ್ಟ್ರದ ಸಾತಾರಾದ ಯೋಧ ಶುಭಂ ಘಾಡಗೆ ಅವರ ಪಾರ್ಥಿವ ಶರೀರಕ್ಕೆ ಸೇನಾಧಿಕಾರಿಗಳು ಗೌರವ ಸಲ್ಲಿಸಿದರು. ನಂತರ ಸೇನೆಯ ಅಲಂಕೃತ ವಾಹನಗಳಲ್ಲಿ ಎಲ್ಲ ಯೋಧರ ಪಾರ್ಥಿವ ಶರೀರಗಳನ್ನು ಅವರ ಗ್ರಾಮಗಳಿಗೆ ಕಳುಹಿಸಲಾಯಿತು. ಅಲ್ಲಿ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನೆರವೇರಿತು.

ಭಾವ ಪೂರ್ಣ ವಿದಾಯ (ಉಡುಪಿ ವರದಿ): ಅಪಘಾತದಲ್ಲಿ ಮೃತಪಟ್ಟ ಯೋಧ ಹವಾಲ್ದಾರ್ ಅನೂಪ್ ಪೂಜಾರಿ ಅವರ ಅಂತ್ಯಸಂಸ್ಕಾರ ಕುಂದಾಪುರ ತಾಲ್ಲೂಕಿನ ಬೀಜಾಡಿಯಲ್ಲಿ ಗುರುವಾರ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು.

ಪಾರ್ಥಿವ ಶರೀರವನ್ನು ಅನೂಪ್ ಅವರ ಮನೆಗೆ ತಂದಾಗ ಪತ್ನಿ, ತಾಯಿ ಹಾಗೂ ಕುಟುಂಬದವರ ರೋದನ ಮುಗಿಲು ಮುಟ್ಟಿತ್ತು.

ಹೆಚ್ಚುವರಿ ಜಿಲ್ಲಾಧಿಕಾರಿ ಮಮತಾ ದೇವಿ ಜಿ.ಎಸ್ ಹಾಗೂ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಸ್.ಟಿ ಸಿದ್ದಲಿಂಗಪ್ಪ ಅವರ ನೇತೃತ್ವದಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಪೊಲೀಸರು ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ ಗೌರವ ನಮನ ಸಲ್ಲಿಸಿದರು. ಅಂತ್ಯಕ್ರಿಯೆ ವೇಳೆ ಸೇನೆಯ ಯೋಧರು ಗೌರವಾರ್ಥವಾಗಿ ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿದರು.

ಅನೂಪ್ ಪೂಜಾರಿ ಅವರ ಪತ್ನಿ ಮಂಜುಶ್ರೀ ಅವರಿಗೆ ರಾಷ್ಟ್ರಧ್ವಜ ಹಸ್ತಾಂತರಿಸಲಾಯಿತು.



ಬೆಳಗಾವಿಯ ಮರಾಠ ಲಘುಪದಾತಿ ದಳ ಕೇಂದ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೃತ ಯೋಧರಿಗೆ ಅಂತಿಮ ನಮನ ಸಲ್ಲಿಸಿದರು

ಪರಿಹಾರ

‘ಸೈನಿಕರ ಬದುಕು ಮತ್ತು ವೃತ್ತಿ ಉನ್ನತವಾದದ್ದು. ನಮ್ಮ ರಾಜ್ಯದ ಯೋಧರು ಅಪಘಾತದಲ್ಲಿ ಮೃತಪಟ್ಟಿರುವುದು ನೋವಿನ ವಿಚಾರ. ಸರ್ಕಾರದಿಂದ ಅವರ ಕುಟುಂಬದವರಿಗೆ ನಿಯಮಾನುಸಾರವಾಗಿ ಪರಿಹಾರ ನೀಡಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಎಂಎಲ್ಐಆರ್ ಸಿಯ ಕಮಾಂಡೆಂಟ್ ಬ್ರಿಗೇಡಿಯರ್ ಜಾಯ್‌ದೀಪ್ ಮುಖರ್ಜಿ, ‘ಜಮ್ಮು ಮತ್ತು ಕಾಶ್ಮೀರದ ಪೂಂಛ್‌ನಲ್ಲಿ ನಡೆದ ಅಪಘಾತದಲ್ಲಿ ಐವರು ಸೈನಿಕರನ್ನು ಕಳೆದುಕೊಂಡಿದ್ದೇವೆ. ನಾವು ಸೈನಿಕರ ಕುಟುಂಬದವರ ನೆರವಿಗೆ ಬರುತ್ತೇವೆ. ನಿಯಮಾನುಸಾರ ಅವರಿಗೆ ಎಲ್ಲ ಸೌಲಭ್ಯ ಒದಗಿಸುತ್ತೇವೆ. ಜತೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಸರ್ಕಾರದಿಂದ ನೆರವಾಗುವುದಾಗಿ ಭರವಸೆ ನೀಡಿದ್ದಾರೆ’ ಎಂದರು.

ಹೊಸಪೇಟೆ, ಬೆಳಗಾವಿ: ಇಬ್ಬರು ಬಾಣಂತಿಯರ ಸಾವು

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಇಲ್ಲಿನ ತಾಯಿ ಮತ್ತು ಮಗು ಆಸ್ಪತ್ರೆಯಲ್ಲಿ (ಎಂಸಿಎಚ್) ಡಿ.20ರಂದು ಸಿಸೇರಿಯನ್ ಮೂಲಕ ಹೆಣ್ಣು ಮಗುವನ್ನು ಹೆತ್ತಿದ್ದ ಐಶ್ವರ್ಯಾ (20) ಎಂಬುವವರು ಕೊಪ್ಪಳದ ಜಿಲ್ಲಾ ಆಸ್ಪತ್ರೆಯಲ್ಲಿ ಗುರುವಾರ ಮೃತಪಟ್ಟಿದ್ದಾರೆ.

‘ಸಂಡೂರಿನಲ್ಲಿ ವಾಸವಿದ್ದ ಐಶ್ವರ್ಯಾ ಅವರ ತವರು ಮನೆ ತಾಲ್ಲೂಕಿನ ಇಂಗಳಗಿಯಲ್ಲಿದೆ. ಹೀಗಾಗಿ ಎಂಸಿಎಚ್‌ನಲ್ಲಿ ಅವರಿಗೆ ಹೆರಿಗೆ ಆಗಿದೆ. ವಾಂತಿ, ಭೇದಿ ಆಗಿದ್ದ ಕಾರಣ ಅವರನ್ನು 24ರಂದು ಕೊಪ್ಪಳ ಆಸ್ಪತ್ರೆಗೆ ಕಳುಹಿಸಲಾಗಿತ್ತು. ಅಲ್ಲಿ ಗುರುವಾರ ಬೆಳಿಗ್ಗೆ ಅವರು ಮೃತಪಟ್ಟಿದ್ದಾರೆ. ಸಾವಿಗೆ ಏನು ಕಾರಣ ಎಂಬುದನ್ನು ತಿಳಿಯಲಾಗುತ್ತಿದೆ’ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಲ್.ಆರ್.ಶಂಕರ್ ನಾಯ್ಕ್ ‘ಪ್ರಜಾವಾಣಿ’ಗೆ ತಿಳಿಸಿದರು. ‘ಬಾಣಂತಿಗೆ ನಂಜಾಗಿತ್ತು’ ಎಂದಷ್ಟೇ ಕೊಪ್ಪಳ ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಬೆಳಗಾವಿ ವರದಿ: ಇಲ್ಲಿನ ಬಿಮ್ಸ್ ಆಸ್ಪತ್ರೆಯಲ್ಲಿ ಗುರುವಾರ ಹೆರಿಗೆ ಬಳಿಕ ಬಾಣಂತಿ ಸಾವನ್ನಪ್ಪಿದ್ದಾರೆ. ವೈದ್ಯರು ಶಿಶುವನ್ನು ಬದುಕಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪೂಜಾ (25) ಅವರು ಗರ್ಭಧಾರಣೆ ಸಂದರ್ಭದಲ್ಲೇ ಗಂಭೀರ ಕಾಯಿಲೆಯಿಂದ ಬಳಲುತ್ತಿದ್ದರು. ಡಿ.24ರಂದು ಅವರನ್ನು ಹೆರಿಗೆಗೆ ಜಿಲ್ಲಾಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಆಗ ಅವರ ಮೂಗು ಮತ್ತು ಬಾಯಿಯಲ್ಲಿ ರಕ್ತಸ್ರಾವವಾಗುತ್ತಿತ್ತು. ಇದು ಪೂಜಾ ಅವರ ಐದನೇ ಹೆರಿಗೆಯಾಗಿದ್ದರಿಂದ ಅವರು ಇನ್ನಷ್ಟು ನಿತ್ರಾಣರಾಗಿದ್ದರು.

ಪರಿಹಾರ ₹ 5 ಲಕ್ಷ: ಆಸ್ಪತ್ರೆಗೆ ಧಾವಿಸಿ ಬಂದ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ಮೃತರ ಕುಟುಂಬ ಸದಸ್ಯರನ್ನು ಸಂತೈಸಿದರು. ಸಿ.ಎಂ ಪರಿಹಾರ ನಿಧಿಯಿಂದ ತಲಾ ₹ 5 ಲಕ್ಷ ಪರಿಹಾರ ನೀಡಲಾಗುವುದು’ ಎಂದು ಘೋಷಿಸಿದರು.

ಇಬ್ಬರು ಮಾಲಾಧಾರಿಗಳ ಸಾವು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದ ಅಯ್ಯಪ್ಪಸ್ವಾಮಿ ಸನ್ನಿಧಾನದಲ್ಲಿ ಸಂಭವಿಸಿದ ಗ್ಯಾಸ್ ಸಿಲಿಂಡರ್ ಸ್ಫೋಟ ಪ್ರಕರಣದಲ್ಲಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಅಯ್ಯಪ್ಪಸ್ವಾಮಿ ಮಾಲಾಧಾರಿಗಳಾಗಿದ್ದ ಒಂಬತ್ತು ಮಂದಿ ಪೈಕಿ ಇಬ್ಬರು ಗುರುವಾರ ಬೆಳಿಗ್ಗೆ ಸಾವಿಗೀಡಾದರು.

ಇಂಗಳಹಳ್ಳಿಯ ನಿಜಲಿಂಗಪ್ಪ ಬೇಪುರಿ (58) ಹಾಗೂ ಸಂಜಯ ಸವದತ್ತಿ (18) ಮೃತರು.

ಇಲ್ಲಿನ ಉಣಕಲ್ ಸಾಯಿ ನಗರ ಬಳಿ ಈಶ್ವರ ದೇವಸ್ಥಾನದಲ್ಲಿ ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳು ವಾಸ್ತವ್ಯ ಹೂಡಿದ್ದರು. ಭಾನುವಾರ ಮಧ್ಯರಾತ್ರಿ ಸಿಲಿಂಡರ್ ಸೋರಿಕೆಯಾಗಿ, ಸ್ಫೋಟ ಸಂಭವಿಸಿತ್ತು. ಘಟನೆಯಲ್ಲಿ ಬಾಲಕ ಸೇರಿದಂತೆ ಒಂಬತ್ತು ಜನರು ತೀವ್ರವಾಗಿ ಗಾಯಗೊಂಡಿದ್ದರು. ಇವರನ್ನು ಕೆಎಂಸಿ ಆರ್‌ಐ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ.

ಸಿಐಡಿ ತನಿಖೆ, ಎಫ್‌ಎಸ್‌ಎಲ್ ಬಗ್ಗೆ ಸಿ.ಟಿ.ರವಿ ಅನುಮಾನ

ಚಿಕ್ಕಮಗಳೂರು: ‘ವಿಧಾನ ಪರಿಷತ್‌ನಲ್ಲಿ ನಡೆದ ಘಟನೆ ತನಿಖೆ ನಡೆಸುತ್ತಿರುವ ಸಿಐಡಿ ಮತ್ತು ಎಫ್‌ಎಸ್‌ಎಲ್ ವರದಿ ಮೇಲೂ ಕಾಣದ ಕೈಗಳು ಕೆಲಸ ಮಾಡುವ ಸಾಧ್ಯತೆ ಇದೆ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

‘ನನ್ನ ಮೇಲೆ ಪ್ರಕರಣ ದಾಖಲಿಸಿ ಬಂಧಿಸಲು ಒಬ್ಬ ಮಂತ್ರಿ ಕಾರಣರಾಗಿದ್ದಾರೆ. ಹೀಗಿರುವಾಗ ಸಿಐಡಿ ನಿಷ್ಪಕ್ಷಪಾತ ತನಿಖೆ ಹೇಗೆ ನಡೆಸುತ್ತದೆ. ಹಾಗಾಗಿಯೇ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆಯಾಗಬೇಕು. ಇಲ್ಲವೇ ಸಿಬಿಐ ತನಿಖೆ ನಡೆಯಬೇಕು’ ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಸತ್ತ ಮೇಲೆ ಮಲಗೋದು ಇದ್ದೇ ಇದೆ. ಎದ್ದಿದ್ದಾಗ ಏನನ್ನಾದರೂ ಸಾಧಿಸು.

-ಶಂಕರ್‌ನಾಗ್

ದೇಶದ ಅರಣ್ಯ ಸ್ಥಿತಿಗತಿ: ಅಂಕಿಅಂಶದಡಿ ವಸ್ತುಸ್ಥಿತಿ ಮರೆಮಾಚಿದರೆ ಪ್ರಯೋಜನ ಇಲ್ಲ

ಭಾರತದ ಅರಣ್ಯ ಸ್ಥಿತಿಗತಿಯ ವಾರ್ಷಿಕ ವರದಿ (ಐಎಸ್‌ಎಫ್‌ಆರ್) ಈಚೆಗೆ ಬಿಡುಗಡೆಯಾಗಿದೆ. ಅದರಲ್ಲಿರುವ ಅಂಶಗಳು ಸಂಭ್ರಮಕ್ಕೆ ಅಲ್ಲ, ಕಳವಳಕ್ಕೆ ಕಾರಣವಾಗಿವೆ. ದೇಶದ ಒಟ್ಟು ಭೂಭಾಗದ ಶೇಕಡ 25ರಷ್ಟು ಪ್ರದೇಶವು ಅರಣ್ಯದಿಂದ ಆವೃತವಾಗಿದೆ, ಒಂದು ವರ್ಷದಲ್ಲಿ 1,445 ಚದರ ಕಿಲೊಮೀಟರ್ ಅರಣ್ಯ ಹೆಚ್ಚಳವಾಗಿದೆ ಎಂದು ವರದಿಯಲ್ಲಿ ಇದೆ. ಅರಣ್ಯ ಪ್ರದೇಶ ಹೆಚ್ಚಳವಾಗಿರುವುದು ಸ್ವಾಗತಾರ್ಹ. ಆದರೆ, ಅರಣ್ಯದ ವ್ಯಾಖ್ಯಾನವನ್ನು ಬದಲಾಯಿಸಿದ್ದರಿಂದಾಗಿಯೇ ಅರಣ್ಯ ಪ್ರದೇಶ ಹೆಚ್ಚಳವಾಗಿದೆ. ಹಾಗಾಗಿ, ಈ ಹೆಚ್ಚಳ ವಾಸ್ತವಿಕವೇನೂ ಅಲ್ಲ. ಒಂದು ಹೆಕ್ಟೇರ್ ಪ್ರದೇಶದ ಶೇ 10ರಷ್ಟು ಭಾಗದಲ್ಲಿ ಮರಗಳಿದ್ದರೆ ಆ ಇಡೀ ಪ್ರದೇಶವನ್ನು ಅರಣ್ಯ ಎಂದು ದಿ ಫಾರೆಸ್ಟ್ ಸರ್ವೆ ಆಫ್ ಇಂಡಿಯಾ (ಎಫ್‌ಎಸ್‌ಐ) ವ್ಯಾಖ್ಯಾನಿಸುತ್ತದೆ. ಇದು ಬಹಳ ಉದಾರವಾದ ವ್ಯಾಖ್ಯಾನ. ಈ ವ್ಯಾಖ್ಯಾನದಿಂದಾಗಿ ತೋಟಗಳು ಕೂಡ ಅರಣ್ಯ ಎಂದು ಪರಿಗಣಿತವಾಗುತ್ತವೆ. ಒಂದು ಹೆಕ್ಟೇರ್‌ಗಿಂತ ಕಡಿಮೆ ಪ್ರದೇಶದಲ್ಲಿ ಮರಗಳಿದ್ದರೆ ಕೂಡ ಆ ಇಡೀ ಪ್ರದೇಶವನ್ನು ಮರಗಳಿರುವ ಪ್ರದೇಶ ಎಂದು ಪರಿಗಣಿಸಲಾಗಿದೆ. ಬಿದಿರು ಮೆಳೆಗಳನ್ನು ಸಹ ಮರಗಳಿರುವ ಪ್ರದೇಶ ಎಂದು ವರ್ಗೀಕರಿಸಲಾಗಿದೆ.



ಅರಣ್ಯದ ಪರಿಸ್ಥಿತಿಯು ಎಲ್ಲರ ಚಿಂತೆಗೆ ಕಾರಣವಾಗುವ ರೀತಿಯಲ್ಲಿ ಇದೆ

ತೋಟಗಳನ್ನು ಅರಣ್ಯ ಎಂದು ಪರಿಗಣಿಸುವುದು ವಿವಾದಾತ್ಮಕವಾಗಿದೆ. ಏಕೆಂದರೆ, ತೋಟಗಳಲ್ಲಿ ಒಣಮರಗಳು ಇರುವುದಿಲ್ಲ ಮತ್ತು ನಿಜವಾದ ಅರಣ್ಯದ ವೈವಿಧ್ಯ ಕೂಡ ಅಲ್ಲಿ ಕಾಣಸಿಗುವುದಿಲ್ಲ. ಹಾಗಾಗಿ, ವರದಿಯಲ್ಲಿ ಹೇಳಿರುವ ಪ್ರದೇಶಗಳೆಲ್ಲವೂ ಅರಣ್ಯ ಅಲ್ಲ. ಅರಣ್ಯ ಪ್ರದೇಶ ಹೆಚ್ಚಳವಾಗಿದೆ ಎಂಬುದು ಕೂಡ ನಿಜವಲ್ಲ. ಪ್ಯಾರಿಸ್ ಹವಾಮಾನ ಒಪ್ಪಂದದ ಅನ್ವಯ ಇಂಗಾಲ ಹೀರುವಿಕೆಗೆ ಮಾಡಬೇಕಿದ್ದ ಹೆಚ್ಚುವರಿ ವ್ಯವಸ್ಥೆ ಸೃಷ್ಟಿಯ ಬದ್ಧತೆಯನ್ನು ಈಡೇರಿಸಲಾಗಿದೆ ಎಂಬುದನ್ನು ತೋರಿಸುವುದಕ್ಕಾಗಿ ಅರಣ್ಯ ಹೆಚ್ಚಳವಾಗಿದೆ ಎಂದು ಉತ್ಪ್ರೇಕ್ಷೆ ಮಾಡಿರಬಹುದು. ಆದರೆ, ಹವಾಮಾನ ಬದಲಾವಣೆ ನಿಗ್ರಹದ ಪ್ರಯತ್ನಕ್ಕೆ ಇದರಿಂದ ಸಿಗುವ ಪ್ರಯೋಜನವಾದರೂ ಏನು?

ದೇಶದ ಹಲವು ಭಾಗಗಳಲ್ಲಿ ಅರಣ್ಯ ಪ್ರದೇಶದ ವಿಸ್ತಾರವು ಕುಗ್ಗಿದೆ ಎಂಬುದರತ್ತ ವರದಿಯು ಬೆಳಕು ಚೆಲ್ಲಿದೆ. ಕಾಳ್ಗಿಚ್ಚು ಹೆಚ್ಚಳ, ಅರಣ್ಯೇತರ ಉದ್ದೇಶಕ್ಕೆ ಅರಣ್ಯಗಳ ಬಳಕೆಯಿಂದಾಗಿ ಇಂಗಾಲ ಹೀರುವಿಕೆಯ ಪ್ರಮಾಣವು ಕಡಿಮೆಯಾಗಿದೆ. ಪಶ್ಚಿಮ ಘಟ್ಟಗಳು ಮತ್ತು ಈಶಾನ್ಯ ಭಾರತದಲ್ಲಿ ಅರಣ್ಯ ಪ್ರದೇಶವು ಭಾರಿ ಪ್ರಮಾಣದಲ್ಲಿ ಕುಗ್ಗಿದೆ. ಕರ್ನಾಟಕದಲ್ಲಿ ಕಳೆದ ಎರಡು ವರ್ಷಗಳಲ್ಲಿ 459 ಚದರ ಕಿ.ಮೀ. ಅರಣ್ಯ ನಾಶವಾಗಿದೆ. ಪಶ್ಚಿಮ ಘಟ್ಟ ಪ್ರದೇಶದಲ್ಲಿನ ಶಿವಮೊಗ್ಗ ಜಿಲ್ಲೆಯಲ್ಲಿ ಅತಿ ಹೆಚ್ಚು ಅರಣ್ಯ ನಾಶವಾಗಿದೆ. ಜೀವವೈವಿಧ್ಯ ಸಮೃದ್ಧ ತಾಣವಾದ ಪಶ್ಚಿಮ ಘಟ್ಟಗಳಲ್ಲಿ ನಾಶವಾದ ಅರಣ್ಯದ ಮರುಸೃಷ್ಟಿ ಅಸಾಧ್ಯ. ತೋಟಗಳನ್ನು ಅರಣ್ಯ ಎಂದು ಕರೆದರೂ ಅವು ಅರಣ್ಯಕ್ಕೆ ಪರ್ಯಾಯವಾಗುವುದು ಸಾಧ್ಯವಿಲ್ಲ. ವಿಸ್ತಾರವಾದ ಮತ್ತು ಜೀವವೈವಿಧ್ಯ ಸಮೃದ್ಧವಾದ ಅರಣ್ಯ ಪ್ರದೇಶಗಳಿಗೆ ಹೆಸರಾಗಿದ್ದ ಈಶಾನ್ಯ ರಾಜ್ಯಗಳಲ್ಲಿಯೂ ಭಾರಿ ಪ್ರಮಾಣದಲ್ಲಿ ಅರಣ್ಯ ನಾಶವಾಗಿದೆ. ಒತ್ತುವರಿ, ರಬ್ಬರ್ ಮತ್ತು ತಾಳೆ ತೋಟಗಳು, ಮೂಲಸೌಕರ್ಯ ಅಭಿವೃದ್ಧಿಯು ಅರಣ್ಯ ನಾಶಕ್ಕೆ ಮುಖ್ಯ ಕಾರಣಗಳಾಗಿವೆ. ‘ಅರಣ್ಯ ಸಂರಕ್ಷಣೆ ಕಾಯ್ದೆ–1980’ಕ್ಕೆ ಕಳೆದ ವರ್ಷ ತಂದ ತಿದ್ದುಪಡಿಯು ಅರಣ್ಯ ನಾಶ ಮತ್ತು ಮರಗಳಿರುವ ಪ್ರದೇಶಗಳಲ್ಲಿನ ಮರಗಳನ್ನು ಕಡಿಯಲು ಅವಕಾಶ ಮಾಡಿಕೊಡುತ್ತದೆ. ಕರಾವಳಿಯಲ್ಲಿ ಇರುವ ಕಾಂಡ್ಲಾ ಕಾಡುಗಳ ವ್ಯಾಪ್ತಿ ಕೂಡ ಕುಗ್ಗುತ್ತಿದೆ. ಹಲವು ಭಾಗಗಳಲ್ಲಿ ಹಸಿರು ಪ್ರದೇಶ ಕಡಿಮೆಯಾಗಿದೆ. ಅರಣ್ಯ ನಾಶದ ಜೊತೆಗೆ, ಮರಗಳ ದಟ್ಟಣೆ ಕಡಿಮೆಯಾಗಿರುವ ಸಮಸ್ಯೆಯೂ ಇದೆ. ಹಲವೆಡೆಗಳಲ್ಲಿ ದಟ್ಟ ಅರಣ್ಯ ಪ್ರದೇಶವು ಕುರುಚಲು ಕಾಡು ಪ್ರದೇಶವಾಗಿ ಮಾರ್ಪಾಟಾಗಿದೆ. ನೈಸರ್ಗಿಕ ಕಾರಣವಾದ ಕಾಳ್ಗಿಚ್ಚು, ಮನುಷ್ಯರಿಂದಾಗುವ ಒತ್ತುವರಿಯು ಅರಣ್ಯಕ್ಕೆ ಅಪಾಯಕಾರಿಯಾಗಿ ಪರಿಣಮಿಸಿವೆ. ವರದಿಯಲ್ಲಿ ವಿವರಿಸಿರುವಂತೆ ವಾಸ್ತವವು ಇಲ್ಲ. ಅರಣ್ಯದ ಪರಿಸ್ಥಿತಿಯು ಎಲ್ಲರ ಚಿಂತೆಗೆ ಕಾರಣವಾಗುವ ರೀತಿಯಲ್ಲಿ ಇದೆ.

ದಿನದ ಟ್ವೀಟ್

ಮೂಲ ಬಹಿರಂಗವಾಗಲಿ



ಕರ್ನಾಟಕದ ವಿಧಾನಸಭಾ ಸದಸ್ಯರ ಒಟ್ಟು ಆಸ್ತಿ 2024- 25ರ ಬಿಬಿಎಂಪಿ ಬಜೆಟ್‌ಗಿಂತ ಹೆಚ್ಚು! ಶ್ರೀಮಂತರಾಗುವುದರಲ್ಲಿ ತಪ್ಪೇನಿಲ್ಲ. ಆದರೆ ಸಂಪತ್ತಿನ ಮೂಲ ಮತ್ತು ಹಣವನ್ನು ಯಾವುದಕ್ಕಾಗಿ ಬಳಸಲಾಗಿದೆ ಎಂಬುದು ನಮ್ಮ ಪ್ರಜಾಪ್ರಭುತ್ವದ ಗುಣಮಟ್ಟವನ್ನು ನಿರ್ಧರಿಸುತ್ತದೆ.
#BBMP #Democracy #Karnataka

ಕವಿತಾ ರೆಡ್ಡಿ

ಕಿಡಿನುಡಿ



ಆಸ್ಪತ್ರೆಗಳಲ್ಲಿ ವೈದ್ಯರು, ನರ್ಸ್‌ಗಳಿಲ್ಲದೆ, ಗುಣಮಟ್ಟದ ಚಿಕಿತ್ಸೆಯಿಲ್ಲದೆ ಬಾಣಂತಿಯರು, ಮಕ್ಕಳು ಸಾಯುತ್ತಿದ್ದಾರೆ. ಲಕ್ಷಾಂತರ ಹುದ್ದೆಗಳು ಖಾಲಿ ಬಿದ್ದಿರುವಾಗ ಆಡಳಿತ ಹೇಗೆ ಉತ್ತಮವಾಗಿರುತ್ತದೆ?

ಎಚ್‌.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಸೋಮವಾರ, 27-12-1999

- **ಅಪಹೃತರ ರಕ್ಷಣಾ ಕಾರ್ಯಾಚರಣೆಗೆ ತಾಲಿಬಾನ್ ನಕಾರ**

ಕಂದಹಾರ್, ಡಿ. 26 (ಪಿಟಿಐ, ಯುಎನ್‌ಐ)– ವಿಶ್ವಸಂಸ್ಥೆ ಹಾಗೂ ಭಾರತ ಸರ್ಕಾರ ವಿಮಾನ ಅಪಹರಣ ಬಿಕ್ಕಟ್ಟು ಪರಿಹರಿಸಲು ತಕ್ಷಣ ಕ್ರಮ ಕೈಗೊಳ್ಳದಿದ್ದಲ್ಲಿ ಅಪಹೃತ ವಿಮಾನ ದೇಶ ತೊರೆಯುವಂತೆ ತಾನು ಆದೇಶ ನೀಡಬೇಕಾಗುತ್ತದೆ ಎಂದು ಅಫ್ಘಾನಿಸ್ತಾನದ ತಾಲಿಬಾನ್ ಸರ್ಕಾರ ಇಂದು ರಾತ್ರಿ ಎಚ್ಚರಿಕೆ ನೀಡಿತು.

‘ಸಮಸ್ಯೆಯನ್ನು ಇತ್ಯರ್ಥಗೊಳಿಸಲು ಭಾರತ ಬಹಳ ನಿಧಾನ ತಂತ್ರವನ್ನು ಅನುಸರಿಸುತ್ತಿದೆ. ಹೆಚ್ಚು ಸಮಯ ಈ ವಿಮಾನವನ್ನು ನಾವು ಇಟ್ಟುಕೊಳ್ಳಲು ಸಾಧ್ಯವಿಲ್ಲ. ವಿಮಾನಕ್ಕೆ ಇಂಧನ ತುಂಬಿಸಲಾಗುತ್ತಿದ್ದು, ಯಾವುದೇ ಗಳಿಗೆಯಲ್ಲಾದರೂ ದೇಶ ಬಿಡಲು ವಿಮಾನವನ್ನು ಬಲವಂತ ಮಾಡಬಹುದು’ ಎಂದು ವಿದೇಶಾಂಗ ಸಚಿವ ಮುತ್ತಾವಕೀಲ್ ತಿಳಿಸಿದರು.

- **ಪಾಕ್ ಮೂಲಕ ಕಠ್ಮಂಡು ತಲುಪಿದ ಅಪಹರಣಕಾರರು?**

ಕಠ್ಮಂಡು, ಡಿ. 26 (ಪಿಟಿಐ)– ಇಂಡಿಯನ್ ಏರ್‌ಲೈನ್ಸ್ ವಿಮಾನವನ್ನು ಅಪಹರಿಸಿದ ಐವರು ಸಶಸ್ತ್ರ ಅಪಹರಣಕಾರರ ಪೈಕಿ ನಾಲ್ಕು ಮಂದಿ ಪಾಕಿಸ್ತಾನ್ ಇಂಟರ್‌ನ್ಯಾಷನಲ್ ಏರ್‌ಲೈನ್ಸ್ ಮೂಲಕ ಕಠ್ಮಂಡುವಿನ ತ್ರಿಭುವನ್ ವಿಮಾನ ನಿಲ್ದಾಣ ತಲುಪಿದ್ದುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಭದ್ರತೆಯ ಭಾರಿ ಲೋಪ ಎಂದು ವರ್ಣಿಸಲಾಗುತ್ತಿರುವ ಈ ಘಟನೆಯಲ್ಲಿ ಪಾಕಿಸ್ತಾನದ ವಿಮಾನದಿಂದ ಕೆಳಗಿಳಿಯುತ್ತಿದ್ದಂತೆ ಅಪಹರಣಕಾರರು ನಿರಾತಂಕವಾಗಿ ಇಂಡಿಯನ್ ಏರ್‌ಲೈನ್ಸ್ ವಿಮಾನದೊಳಗೆ ಪ್ರವೇಶ ಪಡೆದರು. ಇಂಡಿಯನ್ ಏರ್‌ಲೈನ್ಸ್‌ನಲ್ಲಿ ಒಬ್ಬನ ಹೆಸರಿನಲ್ಲಿ ಐದು ಸ್ಥಾನಗಳನ್ನು ಅವರಿಗಾಗಿ ಕಾದಿರಿಸಲಾಗಿತ್ತು.

50 ವರ್ಷಗಳ ಹಿಂದೆ

ಶುಕ್ರವಾರ, 27-12-1974

- **ಪಿ.ಯು.ಸಿ. ಕನ್ನಡ ಮಾಧ್ಯಮದಲ್ಲೇ ಹೆಚ್ಚು ನಪಾಸ್: ತನಿಖೆಗೆ ಕ್ರಮ**

ಬೆಂಗಳೂರು, ಡಿ. 26– ಈ ಸಲದ ಪಿ.ಯು.ಸಿ. ಪರೀಕ್ಷೆಗಳಲ್ಲಿ ಇಂಗ್ಲಿಷ್ ಮಾಧ್ಯಮದವರಿಗಿಂತ ಕನ್ನಡ ಮಾಧ್ಯಮ ತೆಗೆದುಕೊಂಡ ಅಭ್ಯರ್ಥಿಗಳು ಕಡಿಮೆ ಸಂಖ್ಯೆಯಲ್ಲಿ ಉತ್ತೀರ್ಣ ಹೊಂದಿದ ಬಗ್ಗೆ ಪಿ.ಯು.ಸಿ. ಮಂಡಳಿ ಕಾರಣ ಕಂಡುಹಿಡಿಯಲು ಉದ್ದೇಶಿಸಿದೆ.

ಇಂದು ಈ ವಿಷಯವನ್ನು ಸುದ್ದಿಗಾರರಿಗೆ ತಿಳಿಸಿದ ಮಂಡಳಿಯ ಡೈರೆಕ್ಟರ್ ಜೆ.ಎಂ.ಟಿ. ರಾಜನ್ ಅವರು ಪ್ರಶ್ನೋತ್ತರ ಪಟ್ಟಿಯನ್ನು ಉತ್ತರಪ್ರತಿಗಳ ಮೌಲ್ಯ ನಿರ್ಧರಿಸಿದ ಶಿಕ್ಷಕರಿಗೆ ಕಳುಹಿಸಿ, ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಕಡಿಮೆ ಸಂಖ್ಯೆಯಲ್ಲಿ ಪಾಸಾಗಿರುವುದಕ್ಕೆ ಕಾರಣ ಏನು ಎಂಬುದನ್ನು ಕಂಡುಹಿಡಿಯಲಾಗುವುದು ಎಂದರು.

ಪ್ರಥಮ ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಇಂಗ್ಲಿಷ್ ಮಾಧ್ಯಮ ತೆಗೆದುಕೊಂಡು ಉತ್ತೀರ್ಣ ಹೊಂದಿದ ಅಭ್ಯರ್ಥಿಗಳ ಸಂಖ್ಯೆ ಅನುಕ್ರಮವಾಗಿ ಶೇ 32.8 ಹಾಗೂ 46.5

- **‘ಗುಮಾಸ್ತನಾಗಿರುವುದೇ ಲೇಸು!’**

ಬೆಂಗಳೂರು, ಡಿ. 26– ಅಧಿಕಾರಿಯಾಗಿ ಬಡ್ತಿ ಪಡೆದರೆ ದೊರೆಯುವ ಫಲ ಗುಮಾಸ್ತರಿಗಿಂತ ಕಡಿಮೆ ವೇತನ ಮತ್ತು ಅವರಿಗಿಂತ ಐದು ವರ್ಷ ಮೊದಲೇ ನಿವೃತ್ತಿ. ಜೊತೆಗೆ ಇತರ ಕೆಲವು ಸೌಲಭ್ಯಗಳಲ್ಲಿ ಖೋತಾ!

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಅಂಗಸಂಸ್ಥೆಗಳಾದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮತ್ತಿತರ ಬ್ಯಾಂಕ್‌ಗಳಲ್ಲಿರುವ ವಿಚಿತ್ರ ಸೇವಾ ಪರಿಸ್ಥಿತಿ.

ಪರಿಣಾಮವಾಗಿ, ಕೆಲವರು ಬಡ್ತಿ ನಿರಾಕರಿಸಿದ್ದಾರೆ. ಬಡ್ತಿ ಪಡೆದು ಅಧಿಕಾರಿಗಳಾದವರಲ್ಲಿ ಶೇ 95ರಷ್ಟು ಮಂದಿ ಗುಮಾಸ್ತರಿಗಿಂತ ಕಡಿಮೆ ವೇತನ ಪಡೆಯುತ್ತಿದ್ದಾರೆ.

ಆ ಅಧಿಕಾರಿಗಳು ತಾರತಮ್ಯಗಳನ್ನು ನಿವಾರಿಸುವಂತೆ ಕೋರಿ, ಅವಧಿಯಷ್ಟೇ ಕೆಲಸ ಮುಂತಾದ ಸೌಮ್ಯರೂಪದ ಚಳವಳಿ ವಿಧಾನಗಳನ್ನು ಕೈಗೊಂಡಿದ್ದಾರೆ.

ಶಾಲಾ ಮಕ್ಕಳ ನಪಾಸು ನೀತಿಯ ಆಶಯ ಸರಿಯಾಗಿ ಮನದಟ್ಟಾಗಬೇಕಿದೆ

ಪಾಸು– ಫೇಲು: ಯಾವುದು ಮೇಲು?



ವಿಶ್ಲೇಷಣೆ

ಎಚ್‌.ಬಿ.ಚಂದ್ರಶೇಖರ್

ಕೇಂದ್ರ ಶಿಕ್ಷಣ ಸಚಿವಾಲಯವು ತನ್ನ ಅಧೀನಕ್ಕೆ ಒಳಪಡುವ ಶಾಲೆಗಳಲ್ಲಿ ಅಂದರೆ ಕೇಂದ್ರೀಯ ವಿದ್ಯಾಲಯ, ಜವಾಹರ್ ನವೋದಯ ವಿದ್ಯಾಲಯ, ಸೈನಿಕ ಶಾಲೆಯಂತಹವುಗಳಲ್ಲಿ 5 ಮತ್ತು 8ನೇ ತರಗತಿಗಳಲ್ಲಿನ ವಿದ್ಯಾರ್ಥಿಗಳು ನಿಗದಿತ ಕಲಿಕಾ ಸಾಮರ್ಥ್ಯ ಹೊಂದಿಲ್ಲದೇ ಇದ್ದಲ್ಲಿ, ಅಂತಹವರನ್ನು ಫೇಲು ಮಾಡಲು ತೀರ್ಮಾನಿಸಿದೆ. ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ– 2009ರಲ್ಲಿ 8ನೇ ತರಗತಿಯವರೆಗಿನ ವಿದ್ಯಾರ್ಥಿಗಳನ್ನು ಫೇಲು ಮಾಡದಿರುವ ನಿರ್ಧಾರವನ್ನು ತೆಗೆದುಕೊಳ್ಳಲಾಗಿತ್ತು. ಕೇಂದ್ರ ಸರ್ಕಾರವು ಈ ನಿಯಮಕ್ಕೆ 2019ರಲ್ಲಿ ತಿದ್ದುಪಡಿಯನ್ನು ತಂದಿದೆ. ಆದರೆ, ತನ್ನ ಅಧೀನದ ಶಾಲೆಗಳಲ್ಲೇ ಅದು ಅನುಷ್ಠಾನಗೊಂಡಿರಲಿಲ್ಲ. ಇದರ ಮಧ್ಯೆ, ದೇಶದ 18 ರಾಜ್ಯಗಳು ಈ ನಿಯಮವನ್ನು ಈಗಾಗಲೇ ಅಳವಡಿಸಿಕೊಂಡಿವೆ. ಕರ್ನಾಟಕವು 8ನೇ ತರಗತಿಯವರೆಗಿನ ವಿದ್ಯಾರ್ಥಿಗಳನ್ನು ಫೇಲು ಮಾಡದೇ ಇರುವ ನೀತಿಯನ್ನು ಹೊಂದಿದೆ.

ಫೇಲು ಮಾಡುವುದು ಒಳಿತೋ ಮಾಡದೇ ಇರುವುದು ಒಳಿತೋ ಎಂಬುದು ಜಿಜ್ಞಾಸೆಯ ವಿಷಯವಾಗಿದೆ. ಶಿಕ್ಷಣ ಹಕ್ಕು ಕಾಯ್ದೆಯು (ಆರ್‌ಟಿಇ) ಮಕ್ಕಳು ನಿಗದಿತ ಕಲಿಕಾ ಸಾಮರ್ಥ್ಯ ಗಳಿಸುವುದನ್ನು ಖಾತರಿಪಡಿಸಿಕೊಳ್ಳಬೇಕು ಎಂದಿದೆಯೇ ವಿನಾ ಸುಮ್ಮನೆ ಪಾಸು ಮಾಡುತ್ತಾ ಮುಂದಿನ ತರಗತಿಗೆ ಕಳುಹಿಸಿ ಎಂದು ತಿಳಿಸಿಲ್ಲ. ಈಗ ಫೇಲು ಮಾಡಬಹುದು ಎಂಬ ನೀತಿ ಅಳವಡಿಸಿಕೊಂಡಾಗ್ಯೂ ಎಷ್ಟು ವರ್ಷ ಮಕ್ಕಳನ್ನು ಅದೇ ತರಗತಿಯಲ್ಲಿ ಇರುವಂತೆ ಮಾಡಬಹುದು ಎಂಬುದು ಪ್ರಶ್ನೆ.

ಫೇಲು ಮಾಡುವುದರಿಂದ ಮಕ್ಕಳು ಶಿಕ್ಷಣದಿಂದ ವಿಮುಖರಾಗಬಹುದು ಎಂಬ ಕಳಕಳಿ ಇದೆ. ಆ ಕಾರಣದಿಂದ, ಸೂಕ್ತ ರೀತಿಯಲ್ಲಿ ಕಲಿಸಿ ಅವರನ್ನು ಮುಂದಿನ ತರಗತಿಗೆ ಕಳುಹಿಸಬೇಕು ಎಂಬುದು ನಪಾಸು ನೀತಿಯ ಆಶಯ. ಇದನ್ನು ಅರ್ಥೈಸಿಕೊಳ್ಳದೆ, ಮಕ್ಕಳಿಗೆ ಸೂಕ್ತವಾಗಿ ಕಲಿಸದಿದ್ದರೂ ಅವರನ್ನು ಪಾಸು ಮಾಡುತ್ತಾ ಹೋಗಿದ್ದು ತಪ್ಪೇ ವಿನಾ ನಪಾಸು ನೀತಿಯ ಅಳವಡಿಕೆಯೇ ತಪ್ಪಲ್ಲ.

ಜಾಗತಿಕವಾಗಿ ಈ ವಿಷಯಕ್ಕೆ ಇರುವ ಪ್ರಾಮುಖ್ಯವನ್ನು ಗಮನಿಸುವುದಾದರೆ, ನಮ್ಮ ದೇಶವೂ ಸೇರಿದಂತೆ ವಿಶ್ವದ ಹೆಚ್ಚಿನ ರಾಷ್ಟ್ರಗಳು ಮಕ್ಕಳಲ್ಲಿ ಕಲಿಕೆಯ ಕೊರತೆಯನ್ನು ನೀಗಿಸುವ ಸವಾಲನ್ನು ಎದುರಿಸುತ್ತಿವೆ. ಸುಸ್ಥಿರ ಅಭಿವೃದ್ಧಿ ಗುರಿ ಪ್ರಕಾರ 3, 6 ಮತ್ತು 9ನೇ ತರಗತಿಗಳಲ್ಲಿ ಓದುವುದು ಹಾಗೂ ಲೆಕ್ಕಾಚಾರದ ಕೌಶಲಗಳಲ್ಲಿ ಎಷ್ಟು ಪ್ರಮಾಣದ ಬಾಲಕರು ಮತ್ತು ಬಾಲಕಿಯರು ಕಲಿಕೆಯ ಕನಿಷ್ಠ ಪ್ರಾವೀಣ್ಯದ ಮಟ್ಟವನ್ನು ಸಾಧಿಸುತ್ತಾರೆ ಎಂಬುದನ್ನು ಆಧರಿಸಿ, ಜಾಗತಿಕವಾಗಿ ಶಿಕ್ಷಣದ ಪ್ರಗತಿಯ ಮಾಪನವನ್ನು ಮಾಡಲಾಗುತ್ತದೆ.

ಕಲಿಕೆಯ ಕೊರತೆ ಜಾಗತಿಕ ಸಮಸ್ಯೆಯಾಗಿದ್ದು, ಎಲ್ಲ ದೇಶಗಳನ್ನೂ ವಿವಿಧ ಪ್ರಮಾಣಗಳಲ್ಲಿ ಅದು ಬಾಧಿಸುತ್ತಿದೆ. ನಮ್ಮ ದೇಶದಲ್ಲಿ ಈ ಸಮಸ್ಯೆ ಒಂದಷ್ಟು ತೀವ್ರವಾಗಿರುವುದು ಅನೇಕ ಸಮೀಕ್ಷೆಗಳಿಂದ ಕಂಡುಬಂದಿದೆ. ಕಲಿಕಾ ಸಮಸ್ಯೆಗೆ ಪ್ರಮುಖ ಕಾರಣವೆಂದರೆ, ಮೂಲಭೂತ ಕೌಶಲಗಳಲ್ಲಿ ಮಕ್ಕಳು ಸೂಕ್ತವಾದ ರೀತಿಯಲ್ಲಿ ಪ್ರಾವೀಣ್ಯವನ್ನು ಸಾಧಿಸದೇ ಇರುವುದು.

ಆರಂಭಿಕ ವರ್ಷಗಳಲ್ಲಿ ಮಕ್ಕಳು ತಪ್ಪಿಲ್ಲದೇ ಅರ್ಥ ಗ್ರಹಿಕೆಯೊಂದಿಗೆ ಓದುವುದು, ಬರೆಯುವುದು ಮತ್ತು ಸರಳ ಲೆಕ್ಕಾಚಾರದ ಕೌಶಲ ಸಾಧಿಸುವುದರಲ್ಲಿ ಹಿಂದುಳಿದರೆ, ಅವರ ಭವಿಷ್ಯದ ಶಿಕ್ಷಣ ಮಸುಕಾಗುತ್ತದೆ. ಈ ದಿಸೆಯಲ್ಲಿ, ಅಮೆರಿಕದ ರಾಜ್ಯವೊಂದರಲ್ಲಿ 3ನೇ ತರಗತಿಯ ಶಿಕ್ಷಣದ ಹಂತವನ್ನು ಗಂಭೀರವೆಂದು ಪರಿಗಣಿಸಲಾಗಿದೆ. ಆ ತರಗತಿಗೆ ನಿಗದಿಪಡಿಸಿದ ಕಲಿಕಾ ಸಾಮರ್ಥ್ಯಗಳನ್ನು ಅಲ್ಲಿನ ಮಕ್ಕಳು ಯಶಸ್ವಿಯಾಗಿ ಕಲಿಯುವುದನ್ನು ಖಾತರಿಪಡಿಸಿಕೊಳ್ಳುವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ನಮ್ಮಲ್ಲಿ 5 ಮತ್ತು 8ನೇ ತರಗತಿಗಳಲ್ಲಿ ನಿಗದಿತ ಸಾಮರ್ಥ್ಯ ತೋರದ ಮಕ್ಕಳನ್ನು ಫೇಲು ಮಾಡಿ, ಅವರಿಗೆ ನಿಗದಿತ ಸಾಮರ್ಥ್ಯಗಳನ್ನು ಕಲಿಸಿಯೇ ಮುಂದಿನ ತರಗತಿಗಳಿಗೆ ಕಳುಹಿಸುತ್ತೇವೆ ಎನ್ನುವವರು, ಅಮೆರಿಕದ ಮಿಸಿಸಿಪ್ಪಿ ರಾಜ್ಯದ ಪ್ರಯತ್ನದಲ್ಲಿ ಸೂಕ್ತ ಕಲಿಕೆಯ ಅಂಶಗಳನ್ನು ಕಾಣಬಹುದಾಗಿದೆ.

ಮಿಸಿಸಿಪ್ಪಿಯು ಶೈಕ್ಷಣಿಕ ಕ್ಷೇತ್ರದಲ್ಲಿ ಕೈಗೊಂಡಿರುವ ಬದಲಾವಣೆಗಳು ಅಮೆರಿಕದ ಇತರ ರಾಜ್ಯಗಳ ಜೊತೆಗೆ ವಿಶ್ವಮಟ್ಟದಲ್ಲೂ ಪ್ರೇರಣೆಯನ್ನು ಉಂಟು ಮಾಡುವಂತಿವೆ. ಬಡತನ, ಹಸಿವು ನಿವಾರಣೆ, ವರ್ಣಭೇದ ನೀತಿಯ ನಿಯಂತ್ರಣದಂತಹ ಕ್ಷೇತ್ರಗಳಲ್ಲಿ ಅಮೆರಿಕದ ರಾಜ್ಯಗಳ ಪೈಕಿ ಮಿಸಿಸಿಪ್ಪಿಯು ಕೆಳಗಿನ ಸ್ಥಾನದಲ್ಲಿ ಇದೆಯಾದರೂ ಶೈಕ್ಷಣಿಕ ಗುಣಮಟ್ಟದ ವಿಷಯದಲ್ಲಿ ಮೇಲಿನ ದರ್ಜೆಯನ್ನು ಕಾಯ್ದುಕೊಂಡಿರುವುದು ಎಲ್ಲರ ಅಚ್ಚರಿಗೆ ಕಾರಣವಾಗಿದೆ.

ಮಿಸಿಸಿಪ್ಪಿಯು ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದ ಶಿಕ್ಷಣದಲ್ಲಿ ಉತ್ತಮ ಸಾಧನೆ ಮಾಡಿದೆ. ಶಾಲೆಗೆ ಮಕ್ಕಳ ದಾಖಲಾತಿ,



ಹಾಜರಾತಿ ಹಾಗೂ ಕಲಿಕೆಯ ವಿಷಯದಲ್ಲಿ ಅದು ಅಮೆರಿಕದ ಇತರ ರಾಜ್ಯಗಳಿಗೆ ಹೋಲಿಸಿದರೆ ಮುಂಚೂಣಿಯಲ್ಲಿದೆ. ಕಳಪೆ ಸಾಧನೆಗೆ ಬಡತನವನ್ನು ಕಾರಣವನ್ನಾಗಿ ನೀಡುವ ಧೋರಣೆಗೆ ವ್ಯತಿರಿಕ್ತವಾದ ಸಾಧನೆ ಮಾಡುವ ಮೂಲಕ ಉತ್ತಮ ಸಂದೇಶವನ್ನು ನೀಡಿದೆ.

ಅಲ್ಲಿನ ಇಂತಹ ಸಾಧನೆ ಆಕಸ್ಮಿಕವಾಗಿ ಆದದ್ದಲ್ಲ. ತನ್ನ ರಾಜ್ಯದ ಕಳಪೆ ಶೈಕ್ಷಣಿಕ ಸಾಧನೆಯ ಬಗ್ಗೆ ತೀವ್ರ ಅಸಮಾಧಾನಗೊಂಡಿದ್ದ ಉದ್ಯಮಿ ಬಾರ್ಕ್ಸ್‌ಡೇಲ್, 2000ನೇ ಇಸವಿಯ ಸಂದರ್ಭದಲ್ಲಿ 100 ಮಿಲಿಯನ್ ಡಾಲರ್ ಅನ್ನು ಶಿಕ್ಷಣ ಕ್ಷೇತ್ರಕ್ಕೆ ದೇಣಿಗೆಯಾಗಿ ನೀಡಿ, ಜಾಕ್ಸನ್ ನಗರದಲ್ಲಿ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಲು ಕಾರಣರಾದರು. ಮಿಸಿಸಿಪ್ಪಿಯ ಅನೇಕ ಉದ್ಯಮಿಗಳು ಬಾರ್ಕ್ಸ್‌ಡೇಲ್ ಅವರನ್ನು ಅನುಸರಿಸಿ, ಶಿಕ್ಷಣ ಕ್ಷೇತ್ರಕ್ಕೆ ಅಪಾರ ಹಣವನ್ನು ನೀಡಿದರು. ಬಾರ್ಕ್ಸ್‌ಡೇಲ್ ಮತ್ತು ಇತರರು ಹಣವನ್ನಷ್ಟೇ ನೀಡಿ ಸುಮ್ಮನಾಗಲಿಲ್ಲ. ವಾಷಿಂಗ್ಟನ್ ನಗರದಲ್ಲಿ ಶಿಕ್ಷಣ ಅಧಿಕಾರಿಯಾಗಿದ್ದ ಮಹಿಳೆ ಕೇರಿ ರೈಟ್ ಅವರನ್ನು ಮಿಸಿಸಿಪ್ಪಿ ರಾಜ್ಯಕ್ಕೆ ಆಹ್ವಾನಿಸಿ, ಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವಂತೆ ಮಾಡಿದರು. ರೈಟ್ ಅವರ ಪ್ರಯತ್ನದಿಂದ 2013ರಲ್ಲಿ ಹೊಸ ಕಾನೂನು, ಕಾರ್ಯಕ್ರಮಗಳನ್ನು ಜಾರಿಗೆ ತರುವ ಮೂಲಕ ಸುಧಾರಣೆಗೆ ಮುನ್ನುಡಿ ಬರೆಯಲಾಯಿತು.

ಮೂರನೇ ತರಗತಿಯ ಮಕ್ಕಳು ಓದುವ ಪರೀಕ್ಷೆಯಲ್ಲಿ ಉತ್ತೀರ್ಣರಾಗದಿದ್ದಲ್ಲಿ ಅವರನ್ನು ಅದೇ ತರಗತಿಯಲ್ಲಿ ಉಳಿಸಿಕೊಂಡು, ವಿನೂತನ ಬೋಧನಾ ಕಾರ್ಯತಂತ್ರಗಳ ಮೂಲಕ ಅವರಿಗೆ ಓದುವುದನ್ನು ಕಲಿಸಿ, ಮುಂದಿನ ತರಗತಿಗೆ ಕಳುಹಿಸುವ ಕಾನೂನು ಮಿಸಿಸಿಪ್ಪಿ ಜಾರಿಗೆ ತಂದ ಪ್ರಮುಖ ನೀತಿಗಳಲ್ಲಿ ಒಂದಾಗಿದೆ. ರಾಜ್ಯದ ಪ್ರತಿ ವಿದ್ಯಾರ್ಥಿಗೂ ತಪ್ಪಿಲ್ಲದೇ ಓದುವ, ಬರೆಯುವ, ಸರಳ ಲೆಕ್ಕಾಚಾರ ಮಾಡುವ ಕೌಶಲಗಳನ್ನು ಕಲಿಸುವ ವಿಷಯದಲ್ಲಿ ಇಡೀ ರಾಜ್ಯವೇ ಪ್ರೇರಣೆಗೊಂಡಿದೆ ಯಲ್ಲದೆ, ಅಧಿಕಾರಿಗಳು ಮತ್ತು ಶಿಕ್ಷಕರು ಸಮನ್ವಯದಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಇದರ ಫಲವಾಗಿ ಆ ರಾಜ್ಯವು ಶಾಲಾ ಶಿಕ್ಷಣದ ಗುಣಮಟ್ಟದಲ್ಲಿ ಹಂತ ಹಂತವಾಗಿ ಮೇಲೇರುವಂತಾಗಿದೆ.

ಅನುತ್ತೀರ್ಣ ನಿಯಮ ಅಳವಡಿಸಿಕೊಂಡ ಮಾತ್ರಕ್ಕೆ ಮಕ್ಕಳು ಕಲಿಯಲಾರರು. ಯಾವುದೇ ಮಗು ಕಲಿಕೆಯಲ್ಲಿ ಏಕೆ ಹಿಂದುಳಿದಿದೆ ಎಂಬುದನ್ನು ಅನುತ್ತೀರ್ಣಗೊಳಿಸುವುದರಿಂದ ಕಂಡುಕೊಳ್ಳಬಹುದು ಅಷ್ಟೇ. ಈ ಹಂತದಿಂದ ಪ್ರಾರಂಭಿಸಿ, ಪ್ರತಿ ಮಗುವಿಗೆ ವಿಶಿಷ್ಟವಾಗಿ ಹೇಗೆ ಕಲಿಸಬೇಕೆಂಬ ಕುರಿತ ಕಾರ್ಯತಂತ್ರ, ವೈವಿಧ್ಯಮಯ ಚಟುವಟಿಕೆಗಳು, ಶಿಕ್ಷಕರ ತೊಡಗಿಸಿಕೊಳ್ಳುವಿಕೆ, ಬದ್ಧತೆ, ಉತ್ತರದಾಯಿತ್ವ, ಸಾಂಘಿಕ ಪ್ರಯತ್ನದಂತಹ ಅಂಶಗಳು ಮಿಸಿಸಿಪ್ಪಿ ರಾಜ್ಯದಲ್ಲಿನ ಶೈಕ್ಷಣಿಕ ಬದಲಾವಣೆಗೆ ಕಾರಣವಾಗಿವೆ ಎನ್ನಬಹುದು.

ಮಿಸಿಸಿಪ್ಪಿಯ ವಿವಿಧ ಶಾಲೆಗಳಲ್ಲಿ ಮಕ್ಕಳ ಕಲಿಕಾ ಸ್ಥಿತಿ ಹೇಗಿದೆ ಎಂಬುದನ್ನು ಆ ರಾಜ್ಯದ ಶಿಕ್ಷಣ ಇಲಾಖೆಯ ಜಾಲತಾಣವು (https://www.mdek12.org/) ಪೋಷಕರು, ಶಿಕ್ಷಕರು ಹಾಗೂ ಶಿಕ್ಷಣಾಸಕ್ತರಿಗೆ ಕನ್ನಡಿಯಂತೆ ತೋರಿಸುತ್ತದೆ. ಆ ಮಟ್ಟದ ಕಾಳಜಿ, ಪ್ರಾಮಾಣಿಕತೆ, ಬದ್ಧತೆಯು ಎಲ್ಲ ದೇಶಗಳ ಶಿಕ್ಷಣ ಕ್ಷೇತ್ರಕ್ಕೆ ಮಾದರಿಯಾಗಬಲ್ಲವು.

ಲೇಖಕ: ಹಿರಿಯ ಉಪನ್ಯಾಸಕ
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಬೆಂಗಳೂರು

ಚುರುಮುರಿ



ಮೊಟ್ಟೆ ಅಲ್ಲ ಬಂಡೆ!

• ಬಿ.ಎನ್. ಮಲ್ಲೇಶ್

ಅಪರೂಪಕ್ಕೆ ತೆಪರೇಸಿ ಮನೆಗೆ ಬಂದಿದ್ದ ತಿಪ್ಪಜ್ಜಿಗೆ ಟಿ.ವಿ. ಸೀರಿಯಲ್ ನೋಡೋ ಹುಚ್ಚು. ತೆಪರೇಸಿಗೆ ನ್ಯೂಸ್ ನೋಡೋ ಚಟ. ‘ಆ ನ್ಯೂಸ್‌ನಾಗೆ ಏನಿರ್ತತಿ ಅಂತ ನೋಡ್ತೀಯೋ ತೆಪರೇಸಿ, ಬರೀ ರಾಜಕೀಯ. ಅದ್ರ ಬದ್ಲು ಸೀರಿಯಲ್ ಆದ್ರೂ ಹಾಕು, ಚೆನ್ನಾಗಿರ್ತಾವು’ ಅಂತು ಅಜ್ಜಿ.

‘ಸೀರಿಯಲ್‌ನಾಗೆ ಬರೀ ಮನಿಮುರುಕ ಕತಿಗಳೇ ಬಿಡಜ್ಜಿ, ಯಾರ ಮನಿ ಹೆಂಗೆ ಒಡೀಬೇಕು, ಊಟದಾಗೆ ಹೆಂಗೆ ವಿಷ ಹಾಕಬೇಕು, ಯಾರ ಬುಡಕ್ಕೆ ಹೆಂಗೆ ಬೆಂಕಿ ಇಡಬೇಕು... ಬರೀ ಇವೇ’ ಅಂದ ತೆಪರೇಸಿ.

‘ಮತ್ತೆ ನಿಮ್ ರಾಜಕೀಯದಾಗೇನು ಬೇರೆ ಐತಾ? ಅಲ್ಲೂ ಅದೇ ಇರೋದು. ಯಾರನ್ನ ಹೆಂಗೆ ಮುಗಿಸ್ಬೇಕು, ಹಳೇ ಕೇಸ್‌ನಾಗೆ ಹೆಂಗೆ ಸಿಗಿಸ್ಬೇಕು, ಯಾವ ಟೈಮಲ್ಲಿ ಯಾರಿಗೆ ಆಪರೇಷನ್ ಮಾಡ್ಬೇಕು... ಇವೇ ತಾನೆ? ಅದಿರ್‍ಲಿ, ನ್ಯೂಸ್‌ನಾಗೆ ಯಾರನ್ನೋ ಮೆರವಣಿಗೆ ಮಾಡ್ತದಾರಲ್ಲ ಏನದು? ತಲಿ ಮ್ಯಾಲ ಹೂವು ಬೇರೆ ಹಾಕ್ತದಾರೆ?’

‘ಅದಾ... ಅವರು ಯಾರಿಗೋ ಬೈದ್ರು ಅಂತ ಅರೆಸ್ಟ್ ಮಾಡಿದ್ರಂತೆ, ಈಗ ಬಿಟ್ಟದ್ದಕ್ಕೆ ಮೆರವಣಿಗೆ ಮಾಡ್ತದಾರೆ’.

‘ಬೇಷಾತು... ಬೈದಿದ್ದಕ್ಕೆ ಮೆರವಣಿಗೆನಾ? ಅದು ಹಾಳಾಗ್ಲಿ, ಇದೇನು ಜೈಲು ಮುಂದೆ ಯಾರೋ ಜೈಕಾರ ಹಾಕ್ತದಾರೆ? ಅವನು ಅದೇನೋ ಎರಡು ಬೆರಳು ತೋರಿಸ್ತದಾನೆ?’

‘ಅದು ವಿಕ್ಟರಿ ಸಿಂಬಲ್ಲು ಕಣಜ್ಜಿ. ಅವ್ನು ಯಾವುದೋ ಕೊಲೆ ಕೇಸಲ್ಲಿ ಜೈಲಿಗೆ ಹೋಗಿದ್ನಂತೆ, ಬೇಲ್ ಸಿಕ್ಕಿದ್ದಕ್ಕೆ ಹಿಂಗೆ ವಿಜಯೋತ್ಸವ ಆಚರಿಸ್ತದಾರೆ’.

‘ರಾಮ ರಾಮ... ಕಾಲ ಕೆಟ್ಟೋತು. ಆಮೇಲೆ ಅದೇನು ಟೀವೀಲಿ ಮೊಟ್ಟೆ ಸುದ್ದಿ?’

‘ಅದೂ... ಯಾರೋ ಎಮ್ಮೆಲ್ಗೆ ಮೊಟ್ಟೆಯಿಂದ ಹೊಡೆದ್ರಂತೆ ಕಣಜ್ಜಿ’.

‘ಹೌದಾ? ಮತ್ತೆ ಅವ್ನು ಅದು ಮೊಟ್ಟೆ ಅಲ್ಲ ‘ಬಂಡೆ’ ಅಂತದಾನೆ?’

‘ಏನಜ್ಜಿ? ನಿಂಗೂ ರಾಜಕೀಯ ಚೆನ್ನಾಗಿ ಗೊತ್ತಾಕ್ಕತಿ?’ ಎಂದ ತೆಪರೇಸಿ.


ಇಬ್ಬರೂ ಒಟ್ಟಿಗೇ ನಕ್ಕರು.

ಸಂಗತ

ಸ್ಥಳೀಯ ಸರ್ಕಾರಕ್ಕೆ ಬಲ ತುಂಬೋಣ

ವಿಕೇಂದ್ರೀಕರಣಕ್ಕೆ ಆದ್ಯತೆ ನೀಡಿ, ಪ್ರತಿ ಗ್ರಾಮ ತನ್ನ ಯೋಜನೆ ರೂಪಿಸಿಕೊಂಡು ದೃಢಹೆಜ್ಜೆ ಇರಿಸುವಂತೆ ಮಾಡಬೇಕಾಗಿದೆ

• ಡಿ.ಆರ್. ಪಾಟೀಲ



ಡಿ.ಆರ್‌.ಪಾಟೀಲ

‘ಭಾರತದ ಭವಿಷ್ಯ ಹಳ್ಳಿಗಳಲ್ಲಿ ಅಡಗಿದೆ’ ಎಂದು ಹೇಳಿ, ಗ್ರಾಮ ಸ್ವರಾಜ್ಯದ ಕನಸನ್ನು ಬಿತ್ತಿದ ಮಹಾತ್ಮ ಗಾಂಧಿ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ನೂರು ವರ್ಷಗಳು ಸಂದಿರುವ ಸಂದರ್ಭ ಇದು.


‘ದೇಶದ ಪ್ರತಿ ಹಳ್ಳಿಯೂ ಪೂರ್ಣ ಸ್ವಾವಲಂಬಿ ಆಗಬೇಕು. ವ್ಯಸನಮುಕ್ತ, ವ್ಯಾಜ್ಯಮುಕ್ತ ಆಗಿರಬೇಕು. ಸ್ವಯಂ ಆಡಳಿತ, ಅಭಿವೃದ್ಧಿ ಹಾಗೂ ನ್ಯಾಯ ತೀರ್ಮಾನದ ವ್ಯವಸ್ಥೆ ಹೊಂದಿರಬೇಕು. ನೈಜ ಪ್ರಜಾಸತ್ತೆಯು ಅಲ್ಲಿ ಆಚರಣೆಗೆ ಬರಬೇಕು’ ಎಂಬುದು ಅವರ ಆಶಯವಾಗಿತ್ತು. ವಿಕೇಂದ್ರೀಕರಣಕ್ಕೆ ಮಹತ್ವ ನೀಡಿದ್ದ ಗ್ರಾಮ ಸ್ವರಾಜ್ಯ ವ್ಯವಸ್ಥೆಗೆ ಸಮಾನತೆಯೇ ಆಧಾರವಾಗಿತ್ತು. ಆದರೆ ಇಂದು ಈ ಕನಸು ನನಸಾಗಿದೆಯೇ ಎಂದು ಪ್ರಶ್ನಿಸಿಕೊಂಡಾಗ ವಿಷಾದ ಆವರಿಸುತ್ತದೆ. ಶ್ರೀಮಂತರು, ಬಡವರ ನಡುವಿನ ಅಂತರ ಹೆಚ್ಚಾಗಿದೆ. ದೇಶದ ಶೇ 40ರಷ್ಟು ಸಂಪತ್ತು ಕೆಲವೇ ಜನರ ಕೈಯಲ್ಲಿದೆ. ಸಂಪತ್ತಿನ ಸಮಾನ ಹಂಚಿಕೆ ಆಗದೆ ಜನರಿಗೆ ನೆಮ್ಮದಿಯ ಜೀವನ ಇಲ್ಲವಾಗಿದೆ.

ಪರಿಪೂರ್ಣ ಸ್ವಾವಲಂಬಿ ಸಮಾಜ ಕಟ್ಟುವ ಗುರಿಯತ್ತ ಸಾಗಲು ಬಲವಂತರಾಯ್ ಮೆಹ್ತಾ, ಕೊಂಡಜ್ಜಿ ಬಸಪ್ಪ, ಸಂತಾನಂ, ಅಶೋಕ ಮೆಹ್ತಾ, ಜಿ.ವಿ.ಕೆ. ರಾವ್ ಅವರ ನೇತೃತ್ವದಲ್ಲಿ ವಿವಿಧ ಸಮಿತಿಗಳು ರಚನೆಯಾದವು. ಪಶ್ಚಿಮ ಬಂಗಾಳ ಸರ್ಕಾರವು ಅಶೋಕ ಮೆಹ್ತಾ ಸಮಿತಿಯ ವರದಿ ಆಧರಿಸಿ ಆಡಳಿತ ವಿಕೇಂದ್ರೀಕರಣವನ್ನು ಯಶಸ್ವಿಯಾಗಿ ಜಾರಿಗೊಳಿಸಿತು. ಈ ಪ್ರಯೋಗದಿಂದ ಪ್ರಭಾವಿತರಾಗಿದ್ದ ನಜೀರ್ ಸಾಬ್ ಅವರ ಪ್ರಯತ್ನ ಹಾಗೂ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಅವರ ಸಂಪೂರ್ಣ ಬೆಂಬಲದಿಂದ ‘ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿ ಹಾಗೂ ನ್ಯಾಯ ಪಂಚಾಯಿತಿ ಕಾಯ್ದೆ– 1983’ ಜಾರಿಗೆ ಬಂದಿತು.

ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಅವರು ಪಂಚಾಯತ್ ರಾಜ್ ವ್ಯವಸ್ಥೆ ಬಲಪಡಿಸಲು, ಅವಕಾಶ ವಂಚಿತರಿಗೆ ಅಧಿಕಾರ ನೀಡಲು ಸಂವಿಧಾನ ತಿದ್ದುಪಡಿಗೆ ನಿರ್ಧರಿಸಿದರು. ದುರ್ದೈವವಶಾತ್ ಈ ತಿದ್ದುಪಡಿಗೆ ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳು, ವಿಶೇಷವಾಗಿ, ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯ ಪರವಾಗಿ ಇದ್ದ ಜನತಾ ಪರಿವಾರ ಹಾಗೂ ಕಮ್ಯುನಿಸ್ಟ್ ಪಕ್ಷಗಳು ವಿರೋಧ ವ್ಯಕ್ತಪಡಿಸಿದವು. ಈ ಮೂಲಕ, ತಮಗೆ ಬರೀ ರಾಜಕೀಯ ಮಾಡುವುದರಲ್ಲಿ ಆಸಕ್ತಿಯೇ ವಿನಾ ಅವಕಾಶವಂಚಿತರಿಗೆ ಅಧಿಕಾರ ಹಸ್ತಾಂತರಿಸುವಲ್ಲಿ ಅಲ್ಲ ಎಂಬುದನ್ನು ಸ್ಪಷ್ಟಪಡಿಸಿದವು.

ನರಸಿಂಹ ರಾವ್ ಅವರು ಪ್ರಧಾನಿಯಾದ ನಂತರ ಸಂವಿಧಾನಕ್ಕೆ 73- 74ನೇ ತಿದ್ದುಪಡಿ ತರಲಾಯಿತು. ಈ ತಿದ್ದುಪಡಿಯ ಆಶಯಗಳನ್ನು ಈಡೇರಿಸುವ ದಿಸೆಯಲ್ಲಿ ದೇಶದಲ್ಲೇ ಮೊದಲ ಬಾರಿಗೆ ನಮ್ಮ ರಾಜ್ಯದಲ್ಲಿ ಕಾಯ್ದೆಯೊಂದು ರೂಪುಗೊಂಡಿತು. ಮುಖ್ಯಮಂತ್ರಿಯಾಗಿದ್ದ ವೀರಪ್ಪ ಮೊಯಿಲಿ ಹಾಗೂ ಸಚಿವರಾಗಿದ್ದ ಎಂ.ವೈ.ಘೋರ್ಪಡೆ ಅವರ ವಿಶೇಷ ಆಸಕ್ತಿಯಿಂದ ಹಿಂದುಳಿದ ವರ್ಗದವರೂ ಅಧಿಕಾರ ಪಡೆಯಲು ಅನುವಾಗುವಂತೆ ಮೀಸಲಾತಿಯನ್ನು ಜಾರಿಗೊಳಿಸಲಾಯಿತು. 2013ರಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾದಾಗ ಕೆ.ಆರ್.ರಮೇಶ್ ಕುಮಾರ್ ನೇತೃತ್ವದಲ್ಲಿ ತಜ್ಞರ ಸಮಿತಿಯೊಂದನ್ನು ರಚಿಸಿದ್ದರು. ಆ ಸಮಿತಿಯ ಶಿಫಾರಸಿನಂತೆ, ಗ್ರಾಮ ಪಂಚಾಯಿತಿಗಳನ್ನು ಗ್ರಾಮ ಸರ್ಕಾರಗಳನ್ನಾಗಿ ರೂಪಿಸಲು ಕಾನೂನಿನಲ್ಲಿ ಎಲ್ಲ ಅವಶ್ಯಕ ಬದಲಾವಣೆಗಳನ್ನೂ ತರಲಾಯಿತು.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಈಗ ಮೀಸಲಾತಿ ಜಾರಿಗೆ ಬಂದಿದೆ. ಅಧಿಕಾರ ಸ್ಥಾನದ ಕನಸನ್ನೇ ಕಾಣದಿದ್ದ ಬಡವರು, ದುರ್ಬಲ ವರ್ಗದವರು, ಎಲ್ಲಕ್ಕೂ ಮಿಗಿಲಾಗಿ ಮಹಿಳೆಯರು ಅಧಿಕಾರ ಸ್ಥಾನದಲ್ಲಿ ವಿಜೃಂಭಿಸಿದ್ದಾರೆ. ಇಂಥದ್ದೊಂದು ‘ರಕ್ತರಹಿತ ಸಾಮಾಜಿಕ ಕ್ರಾಂತಿ’ ಸದ್ದಿಲ್ಲದೇ ಅನುಷ್ಠಾನಗೊಂಡಿದೆ. ಆದರೆ ಕಾಯ್ದೆಯಲ್ಲಿ ಕೊಡಮಾಡಿರುವ ಅಧಿಕಾರಗಳು ಈಗಲೂ ಜಾರಿಗೆ ಬಂದಿಲ್ಲ. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜನಪರವಾಗಿಸಲು ಹಾಗೂ ಜನರ ಸಂಕಷ್ಟ ಪರಿಹಾರಕ್ಕೆ ಅವಶ್ಯಕ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರ ರೂಪಿಸಿರುವ ಈ ಕಾನೂನನ್ನು ಸಮರ್ಪಕವಾಗಿ ಜಾರಿಗೆ ತರಬೇಕಾಗಿದೆ. ಅಧಿಕಾರ, ಅಧಿಕಾರಿಗಳು, ಹಣಕಾಸನ್ನು ಲಭ್ಯವಾಗಿಸುವುದು ಹಾಗೂ ಅವುಗಳನ್ನು ಉಪಯೋಗಿಸುವ ಸ್ವಾತಂತ್ರ್ಯವನ್ನು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿಗೆ ವರ್ಗಾಯಿಸಬೇಕಾಗಿದೆ.



1980ರ ದಶಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಧಿಕಾರ ಸ್ಥಾನಗಳಿಗೆ ಮೀಸಲಾತಿ ಇಲ್ಲದಿದ್ದಾಗ ಇಂತಹ ಸೌಲಭ್ಯಗಳನ್ನು ಮೊದಲ ದಿನದಿಂದಲೇ ವರ್ಗಾಯಿಸಲಾಗಿತ್ತು. ಈಗ ಮೀಸಲಾತಿ ಬಂದು ದುರ್ಬಲರು, ಧ್ವನಿ ಇಲ್ಲದವರು ಹಾಗೂ ಮಹಿಳೆಯರು ಅಧಿಕಾರ ಸ್ಥಾನದಲ್ಲಿರುವಾಗ ಇವುಗಳನ್ನು ವರ್ಗಾಯಿಸಲು ವಿಳಂಬ ಆಗುತ್ತಿರುವುದು ಅತ್ಯಂತ ದುರ್ದೈವದ ಸಂಗತಿ. ಈ ಲೋಪ ನಿವಾರಿಸುವ ಕಾಲ ಈಗ ಸನ್ನಿಹಿತವಾಗಿದೆ.

ಗಾಂಧೀಜಿ ಕನಸಿನ ಗ್ರಾಮ ಸ್ವರಾಜ್ಯದ ಆಶಯ ಈಡೇರಿಸಲು ವಿಕೇಂದ್ರೀಕರಣಕ್ಕೆ ಆದ್ಯತೆ ನೀಡಬೇಕಾಗಿದೆ. ಪ್ರತಿ ಗ್ರಾಮ ತನ್ನ ಯೋಜನೆ ರೂಪಿಸಿಕೊಂಡು ದೃಢಹೆಜ್ಜೆ ಇರಿಸುವಂತೆ ಮಾಡಬೇಕಾಗಿದೆ. ಸ್ಥಳೀಯ ಆಡಳಿತ ಸಂಸ್ಥೆಗಳನ್ನು ಸ್ಥಳೀಯ ಸರ್ಕಾರಗಳನ್ನಾಗಿ ರಚಿಸಿ, ಪ್ರಜೆಗಳೇ ಪ್ರಭುಗಳೆಂದು ಸಾಬೀತುಪಡಿಸುವ ವ್ಯವಸ್ಥೆಯನ್ನು ತ್ವರಿತವಾಗಿ ಜಾರಿಗೊಳಿಸುವುದು ನಾವು ರಾಷ್ಟ್ರಪಿತನಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ.

ಲೇಖಕ: ಸಹಕಾರಿ ಧುರೀಣ

ವಾಚಕರ ವಾಣಿ

ಅಭಿಮಾನ ಇರಲಿ, ಅಂಧಾಭಿಮಾನ ಬೇಡ

ಅಲ್ಲು ಅರ್ಜುನ್ ಅಭಿನಯದ ಪುಷ್ಪ- 2 ಚಲನಚಿತ್ರ ವೀಕ್ಷಿಸಲು ನಾಯಕ ಅಲ್ಲು ಅರ್ಜುನ್ ಹೈದರಾಬಾದ್‌ನ ಚಿತ್ರಮಂದಿರವೊಂದಕ್ಕೆ ಬಂದಾಗ, ಕಾಲ್ತುಳಿತ ಸಂಭವಿಸಿ ಮಹಿಳೆಯೊಬ್ಬರು ಮೃತಪಟ್ಟಿದ್ದರಿಂದ ನಾಯಕನಟನ ಬಂಧನವಾಗಿ ಬಿಡುಗಡೆ ಆಯಿತು. ಆದರೆ ಆ ಕುರಿತ ಚರ್ಚೆಗಳು ಭಿನ್ನರೂಪವನ್ನು ತಳೆಯುತ್ತಿವೆ. ನಾಯಕನನ್ನು ನೋಡಲು ಅಷ್ಟೇಕೆ ಧಾವಂತ, ನೂಕುನುಗ್ಗಲು ಆಗಬೇಕು? ಆತನೂ ನಮ್ಮಂತೆ ಸಾಮಾನ್ಯ ಮನುಷ್ಯನಲ್ಲವೇ? ಜನ ಮಾಡಿದ ತಪ್ಪಿಗೆ ಅವರಿಗೆ ಶಿಕ್ಷೆ ಆಯಿತು.

ತಾವು ಇಷ್ಟಪಡುವ ಯಾವುದೇ ನಾಯಕನ ಬಗ್ಗೆ ಅಭಿಮಾನ ಇರಬೇಕೇ ವಿನಾ ಅಂಧಾಭಿಮಾನ ಇರಬಾರದು. ತೆರೆಯ ಮೇಲೆ ಆತನ ಅಭಿನಯವನ್ನು ಕಣ್ತುಂಬಿಕೊಂಡು ಆಸ್ವಾದಿಸಬೇಕು. ಅದುಬಿಟ್ಟು ಆತನ ಹೆಸರಿನಲ್ಲಿ ದುರ್ವರ್ತನೆ ತೋರಬಾರದು. ಆತ ಏನೇ ತಪ್ಪು ಮಾಡಿದರೂ ಸಮರ್ಥಿಸಿಕೊಳ್ಳುವ ಅಭಿಮಾನಿಗಳು ತಮ್ಮ ಮನೆಯವರು, ಬಂಧುಬಳಗ, ಆತ್ಮೀಯರು ಅವರಿಂದ ತೊಂದರೆಗೆ ಈಡಾದರೆ ಅದೇ ರೀತಿ ಸಮರ್ಥಿಸಿಕೊಳ್ಳುವರೇ? ಅನುಚಿತ ಪೋಸ್ಟ್ ಮತ್ತು ವಿಡಿಯೊಗಳನ್ನು ಮಾಡಿ ಪೊಲೀಸ್ ಇಲಾಖೆ ಬಗ್ಗೆ ಅಪಪ್ರಚಾರ ಮಾಡಿದರೆ ಕ್ರಮ ಕೈಗೊಳ್ಳುವುದಾಗಿ ಹೈದರಾಬಾದ್ ಪೊಲೀಸರು ಎಚ್ಚರಿಸಿರುವುದು ಸರಿಯಾಗಿಯೇ ಇದೆ.

ಮಲ್ಲತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ರಾಷ್ಟ್ರಕವಿ ಪುರಸ್ಕಾರ: ಪರಂಪರೆಯ ದ್ಯೋತಕ

ಮಂಡ್ಯದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳಲ್ಲಿ ರಾಷ್ಟ್ರಕವಿ ಪುರಸ್ಕಾರ ನೀಡಬೇಕೆನ್ನುವುದೂ ಸೇರಿರುವುದು ಸ್ವಾಗತಾರ್ಹ. ರಾಷ್ಟ್ರಕವಿ ಪುರಸ್ಕಾರ ನೀಡುವಿಕೆ ಬರೀ ಅರಸೊತ್ತಿಗೆಯ ಕುರುಹಾಗಿ ಉಳಿಯುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಕವಿಯ ದನಿ ಕ್ಷೀಣಿಸುತ್ತಿರುವ ಇಂದಿನ ಸಂದರ್ಭದಲ್ಲಿ ಇಂತಹದ್ದೊಂದು ಕ್ರಮ ಅಗತ್ಯವಾಗಿದೆ.

ಮೈಸೂರು ಅರಸರ ಗಂಡಭೇರುಂಡ ಲಾಂಛನದ ಕುರಿತು ಪಾಟೀಲ ಪುಟ್ಟಪ್ಪ ಈ ರೀತಿ ಬರೆದಿದ್ದಾರೆ. ಅದೇನೆಂದರೆ, ಪ್ರಜೆಗಳ ಮುಖಗಳು ಬೇರೆ ಬೇರೆಯಾದರೂ ಗುರಿ ಮತ್ತು ಗಮ್ಯ ಒಂದೇ ಕಡೆ ಕೇಂದ್ರೀಕೃತ (ಪ್ರಗತಿ) ಆಗಿರಬೇಕೆನ್ನುವ ಸಾಂಕೇತಿಕ ಅರ್ಥ ವಿವರಣೆ ಇದರಲ್ಲಿ ಇದೆ ಎಂದಿದ್ದಾರೆ. ಅದೇ ರೀತಿ, ರಾಷ್ಟ್ರಕವಿ ಪುರಸ್ಕಾರ ನೀಡುವಿಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪರಂಪರೆಯ ದ್ಯೋತಕವಾಗಿ ಮುಖ್ಯವಾಗುತ್ತದೆ.

ಆರ್.ವೆಂಕಟರಾಜು, ಬೆಂಗಳೂರು

ಶಾಸಕರ ಮೇಲೆ ಹಲ್ಲೆ: ಕಠಿಣ ಕ್ರಮ ಅಗತ್ಯ

ಬಿಜೆಪಿ ಶಾಸಕ ಮುನಿರತ್ನ ಅವರ ಮೇಲೆ ಮೊಟ್ಟೆಯಿಂದ ಹಲ್ಲೆ ಮಾಡಿರುವುದು ಖಂಡನೀಯ. ಮೊಟ್ಟೆಯಲ್ಲಿ ಆ್ಯಸಿಡ್ ತುಂಬಿರಬಹುದು ಎಂಬ ಶಂಕೆ ಆತಂಕಕಾರಿ ವಿಷಯವಾಗಿದೆ. ರಾಜ್ಯ ಸರ್ಕಾರವು ಆಡಳಿತ ಪಕ್ಷ, ವಿರೋಧ ಪಕ್ಷ ಎನ್ನದೇ ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳಬೇಕು. ಇಲ್ಲದೇಹೋದಲ್ಲಿ ಈ ರೀತಿಯ ಪ್ರಕರಣಗಳು ಮರುಕಳಿಸಲು ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ.

ಗುರು ಜಗಳೂರು, ಹರಿಹರ

ಕನ್ನಡ ಪದ ಪ್ರಯೋಗ: ಬೇಕು ಆದ್ಯತೆ

ಸರ್ವೋದಯ ಕರ್ನಾಟಕದ ನೈಸರ್ಗಿಕ ಕೃಷಿ ಕ್ಷೇತ್ರದ ಸ್ನೇಹಿತರಾದ ವಿಶ್ವೇಶ್ವರ ಸಜ್ಜನರ ಅವರ ಆಕಳು ಸಾಕಾಣಿಕೆ ಕೇಂದ್ರದ ಅಭಿವೃದ್ಧಿ ಕುರಿತು ಮಾಹಿತಿ ಪಡೆಯಲು ಅವರ ಗಿರ್ ಆಕಳು ಸಾಕಾಣಿಕೆ ಕೇಂದ್ರಕ್ಕೆ ಹೊರಟಿದ್ದೆವು. ಅಲ್ಲಿ ದಾರಿ ತಪ್ಪಿದಾಗ, ರೈತರು, ಕೂಲಿಕಾರ್ಮಿಕ ಹೆಣ್ಣುಮಕ್ಕಳನ್ನು ಗೋಶಾಲೆಯ ವಿಳಾಸ ಕೇಳಿದೆವು. ಯಾರಿಗೂ ಅರ್ಥವಾಗಲಿಲ್ಲ. ‘ತುಂಬಾ ಆಕಳುಗಳನ್ನು ಸಾಕುತ್ತಾರಲ್ಲ ಆ ಜಾಗ ಎಲ್ಲಿ?’ ಎಂದಾಗ ತಕ್ಷಣ ‘ಇಲ್ಲೇ ಮುಂದೆ ಇದೆ ನೋಡಿ’ ಎಂದರು. ಏಕೆಂದರೆ ಗೋಶಾಲೆ ಎಂದರೆ ಸಾಮಾನ್ಯ ಜನರಿಗೆ ಅರ್ಥವಾಗುವುದು ಕಷ್ಟ. ಗೋಶಾಲೆ ಎಂಬ ಸಂಸ್ಕೃತ ಪದದ ಬದಲು ‘ಆಕಳು ಸಾಕಾಣಿಕೆ ಕೇಂದ್ರ’ ಎಂದು ಕನ್ನಡದಲ್ಲಿ ಕರೆದರೆ ಒಳಿತು.

ಅದೇ ರೀತಿ ಯೋಗಾಸನ ತರಬೇತಿಯಲ್ಲಿ ಮಂತ್ರಗಳು ಹಾಗೂ ಆಸನಗಳ ಹೆಸರುಗಳನ್ನು ಶ್ವಾನಾಸನ, ಕೂರ್ಮಾಸನ, ಉಷ್ಟ್ರಾಸನ, ತಾಡಾಸನ ಎಂಬಂತಹ ಸಂಸ್ಕೃತದ ಪದಗಳಿಂದ ಕರೆಯುತ್ತಾರೆ. ಇದು ಹೆಚ್ಚಿನವರಿಗೆ ಅರ್ಥವಾಗುವುದಿಲ್ಲ. ಇಲ್ಲಿಯೂ ಕನ್ನಡ ಪದಗಳ ಪ್ರಯೋಗವಾಗಬೇಕು. ಆಗ ಯೋಗಾಸನದ ವಿದ್ಯಾರ್ಥಿಗಳಿಗೆ ತಕ್ಷಣ ಅರ್ಥವಾಗಿ ಸರಿಯಾಗಿ ಅನುಸರಿಸುತ್ತಾರೆ. ಭಾಷೆಯ ಉದ್ದೇಶ ನಮ್ಮ ಮಾತುಗಳು ಇನ್ನೊಬ್ಬರಿಗೆ ಅರ್ಥವಾಗುವುದು.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

ಹಸು ಮಾರಾಟದ ಹಕ್ಕು ರೈತರಿಗೇ ಇರಲಿ

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಬೀಡಾಡಿ ದನಗಳಿಂದ ಆಗುತ್ತಿರುವ ಅಪಘಾತಗಳನ್ನು ತಪ್ಪಿಸಲು ಹೆದ್ದಾರಿ ಬದಿಯಲ್ಲಿ ಪ್ರಾಯೋಗಿಕವಾಗಿ ಗೋಶಾಲೆ ತೆರೆಯಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮುಂದಾಗಿರುವುದಾಗಿ ವರದಿಯಾಗಿದೆ (ಪ್ರ.ವಾ., ಡಿ. 25). ಹಸು ಸಾಕಾಣಿಕೆ ಮತ್ತು ಅವುಗಳ ವಹಿವಾಟಿನ ವಿಷಯದಲ್ಲಿ ರೈತರಿಗಿದ್ದ ಹಿಡಿತ ತಪ್ಪಿದ ಮೇಲೆ ಏನೆಲ್ಲಾ ಸಮಸ್ಯೆಗಳು ಸೃಷ್ಟಿಯಾಗುತ್ತಿವೆ ಎಂಬುದನ್ನು ಸಮಾಜ ಗಮನಿಸುತ್ತಾ ಬಂದಿದೆ. ಈ ಹಿಂದೆ ಹಸು ಸಾಕುತ್ತಿದ್ದ ರೈತರು ಹಾಲು ಕೊಡದ ಹಸುಗಳನ್ನು ಮಾರಾಟ ಮಾಡಿ ತಮ್ಮ ಕುಟುಂಬದ ಆರ್ಥಿಕ ಸಮಸ್ಯೆಗಳನ್ನು ನೀಗಿಸಿಕೊಳ್ಳುತ್ತಿದ್ದರು. ಗೋಹತ್ಯೆಗೆ ನಿಷೇಧ ಹೇರಿದ ಮೇಲೆ ಗೋಹತ್ಯೆ ನಿಂತಿದೆಯೇ? ಈ ಮೊದಲಿಗಿಂತಲೂ ಹೆಚ್ಚಾಗಿ ದೇಶದಿಂದ ಗೋಮಾಂಸ ರಫ್ತಾಗುತ್ತಿರುವ ಸುದ್ದಿಯೂ ಇದೆ.

ಹಾವು ಹೊಡೆದು ಹದ್ದಿಗೆ ಕೊಟ್ಟರು ಎನ್ನುವಂತೆ ಯಾರೋ ವಹಿವಾಟು ನಡೆಸಿ ಹಣ ಮಾಡುತ್ತಿದ್ದಾರೆ. ಈಗಲಾದರೂ ಈ ವಿಷಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಚರ್ಚಿಸಿ, ಹಸು ಸಾಕಾಣಿಕೆ ಮತ್ತು ಅವುಗಳ ಮುಕ್ತ ವಹಿವಾಟು ನಡೆಸಲು ರೈತರಿಗೇ ಅವಕಾಶ ಕೊಡಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



‘ಅರ್ಥ ಕ್ರಾಂತಿ’ಯ ಹರಿಕಾರ



ಮಾಜಿ ಪ್ರಧಾನಿ, ಆರ್ಥಿಕ ಉದಾರೀಕರಣದ ಹರಿಕಾರ ಮನಮೋಹನ ಸಿಂಗ್ ಅವರು ಇನ್ನಿಲ್ಲ. ಅವರು ಅರ್ಥಶಾಸ್ತ್ರಜ್ಞರಾಗಿ, ಕೇಂದ್ರ ಸಚಿವರಾಗಿ, ಪ್ರಧಾನಿಯಾಗಿ ಸಲ್ಲಿಸಿದ ಸೇವೆ ಅವಿಸ್ಮರಣೀಯವಾದದ್ದು. ಅವರ ಬದುಕಿನ ಕೆಲವು ಪ್ರಮುಖ ಘಟ್ಟಗಳಿಗೆ ಸಾಕ್ಷಿಯಾಗಿ, ದೇಶ–ವಿದೇಶಗಳ ಖ್ಯಾತನಾಮರೊಂದಿಗಿನ ಅವರ ಚಿತ್ರಗಳು ಇಲ್ಲಿವೆ



ಅಜಾತಶತ್ರು ಅಟಲ್ ಬಿಹಾರಿ ವಾಜಪೇಯಿ ಜತೆಗೆ ಆರ್ಥಿಕ ತಜ್ಞ ಸಿಂಗ್



ಉದಾರೀಕರಣಕ್ಕಿದು ಸಕಾಲ... ಪ್ರಧಾನಿಯಾಗಿದ್ದ ಪಿ.ವಿ.ನರಸಿಂಹರಾವ್ ಅವರ ಜತೆಗೆ ಅವರ ಸಂಪುಟದಲ್ಲಿ ಅರ್ಥ ಸಚಿವರಾಗಿದ್ದ ಮನಮೋಹನ್ ಸಿಂಗ್ ಅವರು ಉದಾರೀಕರಣದ ಜಾರಿ ಬಗ್ಗೆ ಚರ್ಚಿಸಿದ ಕ್ಷಣ



ಸಭೆಯೊಂದರಲ್ಲಿ ಮನಮೋಹನ ಸಿಂಗ್ ಅವರಿಗೆ ಅಧಿಕಾರಿಯೊಬ್ಬರು ಕಿವಿಗೆ ಮೈಕ್ರೋಫೋನ್ ಅಳವಡಿಸಿದ ಕ್ಷಣ...



ಭಾರತಕ್ಕೆ ಭೇಟಿ ನೀಡಿದ್ದ ಪಾಕಿಸ್ತಾನದ ಅಧ್ಯಕ್ಷರಾಗಿದ್ದ ಪರ್ವೇಜ್ ಮುಷರಫ್ ಅವರೊಂದಿಗೆ ಮನಮೋಹನ ಸಿಂಗ್...



ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮನಮೋಹನ ಸಿಂಗ್ ಜತೆ ಮಾತುಕತೆ



ಮುತ್ಸದ್ದಿಗಳ ಸಮಾಗಮ... ಸಿಂಗ್ ಮತ್ತು ಎಚ್‌.ಡಿ.ದೇವೇಗೌಡ ಭೇಟಿಯ ಕ್ಷಣ





ಮೊಹಾಲಿಯಲ್ಲಿ ವಿಶ್ವಕಪ್ ಸೆಮಿಫೈನಲ್ ವೇಳೆ ಪಾಕಿಸ್ತಾನದ ಅಂದಿನ ಪ್ರಧಾನಿ ಅಬ್ದುಲ್ ರಜಾಕ್ ಗಿಲಾನಿ ಅವರು ಭೇಟಿ ನೀಡಿದಾಗಿನ ಕ್ಷಣ. ಸಚಿನ್ ತೆಂಡೂಲ್ಕರ್, ವೀರೇಂದ್ರ ಸೆಹ್ವಾಗ್ ಕೂಡ ಇದ್ದಾರೆ



2014ರ ಸೆಪ್ಟೆಂಬರ್‌ನಲ್ಲಿ ಟಿಬೆಟ್‌ನ ಧರ್ಮ ಗುರು ದಲೈ ಲಾಮಾ ಅವರು ಸಿಂಗ್ ಅವರ ಮನೆಗೆ ಭೇಟಿ ನೀಡಿ ಕುಶಲೋಪರಿ ನಡೆಸಿದ ಕ್ಷಣ



ಹಣಕಾಸು ಸಚಿವರಾಗಿದ್ದ ಸಿಂಗ್ ಅವರು ಬಾಂಗ್ಲಾ ಪ್ರಧಾನಿ ಆಗಿದ್ದ ಖಲೀದಾ ಜಿಯಾ ಅವರನ್ನು ಭೇಟಿ ಮಾಡಿದ್ದ ಸಂದರ್ಭ



ಬೆಂಗಳೂರಿನಲ್ಲಿ ನಡೆದಿದ್ದ ಕಾರ್ಯಕ್ರಮವೊಂದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ...



ತ್ರಿಮೂರ್ತಿಗಳು... ಜನತಾ ಪರಿವಾರದ ನಾಯಕರಾಗಿದ್ದ ಎಸ್‌ಆರ್‌.ಬೊಮ್ಮಾಯಿ ಮತ್ತು ರಾಮಕೃಷ್ಣ ಹೆಗಡೆ ಜತೆಗೆ ಸಿಂಗ್



ಕೆಪಿಸಿಸಿ ಅಧ್ಯಕ್ಷರಾಗಿದ್ದ ಮಲ್ಲಿಕಾರ್ಜುನ ಖರ್ಗೆ ಅವರು ಮನಮೋಹನ ಸಿಂಗ್ ಅವರನ್ನು ಸನ್ಮಾನಿಸಿದ್ದ ಕ್ಷಣ



ಅಮೆರಿಕಕ್ಕೆ 2013ರಲ್ಲಿ ಭೇಟಿ ನೀಡಿದ್ದ ಸಿಂಗ್ ಅಂದಿನ ಅಮೆರಿಕ ಅಧ್ಯಕ್ಷ ಬರಾಕ್ ಒಬಾಮ ಜತೆ ಮಾತುಕತೆ ನಡೆಸಿದ ಸಂದರ್ಭ



2008ರಲ್ಲಿ ಅಮೆರಿಕಕ್ಕೆ ಭೇಟಿ ನೀಡಿದ್ದ ಸಿಂಗ್ ಶ್ವೇತ ಭವನದಲ್ಲಿ ಅಂದಿನ ಅಧ್ಯಕ್ಷ ಜಾರ್ಜ್ ಡಬ್ಲ್ಯು ಬುಷ್ ಜತೆಗೆ ನಾಗರಿಕ ಅಣು ಒಪ್ಪಂದ ಕುರಿತ ಮಾತುಕತೆಗೆ ಮರು ಚಾಲನೆ ನೀಡಿದ್ದರು



2004ರಲ್ಲಿ ಲಂಡನ್‌ಗೆ ಭೇಟಿ ನೀಡಿದ್ದ ಮನಮೋಹನ ಸಿಂಗ್ ಬ್ರಿಟನ್ ಪ್ರಧಾನಿ ಟೋನಿ ಬ್ಲೇರ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದ ಕ್ಷಣ

ಗುಂಡಣ್ಣ



ಜೀವನದ ಸುಖದ ಸೂತ್ರ!

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ,
ಗವಿಮಠ, ಕೊಪ್ಪಳ

97

ಸ್ಟೀವ್ ಜಾಬ್ಸ್ ಅಂತಾ ಒಬ್ಬವ ಇದ್ದ. ಆಪಲ್ ಕಂಪೆನಿ ಮಾಲೀಕ. ಆತನಿಗೆ 33 ವರ್ಷ ಆಗೋವರೆಗೂ ಕೆಲಸ ಸಿಕ್ಕಿರಲಿಲ್ಲ. ಕೆಲವು ಕಡೆ ಅವನನ್ನು ಕೆಲಸದಿಂದ ತೆಗೆದು ಹಾಕಿದ್ದರು. ಆಶ್ಚರ್ಯ ಏನೆಂದರೆ, ಅವನಿಗೆ 53 ವರ್ಷ ಆಗೋದರೊಳಗೆ ಅವನು ವಿಶ್ವದ ಶ್ರೀಮಂತ ಆಗಿದ್ದ. ಬರೇ 20 ವರ್ಷದಲ್ಲಿ ಆತ ಅತ್ಯಂತ ಶ್ರೀಮಂತ ಆದ. ಸ್ಟೀವ್ ಜಾಬ್ಸ್‌ಗೆ ಒಂದು ಸಂದರ್ಶನದಲ್ಲಿ ಪತ್ರಕರ್ತರು ‘ನೀವು ಇಷ್ಟು ಶ್ರೀಮಂತರು, ಇಷ್ಟೆಲ್ಲಾ ಕಂಪೆನಿಗಳು ಇದಾವೆ. ಅದನ್ನೆಲ್ಲಾ ಹೇಗೆ ನಿರ್ವಹಿಸುತ್ತೀರಿ. ನೀವು ಸುಖವಾಗಿದ್ದೀರಿ. ಒತ್ತಡರಹಿತರಾಗಿದ್ದೀರಿ. ಈ ಸುಖದ ಸೂತ್ರ ಏನು’ ಎಂದು ಕೇಳಿದರಂತೆ. ಅದಕ್ಕೆ ಸ್ಟೀವ್ ಜಾಬ್ಸ್ ‘ನಾನು ರಾತ್ರಿ ಮಲಗುವ ಮುಂಚೆ ದೇವರಿಗೆ ನಮಸ್ಕರಿಸಿ, ದೇವರೇ ಇದು ನನ್ನ ಕೊನೆಯ ನಮಸ್ಕಾರ. ನಿನ್ನ ಸಾಮ್ರಾಜ್ಯದಲ್ಲಿ ಇವತ್ತು ಒಂದು ದಿನ ಬದುಕಲು ಅವಕಾಶ ಕೊಟ್ಟೆಯಲ್ಲ, ಅದಕ್ಕೆ ನಮಸ್ಕಾರ, ಧನ್ಯವಾದ ಅಂತೀನಿ. ಅಕಸ್ಮಾತ್ ಬೆಳಿಗ್ಗೆ ಎದ್ದೆ ಎಂದರೆ, ಮತ್ತೆ ದೇವರಿಗೆ ನಮಸ್ಕರಿಸಿ ಏನ್ ಕರುಣೆ ದೇವರೇ ನಿಂದು. ಇನ್ನೊಂದು ದಿನವನ್ನು ಕೊಟ್ಟಿದ್ದೀಯಲ್ಲ. ನಿನಗೆ ಚೆಂದ ಅನ್ನಿಸುವ ಹಾಗೆ ಇವತ್ತು ಬದುಕುತ್ತೀನಿ ಅಂತೀನಿ’ ಎಂದು ಉತ್ತರಿಸಿದ. ಇದು ಸುಖದ ಸೂತ್ರ. ಮನುಷ್ಯ ನಿಶ್ಚಿಂತನಾಗಿ ಬದುಕುವುದನ್ನು ಕಲಿಯಬೇಕು. ನಮಗೆ ಎರಡು ಮಕ್ಕಳಿದ್ದರೆ ಟೆನ್ಷನ್. ಆದರೆ ಇದೇ ರಾಜ್ಯದಲ್ಲಿ ಒಬ್ಬ ಯೋಗಿಗಳು ಬರೀ ಜೋಳಿಗೆ ಹಿಡಿದು ಹತ್ತು ಸಾವಿರ ಮಕ್ಕಳನ್ನು ಸಾಕಿದರು. ತುಮಕೂರಿನ ಸಿದ್ಧಗಂಗಾ ಸ್ವಾಮೀಜಿಗೆ ಎಂದೂ ಟೆನ್ಷನ್ ಇರಲೇ ಇಲ್ಲ. ನೂರಾ ಹನ್ನೊಂದು ವರ್ಷ ಅವರು ಬದುಕಿದರು. ನಮ್ಮ ಕತೆ ಹೇಗಿದೆ ಎಂದರೆ, ಹತ್ತು ವರ್ಷಕ್ಕೆ ಸೂಪರ್, 20 ವರ್ಷಕ್ಕೆ ಪವರ್, ಮೂವತ್ತಕ್ಕೆ ಪ್ರೆಶರ್, ನಲವತ್ತು ವರ್ಷಕ್ಕೆ ಶುಗರ್, ಐವತ್ತು ವರ್ಷಕ್ಕೆ ಡೇಂಜರ್ ಲೈನ್, 60ಕ್ಕೆ ಡಮಾರ್. ಮುಗಿದೇ ಹೋತು ಕತೆ.

ಮನೆಯಲ್ಲಿ ತಾಯಂದಿರು ಹಸುಗೂಸನ್ನು ಮೇಲಕ್ಕೆ ಹಾರಿಸುತ್ತಾರೆ. ತಾಯಿ ಎರಡೂ ಕೈ ಬಿಟ್ಟರೂ ಮಗು ಕಿಲಕಿಲ ಅಂತಾ ನಗತಿರ್ತೈತಿ. ದೊಡ್ಡವರನ್ನು ಹೀಗೆ ಮೇಲಕ್ಕೆ ಹಾರಿಸಿ ಎರಡೂ ಕೈ ಬಿಟ್ಟರೆ ಅವರು ಹಾಗೇ ಮೇಲೆಕ್ಕೇ ಹೋಗ್ತಾರೆ. ತಾಯಿ ಎರಡೂ ಕೈ ಬಿಟ್ಟು ಮೇಲಕ್ಕೆ ಹಾರಿಸಿದರೂ ಮಗು ಯಾಕೆ ನಗತ್ಯೆತಿ ಅಂದ್ರ, ಮಗುವಿಗೆ ಒಂದು ಭರವಸೆ ಐತಿ ತನಗೆ ಜನ್ಮ ಕೊಟ್ಟ ತಾಯಿ ಎಂದೂ ಕೈಬಿಡೋದಿಲ್ಲ ಅಂತ. ಹಾಗೆ ಭರವಸೆಯ ಮೇಲೆ ಬದುಕಬೇಕು. ನಾವು ಈ ಭೂಮಿಗೆ ಬರಲು ಕಾರಣವಾದ ಶಕ್ತಿ ಯಾವತ್ತೂ ನಮ್ಮ ಕೈಬಿಡುವುದಿಲ್ಲ ಎಂಬ ಭರವಸೆಯ ಮೇಲೆ ಬದುಕಬೇಕು. ಅಂತಹ ಭರವಸೆಯನ್ನು ಇಟ್ಟುಕೊಂಡು ನಿಶ್ಚಿಂತನಾಗಿ ಬದುಕುವುದೇ ಸುಖದ ಸೂತ್ರ. ಯುಕ್ತ ಆಹಾರ, ಯುಕ್ತ ಕೆಲಸ ಮತ್ತು ಯುಕ್ತ ನಿದ್ದೆ ಇವೇ ಸುಖದ ಸೂತ್ರ. ಅದನ್ನು ಬಿಟ್ಟು ಮುಂದೆ ಯಾವಾಗಲೋ ಏನಾದರೂ ಆಗಬಹುದು ಎಂದು ಭಯಗೊಳ್ಳುವುದು, ಹಿಂದೆ ಏನೋ ಆಗ್ಯೆತಿ ಅಂತ ಅಂತ ದುಃಖ ಪಡುತ್ತಾ ಇರುವುದು ನಮ್ಮ ಸುಖವನ್ನು ಕಸಿದುಕೊಳ್ಳುತ್ತದೆ. ವರ್ತಮಾನದಲ್ಲಿ ಬದುಕುವುದೇ ಸಂತೋಷದ ಜೀವನ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಡಿಸೆಂಬರ್ 27, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ದ್ವಾದಶಿ ಗಂ. 26-27 ನಕ್ಷತ್ರ: ವಿಶಾಖಾ ಗಂ. 20-29 ಯೋಗ: ಧೃತಿ ಗಂ. 22-37 ಕರಣ: ಕೌಲವ ಗಂ. 13-40, ಧನು ಮಾಸದ 11 ನೇ ದಿನ, ಮಳೆನಕ್ಷತ್ರ: ಮೂಲ 4.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-55 ಸೂರ್ಯಾಸ್ತ : 06-08
ಮುಸ್ಲಿಂ ದಿನಾಂಕ : 24 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 7, 11

ಮೇಷ: ದವಸ ಧಾನ್ಯಗಳ ವ್ಯಾಪಾರಸ್ಥರು ಎಚ್ಚರಿಕೆಯಿಂದ ಇದ್ದರೆ ಬಂಡವಾಳದ ಮೂಲಧನವನ್ನು ಕಾಪಾಡಿಕೊಳ್ಳಲು ಸಾಧ್ಯ. ನವ ದಂಪತಿಗೆ ಹರ್ಷದ ಸಮಾಚಾರ ಕೇಳಿ ಬರುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು.

ವೃಷಭ: ಔದ್ಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಡ್ತಿ ದೊರೆಯುವ ಸಂಭವವಿದೆ. ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯ ಹೊಂದುವಿರಿ. ಸಾಕುಪ್ರಾಣಿಯಿಂದ ಅಗಲಿಕೆ ಸ್ವಲ್ಪ ಬೇಸರ ಕಾಡುವುದು.

ಮಿಥುನ: ಕೇವಲ ಆಧ್ಯಾತ್ಮಿಕ ಮತ್ತು ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದರಿಂದ ಅದರಲ್ಲಿಯೇ ಸಮಯ ಕಳೆಯುವಂತಾಗುವುದು. ಅಧಿಕಾರಿಗಳ ಖಾಸಗಿ ಸಂಪರ್ಕದಿಂದ ಕೆಲಸಗಳಿಗೆ ಹೆಚ್ಚಿನ ಪುಷ್ಟಿ ದೊರೆಯಲಿದೆ.

ಕರ್ಕಾಟಕ: ಲೆಕ್ಕಪತ್ರಗಳ ನಿರ್ವಹಣೆಯಲ್ಲಿ, ಪೋಷಣೆಯಲ್ಲಿ ದುಡುಕಬೇಡಿ. ವೃತ್ತಿ ನಿಪುಣತೆಯಿಂದ ಉನ್ನತಾಧಿಕಾರಿಯ ಹುದ್ದೆಗೆ ನೇಮಕಗೊಳ್ಳುವಿರಿ. ತಂದೆಯ ಆರೋಗ್ಯ ಸುಧಾರಣೆಯಾಗಿ ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ.

ಸಿಂಹ: ವೃತ್ತಿರಂಗದಲ್ಲಿ ರಚನಾತ್ಮಕ ಕಾರ್ಯಗಳ ನಿರ್ವಹಣೆಯಿಂದ ಹೆಚ್ಚಿನ ಅವಕಾಶಗಳು ಲಭ್ಯವಾಗಲಿವೆ. ಮಗಳ ಮದುವೆಯ ವಿಚಾರದಲ್ಲಿ ಇಡುವ ಹೆಜ್ಜೆ ಬಹಳ ಪ್ರಮುಖವಾದುದು.

ಕನ್ಯಾ: ಪೆಟ್ರೋಲಿಯಂ ಉತ್ಪನ್ನಗಳ ಮಾರಾಟದಿಂದ ಆದಾಯದ ಜತೆಯಲ್ಲಿ ಸಾಗಣೆಯಲ್ಲಿ ಸಣ್ಣಪುಟ್ಟ ಸಮಸ್ಯೆಗಳೂ ಕಾಡಬಹುದು. ರಾಜಕೀಯ ವ್ಯಕ್ತಿಗಳು ನಿಮ್ಮ ಪರವಾದ ಪರಿಸ್ಥಿತಿಯ ಲಾಭ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ.

ತುಲಾ: ಸಂಶೋಧನಾಕಾರರು ವ್ಯಾಸಂಗಕ್ಕಾಗಿ ಸಮಯವನ್ನು ಮೀಸಲಿಡಬೇಕಾಗಲಿದೆ. ವೃತ್ತಿ ಪರವಾಗಿ ಕಚೇರಿಯಲ್ಲಿ ಗೌರವ ದೊರೆಯಲಿದೆ. ಕೇಟರಿಂಗ್ ಮತ್ತು ಹೋಟೆಲ್ ಉದ್ಯಮದವರಿಗೆ ಶುಭ ದಿನ.

ವೃಶ್ಚಿಕ: ವ್ಯವಹಾರಕ್ಕೆ ಸಂಬಂಧಿಸಿದಂತೆ ಔದಾರ್ಯ ಬುದ್ಧಿಯನ್ನು ತೋರಿದಲ್ಲಿ ವಂಚನೆಗೆ ಒಳಗಾಗುವ ಸನ್ನಿವೇಶಗಳಿವೆ. ಸ್ನೇಹಪರ ಸ್ವಭಾವದಿಂದ ವೈಯಕ್ತಿಕ ಸ್ಥಾನಮಾನ ಲಭಿಸುವುದು. ಗೃಹ ಸಾಮಗ್ರಿ ಖರೀದಿಯಿಂದ ಖರ್ಚು ಬರಲಿದೆ.

ಧನು: ವ್ಯವಹಾರಗಳ ವಿಷಯಕ್ಕೆ ಸಂಬಂಧಿಸಿದಂತೆ ಪಾಲುದಾರರೊಂದಿಗೆ ಚರ್ಚೆ ನಡೆಸಬೇಕಾದ ಪರಿಸ್ಥಿತಿ ಮತ್ತು ತಕ್ಷಣದಲ್ಲಿಯೇ ತೀರ್ಮಾನ ತೆಗೆದುಕೊಳ್ಳಬೇಕಾದ ಸನ್ನಿವೇಶ ಎದುರಾಗಲಿದೆ. ಕೃಷಿ ಉತ್ಪನ್ನಗಳಿಂದ ಆದಾಯವಿದೆ.

ಮಕರ: ಸಾಮರ್ಥ್ಯಕ್ಕೆ, ಪ್ರತಿಭೆಗೆ ಅನುಗುಣವಾದ ಉದ್ಯೋಗ ಅವಕಾಶ ದೊರೆತು ಸಂತಸವಾಗಲಿದೆ. ಬಂಧುಗಳೊಂದಿಗೆ ಸಂತೋಷ ಕೂಟದಲ್ಲಿ ಭಾಗವಹಿಸುವಿರಿ. ವೃತ್ತಿ ಪ್ರಾಮಾಣಿಕತೆಗೆ ನಿರೀಕ್ಷೆ ಮೀರಿದ ಗೌರವ ಲಭ್ಯ.

ಕುಂಭ: ವಿದ್ಯಾರ್ಥಿಗಳ ಅಧ್ಯಯನದಲ್ಲಿ ಹೆಚ್ಚಿನ ಪ್ರಗತಿ ಕಂಡುಬರಲಿದೆ. ಹಿರಿಯರ ಅಥವಾ ಗುರುಗಳ ಸಲಹೆ ಸ್ವೀಕರಿಸಿ. ಹೊಸದನ್ನು ಕಲಿಯುವ ಉತ್ಸಾಹ ಮೂಡಲಿದೆ. ವಿಷ್ಣುಸಹಸ್ರನಾಮ ಸ್ತೋತ್ರ ಪಠಿಸಿರಿ.


ಮೀನ: ಅತ್ಯುತ್ತಮ ಜೀವನಶೈಲಿಯನ್ನು ಬಯಸುವವರು ಜೀವನೋಪಾಯಕ್ಕೆ ಪರ್ಯಾಯ ಮಾರ್ಗವೊಂದನ್ನು ಕಂಡುಕೊಳ್ಳಬೇಕಾಗುತ್ತದೆ. ಜಾಹೀರಾತು ಏಜೆನ್ಸಿಯವರಿಗೆ ಅಧಿಕ ಆದಾಯವಿರುವುದು.

ಪದಬಂಧ 5904

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬೆಳಗಾಗುತ್ತಲೇ ನೆರೆದ ನೆಂಟರ ಸಮೂಹ (3)
4.ಎಲ್ಲರದ್ದೂ ಒಂದೇ ಮತ (3)
6.ದನಕಾಯುವವನು ನೋಡಿದ್ದು ಅಶ್ವದ ಮುಖ (5)
7.ರವಿಕೆಯನ್ನು ಒಣಗಿಸಿದ ಸೂರ್ಯ (2)
9.ಕನ್ನಡ ಮಾತಾಡುವವನಿಗೆ ದೊರೆತ ಸಾಲ (2)
10.ಕಾದಾಡುವ ಜಾಗದಲ್ಲಿನ ಅರಣ್ಯ (2)
11.ವಾದಸರಣಿಯಲ್ಲಿ ಕೇಳಿದ್ದು ಉಲ್ಟಾ ಮಾತು (2)
12.ಬಡಿವಾರ ತೋರಿದ್ದು ಏಳು ದಿನ (2)
13.ಆರ್ಭಟದಲ್ಲಿ ಉಲ್ಟಾ ಹೊಡೆದ ಕ್ರೀಡೆ! (2)
18.ನಯವಂತಿಗೆ ತೋರುತ್ತಲೇ ಮೋಸಮಾಡುವವನು (5)
19.ನಡುವೆಯೇ ಶುರುವಾದ ಕಂಪನ (3)
20.ರೀತಿಯೊಡಗೂಡುವ ಪದ್ಧತಿ (3)

ಮೇಲಿಂದ ಕೆಳಕ್ಕೆ
1.ಬರದಲ್ಲಿಯೂ ತೋರುತ್ತಿರುವ ಡೌಲು (4)
2.ಗಮನ ನೀಡಿ! ಇದು ಬಲು ಗಂಭೀರ! (3)
3.ವನದ ಬಗ್ಗೆ ಬರೆದ ಪದ್ಯ (3)
4.ನೆನಪು ಮಾಡಿಕೊಂಡು ತೋರಿದ ವಯ್ಯಾರ (3)
5.ತಡವಾಗಿ ಬಂದರೆ ಈ ತಬ್ಬಿಬ್ಬು (4)
8.ಕಾರನೇರುವಾಗಲೇ ಅಂದಗೆಟ್ಟಿದ್ದು! (3)
9.ಕಟ ಕಟ ಶಬ್ದ ಮಾಡುವ ಬಾಗಿಲು (3)
12.ತಾಯಿಯ ಮನೆಯ ತೆರೆದ ಕಿಟಕಿ (4)
14.ಆ ಗುಜು ಗುಜು ನಡೆದದ್ದು ಅಕ್ಕಪಕ್ಕದಲ್ಲೇ! (4)
15.ಪಾನಕಕ್ಕೆ ಬಾಯಿ ಹಾಕಿದ ನಾಯಿ (3)
16.ವಂಗ ದೇಶದಲ್ಲಿರುವ ಸಾಂಬಾರದ್ರವ್ಯ (3)
17.ಮಂಕ ಹೊತ್ತಿರುವ ಬುಟ್ಟಿ (3)



5903ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮುಲಾಮು 3.ಅಡಿ
5.ಚಿರಶಾಂತ 6.ಕರಡು
7.ಯತಿ 9.ಕದರಡಿಕೆ
11.ಣಬಾ 13.ನರ್ತವ
14.ಕಾವ್ಯಾನಂದ
15.ಸ್ತರ 16.ಕುರುಹು
ಮೇಲಿಂದ ಕೆಳಕ್ಕೆ:
1.ಲಾಭಬಡುಕ
3.ಅತಿಥೇಯ 4.ಅಂತಃಕರಣ
5.ಚಿಕವೀರರಾಜೇಂದ್ರ
8.ತಿಳುವಳಿಕೆ 10.ಕೆನೆಮೊಸರು
12.ಭಾಗಾಕಾರ

ಸುಡೊಕು 6289

9	2			5		8	4	
			3		9			1
	4	3		1			5	7
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6288 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8



1924ರಲ್ಲಿ ಮಹಾತ್ಮ ಗಾಂಧಿ ಅಧ್ಯಕ್ಷತೆಯಲ್ಲಿ ನಡೆದಿದ್ದ ಕಾಂಗ್ರೆಸ್ ಅಧಿವೇಶನದ ನೆನಪಲ್ಲಿ ‘ಗಾಂಧಿ ಭಾರತ’ಕ್ಕೆ ಚಾಲನೆ

ಅಧಿವೇಶನ: ಕಾಂಗ್ರೆಸ್ಸಿಗರಲ್ಲಿ ನವೋಲ್ಲಾಸ

● ಸಂತೋಷ ಈ. ಚಿನಗುಡಿ

ಬೆಳಗಾವಿ: ಬರೋಬ್ಬರಿ ನೂರು ವರ್ಷಗಳ ಬಳಿಕ ಆ ಕ್ಷಣ ಮರಳಿತು. ಮಹಾತ್ಮ ಗಾಂಧಿ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಕ್ಷಣಗಳನ್ನು ನಾಯಕರು ಹೃದಯತುಂಬಿ ಸ್ಮರಿಸಿದರು. ಒಂದೆಡೆ ರಾಜ್ಯ ಸರ್ಕಾರದ ಕಾರ್ಯಕ್ರಮ, ಇನ್ನೊಂದೆಡೆ ಕಾಂಗ್ರೆಸ್ ಪಕ್ಷದ ಚಟುವಟಿಕೆಗಳು ಇಡೀ ನಗರವನ್ನು ಗಾಂಧಿಮಯ ಮಾಡಿದವು.

ಗಾಂಧೀಜಿ ಆದಿಯಾಗಿ ಸ್ವಾತಂತ್ರ್ಯ ಸೇನಾನಿಗಳೆಲ್ಲ ಮೆಟ್ಟಿದ ನೆಲದಲ್ಲೇ ಹಾಲಿ ಕಾಂಗ್ರೆಸ್ ನಾಯಕರು ಅಡಿಯಿಟ್ಟರು. 1924ರ ಅಧಿವೇಶನ ನಡೆದ ಸ್ಥಳದಲ್ಲೇ ಕಾರ್ಯಕಾರಿಣಿ ಸಮಿತಿಯ ಸಭೆ ನಡೆಸಿದರು. ಶತಮಾನದ ಹೆಜ್ಜೆ ಗುರುತುಗಳನ್ನೇ ಯಥಾವತ್ತಾಗಿ ಅನುಸರಿಸಿದರು. ಎಐಸಿಸಿ ನಾಯಕರಲ್ಲಿ ‘ನವ ಚೈತನ್ಯ’ದ ಕಾರಂಜಿ ಪುಟಿಯಿತು.

ಶತಮಾನದ ಹಿಂದೆ ಬಾಪೂಜಿ ನಿಂತಿದ್ದು ಇಲ್ಲೇ ಅಲ್ಲವೇ! ಕುಳಿತಿದ್ದು, ಮಾತನಾಡಿದ್ದು ಇದೇ ಸ್ಥಳವಲ್ಲವೇ! ಆ ಭಾಗ್ಯ ಮರಳಿ ನಮ್ಮ ಕಾಲಕ್ಕೇ ಬಂದಿತೇ! ಎಂಬಿತ್ಯಾದಿ ಮಾತುಗಳನ್ನು ಹಂಚಿಕೊಂಡರು. ವೀರಸೌಧ ಕಾಂಗ್ರೆಸ್‌ನ ‘ಶಕ್ತಿಕೇಂದ್ರ’ವಾಗಿ ಪರಿವರ್ತನೆ ಆಯಿತು.

ಇದೇ ಸ್ಥಳದಲ್ಲಿ ಸ್ವಾತಂತ್ರ್ಯ ಯೋಧರು ನಡೆದುಕೊಂಡು ಹೋಗಲು ದಾರಿ ಮಾಡಲಾಗಿತ್ತು. ಆ ದಾರಿ ‘ಕಾಂಗ್ರೆಸ್ ರಸ್ತೆ’ ಎಂದೇ ಹೆಸರಾಗಿದೆ. ಈಗಿನ ನಾಯಕರು ಕೂಡ ತಮ್ಮ ವಾಹನಗಳಲ್ಲಿ ಅದೇ ಮಾರ್ಗದಲ್ಲಿ ಸಾಗಿಬಂದರು.

1924ರ ಡಿಸೆಂಬರ್ 26ನೇ ದಿನ ಮಧ್ಯಾಹ್ನ 3ಕ್ಕೆ ಗಾಂಧೀಜಿ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಸೇನಾನಿಗಳ ಅಧಿವೇಶನ ನಡೆದಿತ್ತು. ಅದೇ ದಿನ ಅದೇ ಸಮಯವನ್ನು ಅನುಸರಿಸಿ ಎಐಸಿಸಿ ಕಾರ್ಯಕಾರಿಣಿ ಸಮಿತಿ ಸಭೆ ನಡೆಸುವ ಮೂಲಕ, ಕಾಂಗ್ರೆಸ್ಸಿಗರು ದೇಶಕ್ಕೆ ನವ ಸತ್ಯಾಗ್ರಹದ ಸಂದೇಶ ರವಾನಿಸಿದರು.

ಚಾಲನೆ ನೀಡಿದ ಸಿ.ಎಂ: ಇಲ್ಲಿನ ಟಿಳಕವಾಡಿಯಲ್ಲಿನ ವೀರಸೌಧದಲ್ಲಿ ಗುರುವಾರ ಬೆಳಿಗ್ಗೆ ಮಹಾತ್ಮ ಗಾಂಧೀಜಿ ನೂತನ ಪ್ರತಿಮೆಯನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯ ಅನಾವರಣಗೊಳಿಸಿದರು. ಇದರೊಂದಿಗೆ ‘ಗಾಂಧಿ ಭಾರತ’ ಕಾರ್ಯಕ್ರಮಗಳಿಗೆ ಚಾಲನೆ ಕೊಟ್ಟರು.

ವೀರಸೌಧದ ಆವರಣದಲ್ಲಿನ ಗಾಂಧಿ ಸ್ಮಾರಕ ಭವನದಲ್ಲಿನ ನವೀಕೃತ ಫೋಟೊ ಗ್ಯಾಲರಿಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು. ಇದೇ ವೇಳೆ ವೀರಸೌಧ (ಕಾಂಗ್ರೆಸ್ ಬಾವಿ) ಆವರಣದಲ್ಲಿ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಜತೆಯಾಗಿ ಸಸಿ ನೆಟ್ಟು ನೀರೆರೆದರು.

ಸಚಿವರಾದ ಎಚ್.ಕೆ.ಪಾಟೀಲ, ಎಂ.ಬಿ.ಪಾಟೀಲ, ಎಚ್.ಸಿ. ಮಹದೇವಪ್ಪ, ಲಕ್ಷ್ಮೀ ಹೆಬ್ಬಾಳಕರ, ಶರಣಬಸಪ್ಪ ದರ್ಶನಾಪುರ, ಕೆ.ಎಚ್. ಮುನಿಯಪ್ಪ, ಸರ್ಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ, ಶಾಸಕ ಆಸಿಫ್ (ರಾಜು) ಸೇಠ್, ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ, ಮಾಜಿ ಸಚಿವ ಆರ್.ವಿ.ದೇಶಪಾಂಡೆ, ಬುಡಾ ಅಧ್ಯಕ್ಷ ಲಕ್ಷ್ಮಣರಾವ ಚಿಂಗಳೆ ಕೂಡ ಜತೆಯಾದರು.

ಅಲ್ಲಿಂದ ನೇರವಾಗಿ ರಾಮತೀರ್ಥ ನಗರಕ್ಕೆ ಬಂದ ಸಿದ್ದರಾಮಯ್ಯ, ‘ಗಂಗಾಧರರಾವ್ ದೇಶಪಾಂಡೆ ಸ್ಮಾರಕ ಭವನ’ ಮತ್ತು ‘ಫೋಟೊ ಗ್ಯಾಲರಿ’ ಲೋಕಾರ್ಪಣೆಗೊಳಿಸಿದರು. ₹1.58 ಕೋಟಿ ವೆಚ್ಚದಲ್ಲಿ ನಿರ್ಮಿಸಿದ ಭವನ, ದೇಶಪಾಂಡೆ ಅವರ ಪುತ್ಥಳಿ, ಉದ್ಯಾನವನ್ನೂ ವೀಕ್ಷಿಸಿದರು. ಅಲ್ಲಿ ಇಟ್ಟಿದ್ದ ಗಾಂಧಿ ಚರಕದಲ್ಲಿ ನೂಲುವ ಮೂಲಕ ಅವರು ಗಮನ ಸೆಳೆದರು. ಡಿ.ಕೆ.ಶಿವಕುಮಾರ್ ಹಾಗೂ ಬಹುಪಾಲು ಸಚಿವರೂ ಇದಕ್ಕೆ ಕೈ ಜೋಡಿಸಿದರು.

ಸಚಿವರಾದ ಸತೀಶ ಜಾರಕಿಹೊಳಿ, ಭೈರತಿ ಸುರೇಶ್, ಶಿವರಾಜ ತಂಗಡಗಿ, ದಿನೇಶ್ ಗುಂಡೂರಾವ್, ಶಾಸಕ ಗಣೇಶ್ ಹುಕ್ಕೇರಿ, ವಿಧಾನ ಪರಿಷತ್ ಸದಸ್ಯ ಪ್ರಕಾಶ್ ಹುಕ್ಕೇರಿ ಸೇರಿದಂತೆ ಹಿರಿಯ ಅಧಿಕಾರಿಗಳೆಲ್ಲ ಪಾಲ್ಗೊಂಡರು.

ನಗರದ ಸರ್ದಾರ್ ಮೈದಾನದಲ್ಲಿ ಏರ್ಪಡಿಸಿದ ‘ಖಾದಿ ಉತ್ಸವ ಮತ್ತು ಸರಸ್ ಮೇಳ ವಸ್ತುಪ್ರದರ್ಶನ, ಮಾರಾಟ ಮೇಳ’ವನ್ನೂ ಸಿದ್ದರಾಮಯ್ಯ ಉದ್ಘಾಟಿಸಿದರು. ಗುಡಿ ಕೈಗಾರಿಕೆಗಳ ಮೂಲಕ ಸಿದ್ಧಪಡಿಸಿದ ವಿವಿಧ ವಸ್ತುಗಳನ್ನು ಅವರು ಕೌತುಕದಿಂದ ವೀಕ್ಷಿಸಿದರು.



ಬೆಳಗಾವಿಯ ವೀರಸೌಧದಲ್ಲಿ ಮಹಾತ್ಮ ಗಾಂಧಿ ಅವರ ಪ್ರತಿಮೆಯನ್ನು ವಿಪಕ್ಷ ನಾಯಕ ರಾಹುಲ್ ಗಾಂಧಿ ಗುರುವಾರ ವೀಕ್ಷಿಸಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇದ್ದಾರೆ – ಪ್ರಜಾವಾಣಿ ಚಿತ್ರ

ರೇಷ್ಮೆ ಶಾಲು, ಶ್ರೀಗಂಧ, ಕುಂದಾ, ಕರದಂಟು ಕಾಣಿಕೆ

‘ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಆದಿಯಾಗಿ ಎಲ್ಲ 150 ನಾಯಕರಿಗೂ ಕರ್ನಾಟಕದ ಸಂಸ್ಕೃತಿ ಬಿಂಬಿಸುವ ಕಾಣಿಕೆ ನೀಡಿದ್ದೇವೆ. ವಿಶೇಷವಾದ ರೇಷ್ಮೆ ಶಾಲು ಹೊದಿಸಿ, ಗಾಂಧಿ ಭಾರತದ ಪುಸ್ತಕಗಳು, ಮೈಸೂರು ಶ್ರೀಗಂಧದ ಮಾದರಿ, ಬೆಳಗಾವಿ ಸಿಹಿತಿನಿಸುಗಳಾದ ಕುಂದಾ, ಕರದಂಟು ಇರುವ ಪೊಟ್ಟಣ ಕೊಟ್ಟು ಸನ್ಮಾನಿಸಿದ್ದೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

‘ಶುಕ್ರವಾರ (ಡಿ.27) ಬೆಳಿಗ್ಗೆ 10.30ಕ್ಕೆ ಸುವರ್ಣ ವಿಧಾನಸೌಧ ಮುಂದೆ ಗಾಂಧೀಜಿ ಅವರ 37 ಅಡಿ ಎತ್ತರದ ಪ್ರತಿಮೆ ಅನಾವರಣ ನಡೆಯಲಿದೆ. ಇದಕ್ಕೆ ಎಲ್ಲ ಪಕ್ಷಗಳ ಸಂಸದರು, ಶಾಸಕರನ್ನು ಆಹ್ವಾನಿಸಲಾಗಿದೆ’ ಎಂದು ತಿಳಿಸಿದರು.

ಸಂಭ್ರಮ ಇಮ್ಮಡಿಸಿದ ಖರ್ಗೆ, ರಾಹುಲ್

ಮಧ್ಯಾಹ್ನ 12.30ಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ, ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ವಿಶೇಷ ವಿಮಾನದ ಮೂಲಕ, ಇಲ್ಲಿನ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ಬಂದಿಳಿದರು. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೆವಾಲಾ ಹಾಗೂ ಎಲ್ಲ ಸಚಿವರು ಅವರನ್ನು ಸ್ವಾಗತಿಸಿದರು.

ಅವರ ಮುಂದಾಳತ್ವದಲ್ಲಿ ನಾಯಕರ ದಂಡು ವೀರಸೌಧದತ್ತ ಹೆಜ್ಜೆ ಹಾಕಿದಾಗ ಕಾರ್ಯಕರ್ತರ ಹುಮ್ಮಸ್ಸು ಇಮ್ಮಡಿಯಾಯಿತು. ಕಾಂಗ್ರೆಸ್ ಸೇವಾದಳದ ಕಾರ್ಯಕರ್ತರು ಇನ್‌ಕ್ವಿಲಾಬ್ ಜಿಂದಾಬಾದ್, ಹಿಂದೂಸ್ತಾನ್ ಜಿಂದಾಬಾದ್ ಘೋಷಣೆ ಮೊಳಗಿಸಿದರು.

ಜನರಿಗೆ ಕಾಣಿಸಿಕೊಳ್ಳದ ನಾಯಕರು

‘ಗಾಂಧಿ ಭಾರತ’ ಕಾರ್ಯಕ್ರಮಕ್ಕೆ ಇಡೀ ನಗರವನ್ನು ಸಿಂಗರಿಸಲಾಗಿದೆ. ಕಾಂಗ್ರೆಸ್ ಹಿರಿಯ ನಾಯಕರೆಲ್ಲ ಬರುತ್ತಾರೆ ಎಂದು ಜನ ಕೌತುಕದಿಂದ ಕಾಯುತ್ತಿದ್ದರು. ಆದರೆ, ನಗರ ಪ್ರವೇಶ ಮಾಡಿದ ನಾಯಕರು ಸಾರ್ವಜನಿಕವಾಗಿ ಕಾಣಿಸಿಕೊಳ್ಳಲಿಲ್ಲ.

ಐತಿಹಾಸಿಕ ಕ್ಷಣದ ‘ಮರು ಚಿತ್ರಣ’ ಚಿತ್ರೀಕರಿಸಲು ನಾಲ್ಕು ತಾಸು ಕಾದು ನಿಂತಿದ್ದ ಮಾಧ್ಯಮಗಳ ಕಣ್ಣಿಗೂ ಕಾಣಿಸಲಿಲ್ಲ. ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಮುಂದಾಳತ್ವದಲ್ಲಿ ‘ನವ ಸತ್ಯಾಗ್ರಹ’ ಘೋಷಣೆ ಅಡಿ 100 ಅಡಿಗಳ ಸಾಂಕೇತಿಕ ಪಥಸಂಚಲನ ನಡೆಯಿತು. ಇದರ ಸುತ್ತಲೂ ಸೇವಾದಳ ಕಾರ್ಯಕರ್ತರೇ ಮುಗಿಬಿದ್ದ ಕಾರಣ ನಾಯಕರ ಮುಖ ಕ್ಯಾಮೆರಾ ಕಣ್ಣಿಗೂ ಸಿಗಲಿಲ್ಲ.

ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿ ಸಭೆ ನಡೆದ ಟಿಳಕವಾಡಿ ಪ್ರದೇಶದಲ್ಲಿ ವಾಹನ ಸಂಚಾರವನ್ನು ಕೆಲಕಾಲ ಬಂದ್ ಮಾಡಲಾಯಿತು. ಇಡೀ ದಿನ ನಗರದ ಎಲ್ಲ ವೃತ್ತಗಳು ಸಂಚಾರ ದಟ್ಟಣೆಯಿಂದ ತುಂಬಿದವು.

ಸ್ವಾತಂತ್ರ್ಯ ಹೋರಾಟಗಾರರ ಮೆಲುಕು

1937ರಲ್ಲಿ ಗಾಂಧೀಜಿ ಅವರು ಹುದಲಿ ಗ್ರಾಮಕ್ಕೆ ನೋಡಲು ಸಾಧ್ಯವಾಗಿರಲಿಲ್ಲ. ಆದರೆ, 1942ರಲ್ಲಿ ಅವರು ನೀಡಿದ ‘ಮಾಡು ಇಲ್ಲವೇ ಮಡಿ’ ಎಂಬ ಕರೆ ನಮ್ಮೆಲ್ಲರನ್ನೂ ಬಡಿದೆಬ್ಬಿಸಿತು

‘ಗಾಂಧೀಜಿ ಅಧಿವೇಶನ ನೋಡಿರಲಿಲ್ಲ, ಈಗ ಶತಮಾನೋತ್ಸವ ಕಂಡೆ’

● ರಾಹುಲ ಬೆಳಗಲಿ

ಬೆಳಗಾವಿ: ‘ಮಹಾತ್ಮ ಗಾಂಧೀಜಿ ಬೆಳಗಾವಿಗೆ 1924ರಲ್ಲಿ ಮತ್ತು ಹುದಲಿ ಗ್ರಾಮಕ್ಕೆ 1937ರಲ್ಲಿ ಬಂದಿದ್ದರು. ಆಗ ಏನೆಲ್ಲ ನಡೆದಿತ್ತು ಎಂಬುದನ್ನು ಕೇಳಿ ತಿಳಿದುಕೊಂಡಿದ್ದೆ ಹೊರತು ನೋಡಲು ಆಗಿರಲಿಲ್ಲ. ಗಾಂಧೀಜಿ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ನೆನಪಿನಲ್ಲಿ ಶತಮಾನೋತ್ಸವದ ಆಚರಣೆ ನೋಡಿ ಕಣ್ತುಂಬಿಕೊಂಡೆ’ ಎಂದು ಶತಾಯುಷಿ, ಸ್ವಾತಂತ್ರ್ಯ ಹೋರಾಟಗಾರ ರಾಜೇಂದ್ರ ಕಲಘಟಗಿ ಹೇಳಿದರು.



ಗಾಂಧೀಜಿ ಸ್ಮರಣೆಯಲ್ಲಿ ವೀರಸೌಧಕ್ಕೆ ಇನ್ನಷ್ಟು ಅಭಿವೃದ್ಧಿಪಡಿಸಬೇಕು. ಗಾಂಧೀಜಿಯವರ ಸಂದೇಶ ಎಲ್ಲರಿಗೂ ತಲುಪಬೇಕು
ರಾಜೇಂದ್ರ ಕಲಘಟಗಿ, ಸ್ವಾತಂತ್ರ್ಯ ಹೋರಾಟಗಾರ

‘ಗಾಂಧಿ ಭಾರತ’ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಗುರುವಾರ ‘ಪ್ರಜಾವಾಣಿ’ ಜೊತೆ ಮಾತನಾಡಿದ ಅವರು, ‘ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಗಾಂಧೀಜಿ ಹೇಳಿದ್ದನ್ನೂ ಪಾಲಿಸಿದೆವು. ದಾಸ್ಯದಿಂದ ದೇಶವನ್ನು ಮುಕ್ತಗೊಳಿಸುವುದು ನಮ್ಮ ಗುರಿಯಾಗಿತ್ತು’ ಎಂದರು.

‘1942 ರಿಂದ 1947ರವರೆಗಿನ ಅವಧಿಯಲ್ಲಿ ಹೋರಾಟ ತೀವ್ರ ಸ್ವರೂಪ ಪಡೆದಾಗ, ಸ್ನೇಹಿತರಾದ ಯಾಳಗಿ, ಕಾಮತ್, ಕರಿಲಿಂಗ ಮತ್ತಿತರರು ಸೇರಿ ರೈಲ್ವೆ ಹಳಿಯ ಕಂಬಿಗಳನ್ನು ಕೀಳುತ್ತಿದ್ದೆವು. ಅಂಚೆ ಡಬ್ಬಿ ಸುಟ್ಟು ಹಾಕುತ್ತಿದ್ದೆವು. ಇದಕ್ಕಾಗಿ ಹಿಂಡಲಗಾ ಜೈಲಿನಲ್ಲಿ ಶಿಕ್ಷೆಯನ್ನೂ ಅನುಭವಿಸಿದೆವು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತೆಂದು 1947ರ ಮಧ್ಯರಾತ್ರಿ ಘೋಷಣೆಯಾದಾಗ, ನಾವೆಲ್ಲರೂ ವೀರಸೌಧದಲ್ಲಿ ಸಂಭ್ರಮಿಸಿದ್ದೆವು’ ಎಂದು ತಿಳಿಸಿದರು.

ಶತಾಯುಷಿಯಾಗಿರುವ ಅವರಿಗೆ ನೆನಪಿನ ಶಕ್ತಿ ಉತ್ತಮವಾಗಿದೆ.ಪ್ರಮುಖ ಘಟನೆಗಳನ್ನು ಮರೆಯದೇ ಅದರ ತಾರೀಖು ಮತ್ತು ಮಹತ್ವವನ್ನು ವಿವರಿಸುತ್ತಾರೆ. ಉತ್ತಮ ಆರೋಗ್ಯ ಕಾಯ್ದುಕೊಂಡಿರುವ ಅವರು 2006ರಲ್ಲಿ ರಚಿಸಿದ ಬೆಳಗಾವಿ ಜಿಲ್ಲಾ ಸ್ವಾತಂತ್ರ್ಯ ಸೈನಿಕ ಹಾಗೂ ಉತ್ತರಾಧಿಕಾರಿಗಳ ಸಂಘದ ಮೂಲಕ ವಿವಿಧ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಾರೆ. ಈ ಸಂಘದ ಮೂಲಕ ಅನಾಥಾಶ್ರಮಗಳಿಗೆ ಮತ್ತು ಬಡ ಮಕ್ಕಳ ಶಿಕ್ಷಣಕ್ಕೆ ನೆರವು ನೀಡಲಾಗುತ್ತದೆ.


‘ನನಗೆ ಮಧುಮೇಹ ಮತ್ತು ಅಸ್ತಮಾ ಇದೆ. ಆದರೆ, ಅದರಿಂದ ನಿಶ್ಯಕ್ತಿಗೆ ಮತ್ತು ಇನ್ನಿತರ ಅನಾರೋಗ್ಯಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಆಯುರ್ವೇದ ಚಿಕಿತ್ಸಾ ಪದ್ಧತಿಯಲ್ಲಿ ಕೆಲ ಪಥ್ಯ, ಯೋಗ, ಮತ್ತು ವ್ಯಾಯಾಮದಿಂದ ಆರೋಗ್ಯ ಚೆನ್ನಾಗಿ ಕಾಯ್ದುಕೊಳ್ಳಲು ಸಾಧ್ಯವಾಗಿದೆ’ ಎಂದರು.

ಶತಮಾನೋತ್ಸವದಲ್ಲಿ ಖಾದಿ ಜಾಗೃತಿ

● ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಖಾದಿ ಪ್ರಚಾರಕ್ಕಾಗಿ 1937ರಲ್ಲಿ ತಾಲ್ಲೂಕಿನ ಹುದಲಿಗೆ ಬಂದಿದ್ದ ಮಹಾತ್ಮ ಗಾಂಧೀಜಿ, ಸ್ವದೇಶಿ ಉತ್ಪನ್ನಗಳನ್ನೇ ಬಳಸುವಂತೆ ಕರೆಕೊಟ್ಟಿದ್ದರು. ಅವರ ಅಧ್ಯಕ್ಷತೆಯಲ್ಲಿ ನಡೆದಿದ್ದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಹಿನ್ನೆಲೆಯಲ್ಲಿ ಇಲ್ಲಿನ ಸರ್ಕಾರಿ ಸರದಾರ್ಸ್ ಪ್ರೌಢಶಾಲೆ ಮೈದಾನದಲ್ಲಿ ವಿಶಿಷ್ಟವಾದ ಖಾದಿ ಉತ್ಸವ ಆಯೋಜಿಸಲಾಗಿದೆ. ಇಲ್ಲಿ ನಮಗೆ ಖಾದಿ ಏಕೆ ಅಗತ್ಯ ಮತ್ತು ಮುಖ್ಯ ಎಂದು ತಿಳಿಪಡಿಸುವುದರ ಜತೆಗೆ, ಅದರ ತಯಾರಿಕೆ ಬಗ್ಗೆಯೂ ವಿವರಿಸಲಾಗುತ್ತಿದೆ.

‘ಬೆಳಗಾವಿಯಲ್ಲಿ 2018ರಲ್ಲಿ ಖಾದಿ ಉತ್ಸವ ನಡೆದಿತ್ತು. ಅದಾದ ನಂತರ ಈ ಸಲ ಹಮ್ಮಿಕೊಂಡಿದ್ದೇವೆ. 50 ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯವರು ತಾವು ಸಿದ್ಧಪಡಿಸುವ ವಸ್ತುಗಳನ್ನು ಮಾರುತ್ತಿದ್ದಾರೆ. ಕರ್ನಾಟಕ ಮಾತ್ರವಲ್ಲ; ಬಿಹಾರ, ಜಮ್ಮು–ಕಾಶ್ಮೀರ, ಆಂಧ್ರಪ್ರದೇಶದವರು ಪಾಲ್ಗೊಂಡಿದ್ದಾರೆ’ ಎಂದು ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆ ಜಿಲ್ಲಾ ಅಭಿವೃದ್ಧಿ ಅಧಿಕಾರಿ ಸಾವಿತ್ರಮ್ಮ ದಳವಾಯಿ ‘ಪ್ರಜಾವಾಣಿ’ಗೆ ತಿಳಿಸಿದರು.



ಖಾದಿ ಉತ್ಸವದಲ್ಲಿ ಹುದಲಿಯ ಸುವರ್ಣ ಚಿನಗುಡಿ ಚರಕದಿಂದ ಬಟ್ಟೆ ನೂಲುತ್ತಿರುವುದು
ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಉತ್ಸವದ ಪೆಂಡಾಲ್‌ನ ಮುಂಭಾಗದಲ್ಲೇ 8 ಖದರ್‌ನ ಚರಕದಿಂದ ಬಟ್ಟೆ ನೂಲುತ್ತಿದ್ದ ಹುದಲಿಯ ಸುವರ್ಣ ಚಿನಗುಡಿ ಅವರು ಖಾದಿ ಬಟ್ಟೆ ಧರಿಸುವುದರ ಮಹತ್ವ ಸಾರಿದರು. ಪಕ್ಕದಲ್ಲೇ ನಿಂತಿದ್ದ ಬೇರೆ ಕಾರ್ಮಿಕರು ಕೈಮಗ್ಗದಲ್ಲಿ ಬಟ್ಟೆ ನೇಯುವುದನ್ನೂ ತೋರಿಸಿದರು. ಖಾನಾಪುರದ ಕೇಂದ್ರ ಗ್ರಾಮೀಣ ಕುಂಬಾರಿಕೆ ಸಂಸ್ಥೆಯವರು ಮಡಿಕೆಗಳ ತಯಾರಿಕೆಯ ಪ್ರಾತ್ಯಕ್ಷಿಕೆ ನೀಡಿದರು.

‘ನಮ್ಮೂರಿಗೆ ಗಾಂಧಿ ಭೇಟಿ ಕೊಟ್ಟಿದ್ದರು. ಹಾಗಾಗಿ ಇಲ್ಲಿ ನಡೆಯುತ್ತಿರುವ ಖಾದಿ ಉತ್ಸವದಲ್ಲಿ ಪಾಲ್ಗೊಂಡಿದ್ದಕ್ಕೆ ಖುಷಿಯಾಗಿದೆ. ಖಾದಿ ಉತ್ಪನ್ನಗಳಿಗೆ ಗ್ರಾಹಕರಿಂದ ಬೇಡಿಕೆಯೂ ಇದೆ. ಸ್ವತಃ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮೂರು ಧೋತಿ ಖರೀದಿಸಿದ್ದಾರೆ’ ಎಂದು ಹುದಲಿಯ ಖಾದಿ ಮತ್ತು ಗ್ರಾಮೋದ್ಯೋಗ ಸಹಕಾರಿ ಸಂಘದ ಕಾರ್ಯದರ್ಶಿ ರಾಘವೇಂದ್ರ ಹಮ್ಮಣ್ಣವರ ತಿಳಿಸಿದರು.

‘ನಮ್ಮಲ್ಲಿ 8 ಕೈಮಗ್ಗ, 40 ಚರಕಗಳಿವೆ. 50 ಕಾರ್ಮಿಕರಿದ್ದೇವೆ. ನಾವು ತಯಾರಿಸಿದ ಖಾದಿಯ ಪ್ಯಾಂಟ್, ಶರ್ಟ್, ಕುರ್ತಾ, ಪೈಜಾಮ್‌ಗಳನ್ನು ಮಾರುತ್ತಿದ್ದೇವೆ. ಉತ್ಸವದ ಮೊದಲ ದಿನವೇ ಗ್ರಾಹಕರ ಸ್ಪಂದನೆ ಉತ್ತಮವಾಗಿದೆ’ ಎಂದು ಬಿಹಾರದ ಮಾಧುಬಾನಿಯ ನಾರಾಯಣಪುರ ಗ್ರಾಮೀಣ ವಿಕಾಸ ಕೇಂದ್ರದ ಮೊಹಮ್ಮದ್ ಜುಬೇರ್ ಅನ್ಸಾರಿ ಹೇಳಿದರು.

‘ತೆರಿಗೆದಾರರ ಹಣ ಬಳಕೆ ಅಕ್ಷಮ್ಯ’

ಬೆಂಗಳೂರು: ರಾಜ್ಯ ಸರ್ಕಾರದ ಬೊಕ್ಕಸದ ಹಣವನ್ನು ಬಳಸಿ ಕಾಂಗ್ರೆಸ್ ಮಹಾಧಿವೇಶನ ನಡೆಸಲಾಗುತ್ತಿದೆ. ತೆರಿಗೆದಾರರ ಹಣ ಪಕ್ಷದ ಕಾರ್ಯಕ್ಕೆ ಬಳಸಿರುವುದು ಅಕ್ಷಮ್ಯ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಟೀಕಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಮಹಾತ್ಮ ಗಾಂಧಿಯವರಿಗೆ ಸಂಬಂಧಿಸಿದ ಸರ್ಕಾರಿ ಕಾರ್ಯಕ್ರಮ ಆಗಿದ್ದರೆ ಪ್ರಧಾನಿ, ಗೃಹ ಸಚಿವರು, ಕೇಂದ್ರ ಸಚಿವರನ್ನೂ ಆಹ್ವಾನಿಸಬೇಕಿತ್ತು. ಆದರೆ, ಕಾಂಗ್ರೆಸ್ ನಾಯಕರನ್ನು ಮಾತ್ರ ಆಹ್ವಾನಿಸಿರುವುದರಿಂದ ಇದು ಸರ್ಕಾರಿ ಕಾರ್ಯಕ್ರಮವಲ್ಲ ಎಂದರು.

‘ನಕಲಿ ಗಾಂಧಿ’ಗಳ ವಿಜೃಂಭಣೆ

ಇದು ಆಲಿಬಾಬಾ ಮತ್ತು 40 ಕಳ್ಳರ ಕಾಂಗ್ರೆಸ್: ಎಚ್‌ಡಿಕೆ ಟೀಕೆ

ಮಂಡ್ಯ: ‘ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಸಮಾರಂಭದ ಕಟೌಟ್‌ಗಳಲ್ಲಿ ಗಾಂಧೀಜಿ ಫೋಟೊ ನೋಡಲಿಲ್ಲ. ನಕಲಿ ಗಾಂಧಿಗಳ ಕಟೌಟ್‌ಗಳನ್ನು ಆಕಾಶದೆತ್ತರಕ್ಕೆ ಹಾಕಿದ್ದಾರೆ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದರು.



ಕುಮಾರಸ್ವಾಮಿ

ಗುರುವಾರ ಇಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಜನರ ಕೋಟ್ಯಂತರ ರೂಪಾಯಿ ದುಡ್ಡು ಖರ್ಚು ಮಾಡಿ, ನಕಲಿ ಗಾಂಧಿಗಳ ವಿಜೃಂಭಣೆ ಯಿಂದ ಏನು ಸಂದೇಶ ಕೊಡುತ್ತಿದ್ದಾರೆ? ಗಾಂಧೀಜಿ ಹೆಸರು ಹೇಳಿದರೆ ಸಾಕಾಗಲ್ಲ, ಅವರ ಮಾರ್ಗದಲ್ಲಿ ನಡೆಯಬೇಕು’ ಎಂದರು.

‘ಸ್ವಾತಂತ್ರ್ಯ ದೊರೆತ ಬಳಿಕ ಕಾಂಗ್ರೆಸ್ ಅನ್ನು ವಿಸರ್ಜಿಸಬೇಕೆಂದಿದ್ದರು ಗಾಂಧೀಜಿ. ಈಗ ಇರುವುದು ನಕಲಿ ಕಾಂಗ್ರೆಸ್, ಆಲಿಬಾಬ ಮತ್ತು 40 ಮಂದಿ ಕಳ್ಳರ ಕಾಂಗ್ರೆಸ್. ಬೆಳಗಾವಿಯಲ್ಲಿ ಕಾರ್ಯಕ್ರಮ ಮಾಡುತ್ತಿರುವವರೂ ಅವರೇ’ ಎಂದು ದೂರಿದರು.

‘ಗಾಂಧೀಜಿ ಹೆಸರಲ್ಲಿ ಕಾರ್ಯಕ್ರಮ ಮಾಡಲಿ. ರಾಮರಾಜ್ಯದ ಪರಿಕಲ್ಪನೆ, ಗ್ರಾಮ ಸ್ವರಾಜ್ಯದ ಕನಸು ಈಡೇರಿದೆಯಾ? ಗ್ರಾಮಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಹಲವಾರು ತಿಂಗಳಾದರೂ ಪಂಚಾಯಿತಿಗಳಿಗೆ ಹೋಗಿಲ್ಲ’ ಎಂದು ಟೀಕಿಸಿದರು.

‘ಸರ್ಕಾರ ಪ್ರತಿದಿನವೂ ಗ್ಯಾರಂಟಿ ಎನ್ನುತ್ತಿದೆ. ಜನರಿಗೆ ಇನ್ನೂ ₹ 2 ಸಾವಿರ ಕೊಡಲಿ, ಆದರೆ, ಮಿತಿ ಮೀರಿ ತೆರಿಗೆ ಹೇರುತ್ತಿದ್ದಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಭೂಪಟದಲ್ಲಿ ಕಾಶ್ಮೀರಕ್ಕೆ ಕತ್ತರಿ’– ಬಿಜೆಪಿ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಶ್ಮೀರ ಇಲ್ಲದ ಭಾರತದ ಭೂಪಟವನ್ನು ಪ್ರದರ್ಶಿಸುವ ಮೂಲಕ ರಾಷ್ಟ್ರದ್ರೋಹ, ಗಾಂಧಿದ್ರೋಹ ಎರಡನ್ನೂ ಎಸಗಿರುವ ಕಾಂಗ್ರೆಸಿಗರು ಈ ಕೂಡಲೇ ದೇಶದ ಜನರ ಕ್ಷಮೆಯಾಚಿಸಬೇಕು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದ್ದಾರೆ.

‘ಬೆಳಗಾವಿಯ ಕಾಂಗ್ರೆಸ್ ಅಧಿವೇಶನದ ಶತಮಾನದ ನೆನಪಿನ ಕಾರ್ಯಕ್ರಮ, ದೇಶಪ್ರೇಮವನ್ನು ಮರೆಯಲೋ ಅಥವಾ ರಾಷ್ಟ್ರ ವಿದ್ರೋಹಿ ಶಕ್ತಿಗಳು ಓಲೈಸಲೋ ಅಥವಾ ಮಿತ್ರರಾದ ಕಾಶ್ಮೀರಿ ಪ್ರತ್ಯೇಕವಾದಿಗಳ ಓಲೈಕೆಗೋ ಎನ್ನುವುದನ್ನು ಕಾಂಗ್ರೆಸ್ಸಿಗರು ಸ್ಪಷ್ಟಪಡಿಸಬೇಕು’ ಎಂದು ಅವರು ‘ಎಕ್ಸ್’ನಲ್ಲಿ ಆಗ್ರಹಿಸಿದ್ದಾರೆ.



ಬಿ.ವೈ. ವಿಜಯೇಂದ್ರ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ ಚಿತ್ರ

‘ಭಾರತದ ಕಿರೀಟ ಕಾಶ್ಮೀರಕ್ಕೆ ಕತ್ತರಿ ಪ್ರಯೋಗಿಸಿ ಮಹಾತ್ಮನನ್ನು ಸ್ಮರಿಸಲು ಹೊರಟಿರುವುದು ಮಹಾತ್ಮನ ಆತ್ಮಕ್ಕೆ ಇರಿದಂತೆ ಅಲ್ಲವೇ? ಅಖಂಡ ಭಾರತದ ಅಸ್ತಿತ್ವ ಹಾಗೂ ರಾಷ್ಟ್ರ ವಿಭಜನೆಯನ್ನು ತಡೆಯಲು ಕಡೆ ಕ್ಷಣದವರೆಗೂ ಪ್ರಯತ್ನಿಸಿದ ಗಾಂಧಿಯವರನ್ನು ಕಾಂಗ್ರೆಸ್ ಅಪಮಾನಿಸಿದೆ’ ಎಂದು ವಿಜಯೇಂದ್ರ ಹೇಳಿದ್ದಾರೆ.

‘ಸ್ವಾತಂತ್ರ್ಯಕ್ಕಾಗಿ ಅಸ್ತಿತ್ವ ಕಂಡುಕೊಂಡಿದ್ದ ಅಂದಿನ ಕಾಂಗ್ರೆಸ್ ಅನ್ನು ರಾಜಕೀಯಕ್ಕಾಗಿ ಆಪೋಶನ ಮಾಡಿಕೊಂಡ ಕುಟುಂಬದ ಮುಷ್ಟಿಯಲ್ಲಿರುವ ಇಂದಿನ ಕಾಂಗ್ರೆಸ್, ಇಂದು ನಡೆಸುತ್ತಿರುವ ಬೆಳಗಾವಿ ಸಮಾವೇಶದ ಶತಮಾನದ ನೆನಪು ಕೇವಲ ರಾಜಕೀಯ ಹಿತಾಸಕ್ತಿಗಾಗಿ ಎಂಬುದು ದೇಶದ ಜನರಿಗೆ ತಿಳಿದಿದೆ’ ಎಂದಿದ್ದಾರೆ.

ಬಿಜೆಪಿಯವರ ಹೊಟ್ಟೆಕಿಚ್ಚಿಗೆ ಮದ್ದಿಲ್ಲ: ಡಿಕೆಶಿ

ಬೆಳಗಾವಿ: ‘ಬಿಜೆಪಿಯವರಿಗೆ ‘ಗಾಂಧಿ ಭಾರತ’ ಕಾರ್ಯಕ್ರಮದ ಯಶಸ್ಸು ಸಹಿಸಲಾಗುತ್ತಿಲ್ಲ. ಅವರ ಹೊಟ್ಟೆಕಿಚ್ಚಿಗೆ ಮದ್ದಿಲ್ಲ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದರು.

‘ಕೆಲ ಬ್ಯಾನರುಗಳಲ್ಲಿ ಭಾರತದ ನಕ್ಷೆ ತಿರುಚಿ ಅಪಮಾನ ಮಾಡಲಾಗಿದೆ’ ಎಂಬ ಬಿಜೆಪಿ ನಾಯಕರ ಆರೋಪಕ್ಕೆ ಅವರು ಗುರುವಾರ ಪ್ರತಿಕ್ರಿಯಿಸಿದರು.

‘ಮಾಹಿತಿ ಕೊರತೆಯಿಂದ ಕೆಲ ನಾಯಕರು ಗಮನಿಸದೇ ಹಾಗೆ ಮಾಡಿದ್ದಾರೆ. ಅಂಥ ಕಟೌಟು, ಬ್ಯಾನರುಗಳನ್ನು ತೆಗೆಸಿದ್ದೇವೆ’ ಎಂದು ಪ್ರತಿಕ್ರಿಯಿಸಿದರು.

ಅಧಿವೇಶನಕ್ಕೆ ಗೈರು– ಸೋನಿಯಾ ವಿಷಾದ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಸಾಮೂಹಿಕವಾಗಿ ಪಕ್ಷ ಸಂಘಟನೆಮಾಡೋಣ’ ಎಂದು ಪಕ್ಷದ ನಾಯಕರಿಗೆ ಕಾಂಗ್ರೆಸ್ ಸಂಸದೀಯ ಮಂಡಳಿಯ ಅಧ್ಯಕ್ಷರೂ ಆಗಿರುವ ರಾಜ್ಯಸಭೆ ಸದಸ್ಯೆ ಸೋನಿಯಾ ಗಾಂಧಿ ಕರೆ ನೀಡಿದ್ದಾರೆ.

ಇಲ್ಲಿ ಗುರುವಾರ ನಡೆದ ಸಿಡಬ್ಲ್ಯುಸಿ ಸಭೆಯಲ್ಲಿ ಭಾಗವಹಿಸಲು ಸಾಧ್ಯ ಆಗದಿರುವುದಕ್ಕೆ ವಿಷಾದ ವ್ಯಕ್ತಪಡಿಸಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಸಿಡಬ್ಲ್ಯುಸಿ ಸದಸ್ಯರಿಗೆ ಅವರು ಪತ್ರ ಬರೆದಿದ್ದಾರೆ.



ಪತ್ರದಲ್ಲಿ ಏನಿದೆ?: ‘ಐತಿಹಾಸಿಕ ಕಾರ್ಯಕ್ರಮದಲ್ಲಿ ನಿಮ್ಮೊಂದಿಗಿರಲು ಸಾಧ್ಯವಾಗುತ್ತಿಲ್ಲ. ಕಾರ್ಯಕ್ರಮಕ್ಕೆ ಗೈರಾಗಿರುವ ಕಾರಣಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ. 39ನೇ ಅಧಿವೇಶನ ನಡೆದ ಸ್ಥಳದಲ್ಲೇ ನೀವೆಲ್ಲಾ ಸಮಾವೇಶಗೊಂಡಿರುವುದು ಸೂಕ್ತವಾಗಿದೆ. ಗಾಂಧೀಜಿ ಇದೇ ಸ್ಥಳದಲ್ಲಿ ಅಧ್ಯಕ್ಷರಾಗಿರುವುದಕ್ಕೆ ನಮ್ಮ ಪಕ್ಷಕ್ಕೆ ಹಾಗೂ ಸ್ವಾತಂತ್ರ್ಯ ಚಳವಳಿಗೆ ಮಹತ್ವದ ತಿರುವು ನೀಡಿದೆ’

‘ನವದೆಹಲಿಯಲ್ಲಿ ಅಧಿಕಾರದಲ್ಲಿ ಇರುವವರಿಂದ ಗಾಂಧೀಜಿ ತತ್ವ, ಸಿದ್ಧಾಂತಗಳಿಗೆ ಬೆದರಿಕೆ ಇದೆ. ಅಧಿಕಾರದಲ್ಲಿರುವ ಸಂಘಟನೆಗಳು ಸ್ವಾತಂತ್ರ್ಯಕ್ಕಾಗಿ ಎಂದೂ ಹೋರಾಟ ಮಾಡಲಿಲ್ಲ. ಅಲ್ಲದೆ, ಅವರು ಮಹಾತ್ಮ ಗಾಂಧಿ ಅವರನ್ನು ಕಟುವಾಗಿ ವಿರೋಧಿಸಿದವರು, ಗಾಂಧೀಜಿ ಹತ್ಯೆ ಮಾಡಿದವರನ್ನು ಸಂಭ್ರಮಿಸಿದವರು’

‘ದೇಶದ ವಿವಿಧೆಡೆ ಗಾಂಧಿ ಸಂಘ ಸಂಸ್ಥೆಗಳ ಮೇಲೆ ದಾಳಿ ನಡೆಯುತ್ತಿದ್ದು, ಇಂದು ನಡೆಯುತ್ತಿರುವ ಸಭೆಯನ್ನು ‘ನವ ಸತ್ಯಾಗ್ರಹ ಬೈಠಕ್’ ಎಂದು ಕರೆದಿರುವುದು ಸೂಕ್ತವಾಗಿದೆ. ಅಂತಹ ಶಕ್ತಿಗಳ ವಿರುದ್ಧ ರಾಜಿಯಾಗದೆ ಹೋರಾಟ ನಡೆಸುವ ನಿರ್ಣಯ ಮಾಡುವುದು ಸಂಕಲ್ಪ ಮತ್ತು ಕರ್ತವ್ಯ’ ಎಂದು ಪತ್ರದಲ್ಲಿ ಹೇಳಿದ್ದಾರೆ.

ಗಾಂಧೀಜಿಯೇ ದಾರಿದೀಪ

● ಸಿದ್ದರಾಮಯ್ಯ



ಬೆಳಗಾವಿಯಲ್ಲಿ 1924ರಲ್ಲಿ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದಿದ್ದ ಕಾಂಗ್ರೆಸ್ ಅಧಿವೇಶನದ ನೆನಪಿಗೆ ಈಗ ನೂರು ವರ್ಷ. ಕಾಂಗ್ರೆಸ್ ಪಕ್ಷ ಸಾಗಿ ಬಂದ ದಾರಿಯ ಹಿನ್ನೋಟ ಮತ್ತು ಕ್ರಮಿಸಬೇಕಾಗಿರುವ ದಾರಿ ಕಡೆ ಮುನ್ನೋಟವನ್ನು ಹರಿಸುವ ಹೊತ್ತೂ ಹೌದು.

ಆಧುನಿಕ ಭಾರತದ ಇತಿಹಾಸವೆಂದರೆ ಅದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಇತಿಹಾಸವೇ ಆಗಿದೆ. ಅದು ಸ್ವಾತಂತ್ರ್ಯ ಪೂರ್ವದಲ್ಲಿ ದೇಶ ಉಳಿಸಿದ ಹೋರಾಟದ ಇತಿಹಾಸವೂ ಹೌದು, ಸ್ವಾತಂತ್ರ್ಯಾನಂತರದ ದೇಶ ಕಟ್ಟಿದ ಇತಿಹಾಸವೂ ಹೌದು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಎನ್ನುವುದು ಕೇವಲ ರಾಜಕೀಯ ಪಕ್ಷ ಅಲ್ಲ. ಅದೊಂದು ಚಳವಳಿ ಮತ್ತು ಸಿದ್ಧಾಂತ. ನಾವಿಂದು ಅನುಭವಿಸುತ್ತಿರುವ ಸ್ವಾತಂತ್ರ್ಯ ಬ್ರಿಟಿಷರ ದಯಾಭಿಕ್ಷೆ ಅಲ್ಲ; ಅದು ನಿರಾಯಾಸವಾಗಿ ಪ್ರಾಪ್ತಿಯಾದುದೂ ಅಲ್ಲ. ಕಾಂಗ್ರೆಸ್ ಪಕ್ಷದ ಸುದೀರ್ಘ ಹೋರಾಟ, ಧೀರ ಹೋರಾಟಗಾರರು ಹರಿಸಿದ ರಕ್ತ, ಬೆವರಿನ ಫಲವಾಗಿ ನಾವಿಂದು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆ.

ಗಾಂಧೀಜಿಯವರಿಂದ ತಾಯಿಯ ಹೃದಯವನ್ನು, ಅಂಬೇಡ್ಕರ್ ಅವರಿಂದ ಸಮಾನತೆಯ ಪಾಠವನ್ನು, ನೆಹರೂ ಅವರಿಂದ ವೈಚಾರಿಕ ಸ್ಪಷ್ಟತೆಯನ್ನೂ, ಪಟೇಲರಿಂದ ಉಕ್ಕಿನ ಸ್ಥೈರ್ಯವನ್ನೂ ಪಡೆದ ಪಕ್ಷವು ಸ್ವಾತಂತ್ರ್ಯ ಸಂಗ್ರಾಮದ ಗುರಿ ಈಡೇರಿಕೆಯಲ್ಲಿ ಯಶಸ್ವಿಯಾಯಿತು. ಸ್ವಾತಂತ್ರ್ಯ ಹೋರಾಟಕ್ಕೆ ಕಾಂಗ್ರೆಸ್ ನೇತೃತ್ವ, ಗಾಂಧೀಜಿಯವರಂತಹ ಆದರ್ಶ ನಾಯಕರ ಮಾರ್ಗದರ್ಶನ ಸಿಗದೆ ಹೋಗಿದ್ದರೆ ಭಾರತ ಇಂದು ಕೂಡಾ ಬ್ರಿಟಿಷರ ಗುಲಾಮಗಿರಿಗೆ ಸಿಕ್ಕಿ ನರಳಾಡುತ್ತಿತ್ತು. ಸ್ವತಂತ್ರ ಭಾರತದ ನಾಯಕತ್ವವನ್ನು ಕಾಂಗ್ರೆಸ್ ವಹಿಸದೆ ಹೋಗಿದ್ದರೆ ದೇಶ ಈ ಮಟ್ಟದ ಪ್ರಗತಿಯನ್ನು ಕಾಣಲು ಸಾಧ್ಯವೇ ಇರಲಿಲ್ಲ.

ಮೊದಲ ಆರು ದಶಕಗಳನ್ನು ಗಾಂಧೀಜಿ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟಕ್ಕಾಗಿ ಶ್ರಮಿಸಿದ ಕಾಂಗ್ರೆಸ್ ನಂತರದ ದಿನಗಳಲ್ಲಿ ಬಲಿಷ್ಠ, ಸಮೃದ್ಧ ಭಾರತದ ನಿರ್ಮಾಣದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ.

ಭಾರತದ ವಿಕಾಸದಲ್ಲಿ ನೆಹರೂ ಅವರ ಮುನ್ನೋಟದ ಪಾತ್ರ ನಿರ್ಣಾಯಕವಾಗಿತ್ತು. ತನ್ನ ರಾಜಕೀಯ ಬದುಕಿನುದ್ದಕ್ಕೂ ನೆಹರೂ ಅವರು ಸಾಂಪ್ರದಾಯಿಕ ಶಕ್ತಿಗಳು, ವಿಚ್ಛಿದ್ರಕಾರಿ ಧೋರಣೆ ಮತ್ತು ಕೋಮುವಾದಿ ಭಾವನೆಗಳ ವಿರುದ್ಧ ಖಚಿತವಾದ ನಿಲುವು ಹೊಂದಿದ್ದರು. ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಸುಧಾರಣೆ ಜತೆ ಜತೆಯಲ್ಲಿಯೇ ಸಾಗಬೇಕೆಂದು ಅವರು ಬಯಸಿ, ಭಾರತಕ್ಕೆ ತನ್ನದೇ ಆದ ಅಭಿವೃದ್ಧಿಯ ಭಾಷೆಯನ್ನು ಕೊಟ್ಟರು.

ದೇಶ ಒಡೆಯುವವರು, ಮನುಷ್ಯರ ನಡುವೆ ದ್ವೇಷ ಬಿತ್ತುವವರು ಇಂದಿನಂತೆ ಅಂದು ಕೂಡಾ ಇದ್ದರು. ದೇಶ ಕಟ್ಟಿದ, ಮನುಷ್ಯನ ಎದೆಯಲ್ಲಿ ಪ್ರೀತಿ, ಶಾಂತಿ, ಸೌಹಾರ್ದತೆಯನ್ನು ಬಿತ್ತಿದ ಪಕ್ಷ ಕಾಂಗ್ರೆಸ್. ದೇಶ ವಿಭಜನೆ ಮತ್ತು ಅದರ ಬೆನ್ನಿಗೇ ಭುಗಿಲೆದ್ದ ಕೋಮುದಂಗೆ ಸ್ವಾತಂತ್ರ್ಯಾನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರದ ಮುಂದಿನ ಪ್ರಮುಖ ಸವಾಲಾಗಿತ್ತು. ಈ ಸಂಘರ್ಷದಲ್ಲಿಯೇ ಕಾಂಗ್ರೆಸ್ ಪಕ್ಷದ ಆತ್ಮದಂತಿದ್ದ ಮಹಾತ್ಮ ಗಾಂಧೀಜಿಯವರನ್ನು ಕೋಮುವಾದಿಗಳು ಬಲಿ ತೆಗೆದುಕೊಂಡರು. ಹಿಂಸೆಯನ್ನು ಶಾಂತಿಯಿಂದ, ಕೋಮುವಾದವನ್ನು ಜಾತ್ಯತೀತ ನಿಲುವಿನಿಂದ ಎದುರಿಸಿ ಯಶಸ್ವಿಯಾದವರು ಮೊದಲ ಪ್ರಧಾನಿ ನೆಹರೂ ಅವರು. ದೇಶದ ಎಲ್ಲ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು, ಅಭಿವ್ಯಕ್ತಿ, ಆರಾಧನೆಯ ಸ್ವಾತಂತ್ರ್ಯವನ್ನು ಖಾತರಿಪಡಿಸಿ, ಪರಸ್ಪರ ಭ್ರಾತೃತ್ವವನ್ನು ಉದ್ದೀಪನಗೊಳಿಸುವ ಸಂವಿಧಾನ ರಚನೆಗೆ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಒತ್ತಾಸೆಯಾಗಿ ನಿಂತದ್ದು ಕೂಡಾ ಕಾಂಗ್ರೆಸ್ ಪಕ್ಷ.

ನೆಹರೂ ಅವರು ಬೃಹತ್ ಅಣೆಕಟ್ಟುಗಳ ನಿರ್ಮಾಣದ ಮೂಲಕ ಕೃಷಿ, ನೀರಾವರಿ ಕ್ಷೇತ್ರಕ್ಕೆ ನೀಡಿದ ಒತ್ತು, ಕೈಗಾರಿಕೀಕರಣಕ್ಕೆ ನೀಡಿದ ಬೆಂಬಲ ಮುಂದಿನ ದಿನಗಳ ದೇಶದ ಅಭಿವೃದ್ಧಿ ಪಥವನ್ನು ನಿರ್ದೇಶಿಸಿತು. ಅಭಿವೃದ್ಧಿಗೆ ಮತ್ತಷ್ಟು ವೇಗ ಸಿಕ್ಕಿದ್ದು ಇಂದಿರಾಗಾಂಧಿಯವರ ಆಡಳಿತದಲ್ಲಿ. ಅನೇಕ ಜನಪರ ಯೋಜನೆಗಳ ಮೂಲಕ ಇಂದಿರಾ ಅವರು ಬಡತನದ ವಿರುದ್ಧ ಹೋರಾಟವನ್ನೇ ನಡೆಸಿದ್ದರು. ಭಯೋತ್ಪಾದನೆಯ ವಿರುದ್ಧ ನಿರ್ಭೀತಿಯ ಸಮರ ನಡೆಸಿದ್ದ ಅವರು ದೇಶದ ಏಕತೆ-ಸಮಗ್ರತೆ ಕಾಪಾಡಲು ಪ್ರಾಣವನ್ನೇ ಬಲಿಕೊಡಬೇಕಾಗಿ ಬಂದದ್ದು ದುರಂತ.

21ನೇ ಶತಮಾನಕ್ಕೆ ಭಾರತವನ್ನು ಒಯ್ಯಬೇಕೆಂಬ ಕನಸು ಕಂಡ ರಾಜೀವ್ ಗಾಂಧಿಯವರು ಯುವಭಾರತ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದರು. ಮತದಾನದ ವಯಸ್ಸನ್ನು ಹದಿನೆಂಟಕ್ಕೆ ಇಳಿಸಿ ಯುವಜನರನ್ನು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಪಾಲ್ಗೊಳ್ಳುವಂತೆ ಮಾಡಿದರು. ಅವರೂ ದೇಶಕ್ಕಾಗಿ ಪ್ರಾಣತ್ಯಾಗ ಮಾಡಬೇಕಾಯಿತು. ಅಮ್ಮ-ಮಗ ತಮ್ಮ ರಕ್ತ ಬಸಿದು, ಪ್ರಾಣ ತೆತ್ತು ಕಟ್ಟಿದ ಪಕ್ಷವೇ ಕಾಂಗ್ರೆಸ್. ಅವರು ಪ್ರಾಣ ಕಳೆದುಕೊಂಡು, ದೇಶ ಉಳಿಸಿದರು. ಇಂದು ನಮಗೆ ದೇಶಪ್ರೇಮದ ಪಾಠ ಮಾಡುತ್ತಿರುವ ಪಕ್ಷದ ಯಾವ ನಾಯಕರು ದೇಶಕ್ಕಾಗಿ ತ್ಯಾಗ ಮಾಡಿದ್ದಾರೆ?

> ಕಾಂಗ್ರೆಸ್ ಪಕ್ಷವು ಕಟ್ಟಿದ ಭಾರತವನ್ನು ಉಳಿಸಲು ಕಾಂಗ್ರೆಸ್ ಪಕ್ಷವೇ ಎರಡನೇ ಸ್ವಾತಂತ್ರ್ಯ ಹೋರಾಟಕ್ಕೆ ಅಣಿಯಾಗಬೇಕಾಗಿದೆ

ಮನಮೋಹನ್ ಸಿಂಗ್ ಅವರ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ ಜಾರಿಗೆ ತಂದ ಹಲವು ಕಾಯಿದೆಗಳು ಸಮತೋಲನದ ಅಭಿವೃದ್ಧಿಗೆ ಕಾರಣವಾಗಿವೆ. ಈ ಕಾಯಿದೆಗಳ ಹಿಂದಿನ ರೂವಾರಿ ಅಂದು ರಾಷ್ಟ್ರೀಯ ಸಲಹಾ ಸಮಿತಿ ಅಧ್ಯಕ್ಷರಾಗಿದ್ದ ಸೋನಿಯಗಾಂಧಿಯವರು.

ಕರ್ನಾಟಕದಲ್ಲಿಯೂ ದೇವರಾಜ ಅರಸು ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರವು ಬಡವರು, ದಲಿತರು, ಹಿಂದುಳಿದವರು, ರೈತರ ಪರವಾದ ದೇಶಕ್ಕೆ ಮಾದರಿಯೆನಿಸುವ ಹಲವು ಕ್ರಾಂತಿಕಾರಿ ಯೋಜನೆಗಳನ್ನು ಜಾರಿಗೊಳಿಸಿತು. ನಮ್ಮ ಸರ್ಕಾರವೂ ಈ ಪರಂಪರೆಯನ್ನು ಮುಂದುವರಿಸಿದೆ. ಅನ್ನಭಾಗ್ಯ, ಕ್ಷೀರಭಾಗ್ಯ, ಕೃಷಿಭಾಗ್ಯ, ಮಾತೃಪೂರ್ಣ, ವಿದ್ಯಾಸಿರಿಯಂತಹ ಕಾರ್ಯಕ್ರಮಗಳು ಕಲ್ಯಾಣ ರಾಜ್ಯದ ನಿರ್ಮಾಣದ ಕನಸನ್ನು ನನಸಾಗಿಸುವಲ್ಲಿ ಮಹತ್ವದ ಕೊಡುಗೆ ನೀಡಿವೆ. ಈಗಿನ ಪಂಚ ಗ್ಯಾರಂಟಿಗಳು ದೇಶಕ್ಕೆ ಮಾದರಿಯಾಗಿವೆ.

ಕಾಂಗ್ರೆಸ್‌ನ ಹಿರಿಯರು ತ್ಯಾಗ-ಬಲಿದಾನಗಳ ಮೂಲಕ ಕಟ್ಟಿದ ಸೌಹಾರ್ದ ಭಾರತವನ್ನು ಜಾತಿ-ಧರ್ಮಗಳ ಹೆಸರಲ್ಲಿ ಒಡೆಯುವ ಯತ್ನ ನಡೆಯುತ್ತಿದೆ. ಸಂವಿಧಾನವನ್ನೇ ಪ್ರಶ್ನಿಸಲಾಗುತ್ತಿದೆ. ಗಾಂಧಿಯವರನ್ನು ಕೊಂದವರು ಇಂದು ಗೋಡ್ಸೆಯನ್ನು ಮೆರೆಸುತ್ತಿದ್ದಾರೆ.

ದೇಶವನ್ನು ಉಳಿಸಲು, ಸಂಪತ್ತಿನ ಲೂಟಿ ತಡೆಯಲು, ಸಂವಿಧಾನವನ್ನು ಕಾಪಾಡಲು, ಕಾಂಗ್ರೆಸ್ ಪಕ್ಷವು ಕಟ್ಟಿದ ಭಾರತವನ್ನು ಉಳಿಸಲು ನಮ್ಮ ಪಕ್ಷವೇ ಎರಡನೇ ಸ್ವಾತಂತ್ರ್ಯ ಹೋರಾಟಕ್ಕೆ ಅಣಿಯಾಗಬೇಕಾಗಿದೆ. ಈ ಚಳವಳಿಗೆ ಗಾಂಧಿಯವರೇ ನಮಗೆ ದಾರಿ ದೀಪ.


ಲೇಖಕ: ಮುಖ್ಯಮಂತ್ರಿ

ಕರ್ನಾಟಕದ ಉದಯ ಗೀತೆ

● ರಾಧಾ ಕುಲಕರ್ಣಿ

1924 ಡಿಸೆಂಬರ್ 26ರಂದು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಕನ್ನಡಿಗರ ಪಾಲಿಗೆ ಅತ್ಯಂತ ಅಮೂಲ್ಯವಾದ ವೈಭವದ ಕ್ಷಣ. ಈ ಅಧಿವೇಶನಕ್ಕೆ ಗಾಂಧೀಜಿ ಅಧ್ಯಕ್ಷರಾಗಿ ಬಂದಿದ್ದರು. ಈ ಸಂದರ್ಭದಲ್ಲಿಯೇ ನಮ್ಮ ನವ ಕರ್ನಾಟಕದ ಉದಯಕ್ಕೆ ನಾಂದಿ ಹಾಡಲಾಯಿತು. ಈ ಉದಯಕ್ಕೆ ಉದಯರಾಗ ಹಾಡಿದವರು ನನ್ನ ತಾತ, ಮಹಾನ್ ಕವಿ, ಗದುಗಿನ ಹುಯಿಲಗೋಳ ನಾರಾಯಣರಾಯರು. ಅಧಿವೇಶನದ ಸ್ವಾಗತ ಗೀತೆಯಾಗಿ ಮೊಳಗಿದ್ದು ಅವರ ಕವನ ‘ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು’. ನನ್ನ ತಾತ ಕನ್ನಡದ ಅಭಿಮಾನಿಯಾಗಿದ್ದರಿಂದ ಅವರ ನಾಡಭಕ್ತಿ, ನಮ್ಮ ನುಡಿಯಲ್ಲಿ ಅವರಿಗಿರುವ ಆಸಕ್ತಿ ಅವರ ಅಂತರಾಳದಿಂದ ಹೊರಹೊಮ್ಮಿದ್ದೇ ‘ಉದಯವಾಗಲಿ’ ಹಾಡಿನ ರೂಪ ತಾಳಿತು. ಸ್ವಾಗತ ಗೀತೆಯಾಗಿ ಈ ಹಾಡು ಆಯ್ಕೆಯಾಗಿ ಅಧಿವೇಶನದ ಆರಂಭದಲ್ಲಿ ಧಾರವಾಡದ ಸಂಗೀತಾಲಯದ ಸುಬ್ಬರಾವ್ ಅವರ ಸಮೂಹದಿಂದ ಪ್ರಸ್ತುತಪಡಿಸಲಾಯಿತಂತೆ.

ಗೀತೆಯನ್ನು ಕೇಳಿ ಮೆಚ್ಚಿಕೊಂಡ ಗಾಂಧೀಜಿ, ಅದರ ಭಾವಾರ್ಥವನ್ನು ಹಿಂದಿಯಲ್ಲಿ ಅನುವಾದಿಸಿ ಹೇಳಲು ಕೇಳಿದರಂತೆ. ಅದರ ಭಾವಾರ್ಥವನ್ನು ಕೇಳಿದ ಗಾಂಧೀಜಿಯವರಿಗೆ ಕರ್ನಾಟಕದ ಸಮಗ್ರ ಘನತೆಯ ಅರಿವಾಗಿ ಆಗಲೇ ಅವರು, ‘ಹಾಡು ಬರೆದ ಆ ವ್ಯಕ್ತಿಯನ್ನು ನೋಡಬೇಕು’ ಎಂದರಂತೆ. ಸಭೆಯಲ್ಲಿ ಹಿಂದೆ ಕುಳಿತ ನಾರಾಯಣರಾಯರನ್ನು ವೇದಿಕೆಗೆ ಕರೆದುಕೊಂಡು ಬಂದಾಗ ಗಾಂಧೀಜಿ, ಅವರನ್ನು ಪ್ರೀತಿಯಿಂದ ತಬ್ಬಿಕೊಂಡು, ಅದೇ ವೇದಿಕೆಯ ಮೇಲೆ ಗೌರವಿಸಿದರಂತೆ. ಹಾಗೆಯೇ ಅದೇ ಅಧಿವೇಶನದಲ್ಲಿ ಗಾಂಧೀಜಿ, ಸಭೆಯನ್ನುದ್ದೇಶಿಸಿ ‘ಇದೇ ಗೀತೆಯನ್ನು ನಿಮ್ಮ ನಾಡ ಗೀತೆಯನ್ನಾಗಿ ಮಾಡಿಕೊಳ್ಳಿ’ ಎಂದು ಘೋಷಿಸಿದ ಪರಿಣಾಮವೇ ‘ಉದಯವಾಗಲಿ’ ಹಾಡನ್ನು ನಮ್ಮ ನಾಡಗೀತೆಯಾಗಿ ಅಂದಿನಿಂದ 1954ರವರೆಗೆ ನಮ್ಮ ನಾಡಿನ ಎಲ್ಲ ಸಭೆ, ಸಮಾರಂಭಗಳಲ್ಲಿ ಹಾಗೂ ಪ್ರತಿದಿನ ಎಲ್ಲ ಶಾಲೆಗಳ ಪ್ರಾರ್ಥನಾ ಸಭೆಗಳಲ್ಲಿ ಹಾಡಲಾಗುತ್ತಿತ್ತು. ಹಾಗೆಯೇ ಪ್ರತಿದಿನ ಆಕಾಶವಾಣಿ ಕಾರ್ಯಕ್ರಮ ಶುರುವಾಗುತ್ತಿದ್ದುದೇ ಈ ಹಾಡಿನಿಂದ. ಈ ಹಾಡನ್ನು ಆಕಾಶವಾಣಿಯಲ್ಲಿ ಹಾಗೂ ಅನೇಕ ಸಭೆ ಸಮಾರಂಭಗಳಲ್ಲಿ ತಮ್ಮ ಮಧುರ ಕಂಠದಿಂದ ಹಾಡಿದವರು ಶ್ರೇಷ್ಠ ಗಾಯಕ ಪಿ ಕಾಳಿಂಗರಾವ್.



ಹುಯಿಲಗೋಳ ನಾರಾಯಣರಾವ್

ನಾಡಿನ ಎಲ್ಲರ ಮೆಚ್ಚುಗೆ ಪಡೆದ ಈ ಗೀತೆಯನ್ನು ಬರೆದ ನಾರಾಯಣ ರಾಯರಿಗೆ ಮೈಸೂರು ಸಂಸ್ಥಾನದ ಚಾಮರಾಜ ಒಡೆಯರ್ ಅವರು ಸನ್ಮಾನ ಮಾಡಲು ಯೋಚಿಸಿದರು. ಸನ್ಮಾನ ಅತ್ಯಂತ ಅಮೂಲ್ಯವಾದದ್ದು. ಚಾಮರಾಜ ಒಡೆಯರ್ ತಮ್ಮ ಮೈಸೂರು ಅರಮನೆಗೆ ಆಗಿನ ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ಅವರನ್ನು ಆಹ್ವಾನಿಸಿ, ನಾರಾಯಣ ರಾಯರನ್ನು ಗದುಗಿನಿಂದ ಕರೆಸಿಕೊಂಡು ಅವರಿಗೆ ‘ರಾಷ್ಟ್ರ ಪ್ರಶಸ್ತಿ’ ಕೊಡಿಸಿದರು. ಈ ವೈಭವದ ಸಮಾರಂಭಕ್ಕೆ ಅವರನ್ನು ಬಲವಂತವಾಗಿ ಕರೆದುಕೊಂಡು ಹೋಗಿದ್ದರಂತೆ. ಅವರು ಸಂಕೋಚ ಸ್ವಭಾವದವರು. ಸಮಗ್ರ ಕರ್ನಾಟಕದ ಇತಿಹಾಸದಲ್ಲಿ ಮೊಟ್ಟಮೊದಲ ರಾಷ್ಟ್ರ ಪ್ರಶಸ್ತಿ ಪಡೆದ ಮೊದಲ ವ್ಯಕ್ತಿ. ಇದು ಕರ್ನಾಟಕ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ವೈಭವದ ಘಟನೆ. ಕನ್ನಡಿಗರೆಲ್ಲ ಹೆಮ್ಮೆಪಡುವ ಸಂಗತಿ. ❖



ಜೀವನ ಹಸನು ಮಾಡಿದ ಸಜ್ಜನ

• ಎಂ.ಎಸ್. ಶ್ರೀರಾಮ್



ಅತ್ಯಂತ ಸಜ್ಜನರೂ ಆರ್ಥಿಕ ತಜ್ಞರೂ ಮಾಜಿ ಪ್ರಧಾನಮಂತ್ರಿಯೂ ಆಗಿದ್ದ ಮನಮೋಹನ ಸಿಂಗ್ ಅವರ ನಿಧನದಿಂದಾಗಿ ದೇಶದ ಆರ್ಥಿಕ ಮತ್ತು ರಾಜಕೀಯ ಲೋಕದಲ್ಲಿ ಒಂದು ಅಧ್ಯಾಯದ ಅಂತ್ಯವಾಗಿದೆ-ಯೆಂದು ಹೇಳಬಹುದು. ಇಂದಿಗೆ ಲ್ಯಾಟರಲ್ ಎಂಟ್ರಿ ಎಂದು ಹೇಳುವ – ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಪಾಸು ಮಾಡದೇ ವೃತ್ತಿಪರ ಪರಿಣತರಾಗಿ ಸರ್ಕಾರದ ಸೇವೆ ಮಾಡಿದ್ದ ರಾಕೇಶ್ ಮೋಹನ್, ಮಾಂಟೆಕ್ ಸಿಂಗ್ ಅಹ್ಲುವಾಲಿಯಾ, ಬಿಮಲ್ ಜಲಾನ್‌ರಂತಹ, ಅನೇಕ ಆರ್ಥಿಕ ತಜ್ಞರಲ್ಲಿ ಮನಮೋಹನ ಸಿಂಗ್ ಪ್ರಮುಖರಾಗಿ ನಿಲ್ಲುತ್ತಾರೆ. ಪಾಕಿಸ್ತಾನದ ಒಂದು ಹಳ್ಳಿಯಲ್ಲಿ ಹುಟ್ಟಿ, ಸ್ವಾತಂತ್ರ್ಯದ ಸಮಯಕ್ಕೆ ಭಾರತಕ್ಕೆ ವಲಸೆ ಬಂದು, ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ಎರಡೂ ವಿಶ್ವವಿ-ದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಕೈಗೂಂಡು ಗೆದ್ದ ಅಪರೂಪದ ಬುದ್ಧಿಜೀವಿಗಳಲ್ಲಿ ಮನಮೋಹನ ಸಿಂಗ್ ಒಬ್ಬರಾಗಿ ನಿಲ್ಲುತ್ತಾರೆ.

ದೆಹಲಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಮೊದಲಿಗೆ ಕೆಲಸ ಹಿಡಿದರೂ ನಂತರ ಆರ್ಥಿಕ ತಜ್ಞರಾಗಿ ಸರ್ಕಾರದ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡ ಮನಮೋಹನ ಸಿಂಗ್ ಎಲ್ಲ ಸ್ತರಗಳಲ್ಲೂ ನಮ್ಮ ದೇಶದ ಆರ್ಥಿಕ ನೀತಿಯನ್ನು ನಿರ್ವಹಿಸುವ, ರೂಪಿಸುವ ಕೆಲಸವನ್ನು ಮಾಡಿದ್ದರು. ಸರಳ ಜೀವಿಯೂ, ಪ್ರಾಮಾಣಿಕರೂ ಆಗಿದ್ದ ಅವರನ್ನು ಎಲ್ಲರೂ ಗೌರವದಿಂದ ಕಾಣುತ್ತಿದ್ದರು. ಭಾರತೀಯ ರಿಸರ್ವ್ ಬ್ಯಾಂಕ್‌ನಗವರ್ನರ್ ಆಗಿ, ಯೋಜನಾ ಆಯೋಗದ ಉಪಾಧ್ಯಕ್ಷರಾಗಿ, ಯುಜಿಸಿಯ ಅಧ್ಯಕ್ಷರಾಗಿ, ದೇಶದ ವಿತ್ತ ಮಂತ್ರಿಗಳು, ಕಡೆಗೆ ದೀರ್ಘಕಾಲ ಸೇವೆ ಸಲ್ಲಿಸಿದ ಪ್ರಧಾನಿಯಾಗಿ ಅವರು ಕೆಲಸ ಮಾಡಿದ್ದಾರೆ.

ಮನಮೋಹನ ಸಿಂಗ್ ಅವರ ಹೆಗ್ಗಳಿಕೆ ದೇಶದ ಆರ್ಥಿಕ ವ್ಯವಸ್ಥೆಯನ್ನು ಮೂಲಭೂತವಾಗಿ ಸುಧಾರಣೆಯತ್ತ ಒಯ್ಯು-ವುದರಲ್ಲಿ ಇತ್ತು. 1991ರ ಅವರ ಆಯವ್ಯಯ ಪತ್ರದ ಮಂಡನೆ ನಮ್ಮ ದೇಶದ ಆರ್ಥಿಕ ದಿಕ್ಕನ್ನು ಮೂಲಭೂತವಾಗಿ ಬದಲಾಯಿಸಿ ತೀವ್ರಗತಿಯ ಬೆಳವಣಿಗೆಯತ್ತ ಒಯ್ದಿತ್ತು. ಆಗ್ಗೆ ಇದ್ದ ಆರ್ಥಿಕ ಬಿಕ್ಕಟ್ಟನ್ನು ಸಶಕ್ತವಾಗಿ ಅವರು ನಿಭಾಯಿಸಿದರು. ಮೊದಲಿಗೆ ದೇಶದ ಪಾವತಿಯ ಸ್ಥಿತಿ ಗಂಭೀರವಾಗಿದ್ದು – ನಾವು ಅಂತಾರಾಷ್ಟ್ರೀಯ ಸಂಸ್ಥೆಗಳಿಂದ ಸಾಲ ಪಡೆಯಲು ಅಗತ್ಯವಾದ ಸಂಪನ್ಮೂಲ ಇಲ್ಲದ ಸಮಯದಲ್ಲಿ ದೇಶದ ಬಂಗಾರವನ್ನು ಅಡ ಇಟ್ಟು ವಿತ್ತವ್ಯವಸ್ಥೆಯನ್ನು ನಿಭಾಯಿಸಿದರು. ನಂತರದ ವರ್ಷಗಳಲ್ಲಿ ಆ ಬಂಗಾರವನ್ನು ಬಿಡಿಸಿಕೊಂಡದ್ದಲ್ಲದೇ, ನಮ್ಮ ದೇಶವು ಇನ್ನೂ ಹೆಚ್ಚಿನ ಬಂಗಾರವನ್ನು ಕೊಂಡು ತನ್ನ ನಿಕ್ಷೇಪಕ್ಕೆ ಸೇರಿಸಿದ್ದನ್ನು ಹೆಚ್ಚು ಕೊಂಡಾಡಿದ್ದನ್ನು ನಾವು ಕಂಡಿಲ್ಲ.

ಅಮೆರಿಕದ ಜೊತೆ ಅತ್ಯಂತ ಮಧುರ ಸಂಬಂಧ ಮನಮೋಹನ ಸಿಂಗ್ ಪ್ರಧಾನಿ ಆಗಿದ್ದ ಕಾಲದಲ್ಲೇ ಇತ್ತೆನ್ನ-ಬಹುದು. ಜಾರ್ಜ್ ಬುಷ್ ಅವರಿಗೆ ಮನಮೋಹನ ಸಿಂಗ್ ಅವರ ಬಗ್ಗೆ ತೀವ್ರ ಗೌರವವೂ ವ್ಯಕ್ತಿಗತವಾಗಿ ಅಭಿಮಾನವೂ ಇತ್ತೆನ್ನಲಾಗಿದೆ. ಹೀಗಾಗಿಯೇ ಜಾರ್ಜ್ ಬುಷ್ ಅವರ ವ್ಯಕ್ತಿಗತ ಆಸಕ್ತಿಯಿಂದಾಗಿ ಪರಮಾಣು ಶಕ್ತಿಯ ಒಪ್ಪಂದವನ್ನು ನಾವು ಸಾಧಿಸಲು ಸಾಧ್ಯವಾಯಿತು. ಸಾಮಾನ್ಯವಾಗಿ ಪಕ್ಷ ಮತ್ತು ರಾಜಕೀಯ ಒತ್ತಡಗಳಿಗೆ ಮಣಿದು – ತುಸು ದುರ್ಬಲ – ಎನ್ನಿಸುವಂತೆ ಕಾಣುತ್ತಿದ್ದ ಪ್ರಧಾನಿ ಈ ಒಪ್ಪಂದ ಕೈಗೂಡಲು ತಮ್ಮ ಕುರ್ಚಿಯನ್ನೇ ಪಣಕ್ಕಿಟ್ಟರು ಎನ್ನಬಹುದು. ರಿಸರ್ವ್ ಬ್ಯಾಂಕಿನ ಗವರ್ನರ್ ಆಗಿದ್ದ ಡಾ ವೈ.ವಿ ರೆಡ್ಡಿಯವರನ್ನ ಪತ್ರಕರ್ತರು ಒಮ್ಮೆ ಪ್ರಶ್ನಿಸಿದ್ದರು – 'ಸರ್ಕಾರದೊಂದಿಗೆ ಭಿನ್ನಾಭಿಪ್ರಾಯ ಉಂಟಾದಾಗಲೆಲ್ಲಾ ನೀವು ರಾಜೀನಾಮೆ ಮಾತಾಡುತ್ತಿದ್ದೀರಾ?' ಅದಕ್ಕೆ ರೆಡ್ಡಿಯವರು ಹೇಳಿದ್ದು ಈ ಮಾತು 'ಇಲ್ಲ, ಸಾಮಾನ್ಯವಾಗಿ ನಮ್ಮ ಅಭಿಪ್ರಾಯವನ್ನು ಗಟ್ಟಿಯಾಗಿ ತಿಳಿಸಬೇಕು. ನಂತರ ಸರ್ಕಾರದ ಅಭಿಪ್ರಾಯ ಬದಲಾಗದಿದ್ದರೆ ಮಣಿಯಬೇಕು. ಆದರೆ ಕೆಲವು ಸಂದರ್ಭಗಳಲ್ಲಿ ಸರ್ಕಾರದ ಅಭಿಪ್ರಾಯವನ್ನು ಜಾರಿಮಾಡುವುದು ಪಾಪವೆಂದು ಅನ್ನಿಸಿದಾಗ ಈ ರೀತಿಯ ಕ್ರಮ ಕೈಗೊಳ್ಳಬೇಕು' ಎಂದಿದ್ದರು. ಪರಮಾಣು ಒಪ್ಪಂದದ ಸಂದರ್ಭದಲ್ಲಿ ಮನಮೋಹನ ಸಿಂಗ್ ಅವರ ನಿಲುವು ಈ ರೀತಿಯಾಗಿ ದೇಶಕ್ಕೆ ಅತ್ಯಂತ ಅವಶ್ಯವಾದ ಶಕ್ತಿ ಮೂಲವನ್ನು ಪಡೆಯುವಲ್ಲಿ ರಾಜಕೀಯ ಅಧಿಕಾರವನ್ನೂ ಮೀರಿ ನಿಲ್ಲಬೇಕೆನ್ನು-ವದನ್ನು ತೋರಿಸಿದ್ದರು.

ಶೇಕಡಾ 8ಕ್ಕೂ ಮೀರಿ ದೇಶದ ಆರ್ಥಿಕ ಪ್ರಗತಿಯ ಗತಿಯನ್ನು ಒಂದು ದಶಕದ ಕಾಲ ಸಾಧಿಸಿದವರು ಮನಮೋಹನ ಸಿಂಗ್. ಆದರೆ ಆ ಬಗ್ಗೆ ಯಾವುದೇ ಬಾಜಾ ಬಜಂತ್ರಿಗಳಿರಲಿಲ್ಲ. ಸರಳವಾಗಿ ಮೌನವಾಗಿ ತಮ್ಮ ಸಾಧನೆಗಳನ್ನು ಕೆಲಸ ಮಾಡಿ ತೋರುವುದನ್ನೇ ಅವರು ನಂಬಿದ್ದರು.

ಅವರ ಪ್ರಖರ ಪ್ರಾಮಾಣಿಕತೆಗೆ ಎರಡು ಉದಾಹರಣೆಗಳು. ಒಮ್ಮೆ ಒಂದು ಸಭೆಯ ನಂತರ ಎಲ್ಲರೂ ತಮ್ಮ ಮನೆಗಳಿಗೆ ಹೋಗುತ್ತಿದ್ದಾಗ ಸಿಂಗ್ ಅವರ ಬಳಿ ಬಂದ ಅಧಿಕಾರಿಯೊಬ್ಬರು 'ನಾನು ನಿಮ್ಮ ಜೊತೆ ಬರಬಹುದೇ... ನಿಮ್ಮನ್ನು ಬಿಟ್ಟನಂತರ ನಿಮ್ಮ ಗಾಡಿ ನನ್ನನ್ನು ಡ್ರಾಪ್ ಮಾಡಬಹುದು, ಇಫ್ ಯು ಡೋಂಟ್ ಮೈಂಡ್' ಎಂದು ಕೇಳಿದರಂತೆ. ಅದಕ್ಕೆ ಸಿಂಗ್, 'ಇದು ನನ್ನ ಅಫೀಶಿಯಲ್ ಗಾಡಿ. ಇಫ್ ಯು ಡೋಂಟ್ ಮೈಂಡ್ ನನ್ನ ಮನೆಯ ಬಳಿ ಇಳಿದು ಬೇರೆ ಗಾಡಿ ಮಾಡಿಕೊಂಡು ಹೋಗಬಹುದೇ?' ಎಂದು ಉತ್ತರಿಸಿದ್ದರಂತೆ. ಇದು ಎಲ್ಲೋ ಓದಿರುವ ಮಾತು.

ಆದರೆ, ನನಗೆ ವೈಯಕ್ತಿಕವಾಗಿ ಆದ ಅನುಭವ ಹೀಗಿದೆ. ಆಣಂದದ ಇನ್ಸ್‌ಟಿಟ್ಯೂಟ್ ಆಫ್ ರೂರಲ್ ಮ್ಯಾನೇಜ್‌ಮೆಂಟಿನ ಆಡಳಿತ ಮಂಡಳಿಯಲ್ಲಿ ನಾನಿದ್ದೆ. ಆ ಸಂಸ್ಥೆಗೆ ಸರ್ಕಾರದ ಬೊಕ್ಕಸದಿಂದ ದೇಣಿಗೆಗಾಗಿ ನಾವು ಪ್ರಯತ್ನಿಸುತ್ತಿದ್ದೆವು. ಪ್ರಣಬ್ ದಾ ಆಯವ್ಯಯ ಪತ್ರವನ್ನು ಮಂಡಿಸುವ ಮುನ್ನ ಅದರಲ್ಲಿ ಒಂದು ಸಾಲು ವಿದ್ಯಾ ಸಂಸ್ಥೆಗಳಿಗೆ ಕೊಡುವ ದೇಣಿಗೆಯ ಮಾತು ಬರೆಸಬಹುದು ಎನ್ನುವುದು ನಮ್ಮ ಆಲೋಚನೆ. ಎಲ್ಲ ಪ್ರಯತ್ನಗಳನ್ನೂ ಮಾಡುತ್ತಾ ನಾನು ಮನಮೋಹನ ಸಿಂಗ್ ಅವರ ಮಗಳಿಗೆ ಒಂದು ಈ ಮೇಲ್ ಕಳಿಸಿದೆ. ಅದೇ ಸಂಸ್ಥೆಯಲ್ಲಿ ಓದಿದ್ದ, ನನಗಿಂತ ಎರಡು ವರ್ಷ ಜೂನಿಯರ್ ಆಗಿದ್ದ ಆಕೆ ತಂದೆಗೆ ಒಂದು ಮಾತು ಹೇಳಬಹುದು ಎನ್ನುವುದು ನನ್ನ ಇರಾದೆಯಾಗಿತ್ತು. ಆದರೆ ಆಕೆಯ ಪ್ರತಿಕ್ರಿಯೆ ಭಿನ್ನವಾಗಿತ್ತು 'ನೀನು ಕೇಳುತ್ತಿರುವುದರಲ್ಲಿನ ಉದ್ದೇಶದಲ್ಲಿ ಯಾವುದೇ ತೊಂದರೆಯಿಲ್ಲ. ಆದರೆ ನಾವು ಯಾರೂ ತಂದೆಯವರನ್ನು ಯಾವುದೇ ರೀತಿಯ ಸೌಲಭ್ಯವನ್ನು ಕೇಳುವುದಿಲ್ಲ ಎನ್ನುವುದು ನಮ್ಮ ಸಂಸಾರದಲ್ಲಿ ಪಾಲಿಸುತ್ತಿರುವ ನಿಯಮ. ಸಾರಿ. ನೀನು ನಿನ್ನ ಪ್ರಯತ್ನಗಳನ್ನು ಮುಂದುವರಿಸು. ಹೆಚ್ಚೆಂದರೆ ನಾನು ಒಂದು ಈ ಮೇಲ್ ವಿಳಾಸ ಕೊಡುತ್ತೇನೆ. ಅದನ್ನು ಅವರ ಆಪ್ತಕಾರ್ಯದರ್ಶಿಗಳು ಸ್ವತಃ ನೋಡುತ್ತಾರೆ. ಅಲ್ಲಿಗೆ ಪತ್ರ ಬರೆದು ಪ್ರಯತ್ನಿಸು. ನಾನು ಮಾಡಬಹುದಾದ ಸಹಾಯ ಇಷ್ಟೇ' ಎಂದು ಹೇಳಿದ್ದಳು.

ಸಜ್ಜನಿಕೆ ರಾಜಕೀಯದಿಂದ ದೂರವಾಗುತ್ತಿರುವ ಈ ಸಮಯಕ್ಕೆ ಇಂಥ ಸಜ್ಜನರೂ ನಮ್ಮ ನಾಯಕರಾಗಿದ್ದರು. ಯಾವುದೇ ಅಬ್ಬರವಿಲ್ಲದೇ ದೇಶ ಸೇವೆಯನ್ನು ಮಾಡಿದರು ಎನ್ನುವುದನ್ನು ನೆನಪು ಮಾಡಿಕೊಳ್ಳೋಣ. ಅವರಂತಹ ಬುದ್ಧಿಜೀವಿಗಳು ಮತ್ತು ಪ್ರಾಮಾಣಿಕರು ನಮ್ಮ ದೇಶದ ರಾಜಕೀಯದಲ್ಲಿ ಹೆಚ್ಚು ಸಕ್ರಿಯವಾಗಿ ಪಾಲ್ಗೊಳ್ಳಲಿ ಎಂದು ಹಾರೈಸುತ್ತಾ ಅವರಿಗೆ ಸಂತೋಷದಿಂದಲೇ ವಿದಾಯ ಹೇಳೋಣ. ಅವರು ನಮ್ಮೆಲ್ಲರ ಜೀವನವನ್ನು ಹಸನು ಮಾಡಿದರು, ನಮಗೆ ಖುಷಿಯನ್ನು ಹಂಚಿದರು ಎನ್ನುವುದನ್ನು ಮರೆಯದಿರೋಣ.

ಲೇಖಕ: ಅರ್ಥಶಾಸ್ತ್ರಜ್ಞ



ಮನಮೋಹನ ಸಿಂಗ್ ಅವರ ಅಗಲಿಕೆ ದೊಡ್ಡ ನಷ್ಟ. ಪ್ರಧಾನಿ, ಹಣಕಾಸು ಸಚಿವರಾಗಿ ಅವರು ದೇಶದ ಆರ್ಥಿಕತೆ ಸುಧಾರಣೆಗೆ ಗಣನೀಯ ಕೊಡುಗೆ ನೀಡಿದ್ದಾರೆ. ಅವರ ಸೇವೆಗೆ ದೇಶ ಸದಾ ಸ್ಮರಿಸುತ್ತದೆ

ದ್ರೌಪದಿ ಮುರ್ಮು, ರಾಷ್ಟ್ರಪತಿ



ಸೋನಿಯಾ ಗಾಂಧಿ ಮತ್ತು ಪ್ರಣಬ್ ಮುಖರ್ಜಿ ಅವರೊಂದಿಗೆ ಮನಮೋಹನ ಸಿಂಗ್

'ನಾನು ಮಾಧ್ಯಮಗಳಿಗೆ ಹೆದರುವ ಪ್ರಧಾನಿ ಅಲ್ಲ'

ಪ್ರಜಾವಾಣಿ ವಾರ್ತೆ

'ನಾನು ಮಾಧ್ಯಮಗಳಿಗೆ ಹೆದರುವಂತಹ ಪ್ರಧಾನಿ ಅಲ್ಲ'. ಸುಮಾರು ಹನ್ನೊಂದು ವರ್ಷಗಳ ಹಿಂದೆ ಅಂದಿನ ಪ್ರಧಾನಿ ಮನಮೋಹನ ಸಿಂಗ್ ಅವರು 100ಕ್ಕೂ ಹೆಚ್ಚು ಪತ್ರಕರ್ತರ ಎದುರು ಕೂತು ಹೇಳಿದ ಮಾತಿದು. 2025ನೇ ಜನವರಿ 3ನೇ ತಾರೀಖು ಬಂದರೆ, ಆ ಮಾಧ್ಯಮಗೋಷ್ಠಿ ನಡೆದು ಸರಿಯಾಗಿ ಹನ್ನೊಂದು ವರ್ಷ ತುಂಬುತ್ತಿತ್ತು. 2014ರ ಜನವರಿ 3ರಂದು ನಡೆದ ಆ ಮಾಧ್ಯಮ ಗೋಷ್ಠಿಯ ಮಹತ್ವ ಎಷ್ಟಿದೆಯೆಂದರೆ, ದೇಶದ ಪ್ರಧಾನಿಯೊಬ್ಬರು ದೇಶದೊಳಗೆ ನಡೆಸಿದ ಕೊನೆಯ ಮಾಧ್ಯಮಗೋಷ್ಠಿ ಅದು.

100ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಪತ್ರಕರ್ತರು ಕಿಕ್ಕಿರಿದು ಕೂತಿದ್ದ ಸಭಾಂಗಣದಲ್ಲಿ ಅವರೆಲ್ಲರಿಗೂ ಎದುರಾಗಿ ಮನಮೋಹನ ಸಿಂಗ್ ಕುಳಿತಿದ್ದರು. 2ಜಿ ಹಗರಣ, ಕಲ್ಲಿದ್ದಲು ಹಗರಣ, ಭ್ರಷ್ಟಾಚಾರದ ಆರೋಪ, ನಿರ್ಭಯಾ ಪ್ರಕರಣಗಳು ಜನಮಾನಸ-ದಲ್ಲಿ ಇನ್ನೂ ಗಟ್ಟಿಯಾಗಿದ್ದ ಕಾಲವದು. ವಿಪಕ್ಷಗಳು, ಸಾಮಾಜಿಕ ಕಾರ್ಯಕರ್ತರು ಸರ್ಕಾರದ ವಿರುದ್ಧ ಬೀದಿಗಿಳಿದು ಹೋರಾಡುತ್ತಿದ್ದ ಸಂದರ್ಭವದು. ಈ ಎಲ್ಲಕ್ಕೂ ಸಂಬಂಧಿಸಿದ ಪ್ರಶ್ನಾಬಾಣಗಳ-ನ್ನು ಬತ್ತಳಿಕೆಯಲ್ಲಿ ಇರಿಸಿಕೊಂಡು ಬಂದಿದ್ದ ಪತ್ರಕರ್ತರಿಗೆ ಮನಮೋಹನ ಸಿಂಗ್ ಅವರು ಹೇಳಿದ್ದು, 'ನಾನು ಮಾಧ್ಯಮಗಳಿಗೆ ಹೆದರುವ ಪ್ರಧಾನಿ ಅಲ್ಲ' ಎಂದು. ಅವರು ಪ್ರಧಾನಿಯಾದ ನಂತರ ಎದುರಿಸಿದ 117ನೇ ಮತ್ತು ಕೊನೆಯ ಮಾಧ್ಯಮಗೋಷ್ಠಿ ಅದು. ಆನಂತರ ದೇಶದ ಪ್ರಧಾನಿ ಒಂದೂ ಮಾಧ್ಯಮಗೋಷ್ಠಿ ನಡೆಸಲೇ ಇಲ್ಲ.

ಮನಮೋಹನ ಸಿಂಗ್ ಅವರನ್ನು 'ಸೋನಿಯಾ ಅವರ ಕೈಗೊಂಬೆ', 'ಮೌನಿ ಸಿಂಗ್', 'ಆ್ಯಕ್ಸಿಡೆಂಟಲ್ ಪ್ರೈಮ್ ಮಿನಿಸ್ಟರ್' ಎಂದು ಈಗಲೂ ಜರೆಯಲಾಗುತ್ತಿದೆ. ಅಂದು ನಡೆದ ಮಾಧ್ಯಮಗೋಷ್ಠಿ ಈ ಜರೆಯುವಿಕೆಗಿಂತ ಭಿನ್ನವಾಗೇನೂ ಇರಲಿಲ್ಲ. ಅಲ್ಲಿ ಮನಮೋಹನ ಸಿಂಗ್ ಅವರಿಗೆ ಒಟ್ಟು 62 ಪ್ರಶ್ನೆಗಳನ್ನು ಕೇಳಲಾಗಿತ್ತು ಮತ್ತು ಅವ್ಯಾವುವೂ 'ಸ್ಕ್ರಿಪ್ಟೆಡ್' ಪ್ರಶ್ನೆಗಳಾಗಿರಲಿಲ್ಲ ಎಂಬುದು ಬಲ್ಲವರು ಹೇಳುವ ಮಾತು. ಪ್ರತಿ ಪ್ರಶ್ನೆಯೂ ಅವರತ್ತ ಎಸೆದ ಮೊನಚಿನ ಬಾಣಗಳಾಗಿದ್ದವು. ಅವರ ಅಧಿಕಾರದ ಸತ್ಯಾಸತ್ಯತೆಯನ್ನು ಪ್ರಶ್ನಿಸಿದವು, ವಿವಿಧ ಹಗರಣ ಮತ್ತು ಭ್ರಷ್ಟಾಚಾರದ ಆರೋಪಗಳನ್ನು ಹೊರಿಸಿದವು. ಆ 62 ಪ್ರಶ್ನೆಗಳಿಗೂ ತಮ್ಮ ಎಂದಿನ ತಣ್ಣನೆಯ ಶೈಲಿಯಲ್ಲೇ ಉತ್ತರಿಸಿದ್ದರು. ಒಂದು ಗಂಟೆ, 15 ನಿಮಿಷ ನಡೆದಿದ್ದ ಮಾಧ್ಯಮಗೋಷ್ಠಿಯ ವಿಡಿಯೊ ಈಗಲೂ ಯೂಟ್ಯೂಬ್‌ನಲ್ಲಿ, 'ಎಕ್ಸ್'ನಲ್ಲಿ ಲಭ್ಯವಿದೆ.

'ಬಡವಾದ ಭಾರತ'

ಬೆಳಗಾವಿ: 'ಜಗತ್ತಿನ ಆರ್ಥಿಕ ತಜ್ಞ, ದೇಶಕ್ಕೆ ಭದ್ರ ಬುನಾದಿ ಹಾಕಿದ ಶ್ರೇಷ್ಠ ನಾಯಕ, ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರನ್ನು ಕಳೆದುಕೊಂಡು ಭಾರತ ಬಡವಾಗಿದೆ' ಎಂದು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಗುರುವಾರ ರಾತ್ರಿ ತುರ್ತು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 'ಮನಮೋಹನ ಸಿಂಗ್ ಅವರು ಕೆಲ ಸಮಯದ ಹಿಂದೆ ತೀವ್ರ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದಾರೆ ಎಂಬ ಮಾಹಿತಿ ಬಂದಿತ್ತು. ನಾವು ಎಲ್ಲ ಕಾರ್ಯಕ್ರಮ ರದ್ದು ಮಾಡಿ ಅವರ ಕುರಿತು ಚಿಂತೆಗೀಡಾಗಿದ್ದೆವು. ರಾತ್ರಿ 9.55ರ ಸುಮಾರಿಗೆ ಏಮ್ಸ್‌ನ ನಿರ್ದೇಶಕ ಶ್ರೀನಿವಾಸ ಅವರು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕರೆ ಮಾಡಿ ಅಗಲಿಕೆಯ ವಿಷಯ ಖಾತ್ರಿ ಮಾಡಿದರು' ಎಂದು ಹೇಳಿದರು.

ತಮ್ಮನ್ನು ಇಕ್ಕಟ್ಟಿಗೆ ಸಿಲುಕಿಸುವಂತಹ ಪ್ರಶ್ನೆಗಳಿಗೆ ಉತ್ತರಿಸುತ್ತಲೇ ಅವರು, 'ಈಗಿನ ಮಾಧ್ಯಮಗಳು ಮತ್ತು ವಿರೋಧ ಪಕ್ಷಗಳಿಗಿಂತ ಇತಿಹಾಸವು ನನ್ನ ಕುರಿತು ಹೆಚ್ಚು ಕರುಣಾಮಯಿ ಆಗಿರುತ್ತದೆ ಎಂದು ನಾನು ನಂಬಿದ್ದೇನೆ' ಎಂದು ಹೇಳಿದ್ದರು. ತಮ್ಮ ನೇತೃತ್ವದ ಯುಪಿಎ–1 ಮತ್ತು ಯುಪಿಎ–2 ಸರ್ಕಾರವು ಜಾರಿಗೆ ತಂದಿದ್ದ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ), ಮಾಹಿತಿ ಹಕ್ಕು ಕಾಯ್ದೆ, ಕಡ್ಡಾಯ ಮತ್ತು ಉಚಿತ ಶಿಕ್ಷಣದ ಸುಧಾರಣಾ ರೂಪ ಆರ್‌ಟಿಇ ಕಾಯ್ದೆ ಮತ್ತು ದೇಶದ 80 ಕೋಟಿ ಜನರಿಗೆ ಪಡಿತರ ಒದಗಿಸುವ ಆಹಾರ ಭದ್ರತಾ ಕಾಯ್ದೆಗಳನ್ನು ಉಲ್ಲೇಖಿಸಿದ್ದರು.

ಮನಮೋಹನ ಸಿಂಗ್ ಅವರನ್ನು ಅತ್ಯಂತ ದುರ್ಬಲ ಪ್ರಧಾನಿ ಮತ್ತು ಅಂದು ಬಿಜೆಪಿಯ ಪ್ರಧಾನಿ ಅಭ್ಯರ್ಥಿ-ಯಾಗಿದ್ದ ನರೇಂದ್ರ ಮೋದಿ ಅವರು ಅತ್ಯಂತ ಶಕ್ತಿಶಾಲಿ ಎಂದು ಬಿಂಬಿಸುತ್ತಿದ್ದ ಸಂದರ್ಭವದು. ದೇಶಕ್ಕೆ ಶಕ್ತಿಶಾಲಿ ಪ್ರಧಾನಿ ಬೇಕು ಎಂಬುದು ಜನರ ಇಚ್ಛೆ ಎಂದು ಪತ್ರಕರ್ತರು ಪ್ರಶ್ನೆ ಎಸೆದು, ಹುಬ್ಬೇರಿಸಿದ್ದರು. ನಗುತ್ತಲೇ ಅದಕ್ಕೆ ಉತ್ತರಿಸಿದ್ದ ಅವರು, 'ಬಲಿಷ್ಠ ಪ್ರಧಾನಿ ಎಂದರೇನು? ಅಹಮದಾಬಾದ್‌ನ ಬೀದಿಗಳಲ್ಲಿ ನಡೆದ ಅಮಾಯಕರ ನರಮೇಧದ ನೇತೃತ್ವ ವಹಿಸುವುದೇ? ಬಲಿಷ್ಠತೆ ಅಳೆಯುವ ಮಾನದಂಡ ಅದೇ ಆದರೆ, ಅಂತಹ ಬಲದ ಅಗತ್ಯವಿಲ್ಲ. ದೇಶವು ಪ್ರಧಾನಿಯಿಂದ ಅಂತಹ ಬಲ ಬಯಸುವುದಿಲ್ಲ ಎಂದು ನಾನು ನಂಬಿದ್ದೇನೆ. ಖಂಡಿತವಾಗಿಯೂ ನಾನು ಅಂತಹ ಶಕ್ತಿಶಾಲಿ ಅಲ್ಲ. ಬಹುಶಃ ಈ ದೇಶವು ಪ್ರಧಾನಿ-ಯೊಬ್ಬರಿಂದ ಅಂತಹ ಶಕ್ತಿಯನ್ನು ನಿರೀಕ್ಷಿಸುತ್ತದೆ ಎಂದು ನಾನಂದುಕೊಂಡಿಲ್ಲ' ಎಂದಿದ್ದರು.



ಸಿಂಗ್ ಅವರು ಗಾಲಿ ಕುರ್ಚಿಯಲ್ಲಿ ಕುಳಿತು ರಾಜ್ಯಸಭೆಯ ಕಲಾಪದಲ್ಲಿ ಭಾಗಿಯಾಗಿದ್ದ ಸಂದರ್ಭ

'ವೈದ್ಯನಾಗಬೇಕೆಂದು ಬಯಸಿದ್ದರು'

ನವದೆಹಲಿ(ಪಿಟಿಐ): 'ಮನಮೋಹನ್ ಸಿಂಗ್ ಅವರು ವೈದ್ಯರಾಗಬೇಕೆಂದು ಅವರ ತಂದೆ ಬಯಸಿದ್ದರಿಂದ ಪ್ರಿ-ಮೆಡಿಕಲ್ ಕೋರ್ಸ್‌ಗೆ ಸೇರಿಸಿದ್ದರು. ಆದರೆ, ಒಂದೆರಡು ತಿಂಗಳ ನಂತರ ವೈದ್ಯಕೀಯ ಶಿಕ್ಷಣದಲ್ಲಿ ಆಸಕ್ತಿ ಕಳೆದುಕೊಂಡರು'

– ಮನಮೋಹನ್ ಅವರ ಮಗಳು ದಮನ್ ಸಿಂಗ್, ತಮ್ಮ ತಂದೆಯ ಕುರಿತು ಬರೆದ ಪುಸ್ತಕದಲ್ಲಿ ಈ ವಿಷಯವನ್ನು ಹೇಳಿಕೊಂಡಿದ್ದಾರೆ.

ದಮನ್ ಬರೆದಿರುವ 'ಸ್ಟ್ರಿಕ್ಟ್ಲಿ ಪೊಲಿಟಿಕಲ್: ಮನಮೋಹನ್ ಆ್ಯಂಡ್ ಗುರುಶರಣ್' ಪುಸ್ತಕ 2014ರಲ್ಲಿ ಪ್ರಕಟಗೊಂಡಿತ್ತು. ಅರ್ಥಶಾಸ್ತ್ರ ವಿಷಯದಲ್ಲಿ ಅವರಿಗೆ ಅತೀವ ಪ್ರೀತಿಯಿತ್ತು ಎಂದು ಅವರು ಬರೆದಿದ್ದಾರೆ.

'ಮಗನನ್ನು ವೈದ್ಯನಾಗಿಸಬೇಕು ಎಂಬ ಕಾರಣದಿಂದ ವೈದ್ಯ-ಕೀಯದಲ್ಲಿ ಹೆಚ್ಚಿನ ಅಧ್ಯಯನಕ್ಕೆ ಅವಕಾಶ ಕಲ್ಪಿಸುವ ಎರಡು ವರ್ಷಗಳ ಎಫ್‌ಎಸ್‌ಸಿ ಕೋರ್ಸ್‌ಗೆ ಸೇರಿಸಿದ್ದರು. ಒಂದೆರಡು ತಿಂಗಳ ನಂತರ, ಅವರು ಆ ಕೋರ್ಸ್‌ನಲ್ಲಿ ಆಸಕ್ತಿ ಕಳೆದುಕೊಂಡರು. ವಾಸ್ತವವಾಗಿ, ವಿಜ್ಞಾನ ವಿಷಯವನ್ನು ಅಧ್ಯಯನ ಮಾಡುವ ಆಸಕ್ತಿ ಅವರಿಗೆ ಇರಲಿಲ್ಲ' ಎಂದು ಹೇಳಿಕೊಂಡಿದ್ದಾರೆ.

'ನಾನು ಅಪ್ಪನಿಗೆ ನೆರವಾಗಲು ಕೆಲ ಸಮಯ ಅವರ ಜತೆ ಅಂಗಡಿಗೆ ಹೋಗುತ್ತಿದ್ದೆ. ಆದರೆ ಅದೂ ನನಗೆ ಇಷ್ಟವಾಗಲಿಲ್ಲ, ಏಕೆಂದರೆ, ನನ್ನನ್ನು ಅಲ್ಲಿ ಕೀಳಾಗಿ ಕಾಣಲಾಯಿತು. ನೀರು, ಚಹಾ ತರುವ ಕೆಲಸವನ್ನು ನನಗೆ ನೀಡಲಾಯಿತು. ಶಿಕ್ಷಣ ಪಡೆಯುವುದೇ ಒಳಿತು ಎಂದು ಯೋಚಿಸಿ ಕಾಲೇಜು ಸೇರಲು ನಿರ್ಧರಿಸಿದೆ. 1948ರಲ್ಲಿ ಹಿಂದೂ ಕಾಲೇಜಿಗೆ ಪ್ರವೇಶ ಪಡೆದೆ' ಎಂದು ದಮನ್ ಅವರು ತಮ್ಮ ತಂದೆಯವರ ಹೇಳಿಕೆಯನ್ನು ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.


'ಬಡತನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ನಾನು ಆಸಕ್ತಿ ಹೊಂದಿದ್ದೇನೆ. ಕೆಲವು ದೇಶಗಳು ಏಕೆ ಹಿಂದುಳಿದಿವೆ, ಕೆಲವು ದೇಶಗಳು ಏಕೆ ಶ್ರೀಮಂತವಾಗಿವೆ ಎಂಬುದರ ಬಗ್ಗೆ ಯೋಚಿಸುತ್ತಿದ್ದೆ. ಇಂತಹ ಪ್ರಶ್ನೆಗಳನ್ನು ಅರ್ಥಶಾಸ್ತ್ರದಲ್ಲಿ ಕೇಳಲಾಗುತ್ತದೆ ಎಂದು ನನಗೆ ತಿಳಿಸಲಾಯಿತು' ಎಂದು ಸಿಂಗ್ ಅವರು ಹೇಳಿರುವುದನ್ನು ಪುಸ್ತಕದಲ್ಲಿ ಬರೆದಿದ್ದಾರೆ.

ಸಿಂಗ್ ಹೆಜ್ಜೆಗುರುತು

- 1932 ಸೆ. 26ರಂದು ವಿಭಜನಪೂರ್ವ ಪಾಕಿಸ್ತಾನದ ಪಂಜಾಬ್‌ನಲ್ಲಿ ಜನನ
- ಅಮೃತಸರದ ಹಿಂದೂ ಕಾಲೇಜಿನಲ್ಲಿ ಆರಂಭಿಕ ಶಿಕ್ಷಣ
- ಪಂಜಾಬ್ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರ ವಿಷಯದಲ್ಲಿ ಪದವಿ (1952) ಹಾಗೂ ಸ್ನಾತಕೋತ್ತರ ಪದವಿ (1954)
- ಕೇಂಬ್ರಿಜ್ ವಿಶ್ವವಿದ್ಯಾಲಯದಿಂದ 1957ರಲ್ಲಿ ಅರ್ಥಶಾಸ್ತ್ರದಲ್ಲಿ ಉನ್ನತ ಶಿಕ್ಷಣ
- ಆಕ್ಸ್‌ಫರ್ಡ್ ವಿ.ವಿಯಿಂದ 1962ರಲ್ಲಿ ಅರ್ಥಶಾಸ್ತ್ರದಲ್ಲಿ ಡಿ.ಫಿಲ್
- ಪಂಜಾಬ್ ವಿಶ್ವವಿದ್ಯಾಲಯ ಮತ್ತು ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಕೆಲಕಾಲ ಬೋಧನೆ
- 1971ರಲ್ಲಿ ಭಾರತ ಸರ್ಕಾರದ ಹಣಕಾಸು ಸಚಿವಾಲಯದಲ್ಲಿ ಆರ್ಥಿಕ ಸಲಹೆಗಾರರಾಗಿ ನೇಮಕ
- 1972ರಲ್ಲಿ ಹಣಕಾಸು ಸಚಿವಾಲಯದಲ್ಲಿ ಮುಖ್ಯ ಆರ್ಥಿಕ ಸಲಹೆಗಾರನ ಹುದ್ದೆಗೆ ಬಡ್ತಿ
- ವಿಶ್ವಸಂಸ್ಥೆಯ ವಿಶ್ವ ವಾಣಿಜ್ಯ ಮತ್ತು ಅಭಿವೃದ್ಧಿ ಸಮ್ಮೇಳನ ಸೆಕ್ರೆಟರಿಯೇಟ್‌ನಲ್ಲಿ (ಯುಎನ್‌ಸಿಟಿಎಡಿ) ಅಲ್ಪ ಅವಧಿಗೆ ಕೆಲಸ
- 1987ರಿಂದ 1990ರವರೆಗೆ ಜಿನೀವಾದ ಸೌತ್ ಕಮಿಷನ್‌ನ ಪ್ರಧಾನ ಕಾರ್ಯದರ್ಶಿಯಾಗಿ ಕರ್ತವ್ಯ
- 1982ರ ಸೆಪ್ಟೆಂಬರ್ 16ರಿಂದ 1985ರ ಜನವರಿ 14ರವರೆಗೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಗವರ್ನರ್ ಆಗಿ ಕೆಲಸ
- ಹಣಕಾಸು ಸಚಿವಾಲಯದ ಕಾರ್ಯದರ್ಶಿ, ಯೋಜನಾ ಆಯೋಗದ ಉಪಾಧ್ಯಕ್ಷ, ಪ್ರಧಾನ ಮಂತ್ರಿ ಅವರ ಸಲಹೆಗಾರ ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷರಾಗಿಯೂ ಕರ್ತವ್ಯ ನಿರ್ವಹಣೆ
- 1991ರಲ್ಲಿ ಮೊದಲ ಬಾರಿ ರಾಜ್ಯಸಭಾ ಸದಸ್ಯರಾಗಿ ಆಯ್ಕೆ; 1995, 2001, 2007, 2013 ಮತ್ತು 2019ರಲ್ಲಿ ರಾಜ್ಯಸಭೆಗೆ ಮರು ಆಯ್ಕೆಯಾದರು. ರಾಜ್ಯಸಭೆಯಲ್ಲಿ ಅವರ 33 ವರ್ಷಗಳ ಅವಧಿ ಈ ವರ್ಷ ಏಪ್ರಿಲ್‌ನಲ್ಲಿ ಕೊನೆಗೊಂಡಿತು
- ಪಿ.ವಿ. ನರಸಿಂಹರಾವ್ ಸರ್ಕಾರದಲ್ಲಿ ಹಣಕಾಸು ಸಚಿವರಾಗಿ ಕಾರ್ಯನಿರ್ವಹಣೆ
- 1998ರಿಂದ 2004ರ ವರೆಗೆ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕನ ಹುದ್ದೆ
- 2004ರ ಮೇ 22ರಂದು ಪ್ರಧಾನಿಯಾಗಿ ಅಧಿಕಾರ ಸ್ವೀಕಾರ
- 2009ರ ಮೇ 22ರಂದು ಎರಡನೇ ಅವಧಿಗೆ ಪ್ರಧಾನಿಯಾಗಿ ಆಯ್ಕೆ

ಪ್ರಶಸ್ತಿಗಳು

ಪದ್ಮವಿಭೂಷಣ (1987), ವರ್ಷದ ಹಣಕಾಸು ಸಚಿವರಿಗೆ ನೀಡುವ 'ಯೂರೊ ಮನಿ ಅವಾರ್ಡ್' (1993 ಮತ್ತು 1994) ಇಂಡಿಯನ್ ಸೈನ್ಸ್ ಕಾಂಗ್ರೆಸ್ ನೀಡುವ ಜವಾಹರಲಾಲ್ ನೆಹರೂ ಜನ್ಮ ಶತಮಾನೋತ್ಸವ ಪುರಸ್ಕಾರ (1995)



ಆಪತ್ಬಾಂಧವ ಅರ್ಥಮಾಂತ್ರಿಕ

ಒಂದನೇ ಪುಟದಿಂದ...

ಆದರೆ, ತನ್ನ ಜೀವನವಿಡೀ ಅರ್ಥ ಅಧಿಕಾರಶಾಹಿಯ ಭಾಗವಾಗಿದ್ದ ಮನಮೋಹನ ಸಿಂಗ್ ಅವರೊಳಗೊಬ್ಬ ಆಳನೋಟದ ತತ್ವಶಾಸ್ತ್ರಜ್ಞನಿದ್ದ ಎಂದು ಆ ದಿನ ದೇಶಕ್ಕೆ ತಿಳಿಯಿತು. ದೇಶದ ಪಾಲಿಗೆ ಐತಿಹಾಸಿಕ ಮತ್ತು ತನ್ನ ಪಾಲಿಗೆ ಚೊಚ್ಚಲ ಎನ್ನಿಸಿದ್ದ ಆ ಬಜೆಟ್ ಭಾಷಣದ ಆರಂಭದ ಸಾಲುಗಳಲ್ಲಿ 'ಒಂದು ಅನಾಥಪ್ರಜ್ಞೆ-ಯೊಂದಿಗೆ ನಾನು ಈ ಬಜೆಟ್ ಅನ್ನು ಮಂಡಿಸುತಿದ್ದೇನೆ' ಎಂದು ಹೇಳಿದ್ದರು. ಅವರು ಹಾಗೆ ಹೇಳಿದ್ದು ದೇಶವು ಹಿಂದಿನ ತಿಂಗಳು ರಾಜೀವ್ ಗಾಂಧಿ ಅವರನ್ನು ಕಳೆದುಕೊಂಡ ಘಟನೆ ನೆನಪಿಸಿ-ಕೊಳ್ಳಲು. ಯಾರೇ ಬಜೆಟ್ ಮಂಡಿಸಿದರೂ ನಗುಮೊಗದಿಂದ ಕುಳಿತು ಕೇಳುತ್ತಿದ್ದ ರಾಜೀವ್ ಗಾಂಧಿ ಪಾರ್ಲಿಮೆಂಟ್‌ನಲ್ಲಿ ಇಲ್ಲದ ಕಾರಣ ನಾನು ಏಕಾಂಗಿಯಾಗಿದ್ದೇನೆ ಅಂತ ಹೇಳಿದ್ದರು. ಆದರೆ ಏಕಾಂಗಿತನ ಎನ್ನುವುದು ಆ ನಂತರದ ವೃತ್ತಿಬದುಕಿನುದ್ದಕ್ಕೂ ಅವರನ್ನು ಕಾಡಿತ್ತು ಎನ್ನಿಸುತ್ತದೆ. ವಿತ್ತ ಸಚಿವರಾಗಿದ್ದಷ್ಟು ಕಾಲ ನರಸಿಂಹ ರಾವ್ ಬೆನ್ನಿಗಿದ್ದರು ಎನ್ನುವುದನ್ನು ಬಿಟ್ಟರೆ, ಆ ನಂತರ ಪ್ರಧಾನಿಯಾಗಿದ್ದಷ್ಟೂ ಕಾಲ ಸೋನಿಯಾ ಗಾಂಧಿಯವರ ಶ್ರೀರಕ್ಷೆಯ ಬಲ ಇತ್ತು ಎನ್ನುವುದನ್ನು ಬಿಟ್ಟರೆ, ಮನಮೋಹನ ಸಿಂಗ್ ಭಾರತದ ಅರ್ಥವ್ಯವಸ್ಥೆಯ ದಟ್ಟಾರಣ್ಯದಲ್ಲಿ ಒಂಟಿ ಸಲಗದಂತೆ ಸಂಚರಿಸಿದರು. ಸಾಧಕ ಭಾದಕಗಳೇನೇ ಇರಲಿ, ಭಾರತದ ಅರ್ಥವ್ಯವಸ್ಥೆಯನ್ನು ನೆಹರೂ ಯುಗದಿಂದ ಬಿಡುಗಡೆಗೊಳಿಸಿದ ಯುಗಪ್ರವರ್ತಕರಾಗಿ ಮನಮೋಹನ ಸಿಂಗ್ ದೇಶದ ಇತಿಹಾಸದಲ್ಲಿ ಶಾಶ್ವತ ಸ್ಥಾನ ಪಡೆದರು.

ಮನಮೋಹನ ಸಿಂಗ್ ಅವರನ್ನು ಮಹಾ ಮೌನಿ ಎನ್ನುವ ಅರ್ಥದಲ್ಲಿ ಮೌನ ಮೋಹನ ಸಿಂಗ್ ಎಂದು ಕೆಲವರು ಹಂಗಿಸಿದರು. ಮಾತು ಮೌನ ಎಲ್ಲವೂ ಹೊಸ ಅರ್ಥ ಪಡೆದುಕೊಂಡಿರುವ ಇಂದಿನ ರಾಜಕಾರಣ ನೋಡಿದಾಗ ಮನಮೋಹನ ಸಿಂಗ್ ಖಂಡಿತಾ ಮೌನಿಯಾಗಿರಲಿಲ್ಲ. ಅವರು ಎಲ್ಲಿ ಮಾತನಾಡಬೇಕಿತ್ತೋ ಅಲ್ಲಿ ಮಾತನಾಡಿದ್ದರು. ಎಲ್ಲಿ ಮೌನವಾಗಿರ-ಬೇಕಿತ್ತೋ ಅಲ್ಲಿ ಮೌನವಾಗಿದ್ದರು. ಮನಮೋಹನ ಸಿಂಗ್ ಅವರನ್ನು ಅಚಾನಕ್ ಪ್ರಧಾನಿ ಎಂದು ಕೆಲವರು ಕರೆಯುತ್ತಾರೆ. ಹೌದು. ಅರ್ಥ-ಶಾಸ್ತ್ರಜ್ಞರಾಗಿ ಅವರ ಸಾಧನೆಯ ಹಿಂದೆ ಇದ್ದದ್ದು ಅವರ ಪ್ರತಿಭೆ ಮತ್ತು ಅವರ ಪರಿಶ್ರಮ. ಆದರೆ ಅವರ ರಾಜಕೀಯ ಬದುಕು ಆಕಸ್ಮಿಕ. ತೀರಾ ಆಕಸ್ಮಿಕ. 1991ರ ಮೇ ತಿಂಗಳಲ್ಲಿ ರಾಜೀವ್ ಗಾಂಧಿಯವರ ಹತ್ಯೆ ಆಗದೆ ಹೋಗಿದ್ದರೆ ಮನಮೋಹನ ಸಿಂಗ್ ಅರ್ಥಮಂತ್ರಿಯಾಗುವ ಪ್ರಮೇಯವೇ ಇರಲಿಲ್ಲ. ಎಲ್ಲಾ ನಿರೀಕ್ಷೆಗಳನ್ನೂ ಮೀರಿ 2004ರಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲದೇ ಹೋಗಿದ್ದರೆ ಅವರು ಪ್ರಧಾನಿಯಾಗುವ ಸಾಧ್ಯತೆಯೇ ಇರಲಿಲ್ಲ. ಮನಮೋಹನ ಸಿಂಗ್ ಅವರ ಬದುಕಿನ ಆಕಸ್ಮಿಕ ತಿರುವು ದೇಶದ ಚರಿತ್ರೆಯ ನಿರ್ಣಾಯಕ ತಿರುವುಗಳಿಗೆ ಕಾರಣವಾಗಿ ಹೋಯಿತು. ಪ್ರಧಾನ ಮಂತ್ರಿಯಾಗಿ ಕೊನೆಯ ದಿನಗಳಲ್ಲಿ ಟೀಕೆಗಳಿಂದ ಬಸವಳಿದು ಹೋಗಿದ್ದ ಸಂದರ್ಭದಲ್ಲಿ ಒಮ್ಮೆ ಅವರು ಹೇಳಿದ್ದರು: 'ಚರಿತ್ರೆ ನನಗೆ ನ್ಯಾಯ ಒದಗಿಸೀತು ಎನ್ನುವ ವಿಶ್ವಾಸ ಇದೆ' ಅಂತ. ಆ ಮಾತಿನ ಸತ್ಯ ನಮಗೀಗಾಗಲೇ ಗೋಚರಿಸಲಾರಂಭಿಸಿದೆ.

ಲೇಖಕ: ಪ್ರಾಧ್ಯಾಪಕ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ

ಮನಮೋಹನ ಸಿಂಗ್ ಅವರು ನಿರ್ಣಾಯಕ ಕಾಲಘಟ್ಟದಲ್ಲಿ ದೇಶವನ್ನು ಮುನ್ನಡೆಸಿದ್ದರು ಹಾಗೂ ಅಭಿವೃದ್ಧಿ ಮತ್ತು ಸಮೃದ್ಧಿಯ ಹೊಸ ಹಾದಿಯನ್ನು ತೋರಿದ್ದರು.

ಜಗದೀಪ್ ಧನಕರ್, ಉಪ ರಾಷ್ಟ್ರಪತಿ

ಅಪಾರ ಜ್ಞಾನ ಹೊಂದಿದ್ದ ಅವರು ಅಭಿವೃದ್ಧಿಯ ಪಥದಲ್ಲಿ ದೇಶವನ್ನು ಮುನ್ನಡೆಸಿದವರು. ನಮ್ರತೆ ಮತ್ತು ಆರ್ಥಿಕತೆ ಕುರಿತ ಅವರ ಅರಿವು ರಾಷ್ಟ್ರಕ್ಕೆ ಸ್ಫೂರ್ತಿದಾಯಕವಾಗಿತ್ತು.

ರಾಹುಲ್‌ಗಾಂಧಿ
ಲೋಕಸಭೆ ವಿರೋಧಪಕ್ಷದ ನಾಯಕ

ರಾಜಕಾರಣದಲ್ಲಿ ಕೆಲವರು ಪ್ರೇರಕಶಕ್ತಿಯಾಗಿದ್ದು, ವಿಶೇಷ ಗೌರವಕ್ಕೆ ಪಾತ್ರರಾಗುತ್ತಾರೆ. ಮನಮೋಹನ ಸಿಂಗ್ ಅಂತಹ ನಾಯಕರಲ್ಲಿ ಒಬ್ಬರು.

ಪ್ರಿಯಾಂಕಾ ಗಾಂಧಿ, ಸಂಸದೆ, ಕಾಂಗ್ರೆಸ್

ಮನಮೋಹನ ಸಿಂಗ್ ಇನ್ನಿಲ್ಲ

ಒಂದನೇ ಪುಟದಿಂದ...


'ಮನಮೋಹನ ಸಿಂಗ್ ಅವರು ತಮ್ಮ ನಿವಾಸದಲ್ಲಿದ್ದಾಗ ಡಿ.26ರಂದು ಹಠಾತ್ ಪ್ರಜ್ಞಾಹೀನರಾದರು. ಅವರನ್ನು ಬದುಕಿಸುವ ಸಂಬಂಧ ಮನೆಯಲ್ಲಿಯೇ ತಕ್ಷಣವೇ ಚಿಕಿತ್ಸೆ ಆರಂಭಿಸಲಾಗಿತ್ತು' ಎಂದು ಏಮ್ಸ್ ಪ್ರಕಟಣೆ ತಿಳಿಸಿದೆ.

'ಆರೋಗ್ಯ ಸ್ಥಿತಿ ಗಂಭೀರಗೊಂಡ ಕಾರಣ, ಅವರನ್ನು ರಾತ್ರಿ 8.06ಕ್ಕೆ ಆಸ್ಪತ್ರೆಗೆ ಕರೆತರಲಾಗಿತ್ತು. ತುರ್ತು ಚಿಕಿತ್ಸೆ ವಾರ್ಡ್‌ನಲ್ಲಿ ದಾಖಲಿಸಿ, ಅವರಿಗೆ ಚಿಕಿತ್ಸೆ ನೀಡಲಾಯಿತು. ಎಲ್ಲ ಪ್ರಯತ್ನಗಳ ಹೊರತಾಗಿಯೂ ಅವರನ್ನು ಬದುಕಿಸಲು ಆಗಲಿಲ್ಲ. ರಾತ್ರಿ 9.51ಕ್ಕೆ ಅವರು ನಿಧನರಾದ ಕುರಿತು ಘೋಷಿಸಲಾಯಿತು' ಎಂದು ಏಮ್ಸ್ ಪ್ರಕಟಣೆ ತಿಳಿಸಿದೆ.

1991–96ರವರೆಗೆ ಪ್ರಧಾನಿಯಾಗಿದ್ದ ಪಿ.ವಿ.ನರಸಿಂಹರಾವ್ ನೇತೃತ್ವದ ಸರ್ಕಾರದಲ್ಲಿ ಹಣಕಾಸು ಸಚಿವರಾಗಿದ್ದ ಮನಮೋಹನ ಸಿಂಗ್ ಅವರು ಜಾರಿಗೆ ತಂದ ಆರ್ಥಿಕ ಸುಧಾರಣೆಗಳು ದೇಶದ ಆರ್ಥಿಕತೆಗೆ ಹೊಸ ದಿಕ್ಕನ್ನೇ ನೀಡಿದವು. ಈ ಸುಧಾರಣೆಗಳು ಮನಮೋಹನ ಸಿಂಗ್ ಅವರಿಗೆ ಭಾರಿ ಮನ್ನಣೆಯನ್ನೂ ತಂದು ಕೊಟ್ಟಿದ್ದವು. 2004ರಿಂದ 2014ರವರೆಗೆ ಯುಪಿಎ ನೇತೃತ್ವದ ಸರ್ಕಾರವಿದ್ದಾಗ, ಎರಡು ಅವಧಿಗೆ ಪ್ರಧಾನಿಯಾಗಿದ್ದರು. ರಾಜ್ಯಸಭೆ ಸದಸ್ಯರೂ ಆಗಿದ್ದ ಸಿಂಗ್ ಅವರ ಅಧಿಕಾರ ಅವಧಿ ಏಪ್ರಿಲ್‌ನಲ್ಲಿ ಕೊನೆಗೊಂಡಿತ್ತು.

ಆಸ್ಪತ್ರೆಗೆ ಭೇಟಿ: ಕಾಂಗ್ರೆಸ್ ನಾಯಕಿಯರಾದ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಆಸ್ಪತ್ರೆಗೆ ಭೇಟಿ ನೀಡಿದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,727
ಇಂದಿನ ಅಂತ್ಯ	23,750
▲	23
ದಿನದ ಗರಿಷ್ಠ	23,854

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹600
12 ಕ್ಕೆ	₹80
ಮೈಸೂರು	
100ಕ್ಕೆ	₹600

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹165-595
ದ್ವಿತಳಿ (ಬಿ.ವಿ)	₹288-732

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹14400-14400
ಬೆಂಗಳೂರು	₹20000-25000
ತುರುವೇಕೆರೆ	₹13900-14500

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹184
ಆರ್‌ಎಸ್‌ಎಸ್-5	₹179
ಗುಡ್ ಲಾಟ್	₹173

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1480 (1465)
ಸೋಯಾ (ರಿಫೈನ್ಡ್)	₹1270 (1245)
ಸೂರ್ಯಕಾಂತಿ (ರಿಫೈನ್ಡ್)	₹1350 (1340)
ಪಾಮೋಲಿನ್	₹1350 (1345)

ಬ್ಯಾಂಕಿಂಗ್ ವಲಯದಲ್ಲಿ ವಂಚನೆ ಮೊತ್ತ 8 ಪಟ್ಟು ಏರಿಕೆ: ಆರ್‌ಬಿಐ ವರದಿ

18,461 ವಂಚನೆ ಪ್ರಕರಣ ದಾಖಲು

ಮುಂಬೈ (ಪಿಟಿಐ): ದೇಶದ ಬ್ಯಾಂಕಿಂಗ್ ವಲಯದಲ್ಲಿ ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಒಟ್ಟು 18,461 ವಂಚನೆ ಪ್ರಕರಣಗಳು ದಾಖಲಾಗಿವೆ ಎಂದು ಆರ್‌ಬಿಐ ವರದಿ ಗುರುವಾರ ಹೇಳಿದೆ.

ಈ ವಂಚನೆಯ ಪ್ರಕರಣಗಳಿಗೆ ಸಂಬಂಧಿಸಿದ ಮೊತ್ತವು 8 ಪಟ್ಟು ಹೆಚ್ಚಾಗಿದ್ದು, ₹21,367 ಕೋಟಿ ಆಗಿದೆ ಎಂದು ತಿಳಿಸಿದೆ.

2023-24 ಮತ್ತು 2024–25ರ ಹಣಕಾಸು ವರ್ಷದ ಇದುವರೆಗಿನ ಬ್ಯಾಂಕಿಂಗ್ ವಲಯದ ಪ್ರಗತಿಯ ವರದಿಯನ್ನು ಆರ್‌ಬಿಐ ಬಿಡುಗಡೆ ಮಾಡಿದೆ. ಈ ಅವಧಿಯಲ್ಲಿ ವಾಣಿಜ್ಯ ಬ್ಯಾಂಕ್‌ಗಳು, ಸಹಕಾರ ಬ್ಯಾಂಕುಗಳು ಮತ್ತು ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಸೇರಿದಂತೆ ಬ್ಯಾಂಕಿಂಗ್ ಕ್ಷೇತ್ರದ ಕಾರ್ಯಕ್ಷಮತೆಯನ್ನು ವರದಿಯಲ್ಲಿ ತಿಳಿಸಿದೆ.

2023–24ರ ಹಣಕಾಸು ವರ್ಷದ ಮೊದಲ ಆರು ತಿಂಗಳಲ್ಲಿ 14,480 ವಂಚನೆ ಪ್ರಕರಣಗಳು ದಾಖಲಾಗಿದ್ದವು. ಇದರ ಮೊತ್ತ ₹2,623 ಕೋಟಿಯಷ್ಟಾಗಿತ್ತು. ಆದರೆ, ಪ್ರಸಕ್ತ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಪ್ರಕರಣಗಳ ಸಂಖ್ಯೆ 18,461ಕ್ಕೆ ಏರಿಕೆಯಾಗಿದೆ. ಮೊತ್ತವು ₹21,367 ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ವಂಚನೆಗಳಿಂದಾಗಿ ಬ್ಯಾಂಕಿಂಗ್ ವಲಯವು ಹಲವು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಬ್ಯಾಂಕ್‌ಗಳ ಹೆಸರು ಕೆಡುತ್ತದೆ, ಕಾರ್ಯಾಚರಣೆಗೆ ತೊಡಕಾಗುತ್ತದೆ, ವಹಿವಾಟು ಕುಂಠಿತಗೊಳ್ಳುತ್ತದೆ ಮತ್ತು ಗ್ರಾಹಕರು ವಿಶ್ವಾಸ ಕಳೆದುಕೊಳ್ಳುತ್ತಾರೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

2023–24ರ ಹಣಕಾಸು ವರ್ಷದಲ್ಲಿ ಶೇ 44ರಷ್ಟು ಪ್ರಕರಣಗಳು ವರದಿಯಾಗಿರುವುದು ಕಾರ್ಡ್ ಮತ್ತು ಇಂಟರ್‌ನೆಟ್ ಬ್ಯಾಂಕಿಂಗ್ ಪಾವತಿಯಿಂದ ಎಂದು ಹೇಳಿದೆ. ವಂಚನೆಯ ಒಟ್ಟು ಮೊತ್ತದಲ್ಲಿ ಇದರ ಪಾಲು ಶೇ 85ರಷ್ಟು ಆಗಿದೆ.

ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ವಂಚನೆ ಪ್ರಕರಣಗಳು ವರದಿಯಾಗಿದ್ದು, ಶೇ 67ರಷ್ಟಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ಕಾರ್ಡ್ ಮತ್ತು ಇಂಟರ್‌ನೆಟ್ ಬ್ಯಾಂಕಿಂಗ್ ವಂಚನೆ ಪ್ರಕರಣ ನಡೆದಿವೆ. ಇದು ಬ್ಯಾಂಕ್‌ಗಳನ್ನು ಗಂಭೀರ ಆರ್ಥಿಕ ಅಪಾಯಗಳಿಗೆ ಒಡ್ಡುತ್ತದೆ. ಆದ್ದರಿಂದ, ಈ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ಬ್ಯಾಂಕ್‌ಗಳು ಅಗತ್ಯ ಕ್ರಮ ಕೈಗೊಳ್ಳಬೇಕಿದೆ ಎಂದು ಆರ್‌ಬಿಐ ವರದಿಯಲ್ಲಿ ಹೇಳಿದೆ.

ಎ.ಐ ಬಳಕೆಗೆ ಚೌಕಟ್ಟು ರೂಪಿಸಲು ಸಮಿತಿ ರಚನೆ

ಮುಂಬೈ (ಪಿಟಿಐ): ಹಣಕಾಸು ವಲಯದಲ್ಲಿ ಕೃತಕ ಬುದ್ಧಿಮತ್ತೆಯ (ಎ.ಐ) ಜವಾಬ್ದಾರಿಯುತ ಬಳಕೆಗೆ ಚೌಕಟ್ಟು ರೂಪಿಸಲು ಸಮಿತಿ ರಚಿಸಲಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗುರುವಾರ ತಿಳಿಸಿದೆ.

ಈ ಸಮಿತಿಯಲ್ಲಿ ಎಂಟು ಜನ ಸದಸ್ಯರು ಇರಲಿದ್ದಾರೆ. ಐಐಟಿ ಬಾಂಬೆಯ ಪ್ರೊ. ಪುಷ್ಪಕ್ ಭಟ್ಟಾಚಾರ್ಯ ಅವರು ಈ ಸಮಿತಿಯ ಮುಖ್ಯಸ್ಥರಾಗಿರುತ್ತಾರೆ.

ಸಮಿತಿಯು ಜಾಗತಿಕ ಮತ್ತು ಭಾರತದಲ್ಲಿ ಹಣಕಾಸು ಸೇವೆಗಳಲ್ಲಿ ಕೃತಕ ಬುದ್ಧಿಮತ್ತೆ ಅಳವಡಿಕೆ ಬಗ್ಗೆ ಪ್ರಸ್ತುತ ಮಟ್ಟವನ್ನು ಮೌಲ್ಯಮಾಪನ ಮಾಡಲಿದೆ. ಜೊತೆಗೆ ಎ.ಐ ಗೆ ಸಂಬಂಧಿಸಿದ ಸಂಭಾವ್ಯ ಅಪಾಯಗಳನ್ನು ಗುರುತಿಸಲಿದೆ.

ದೇಶದ ಹಣಕಾಸು ವಲಯದಲ್ಲಿ ಕೃತಕ ಬುದ್ಧಿಮತ್ತೆ ಮಾದರಿಗಳು, ಅಪ್ಲಿಕೇಶನ್‌ಗಳ ಜವಾಬ್ದಾರಿಯುತ, ನೈತಿಕ ಅಳವಡಿಕೆಗಾಗಿ ಆಡಳಿತದ ಅಂಶಗಳನ್ನು ಒಳಗೊಂಡ ಚೌಕಟ್ಟನ್ನು ಸಮಿತಿಯು ಶಿಫಾರಸು ಮಾಡುತ್ತದೆ ಎಂದು ಆರ್‌ಬಿಐ ಹೇಳಿದೆ. ಸಮಿತಿಯು ತನ್ನ ಮೊದಲ ಸಭೆ ಸೇರಿದ ದಿನದಿಂದ ಆರು ತಿಂಗಳೊಳಗೆ ವರದಿ ನೀಡಲಿದೆ ಎಂದು ತಿಳಿಸಿದೆ.

ಡಿಸೆಂಬರ್‌ನಲ್ಲಿ ನಡೆದ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ರಿಸರ್ವ್ ಬ್ಯಾಂಕ್ ಸಮಿತಿಯನ್ನು ರಚಿಸುವುದಾಗಿ ತಿಳಿಸಿತ್ತು.

ಎನ್‌ಪಿಎ: 13 ವರ್ಷದ ಕನಿಷ್ಠ ಮಟ್ಟಕ್ಕೆ ಇಳಿಕೆ

2023–24ರ ಹಣಕಾಸು ವರ್ಷದಲ್ಲಿ ವಸೂಲಾಗದ ಸಾಲದ ಸರಾಸರಿ ಪ್ರಮಾಣ (ಎನ್‌ಪಿಎ) 13 ವರ್ಷದ ಕನಿಷ್ಠ ಮಟ್ಟಕ್ಕೆ ಇಳಿದು, ಶೇ 2.7ರಷ್ಟಾಗಿದೆ ಎಂದು ಆರ್‌ಬಿಐ ತಿಳಿಸಿದೆ. ಸೆಪ್ಟೆಂಬರ್ ಅಂತ್ಯದ ವೇಳೆಗೆ ಶೇ 2.5ರಷ್ಟಾಗಿದೆ.

ದೇಶದ ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ), ಹಣದುಬ್ಬರ, ನಿರುದ್ಯೋಗ ದರವು ಸೇರಿ ವಿವಿಧ ಅಂಶಗಳು ದೇಶದ ಬ್ಯಾಂಕ್‌ಗಳು ಮತ್ತು ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ ಕಾರ್ಯಕ್ಷಮತೆ ಮತ್ತು ಸದೃಢತೆಯನ್ನು ಹೆಚ್ಚಿಸಿವೆ. ಬ್ಯಾಂಕ್‌ಗಳ ಬಂಡವಾಳ ಸ್ಥಿತಿ ತೃಪ್ತಿಕರವಾಗಿದೆ ಎಂದು ಹೇಳಿದೆ.

ಕಳೆದ ಹಣಕಾಸು ವರ್ಷದಲ್ಲಿ ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್‌ಗಳ ನಿವ್ವಳ ಲಾಭವು ಶೇ 32ರಷ್ಟು ಏರಿಕೆಯಾಗಿದ್ದು, ₹3.49 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ತಿಳಿಸಿದೆ.

ಇಪಿಎಫ್‌ಒ: 13 ಲಕ್ಷ ಸದಸ್ಯರು ಸೇರ್ಪಡೆ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಅಕ್ಟೋಬರ್ ತಿಂಗಳಿನಲ್ಲಿ ನೌಕರರ ಭವಿಷ್ಯ ನಿಧಿ ಸಂಘಟನೆಗೆ (ಇಪಿಎಫ್‌ಒ) ಹೊಸದಾಗಿ 13.41 ಲಕ್ಷ ಸದಸ್ಯರು ಸೇರ್ಪಡೆಯಾಗಿದ್ದಾರೆ.

ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಸೇರ್ಪಡೆಯಾದವರ ಪ್ರಮಾಣದಲ್ಲಿ ಶೇ 16ರಷ್ಟು ಏರಿಕೆಯಾಗಿದೆ ಎಂದು ಇಪಿಎಫ್‌ಒ ತಿಳಿಸಿದೆ.

ರಾಜ್ಯವಾರು ಪೈಕಿ ಸದಸ್ಯರ ಸೇರ್ಪಡೆಯಲ್ಲಿ ಮಹಾರಾಷ್ಟ್ರ ಮುಂಚೂಣಿಯಲ್ಲಿದ್ದು, ಶೇ 22ರಷ್ಟು ಪಾಲನ್ನು ಹೊಂದಿದೆ. ಕರ್ನಾಟಕ, ತಮಿಳುನಾಡು, ದೆಹಲಿ, ಹರಿಯಾಣ, ತೆಲಂಗಾಣ ಮತ್ತು ಗುಜರಾತ್‌ನಲ್ಲಿ ಹೆಚ್ಚು ಸದಸ್ಯರು ಸೇರ್ಪಡೆಯಾಗಿದ್ದಾರೆ.

ಉದ್ಯೋಗಾವಕಾಶ ಹೆಚ್ಚಳ, ಅನುಕೂಲಗಳ ಕುರಿತು ಉದ್ಯೋಗಿಗಳಲ್ಲಿ ಹೆಚ್ಚಿದ ಜಾಗೃತಿ ಮತ್ತು ಇಪಿಎಫ್‌ಒ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನದಿಂದ ಸದಸ್ಯರ ಸಂಖ್ಯೆ ಏರಿಕೆಯಾಗಿದೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

ಮುಂಬರುವ ಬಜೆಟ್‌ನಲ್ಲಿ ತೆರಿಗೆ ಕಡಿತ ಘೋಷಣೆ ನಿರೀಕ್ಷೆ

‘ಆದಾಯ ತೆರಿಗೆ ಕಡಿತಕ್ಕೆ ಕೇಂದ್ರ ಚಿಂತನೆ’



ನವದೆಹಲಿ (ರಾಯಿಟರ್ಸ್): ಮಧ್ಯಮ ವರ್ಗದವರಿಗೆ ನೆಮ್ಮದಿ ತರುವ ಮತ್ತು ಅವರ ಖರೀದಿ ಸಾಮರ್ಥ್ಯ ಹೆಚ್ಚಿಸಲು ವಾರ್ಷಿಕ ₹15 ಲಕ್ಷದವರೆಗೆ ಆದಾಯವಿರುವ ವ್ಯಕ್ತಿಗಳಿಗೆ ಆದಾಯ ತೆರಿಗೆ ಕಡಿತಗೊಳಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ.

ಆರ್ಥಿಕತೆಗೆ ಮತ್ತಷ್ಟು ಚೇತರಿಕೆ ನೀಡುವ ಉದ್ದೇಶದಿಂದ ಈ ಕ್ರಮಕ್ಕೆ ಮುಂದಾಗಿರುವ ಸರ್ಕಾರವು ಈ ನಿರ್ಧಾರವನ್ನು ಫೆಬ್ರುವರಿಯಲ್ಲಿ ಮಂಡಿಸಲಿರುವ ಬಜೆಟ್‌ನಲ್ಲಿ ಘೋಷಿಸುವ ನಿರೀಕ್ಷೆ ಇದೆ ಎಂದು ಸರ್ಕಾರದ ಎರಡು ಮೂಲಗಳು ಸುದ್ದಿಸಂಸ್ಥೆಗೆ ತಿಳಿಸಿವೆ.

ಈ ಕ್ರಮದಿಂದ ಲಕ್ಷಾಂತರ ಮಂದಿ ತೆರಿಗೆ ಪಾವತಿದಾರರಿಗೆ ಅನುಕೂಲವಾಗಲಿದೆ. ಅದರಲ್ಲೂ ವಿಶೇಷವಾಗಿ, ದುಬಾರಿ ಜೀವನ ವೆಚ್ಚದಿಂದ ನಲುಗುತ್ತಿರುವ ನಗರ ನಿವಾಸಿಗಳಿಗೆ ತುಸು ನೆಮ್ಮದಿ ನೀಡುವ ನಿರೀಕ್ಷೆ ಇದೆ. 2020ರ ತೆರಿಗೆ ವ್ಯವಸ್ಥೆಯನ್ನು ಆರಿಸಿಕೊಂಡರೆ ಅದರಲ್ಲಿ ವಸತಿ ಬಾಡಿಗೆಗಳಂತಹ ವಿನಾಯಿತಿಗಳು ಇರಲಿಲ್ಲ. ಈ ವ್ಯವಸ್ಥೆಯಲ್ಲಿ ವಾರ್ಷಿಕ ಆದಾಯ ₹3 ಲಕ್ಷದಿಂದ ₹15 ಲಕ್ಷದವರೆಗಿನ ಆದಾಯದವರಿಗೆ ಶೇ 5ರಿಂದ ಶೇ 20ರಷ್ಟು ತೆರಿಗೆ ವಿಧಿಸಲಾಗುತ್ತದೆ. ಇದಕ್ಕಿಂತ ಹೆಚ್ಚಿನ ಆದಾಯದವರಿಗೆ ಶೇ 30ರಷ್ಟು ತೆರಿಗೆ ವಿಧಿಸಲಾಗುತ್ತಿದೆ.

‘ತೆರಿಗೆ ಕಡಿತದ ಗಾತ್ರವನ್ನು ಇನ್ನೂ ನಿರ್ಧರಿಸಿಲ್ಲ. ಬಜೆಟ್‌ಗೆ ಮುಂಚಿತವಾಗಿ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಯಾವುದೇ ತೆರಿಗೆ ಕಡಿತದ ಆದಾಯ ನಷ್ಟವನ್ನು ಹಂಚಿಕೊಳ್ಳಲು ಮೂಲಗಳು ನಿರಾಕರಿಸಿದವು. ಆದರೆ ತೆರಿಗೆ ದರಗಳನ್ನು ಕಡಿಮೆ ಮಾಡುವುದರಿಂದ ಹೆಚ್ಚು ಜನರು ಹೊಸ ತೆರಿಗೆ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಎಂದು ಅಧಿಕಾರಿಯೊಬ್ಬರು ಹೇಳಿದರು.

ಈ ಸಂಬಂಧ ಪ್ರತಿಕ್ರಿಯೆ ಕೋರಿದ್ದ ಇ-ಮೇಲ್‌ಗೆ ಹಣಕಾಸು ಸಚಿವಾಲಯ ತಕ್ಷಣಕ್ಕೆ ಪ್ರತಿಕ್ರಿಯಿಸಿಲ್ಲ.

ಮಧ್ಯಮ ವರ್ಗದವರ ಕೈಯಲ್ಲಿ ಹೆಚ್ಚು ಹಣ ಹರಿದಾಡುವುದು ಆರ್ಥಿಕತೆಯನ್ನು ಪುನಶ್ಚೇತನಗೊಳಿಸಲು ನೆರವಾಗುತ್ತದೆ. ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆ ಎನಿಸಿಕೊಂಡ ಭಾರತವು ಕಳೆದ ಏಳು ತ್ರೈಮಾಸಿಕಗಳ ಪೈಕಿ ಜುಲೈ ಮತ್ತು ಸೆಪ್ಟೆಂಬರ್ ನಡುವಿನ ಅವಧಿಯಲ್ಲಿ ಅತ್ಯಂತ ನಿಧಾನಗತಿಯ ಪ್ರಗತಿ ದಾಖಲಿಸಿದೆ.

ಹೆಚ್ಚಿನ ಹಣದುಬ್ಬರವು ಸಾಬೂನು–ಶಾಂಪೂಗಳಿಂದ ಹಿಡಿದು ಕಾರು–ದ್ವಿಚಕ್ರ ವಾಹನಗಳವರೆಗಿನ ಬೇಡಿಕೆಯನ್ನು ನಗರ ಪ್ರದೇಶಗಳಲ್ಲಿ ಕುಗ್ಗಿಸಿದೆ.

‘ಏರ್‌ಟೆಲ್ ಸೇವೆಯಲ್ಲಿ ವ್ಯತ್ಯಯ’

ನವದೆಹಲಿ (ಪಿಟಿಐ): ದೇಶದ ಹಲವು ನಗರಗಳಲ್ಲಿ ಏರ್‌ಟೆಲ್ ಬಳಕೆದಾರರು ಗುರುವಾರ ನೆಟ್‌ವರ್ಕ್ ಸಮಸ್ಯೆ ಎದುರಿಸಿದರು ಎಂದು ಡೌನ್‌ಡಿಟೆಕ್ಟರ್ ಡಾಟ್ ಕಾಂ ತಿಳಿಸಿದೆ.

ದೆಹಲಿ, ಅಹಮದಾಬಾದ್, ಜೈಪುರ, ಸೂರತ್, ಹೈದರಾಬಾದ್, ಮುಂಬೈನಲ್ಲಿ ಬೆಳಿಗ್ಗೆ 11 ಗಂಟೆ ಸುಮಾರಿಗೆ ನೆಟ್‌ವರ್ಕ್ ದೋಷದ ದೂರುಗಳು ಕೇಳಿಬಂದಿದ್ದವು ಎಂದು ಡೌನ್‌ಡಿಟೆಕ್ಟರ್ ಹೇಳಿದೆ.

ಏರ್‌ಟೆಲ್ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಅಹಮದಾಬಾದ್‌ನಲ್ಲಿ ಮಾತ್ರ ನೆಟ್‌ವರ್ಕ್ ಸಮಸ್ಯೆ ಕಾಣಿಸಿಕೊಂಡಿದ್ದು, ಬೆಳಿಗ್ಗೆ 30 ನಿಮಿಷ ಸೇವೆಯಲ್ಲಿ ವ್ಯತ್ಯಯವಾಗಿತ್ತು ಎಂದು ಕಂಪನಿ ಮೂಲಗಳು ತಿಳಿಸಿವೆ.

ಮುಂಬೈ ಧಾರಣೆ (ಶೇಂಗಾ)

26-12-2024

ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ(ಹೊಸ)	8900-9000
ದಪ್ಪ ಗುಜರಾತ್(ಹೊಸ)	9700-9800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1475)
ಒಂದು ವಾರದ ಡೆಲಿವರಿ	1485 (1470)
ಪಾಮ್ ವಾರದ ಡೆಲಿವರಿ	1350 (1343)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1250)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹76,100 (75,700)
ಬೆಳ್ಳಿ ಕೆ.ಜಿ ₹88,100 (87,650)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸಂಕ್ಷಿಪ್ತ ಸುದ್ದಿ

ಲೇಖಕಿ ಬಾಪ್ಸಿ ಸಿಧ್ವಾ ನಿಧನ

ಹೂಸ್ಟನ್ (ಅಮೆರಿಕ)(ಪಿಟಿಐ): ಪಾಕಿಸ್ತಾನ ಮೂಲದ ಪ್ರಸಿದ್ಧ ಕಾದಂಬರಿಗಾರ್ತಿ ಮತ್ತು ಲೇಖಕಿ ಬಾಪ್ಸಿ ಸಿಧ್ವಾ(86) ಅವರು ಅಮೆರಿಕದ ಹ್ಯೂಸ್ಟನ್‌ನಲ್ಲಿ ಬುಧವಾರ ಮೃತಪಟ್ಟಿದ್ದಾರೆ ಎಂದು ಕುಟುಂಬಸ್ಥರು ದೃಢಪಡಿಸಿದ್ದಾರೆ.

‘ಮೃತರ ಸ್ಮರಣಾರ್ಥ ಮೂರು ದಿನ ಕಾರ್ಯಕ್ರಮಗಳನ್ನು ನಡೆಸಿ ನಂತರ ಹ್ಯೂಸ್ಟನ್‌ನಲ್ಲಿ ಅಂತ್ಯಸಂಸ್ಕಾರ ನಡೆಸಲಾಗುವುದು’ ಎಂದು ಸಿಧ್ವಾ ಸಹೋದರ ಫಿರೋಜ್ ಭಂಡಾರ ತಿಳಿಸಿದ್ದಾರೆ.

ಸಿಧ್ವಾ ಅವರು ‘ಐಸ್ ಕ್ಯಾಂಡಿ ಮ್ಯಾನ್’ ಕಾದಂಬರಿಯ ಮೂಲಕ ಮನ್ನಣೆ ಗಳಿಸಿದ್ದರು. ಇದೇ ಕಾದಂಬರಿಯನ್ನು ಆಧರಿಸಿ ಭಾರತ ಮೂಲದ, ಕೆನಡಾ ನಿರ್ದೇಶಕಿ ದೀಪಾ ಮೆಹ್ತಾ ಅವರು ‘ಅರ್ಥ್’ ಸಿನಿಮಾ ನಿರ್ದೇಶಿಸಿದ್ದರು. ‘ವಾಟರ್’ ಹೆಸರಿನ ಕಾದಂಬರಿ ಆಧರಿಸಿದ ಚಿತ್ರವನ್ನು ಕೂಡ ಅದೇ ಹೆಸರಿನಲ್ಲಿ ನಿರ್ದೇಶಿಸಿದ್ದರು. ‘ದಿ ಕ್ರೌ ಈಟರ್ಸ್’, ‘ಕ್ರ್ಯಾಕಿಂಗ್ ಇಂಡಿಯಾ’, ‘ಆ್ಯನ್ ಅಮೆರಿಕನ್ ಬ್ರಾಟ್’, ‘ದಿ ಪಾಕಿಸ್ತಾನಿ ಬ್ರೈಡ್’ ಸೇರಿದಂತೆ ಹಲವಾರು ಕಾದಂಬರಿಗಳನ್ನು ಬಾಪ್ಸಿ ಬರೆದಿದ್ದಾರೆ.

‘ವಿಮಾನ ಪತನಕ್ಕೆ ರಷ್ಯಾ ಕ್ಷಿಪಣಿ ಡಿಕ್ಕಿ ಕಾರಣ’

ಬಾಕು (ಎಪಿ/ರಾಯಿಟರ್ಸ್): ‘ಅಜರ್‌ಬೈಜಾನ್‌ನಲ್ಲಿ ವಿಮಾನ ಪತನಗೊಳ್ಳಲು ರಷ್ಯಾದ ಕ್ಷಿಪಣಿಯೊಂದು ಅಕಸ್ಮಾತ್ತಾಗಿ ಹೊಡೆದದ್ದೇ ಕಾರಣ’ ಎಂದು ಕೆಲವು ಮಾಧ್ಯಮಗಳು ಸೇನಾ ಮೂಲಗಳನ್ನು ಉಲ್ಲೇಖಿಸಿ ವರದಿ ಮಾಡಿವೆ.

ಪ್ರಕರಣದ ತನಿಖೆ ನಡೆಯುತ್ತಿರುವುದರಿಂದ, ಈಗಲೇ ಅಪಘಾತಕ್ಕೆ ಕಾರಣವೇನು ಎಂದು ಹೇಳಲು ಸಾಧ್ಯವಿಲ್ಲ ಎಂದು ಅಜರ್‌ಬೈಜಾನ್ ಅಧ್ಯಕ್ಷ ಇಲ್ಹಮ್ ಅಲಿಯೇವ್ ತಿಳಿಸಿದ್ದಾರೆ.

ವಿಮಾನ ಪತನಗೊಂಡು 38 ಜನರು ಮೃತಪಟ್ಟಿರುವ ಕಾರಣ ಅಜರ್‌ಬೈಜಾನ್‌ನಲ್ಲಿ ಗುರುವಾರ ದೇಶದಾದ್ಯಂತ ಶೋಕಾಚರಣೆ ಮಾಡಲಾಯಿತು.

ಬಾಂಗ್ಲಾ ಸಚಿವಾಲಯದ ಕಟ್ಟಡದಲ್ಲಿ ಬೆಂಕಿ: ದಾಖಲೆಗಳು ಭಸ್ಮ

ಢಾಕಾ (ಪಿಟಿಐ): ಬಾಂಗ್ಲಾದೇಶದ ಸಚಿವಾಲಯದ ಪ್ರಮುಖ ಕಟ್ಟಡದಲ್ಲಿ ಗುರುವಾರ ಬೆಂಕಿ ಅವಘಡ ಸಂಭವಿಸಿದ್ದು, ಸರ್ಕಾರದ ಕೆಲವು ದಾಖಲೆಗಳು ಸುಟ್ಟುಹೋಗಿವೆ. ದುಷ್ಕರ್ಮಿಗಳ ವಿಧ್ವಂಸಕ ಕೃತ್ಯ ಇದಾಗಿರಬಹುದೇ ಎಂಬ ಶಂಕೆ ಇದ್ದು, ಅದರ ಕುರಿತು ತನಿಖೆ ನಡೆಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

ಬಾಂಗ್ಲಾ ಸಚಿವಾಲಯದ ‘ಬಿಲ್ಡಿಂಗ್ 7’ರಲ್ಲಿ ಬೆಂಕಿ ವ್ಯಾಪಿಸಿತು. ಅದನ್ನು ನಂದಿಸಲು ಅಗ್ನಿಶಾಮಕ ದಳದವರಿಗೆ ಆರು ತಾಸು ಬೇಕಾಯಿತು. ಗುರುವಾರ ನಸುಕಿನಲ್ಲಿ ಅವಘಡ ಆಗಿದ್ದು, ಯಾರಿಗೂ ಹಾನಿಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2026ಕ್ಕೆ ಆಳಸಮುದ್ರ, ಬಾಹ್ಯಾಕಾಶಕ್ಕೆ ಮಾನವಸಹಿತ ಯಾನ

ಹೈದರಾಬಾದ್: ಮಾನವ ಸಹಿತ ಗಗನಯಾನದ ಜೊತೆಗೆ, ಸಂಶೋಧನೆ ಉದ್ದೇಶದಿಂದ 2026ರ ಆರಂಭಕ್ಕೆ ಆಳ ಸಮುದ್ರಕ್ಕೆ ಮಾನವನನ್ನು ಕಳುಹಿಸಲು ಭಾರತ ಯೋಜಿಸಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ, ಭೂವಿಜ್ಞಾನ ಖಾತೆ ರಾಜ್ಯ ಸಚಿವ (ಸ್ವತಂತ್ರ) ಡಾ.ಜಿತೇಂದ್ರ ಸಿಂಗ್ ಗುರುವಾರ ಹೇಳಿದ್ದಾರೆ.

2004ರಲ್ಲಿ ಕಾಣಿಸಿಕೊಂಡಿದ್ದ ‘ಹಿಂದೂ ಮಹಾಸಾಗರ ಸುನಾಮಿ’ಯ 20ನೇ ಸ್ಮರಣಾರ್ಥ ಇಂಡಿಯನ್ ನ್ಯಾಷನಲ್ ಸೆಂಟರ್ ಫಾರ್ ಓಷನ್ ಇನ್‌ಫಾರ್ಮೇಷನ್ ಸರ್ವಿಸಸ್‌ನಲ್ಲಿ (ಐಎನ್‌ಸಿಒ ಐಎಸ್) ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಪೂರ್ವ ಲಡಾಖ್: ಒಪ್ಪಂದದ ಸಮಗ್ರ ಜಾರಿಗೆ ಕ್ರಮ’

ಬೀಜಿಂಗ್ (ಪಿಟಿಐ): ಪೂರ್ವ ಲಡಾಖ್‌ನಲ್ಲಿ ಮೂಡಿರುವ ಅನಿಶ್ಚಿತತೆಗೆ ತೆರೆ ಎಳೆಯಲು ಭಾರತ–ಚೀನಾ ನಡುವಿನ ಒಪ್ಪಂದವನ್ನು ಉಭಯ ಸೇನೆಗಳು ‘ಪರಿಣಾಮಕಾರಿ ಮತ್ತು ಸಮಗ್ರ’ವಾಗಿ ಜಾರಿಗೊಳಿಸುತ್ತಿವೆ ಎಂದು ಚೀನಾ ರಕ್ಷಣಾ ಸಚಿವಾಲಯ ಗುರುವಾರ ತಿಳಿಸಿದೆ.

ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಸಚಿವಾಲಯದ ವಕ್ತಾರ ಕರ್ನಲ್ ಝೂಂಗ್ ಕ್ಸಿಯಾಗಾಂಗ್ ಅವರು, ‘ಒಪ್ಪಂದದ ಜಾರಿ ಪ್ರಕ್ರಿಯೆ ತ್ವರಿತಗತಿಯಲ್ಲಿ ನಡೆದಿದೆ’ ಎಂದರು.

‘ಉಭಯ ದೇಶಗಳ ನಾಯಕರ ನಡುವಿನ ಒಪ್ಪಂದದಂತೆ, ರಾಜತಾಂತ್ರಿಕ ಮತ್ತು ಸೇನಾ ಮಾರ್ಗಗಳಲ್ಲಿ ಗಡಿ ಕುರಿತು ನಿರಂತರ ಸಂಪರ್ಕ ಹೊಂದಲಾಗಿದೆ’ ಎಂದು ತಿಳಿಸಿದರು. ಚೀನಾ ಮತ್ತು ಭಾರತ ನಡುವಣ ಬಾಂಧವ್ಯವನ್ನು ಸರಿದಾರಿಗೆ ತರುವುದು ಉಭಯ ದೇಶಗಳ ಸಮಾನ ಆಸಕ್ತಿಯಾಗಿದೆ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಮನೆಗಳ ಬೆಲೆ ಶೇ 21ರಷ್ಟು ಏರಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದಲ್ಲಿ ಬೆಂಗಳೂರು ಸೇರಿದಂತೆ ದೇಶದ 7 ಪ್ರಮುಖ ನಗರಗಳಲ್ಲಿ ಮನೆಗಳ ಸರಾಸರಿ ಬೆಲೆ ವಾರ್ಷಿಕ ಶೇ 21ರಷ್ಟು ಏರಿಕೆಯಾಗಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ಗುರುವಾರ ತಿಳಿಸಿದೆ.

ಜಾಗದ ಬೆಲೆ ಹೆಚ್ಚಳ, ಕಾರ್ಮಿಕರು ಮತ್ತು ಕಟ್ಟಡ ನಿರ್ಮಾಣದ ಕೆಲವು ಕಚ್ಚಾ ವಸ್ತುಗಳ ಬೆಲೆಯಲ್ಲಿನ ಏರಿಕೆಯಿಂದ ಮನೆಗಳ ಬೆಲೆಯಲ್ಲಿ ಏರಿಕೆಯಾಗಿದೆ ಎಂದು ತಿಳಿಸಿದೆ.

ದೇಶದಲ್ಲಿ ನಡೆದ ಸಾರ್ವತ್ರಿಕ ಮತ್ತು ವಿಧಾನಸಭೆ ಚುನಾವಣೆಯಿಂದ ಹೊಸ ವಸತಿ ಯೋಜನೆಗಳ ಉದ್ಘಾಟನೆಗೆ ಅನುಮತಿ ನೀಡುವಲ್ಲಿ ವಿಳಂಬವಾಗಿದೆ. ಇದರಿಂದ ಈ ನಗರಗಳಲ್ಲಿ ಮನೆಗಳ ಮಾರಾಟದಲ್ಲಿ ಶೇ 4ರಷ್ಟು ಇಳಿಕೆಯಾಗುವ ಅಂದಾಜಿದೆ. ಇಲ್ಲಿಯವರೆಗೆ 4.59 ಲಕ್ಷ ಮನೆ ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 4.76 ಲಕ್ಷ ಮನೆಗಳು ಮಾರಾಟ ಆಗಿದ್ದವು.

ಆದರೂ ಒಟ್ಟಾರೆ ಮನೆಗಳ ಮಾರಾಟದ ಮೌಲ್ಯವು ಶೇ 16ರಷ್ಟು ಏರಿಕೆಯಾಗಿದ್ದು, ₹5.68 ಲಕ್ಷ ಕೋಟಿಯಾಗಿದೆ. 2023ರಲ್ಲಿ ₹4.88 ಲಕ್ಷ ಕೋಟಿ-ಯಷ್ಟಾಗಿತ್ತು ಎಂದು ತಿಳಿಸಿದೆ.

ದೆಹಲಿಯಲ್ಲಿ ಮನೆಗಳ ಮಾರಾಟ ಶೇ 6ರಷ್ಟು ಕಡಿಮೆಯಾಗಿದ್ದು, 61,900 ಮನೆಗಳು ಮಾರಾಟವಾಗಿವೆ. ಪುಣೆ (ಶೇ 6), ಹೈದರಾಬಾದ್ (ಶೇ 5), ಚೆನ್ನೈ (ಶೇ 11), ಕೋಲ್ಕತ್ತದಲ್ಲಿ ಶೇ 20ರಷ್ಟು ಇಳಿಕೆಯಾಗಿದೆ. ಮುಂಬೈನಲ್ಲಿ 1.55 ಲಕ್ಷ ಮನೆಗಳು ಮಾರಾಟವಾಗಿದ್ದು ಶೇ 1ರಷ್ಟು ಏರಿಕೆಯಾಗಿದೆ. ಬೆಂಗಳೂರಲ್ಲಿ 65,230 ಮನೆಗಳು ಮಾರಾಟವಾಗಿದ್ದು, ಶೇ 2ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.



ಯುಪಿಎಸ್‌ಸಿ: ಕೋಚಿಂಗ್ ಕೇಂದ್ರಗಳಿಗೆ ₹15 ಲಕ್ಷ ದಂಡ

ನವದೆಹಲಿ (ಪಿಟಿಐ): ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಡೆಸಿದ ನಾಗರಿಕ ಸೇವಾ ಪರೀಕ್ಷೆಯ ಫಲಿತಾಂಶದ ಬಗ್ಗೆ ಸುಳ್ಳು ಜಾಹೀರಾತು ನೀಡಿದ ಆರೋಪದ ಮೇರೆಗೆ, ಮೂರು ಕೋಚಿಂಗ್ ಕೇಂದ್ರಗಳಿಗೆ ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರ (ಸಿಸಿಪಿಎ) ಒಟ್ಟು ₹15 ಲಕ್ಷ ದಂಡವನ್ನು ಗುರುವಾರ ವಿಧಿಸಿದೆ.

ವಾಜಿರಾವ್ ಮತ್ತು ರೆಡ್ಡಿ ಸಂಸ್ಥೆ ಹಾಗೂ ಸ್ಟಡಿಐಕ್ಯು ಐಎಎಸ್‌ಗೆ ತಲಾ ₹7 ಲಕ್ಷ ಮತ್ತು ಎಡ್ಜ್ ಐಎಎಸ್ ಕೇಂದ್ರಕ್ಕೆ ₹1 ಲಕ್ಷ ದಂಡ ವಿಧಿಸಿದೆ.

ಯುಪಿಎಸ್‌ಇ ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಲ್ಲಿ ಹಲವರು ಸಂದರ್ಶನ ಎದುರಿಸುವ ಬಗ್ಗೆಯಷ್ಟೇ ಈ ಕೇಂದ್ರಗಳಿಂದ ಮಾರ್ಗದರ್ಶನ ಪಡೆದಿರುತ್ತಾರೆ. ಆದರೆ, ಈ ವಿಷಯವನ್ನು ಕೇಂದ್ರಗಳು ಮರೆಮಾಚಿ, ದಾರಿ ತಪ್ಪಿಸುವ ಜಾಹೀರಾತು ನೀಡುತ್ತಿವೆ. ಇದಕ್ಕೆ ಕಡಿವಾಣ ಹಾಕಲು ಹಾಗೂ ಗ್ರಾಹಕರಿಗೆ ರಕ್ಷಣೆ ನೀಡುವ ಉದ್ದೇಶದಿಂದ ದಂಡ ವಿಧಿಸಲಾಗಿದೆ ಎಂದು ಸಿಸಿಪಿಎ ಮುಖ್ಯ ಆಯುಕ್ತೆ ನಿಧಿ ಖರೆ ಹೇಳಿದ್ದಾರೆ.

2022ರ ನಾಗರಿಕ ಸೇವಾ ಪರೀಕ್ಷೆಯಲ್ಲಿ ಅರ್ಹತೆ ಗಳಿಸಿ, ಆಯ್ಕೆಯಾದ 933 ಅಭ್ಯರ್ಥಿಗಳ ಪೈಕಿ 617 ಅಭ್ಯರ್ಥಿಗಳು ವಾಜಿರಾವ್ ಮತ್ತು ರೆಡ್ಡಿ ಸಂಸ್ಥೆಯಲ್ಲಿ ತರಬೇತಿ ಪಡೆದಿದ್ದಾರೆ ಎಂದು ಕೇಂದ್ರವು ಜಾಹೀರಾತು ಪ್ರಕಟಿಸಿತ್ತು. ಸ್ಟಡಿಐಕ್ಯು ಐಎಎಸ್ ಸಹ ತನ್ನ 120ಕ್ಕೂ ಹೆಚ್ಚು ಅಭ್ಯರ್ಥಿಗಳು 2023ರಲ್ಲಿ ಆಯ್ಕೆಯಾಗಿದ್ದಾರೆ ಎಂದು ಹೇಳಿತ್ತು. ಆದರೆ, ಈ ಕುರಿತು ಸೂಕ್ತ ದಾಖಲೆ ಒದಗಿಸುವಲ್ಲಿ ಕೇಂದ್ರಗಳು ವಿಫಲಗೊಂಡಿವೆ. ಇಲ್ಲಿಯವರೆಗೆ ಸಿಸಿಪಿಎ 45 ತರಬೇತಿ ಕೇಂದ್ರಗಳಿಗೆ ನೋಟಿಸ್ ನೀಡಿದೆ. 22 ಕೇಂದ್ರಗಳಿಗೆ ದಂಡ ವಿಧಿಸಿದ್ದು, ₹71 ಲಕ್ಷ ದಂಡ ಸಂಗ್ರಹಿಸಿದೆ ಎಂದು ಸರ್ಕಾರ ತಿಳಿಸಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-34500
ಹಳತು	45000-48500
ಸಾಗರ	
ಬಿಳಿಗೋಟು	12989-25999
ಚಾಲಿ	23099-34139
ಕೋಕ	11989-20899
ಕೆಂಪುಗೋಟು	18899-28799
ರಾಶಿ	30899-50109
ಸಿಪ್ಪೆಗೋಟು	7010-16799
ಶಿವಮೊಗ್ಗ	
ಬೆಟ್ಟೆ	49069-57879
ಗೊರಬಲು	17009-33333
ಹೊಸತು	30099-49899
ರಾಶಿ	36399-49899
ಸರಕು	51100-94096
ಶಿರಸಿ	
ಬೆಟ್ಟೆ	31218-38299
ಬಿಳಿಗೋಟು	21799-30399
ಚಾಲಿ	34199-38699
ಕೆಂಪುಗೋಟು	10309-18099
ರಾಶಿ	43699-46899

ವಿನಿಮಯ ದರ

$ ಡಾಲರ್	85.27
£ ಪೌಂಡ್	106.85
€ ಯುರೊ	88.69
¥ ಯೆನ್ (100ಕ್ಕೆ)	54

ಮುದ್ರೆಮನೆ ಕಾಫಿ




(50 ಕೆಜಿಗೆ)

ಎಪಿ	₹23100
ಎಸಿ	₹11880
ಆರ್‌ಪಿ	₹19000
ಆರ್‌ಸಿ	₹10600

ವಿಶ್ವದ ಅತಿ ದೊಡ್ಡ ಅಣೆಕಟ್ಟು ನಿರ್ಮಾಣಕ್ಕೆ ಚೀನಾ ನಿರ್ಧಾರ

ಭಾರತದ ಗಡಿಭಾಗದಲ್ಲಿ ಬ್ರಹ್ಮಪುತ್ರ ನದಿಗೆ ನಿರ್ಮಾಣ: ತೀವ್ರ ಕಳವಳ



ಟಿಬೆಟ್ ಸ್ವಾಯತ್ತ ಪ್ರಾಂತ್ಯದಲ್ಲಿ ಹರಿದುಬರುತ್ತಿರುವ ಯರ್ಲಿಂಗ್ ಝಿಂಗ್ಬೊ (ಭಾರತದಲ್ಲಿ ಬ್ರಹ್ಮಪುತ್ರ) ನದಿಯ ವಿಹಂಗಮ ನೋಟ– ಎಎಫ್‌ಪಿ ಚಿತ್ರ

ಯೋಜನೆಯ ಮಾಹಿತಿ

- **300** ಬಿಲಿಯನ್ ಕಿ.ವಾಟ್ (30 ಸಾವಿರ ಕೋಟಿ ಕಿ.ವಾ)ವಾರ್ಷಿಕ ವಿದ್ಯುತ್ ಉತ್ಪಾದನೆಯ ಗುರಿ
- **30** ಕೋಟಿ ಮಂದಿ ಇಲ್ಲಿ ಉತ್ಪಾದನೆಯಾಗುವ ವಿದ್ಯುತ್ ಅನ್ನು ಒಂದು ವರ್ಷ ಪಡೆಯಬಹುದಾದ ಜನರ ಸಂಖ್ಯೆ
- **20** ಕಿ.ಮೀ. ನಾಮ್ಚಾ ಬರ್ವಾ ಪರ್ವತದ ಮೂಲಕ ಹಾದು ಹೋಗಲಿರುವ ಸುರಂಗಗಳ ಉದ್ದ
- **3** ಬಿಲಿಯನ್ ಡಾಲರ್ (₹25,584 ಕೋಟಿ) ಟಿಬೆಟ್‌ಗೆ ವಾರ್ಷಿಕ ದೊರೆಯುವ ಆದಾಯ
- ಉಪಯೋಗ: ನೀರಾವರಿ, ಕೈಗಾರಿಕೆ ಬೆಳವಣಿಗೆ, ಸಾರಿಗೆ ವ್ಯವಸ್ಥೆ ಸುಧಾರಣೆ, ವ್ಯಾಪಾರ ವೃದ್ಧಿ, ಉದ್ಯೋಗ ಸೃಷ್ಟಿ

ಬೀಜಿಂಗ್ (ಪಿಟಿಐ): ವಿಶ್ವದಲ್ಲೇ ಅತಿ ದೊಡ್ಡದಾದ ಅಣೆಕಟ್ಟು ನಿರ್ಮಾಣಕ್ಕೆ ಚೀನಾ ನಿರ್ಧರಿಸಿದೆ. ಭೂಮಿ ಮೇಲಿನ ಅತ್ಯಂತ ದೊಡ್ಡ ಯೋಜನೆ ಇದಾಗಿದ್ದು, 137 ಬಿಲಿಯನ್ ಡಾಲರ್ (₹11.67 ಲಕ್ಷ ಕೋಟಿ) ವೆಚ್ಚದಲ್ಲಿ ನಿರ್ಮಾಣವಾಗಲಿದೆ. ಬ್ರಹ್ಮಪುತ್ರ ನದಿಗೆ ಈ ಅಣೆಕಟ್ಟು ನಿರ್ಮಿಸಲು ಉದ್ದೇಶಿಸಿದ್ದು, ಈ ನದಿ ನೀರಿನಲ್ಲಿ ಪಾಲು ಹೊಂದಿರುವ ಭಾರತ ಹಾಗೂ ಬಾಂಗ್ಲಾದೇಶ ಕಳವಳ ವ್ಯಕ್ತಪಡಿಸಿವೆ.

‘ಚೀನಾ ಸರ್ಕಾರವು ಯರ್ಲಿಂಗ್ ಝಿಂಗ್ಬೊ (ಭಾರತದಲ್ಲಿ ಬ್ರಹ್ಮಪುತ್ರ) ನದಿಯ ಕೆಳಭಾಗದಲ್ಲಿ ಜಲವಿದ್ಯುತ್ ಯೋಜನೆ ಕೈಗೆತ್ತಿಕೊಳ್ಳಲು ನಿರ್ಧಾರ ಕೈಗೊಂಡಿದೆ’ ಎಂದು ಅಧಿಕಾರಿಯೊಬ್ಬರ ಹೇಳಿಕೆಯೊಂದನ್ನು ಉಲ್ಲೇಖಿಸಿ ‘ಕ್ಸಿನುವಾ’ ಸುದ್ದಿಸಂಸ್ಥೆ ವರದಿ ಮಾಡಿದೆ.

ಭಾರತದ ಅರುಣಾಚಲ ಪ್ರದೇಶಕ್ಕೆ ಪ್ರವೇಶಕ್ಕೂ ಮುನ್ನ ನದಿಯು ದೊಡ್ಡದಾಗಿ ಯು–ಟರ್ನ್ ಪಡೆಯುವ ಹಿಮಾಲಯದ ಆಳವಾದ ಕಮರಿ ಪ್ರದೇಶದಲ್ಲಿ ಈ ಅಣೆಕಟ್ಟು ನಿರ್ಮಾಣಗೊಳ್ಳಲಿದೆ. ಭೂಮಿ ಮೇಲೆ ಇದುವರೆಗೂ ನಿರ್ಮಾಣಗೊಂಡ ಮೂಲಸೌಕರ್ಯ ಯೋಜನೆಗಳಲ್ಲಿಯೇ ಗರಿಷ್ಠ ವೆಚ್ಚದ್ದು ಇದಾಗಿದೆ. ನಿರ್ಮಾಣ ಪೂರ್ಣಗೊಂಡ ಬಳಿಕ ಜಗತ್ತಿನ ಅತಿ ದೊಡ್ಡ ಅಣೆಕಟ್ಟು ಎಂಬ ಖ್ಯಾತಿಗೂ ಪಾತ್ರವಾಗಲಿದೆ’ ಎಂದು ಹಾಂಗ್‌ಕಾಂಗ್ ಮೂಲದ ‘ಸೌತ್ ಚೀನಾ ಮಾರ್ನಿಂಗ್ ಪೋಸ್ಟ್’ ವರದಿ ಮಾಡಿದೆ.

2015ರಲ್ಲಿ ಟಿಬೆಟ್‌ನಲ್ಲಿ ಚೀನಾ ನಿರ್ಮಿಸಿದ್ದ ಅತ್ಯಂತ ದೊಡ್ಡ ಅಣೆಕಟ್ಟಾದ ‘ಜಾಮ್ ಜಲವಿದ್ಯುತ್ ಕೇಂದ್ರ’ವು ಈಗಾಗಲೇ ಕಾರ್ಯಾಚರಣೆ ಆರಂಭಿಸಿದೆ.

ಭಾರತ ಕಳವಳ: ನದಿಯಲ್ಲಿ ಹರಿಯುವ ನೀರಿನ ಮೇಲೆ ಚೀನಾ ತನ್ನ ಹಿಡಿತ ಸಾಧಿಸಲು ಯತ್ನಿಸುತ್ತಿದೆ ಎಂದು ಭಾರತ ಕಳವಳ ವ್ಯಕ್ತಪಡಿಸಿದೆ. ಅಣೆಕಟ್ಟಿನ ಗಾತ್ರದ ಲೆಕ್ಕಾಚಾರದಂತೆ ನದಿಯಿಂದ ದೊಡ್ಡ ಪ್ರಮಾಣದಲ್ಲಿ ನೀರು ಹರಿಸಿದರೆ, ಕೆಳಭಾಗದಲ್ಲಿ ಪ್ರವಾಹ ಸ್ಥಿತಿ ತಲೆದೋರುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಅರುಣಾಚಲ ಪ್ರದೇಶದಲ್ಲಿ ಭಾರತ ಕೂಡ ಬ್ರಹ್ಮಪುತ್ರ ನದಿಗೆ ಅಣೆಕಟ್ಟು ನಿರ್ಮಿಸಲು ಮುಂದಾಗಿದೆ.

'ಡಿಎಂಕೆ ಕಿತ್ತೊಗೆಯುವವರೆಗೂ ಚಪ್ಪಲಿ ಧರಿಸಲ್ಲ'

ಪ್ರಜಾವಾಣಿ ವಾರ್ತೆ

ಚೆನ್ನೈ: 'ರಾಜ್ಯದಲ್ಲಿ ಡಿಎಂಕೆ ಪಕ್ಷವನ್ನು ಅಧಿಕಾರದಿಂದ ಕಿತ್ತೊಗೆಯುವವರೆಗೂ ಚಪ್ಪಲಿ ಧರಿಸುವುದಿಲ್ಲ' ಎಂದು ತಮಿಳು ನಾಡುಬಿಜೆಪಿ ಘಟಕದಅಧ್ಯಕ್ಷ ಕೆ.ಅಣ್ಣಾಮಲೈ ಹೇಳಿದರು.



ಕೆ.ಅಣ್ಣಾಮಲೈ

'ಅಣ್ಣಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿ ಮೇಲೆ ಲೈಂಗಿಕ ಕಿರುಕುಳ ನಡೆದಿರುವುದನ್ನು ಖಂಡಿಸಿ ಪ್ರತಿಭಟನೆಯ ಭಾಗವಾಗಿ ಶುಕ್ರವಾರ ತಮ್ಮ ನಿವಾಸದ ಮುಂದೆ ಆರು ಬಾರಿ ಛಡಿಯೇಟು ಹೊಡೆದುಕೊಳ್ಳುತ್ತೇನೆ' ಎಂದರು.

ಕೊಯಮತ್ತೂರಿನಲ್ಲಿ ಶನಿವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, 'ಡಿಎಂಕೆಯನ್ನು ಅಧಿಕಾರದಿಂದ ಕಿತ್ತೊಗೆಯಲು ಇದೇ ಡಿ.27ರಿಂದ 48 ದಿನಗಳ ಕಾಲ ಉಪವಾಸ ಸತ್ಯಾಗ್ರಹ ನಡೆಸುತ್ತೇನೆ. ಈ ಕೆಲಸ ನೆರವೇರಿಸಲು ಹೆಚ್ಚಿನ ಶಕ್ತಿ ನೀಡಲಿ ಎಂದು ರಾಜ್ಯದಲ್ಲಿ ಆರು ಮುರುಗ ದೇವಾಲಯಗಳಿಗೂ ಭೇಟಿ ನೀಡುತ್ತೇನೆ' ಎಂದರು.

ಚಪ್ಪಲಿ ಧರಿಸಲ್ಲ ಎಂದು ಘೋಷಿಸಿದ ಅವರು ಬಳಿಕ ಶೂಗಳನ್ನು ಕಳಚಿಟ್ಟರು.

'ಇಂಡಿಯಾ'ದಲ್ಲಿ ಮತ್ತೆ ಬಿಕ್ಕಟ್ಟು

ಅಜಯ್ ಮಾಕನ್ ಹೇಳಿಕೆಗೆ ಎಎಪಿ ಕಿಡಿ ● 24 ಗಂಟೆಗಳಲ್ಲಿ ಕ್ರಮಕ್ಕೆ ಪಟ್ಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಳಗಾವಿಯಲ್ಲಿ ಕಾಂಗ್ರೆಸ್‌ನ ವಿಸ್ತೃತ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆ ನಡೆಯುತ್ತಿರುವ ಹೊತ್ತಿನಲ್ಲೇ 'ಇಂಡಿಯಾ' ಮೈತ್ರಿಕೂಟ-ದಲ್ಲಿ ಮತ್ತೆ ಬಿಕ್ಕಟ್ಟು ಕಾಣಿಸಿಕೊಂಡಿದೆ.

ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರನ್ನು 'ದೇಶವಿರೋಧಿ' ಎಂದು ಕರೆದಿರುವ ಹಿರಿಯ ನಾಯಕ ಅಜಯ್ ಮಾಕನ್ ವಿರುದ್ಧ 24 ಗಂಟೆಗಳ ಒಳಗೆ ಕ್ರಮ ಕೈಗೊಳ್ಳದಿದ್ದರೆ ಕಾಂಗ್ರೆಸ್ ಪಕ್ಷವನ್ನು ಮೈತ್ರಿಕೂಟದಿಂದ ಕೈಬಿಡುವಂತೆ ಮಿತ್ರಪಕ್ಷಗಳನ್ನು ಒತ್ತಾಯಿಸುವುದಾಗಿ ಎಎಪಿ ಗುರುವಾರ ಎಚ್ಚರಿಸಿದೆ. ಇದಕ್ಕೆ ಕಾಂಗ್ರೆಸ್‌ನ ದೆಹಲಿ ಘಟಕವು ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ.

ಬಿಜೆಪಿ ಹಾಗೂ ಎಎಪಿಯನ್ನು ಗುರಿಯಾಗಿಸಿಕೊಂಡು 12 ಅಂಶಗಳ 'ಶ್ವೇತಪತ್ರ'ವನ್ನು ಬುಧವಾರ ಬಿಡುಗಡೆ ಮಾಡಿದ್ದ ಮಾಕನ್, 'ಕೇಜ್ರಿವಾಲ್ ಅವರು 'ದೇಶವಿರೋಧಿ. ಏಕರೂಪ ನಾಗರಿಕ ಸಂಹಿತೆ ಮತ್ತು ಸಂವಿಧಾನದ 370ನೇ ವಿಧಿಯ ರದ್ದತಿ ಸಂದರ್ಭದಲ್ಲಿ ಬಿಜೆಪಿಗೆ ಸೈದ್ಧಾಂತಿಕ ಬೆಂಬಲ ನೀಡಿದ್ದರು' ಎಂದು ಆರೋಪಿಸಿದ್ದರು. ದೆಹಲಿ ವಿಧಾನಸಭಾ ಚುನಾವಣೆಗೆ ಬಿಜೆಪಿ ಜತೆಗೆ ಕಾಂಗ್ರೆಸ್ ಒಪ್ಪಂದ ಮಾಡಿಕೊಂಡಿದೆಯೇ ಎಂದು ಎಎಪಿ ಪ್ರಶ್ನಿಸಿದೆ.



ಕೇಜ್ರಿವಾಲ್ ಅವರನ್ನು ದೇಶವಿರೋಧಿ ಎಂದು ಕರೆಯುವ ಮೂಲಕ ಮಾಕನ್ ಎಲ್ಲ ಮಿತಿಗಳನ್ನು ದಾಟಿದ್ದಾರೆ. 24 ಗಂಟೆಗಳಲ್ಲಿ ಮಾಕನ್ ವಿರುದ್ಧ ಕ್ರಮ ಕೈಗೊಳ್ಳಬೇಕು

ಸಂಜಯ್ ಸಿಂಗ್, ರಾಜ್ಯಸಭಾ ಸದಸ್ಯ



ಕಾಂಗ್ರೆಸ್‌ಗೆ ಎಎಪಿಯೊಂದಿಗೆ ಸಮಸ್ಯೆ ಇದ್ದರೆ, ಲೋಕಸಭೆ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಂಡಿದ್ದು ಏಕೆ? ದೆಹಲಿ ಕಾಂಗ್ರೆಸ್ ಘಟಕವು ಬಿಜೆಪಿಯೊಂದಿಗೆ ಶಾಮೀಲಾಗಿದೆ

ಆತಿಶಿ, ದೆಹಲಿ ಮುಖ್ಯಮಂತ್ರಿ

ಕೇಜ್ರಿವಾಲ್ ಹಾಗೂ ಮನೀಷ್ ಸಿಸೋಡಿಯಾ ವಿರುದ್ಧ ಕಣಕ್ಕಿಳಿದಿರುವ ಸಂದೀಪ್ ದೀಕ್ಷಿತ್ ಹಾಗೂ ಫರ್ಹಾದ್ ಸೂರಿ ಸೇರಿದಂತೆ ಕಾಂಗ್ರೆಸ್ ಅಭ್ಯರ್ಥಿಗಳು ಬಿಜೆಪಿಯಿಂದ ಹಣ ಪಡೆದಿದ್ದಾರೆ ಎಂದು ಎಎಪಿ ಆರೋಪಿಸಿದೆ.

ಮಾಕನ್ ಹಾಗೂ ದೆಹಲಿಯ ಇತರ ನಾಯಕರು ಬಿಜೆಪಿಯನ್ನು ರಾಷ್ಟ್ರ ವಿರೋಧಿಯೆಂದು ಏಕೆ ಕರೆಯುತ್ತಿಲ್ಲ ಎಂದು ಪ್ರಶ್ನಿಸಿರುವ ಪಕ್ಷವು, ಕೇಜ್ರಿವಾಲ್ ಹಾಗೂ ದೆಹಲಿ ಮುಖ್ಯಮಂತ್ರಿ ಆತಿಶಿ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಯುವ ಕಾಂಗ್ರೆಸ್ ಮುಖಂಡರು ಬಿಜೆಪಿ ವಿರುದ್ಧ ಮೌನವಾಗಿರುವುದು ಏಕೆ ಎಂದು ಕೇಳಿದೆ.

ಗುರುವಾರ ಇಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಆತಿಶಿ ಹಾಗೂ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಅವರು ಮಾಕನ್ ಹೇಳಿಕೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ದೆಹಲಿ ಹಾಗೂ ಚಂಡೀಗಢದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ಕೇಜ್ರಿವಾಲ್ ಪ್ರಚಾರ ನಡೆಸಿದ್ದರು.

ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಪರಸ್ಪರ ಎದುರಾಳಿಗಳಾಗಿದ್ದರೂ ಕಾಂಗ್ರೆಸ್ ವಿರುದ್ಧ ಕೇಜ್ರಿವಾಲ್ ಟೀಕೆ ಮಾಡಿರಲಿಲ್ಲ ಎಂದು ಅವರು ನೆನಪಿಸಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ದೆಹಲಿ ಕಾಂಗ್ರೆಸ್ ಅಧ್ಯಕ್ಷ ದೇವೇಂದ್ರ ಯಾದವ್ ಅವರು ಎಎಪಿ ವಿರುದ್ಧ ಟೀಕಾಪ್ರಹಾರ ನಡೆಸಿದರು. ಕಾಂಗ್ರೆಸ್ ಬಿಡುಗಡೆ ಮಾಡಿರುವ ಶ್ವೇತಪತ್ರದಿಂದ ಎಎಪಿಯ ವಿಶ್ವಾಸಾರ್ಹತೆ ತಳಮಟ್ಟಕ್ಕೆ ಕುಸಿದಿದೆ ಎಂದರು. ಭ್ರಷ್ಟ ನಾಯಕರ ಗುಂಪು ತಮ್ಮ ಛಿದ್ರಗೊಂಡ ವರ್ಚಸ್ಸು ಹಾಗೂ ಮತದಾರರ ಬೆಂಬಲ ಗಳಿಸಲು ಹತಾಶರಾಗಿ ಪ್ರಯತ್ನಿಸುತ್ತಿದ್ದಾರೆ ಎಂದರು.

2023–24: ಕಾಂಗ್ರೆಸ್‌ಗಿಂತ 9 ಪಟ್ಟು ಅಧಿಕ

ಬಿಜೆಪಿಗೆ ₹2,604 ಕೋಟಿ ದೇಣಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಆಡಳಿತಾರೂಢ ಬಿಜೆಪಿಗೆ 2023-24ರ ಹಣಕಾಸು ವರ್ಷದಲ್ಲಿ ವಿವಿಧ ಮೂಲಗಳಿಂದ ದೇಣಿಗೆ ರೂಪದಲ್ಲಿ ₹2,604.71 ಕೋಟಿ ಹರಿದುಬಂದಿದೆ. ಇದೇ ಅವಧಿಯಲ್ಲಿ ಕಾಂಗ್ರೆಸ್ ₹281.38 ಕೋಟಿ ದೇಣಿಗೆ ಸ್ವೀಕರಿಸಿದೆ.



ಈ ವರ್ಷದ ಆರಂಭದಲ್ಲಿ ಲೋಕಸಭಾ ಚುನಾವಣೆ ಇದ್ದ ಕಾರಣ ರಾಜಕೀಯ ಪಕ್ಷಗಳಿಗೆ ದೊಡ್ಡ ಮಟ್ಟದ ದೇಣಿಗೆ ಲಭಿಸಿದೆ. ಬಿಜೆಪಿಯು, ಕಾಂಗ್ರೆಸ್‌ಗಿಂತ ಒಂಬತ್ತು ಪಟ್ಟು ಅಧಿಕ ದೇಣಿಗೆ ಸ್ವೀಕರಿಸಿದೆ.

ವ್ಯಕ್ತಿಗಳು, ಕಾರ್ಪೊರೇಟ್ ಸಂಸ್ಥೆಗಳು ಮತ್ತು ಎಲೆಕ್ಟೋರಲ್ ಟ್ರಸ್ಟ್‌ಗಳ ಮೂಲಕ ಬಿಜೆಪಿ ಪಡೆದಿರುವ ದೇಣಿಗೆಯು 2022–23ರ ಅವಧಿಯಲ್ಲಿ ಸಂಗ್ರಹಿಸಿದ್ದಕ್ಕಿಂತ ಮೂರು ಪಟ್ಟು ಹೆಚ್ಚಾಗಿದೆ. ಕಾಂಗ್ರೆಸ್ ಕೂಡಾ ಹಿಂದಿನ ಹಣಕಾಸು ವರ್ಷಕ್ಕಿಂತ ಮೂರು ಪಟ್ಟು ಅಧಿಕ ದೇಣಿಗೆ ಗಳಿಸಿದೆ.

ಎರಡೂ ಪಕ್ಷಗಳು ಚುನಾವಣಾ ಟ್ರಸ್ಟ್‌ಗಳಿಂದ ಅತ್ಯಧಿಕ ದೇಣಿಗೆ ಪಡೆದಿದ್ದು, 'ಪ್ರುಡೆಂಟ್ ಎಲೆಕ್ಟೋರಲ್ ಟ್ರಸ್ಟ್' ಬಿಜೆಪಿಗೆ ಸುಮಾರು ₹724 ಕೋಟಿ ಹಾಗೂ ಕಾಂಗ್ರೆಸ್‌ಗೆ ₹156 ಕೋಟಿ ದೇಣಿಗೆ ನೀಡಿದೆ. ಬಿಜೆಪಿಯು 'ಟ್ರಯಂಫ್ ಎಲೆಕ್ಟೋರಲ್ ಟ್ರಸ್ಟ್'ನಿಂದ ₹127 ಕೋಟಿ ಸ್ವೀಕರಿಸಿದೆ.

ವಿವಿಧ ಪಕ್ಷಗಳು ದೇಣಿಗೆಯಾಗಿ ₹20 ಸಾವಿರ ಅಥವಾ ಅದಕ್ಕಿಂತ ಹೆಚ್ಚಿಗೆ ಪಡೆದಿರುವುದರ ಮಾಹಿತಿಯನ್ನು ಮಾತ್ರ ಚುನಾವಣಾ ಆಯೋಗ ನೀಡಿದೆ. ₹20 ಸಾವಿರ ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತದ ಯಾವುದೇ ದೇಣಿಗೆ ಸ್ವೀಕರಿಸಿಲ್ಲ ಎಂದು ಬಿಎಸ್‌ಪಿ ತನ್ನ ವರದಿಯಲ್ಲಿ ತಿಳಿಸಿದೆ.

ಚುನಾವಣಾ ಬಾಂಡ್ ರೂಪದಲ್ಲಿ ಬಂದ ₹495.52 ಕೋಟಿ ಮೊತ್ತ ಸೇರಿದಂತೆ ಒಟ್ಟು ₹580 ಕೋಟಿ ದೇಣಿಗೆ ಸ್ವೀಕರಿಸಿರುವುದಾಗಿ ಬಿಆರ್‌ಎಸ್ ತಿಳಿಸಿದೆ. ದೇಣಿಗೆಯ ವಿವರ ಸಲ್ಲಿಸುವಾಗ, ಚುನಾವಣಾ ಬಾಂಡ್ ಮೂಲಕ ಪಡೆದ ದೇಣಿಗೆ ವಿವರ ಬಹಿರಂಗಪಡಿಸುವುದನ್ನು ಚುನಾವಣಾ ಆಯೋಗವು ಕಡ್ಡಾಯಗೊಳಿಸಿಲ್ಲ.

ಆದರೆ ಬಿಆರ್‌ಎಸ್, ವೈಎಸ್‌ಆರ್ ಕಾಂಗ್ರೆಸ್, ಡಿಎಂಕೆ ಮತ್ತು ಜೆಎಂಎಂ ಪಕ್ಷಗಳು ಚುನಾವಣಾ ಬಾಂಡ್‌ಗಳ ಮೂಲಕ ಪಡೆದ ದೇಣಿಗೆಯ ವಿವರಗಳನ್ನೂ ಬಹಿರಂಗಪಡಿಸಿವೆ.

ಕಾಂಗ್ರೆಸ್‌ಗೆ ನಾಯಕರಿಂದ ತಲಾ ₹1.38 ಲಕ್ಷ

ಕಾಂಗ್ರೆಸ್ ಪಕ್ಷಕ್ಕೆ ಅದರ ಮುಖಂಡರು ಒಳಗೊಂಡಂತೆ ಸುಮಾರು 500 ಮಂದಿ ಬೆಂಬಲಿಗರು ತಲಾ ₹1.38 ಲಕ್ಷ ದೇಣಿಗೆ ನೀಡಿದ್ದಾರೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ 138 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕಳೆದ ವರ್ಷದ ಡಿಸೆಂಬರ್‌ನಲ್ಲಿ 'ದೇಶಕ್ಕಾಗಿ ದೇಣಿಗೆ ನೀಡಿ' (ಡೊನೇಟ್ ಫಾರ್ ದೇಶ್) ಅಭಿಯಾನ ನಡೆಸಿತ್ತು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖಂಡರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಕೆ.ಸಿ. ವೇಣುಗೋಪಾಲ್, ಜೈರಾಮ್ ರಮೇಶ್, ಅಶೋಕ್ ಗೆಹಲೋತ್ ಮತ್ತು ಪವನ್ ಖೇರಾ ತಲಾ ₹1.38 ಲಕ್ಷ ದೇಣಿಗೆ ನೀಡಿದ್ದಾರೆ.



ಯಾವ ಪಕ್ಷಕ್ಕೆ ಎಷ್ಟು?
(₹ ಕೋಟಿಗಳಲ್ಲಿ)

ಪಕ್ಷ	ದೇಣಿಗೆ
ಬಿಜೆಪಿ	2,604.71
ಬಿಆರ್‌ಎಸ್	580
ಕಾಂಗ್ರೆಸ್	281.38
ವೈಎಸ್‌ಆರ್ ಕಾಂಗ್ರೆಸ್	184
ಡಿಎಂಕೆ	81.56
ಜೆಎಂಎಂ	11.5
ಸಿಪಿಎಂ	7.64
ಟಿಎಂಸಿ	6.42
ಜೆಡಿಎಸ್	2.45
ಜೆಡಿಯು	1.81

ಸಂಕ್ಷಿಪ್ತ ಸುದ್ದಿ

ಸಹೋದರಿಯರ ಮೇಲೆ ಅತ್ಯಾಚಾರ, ಹತ್ಯೆ

ಮುಂಬೈ: ಅಪ್ರಾಪ್ತ ವಯಸ್ಸಿನ ಇಬ್ಬರು ಸಹೋದರಿಯರನ್ನು ಅಪಹರಿಸಿ, ಅತ್ಯಾಚಾರ ಎಸಗಿ ಅವರನ್ನು ಹತ್ಯೆ ಮಾಡಿರುವ ಘಟನೆ ಮಹಾರಾಷ್ಟ್ರದ ಪುಣೆಯಲ್ಲಿ ನಡೆದಿದೆ. ಈ ಘಟನೆಗೆ ಸಾರ್ವಜನಿಕರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ. 54 ವರ್ಷದ ಬಾಣಸಿಗ ಅಜಯ್ ದಾಸ್ ಕೃತ್ಯ ಎಸಗಿದ ಆರೋಪಿಯಾಗಿದ್ದು ಈತನನ್ನು ಪೊಲೀಸರು ಬಂಧಿಸಿದ್ದಾರೆ.

9 ಮತ್ತು 8 ವರ್ಷದ ಇಬ್ಬರು ಸಹೋದರಿಯರು ಬುಧವಾರ ಮಧ್ಯಾಹ್ನದಿಂದ ಕಾಣೆಯಾಗಿದ್ದರಿಂದ ಪೋಷಕರು ಪೊಲೀಸರಿಗೆ ದೂರು ನೀಡಿದ್ದರು. ಹುಡುಕಾಟ ನಡೆಸಿದಾಗ ಬಾಲಕಿಯರ ಮೃತದೇಹಗಳು ನೀರಿನ ಡ್ರಮ್‌ವೊಂದರಲ್ಲಿ ಪತ್ತೆಯಾಗಿವೆ. ಬಾಲಕಿಯರನ್ನು ನೀರಿನಲ್ಲಿ ಮುಳುಗಿಸಿ ಹತ್ಯೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

ಊಬರ್‌ಗೆ ನೋಟಿಸ್

ನವದೆಹಲಿ (ಪಿಟಿಐ): ಅಂಗವಿಕಲ ವ್ಯಕ್ತಿಗಳು ಬಾಡಿಗೆ ಟ್ಯಾಕ್ಸಿ ಸೇವೆಗಳನ್ನು ಪಡೆದುಕೊಳ್ಳುವಾಗ ತಾರತಮ್ಯ ಎದುರಿಸುತ್ತಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿ ತಮ್ಮ ನಿಲುವು ತಿಳಿಸುವಂತೆ ದೆಹಲಿ ಹೈಕೋರ್ಟ್, ಕೇಂದ್ರ ಸರ್ಕಾರ ಮತ್ತು ಬಾಡಿಗೆ ಟ್ಯಾಕ್ಸಿ ಸೇವೆ ಒದಗಿಸುವ ಊಬರ್ ಕಂಪನಿಗೆ ಸೂಚಿಸಿದೆ.

ದೃಷ್ಟಿ ದೋಷದಿಂದ ಬಳಲುತ್ತಿರುವ ವಕೀಲ ರಾಹುಲ್ ಬಜಾಜ್ ಅವರ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಸಂಜೀವ್ ನರುಲಾ ಅವರು ಕೇಂದ್ರ ಸರ್ಕಾರ ಮತ್ತು ಊಬರ್ ಇಂಡಿಯಾ ಟೆಕ್ನಾಲಜಿ ಪ್ರೈವೆಟ್ ಲಿಮಿಟೆಡ್‌ಗೆ ನೋಟಿಸ್ ಜಾರಿಗೊಳಿಸಿದ್ದು, ಪ್ರತಿಕ್ರಿಯೆ ನೀಡುವಂತೆ ಹೇಳಿದರು.

ಊಬರ್ ಆ್ಯಪ್ ಮೂಲಕ ಆಟೊ ಬುಕ್ ಮಾಡಿದ್ದ ತಮ್ಮ ಕಕ್ಷಿಗಾರ ಬಾಡಿಗೆ ಸೇವೆ ಪಡೆದುಕೊಳ್ಳುವಾಗ ತಾರತಮ್ಯ ಮತ್ತು ಅಗೌರವದ ವರ್ತನೆ ಸೇರಿದಂತೆ ಹಲವು ಸವಾಲುಗಳನ್ನು ಎದುರಿಸಿದ್ದಾರೆ ಎಂದು ರಾಹುಲ್ ಪರ ಹಾಜರಿದ್ದ ವಕೀಲರು ಆರೋಪಿಸಿದ್ದಾರೆ. ಪೀಠವು ಮುಂದಿನ ವಿಚಾರಣೆಯನ್ನು ಮಾರ್ಚ್ 27ಕ್ಕೆ ನಿಗದಿಪಡಿಸಿದೆ.

ಮುಸ್ಲಿಂ ಪ್ರದೇಶದಲ್ಲಿ ದೇಗುಲಗಳ ಪತ್ತೆ



ಲಖನೌ: ಉತ್ತರ ಪ್ರದೇಶದ ವಿವಿಧ ಪಟ್ಟಣಗಳಲ್ಲಿ ಮುಸ್ಲಿಂ ಪ್ರಾಬಲ್ಯದ ಪ್ರದೇಶಗಳಲ್ಲಿ ಪ್ರಾಚೀನ ಹಿಂದೂ ದೇವಾಲಯಗಳನ್ನು ಅನ್ವೇಷಿಸುವ ಬೆಳವಣಿಗೆ ಮುಂದುವರಿದಿದೆ. ಕಳೆದ ಒಂದು ವಾರದಲ್ಲಿ ಆರಕ್ಕೂ ಹೆಚ್ಚು ದೇಗುಲಗಳನ್ನು ಪತ್ತೆಹಚ್ಚಲಾಗಿದೆ. ಮರೆಮಾಚಿದ ಸ್ಥಿತಿಯಲ್ಲಿರುವ ಪ್ರಾಚೀನ ದೇಗುಲಗಳನ್ನು ಹಿಂದೂ ಸಂಘಟನೆಗಳ ಕಾರ್ಯಕರ್ತರು ಪತ್ತೆ ಮಾಡಿದ್ದು, ದೇವಾಲಯಗಳ ವಿಡಿಯೊ ಚಿತ್ರೀಕರಿಸಿ, ನಿತ್ಯ ಪೂಜೆಗೆ ಬಾಗಿಲು ತೆರೆಯುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ. ರಾಜ್ಯ ವಿಧಾನಸಭೆ ಭವನದ ಸಮೀಪದಲ್ಲಿ ಮುಸ್ಲಿಮರು ನಿರ್ಮಿಸಿರುವ ಸಂಕೀರ್ಣದ ನೆಲಮಾಳಿಗೆಯಲ್ಲಿ ರಾಧಾ-ಕೃಷ್ಣ ದೇವಾಲಯವನ್ನು ಗುರುವಾರ ಹಿಂದೂ ಸಂಘಟನೆಗಳ ಕಾರ್ಯಕರ್ತರು ಪತ್ತೆ ಮಾಡಿದ್ದು, ಸಂಕೀರ್ಣದ ಮಾಲೀಕರು ದೇಗುಲ ಮರೆಮಾಚಲು ಪ್ರಯತ್ನಿಸಿದ್ದಾರೆ ಎಂದು ಆರೋಪಿಸಿದರು.

ಬ್ರಾಹ್ಮಣ ಸಂಸದ್ ಅಧ್ಯಕ್ಷ ಅಮರನಾಥ್ ಮಿಶ್ರಾ ಅವರು ಲಖನೌ ಅಭಿವೃದ್ಧಿ ಪ್ರಾಧಿಕಾರದ (ಎಲ್‌ಡಿಎ) ಅಧಿಕಾರಿಗಳನ್ನು ಭೇಟಿ ಮಾಡಿ, 'ಇಲ್ಲಿ ಪತ್ತೆಯಾದ ದೇವಸ್ಥಾನ 18ನೇ ಶತಮಾನದ್ದು. ನಮಗೆ ಅಲ್ಲಿ ಪೂಜೆಗೆ ಅವಕಾಶ ನೀಡಬೇಕು. ದೇವಸ್ಥಾನ ಮರೆಮಾಚಿರುವ ಕಾಂಪ್ಲೆಕ್ಸ್ ಕೆಡವಬೇಕು' ಎಂದು ಒತ್ತಾಯಿಸಿದರು. ಇದನ್ನು ಪರಿಶೀಲಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಲೋಕಸಭೆ ಚುನಾವಣೆ 10.57 ಲಕ್ಷ ಮತಗಳು ತಿರಸ್ಕೃತ'

ನವದೆಹಲಿ (ಪಿಟಿಐ): 'ಈ ಬಾರಿ ನಡೆದ ಲೋಕಸಭೆ ಚುನಾವಣೆಯಲ್ಲಿ ಸುಮಾರು 10.57 ಲಕ್ಷ ಮತಗಳ ಎಣಿಕೆ ನಡೆಸಿಲ್ಲ ಅಥವಾ ಈ ಮತಗಳು ವಿವಿಧ ಕಾರಣಗಳಿಂದ ತಿರಸ್ಕೃತಗೊಂಡಿವೆ. ಇವುಗಳಲ್ಲಿ 5.22 ಲಕ್ಷ ಮತಗಳು ಇವಿಎಂಗಳಲ್ಲಿ ಹಾಗೂ ಉಳಿದ 5.35 ಲಕ್ಷ ಅಂಚೆ ಮೂಲಕ ಚಲಾಯಿಸಿದ ಮತಗಳಾಗಿವೆ' ಎಂದು ಚುನಾವಣಾ ಆಯೋಗವು ಗುರುವಾರ ಮಾಹಿತಿ ಬಿಡುಗಡೆ ಮಾಡಿದೆ.

'ಈ ಬಾರಿಯ ಚುನಾವಣೆಯಲ್ಲಿ ಒಟ್ಟು 64.64 ಕೋಟಿ ಮತದಾರರು ಮತ ಚಲಾಯಿಸಿದ್ದರು. ಈ ಪೈಕಿ ಶೇ 65.78ರಷ್ಟು ಮಹಿಳೆಯರು ಹಾಗೂ ಶೇ 65.55ರಷ್ಟು ಪುರುಷರು ತಮ್ಮ ಹಕ್ಕು ಚಲಾಯಿಸಿದ್ದಾರೆ' ಎಂದು ಹೇಳಿದೆ.

'ಚುನಾವಣಾ ಪ್ರಕ್ರಿಯೆ ನಿಂತಿರುವುದೇ ಜನರ ನಂಬಿಕೆ ಮೇಲೆ. ನಮ್ಮ ಕೆಲಸದಲ್ಲಿ ಪಾರದರ್ಶಕತೆ ಇರಬೇಕು ಎಂಬ ದೃಷ್ಟಿಯಿಂದ ಸ್ವಯಂಪ್ರೇರಿತವಾಗಿ ಈ ಮಾಹಿತಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ' ಎಂದು ಆಯೋಗ ಹೇಳಿಕೊಂಡಿದೆ. ಆಯೋಗವು ಬಿಡುಗಡೆ ಮಾಡುವ ಮತದಾನ ಪ್ರಮಾಣ ಕುರಿತು ದೊಡ್ಡ ಮಟ್ಟದ ಚರ್ಚೆ ನಡೆಯುತ್ತಿರುವ ಹೊತ್ತಿನಲ್ಲೇ ಈ ಪ್ರಕಟಣೆ ಹೊರಬಿದ್ದಿದೆ.

- ಚುನಾವಣೆಯಲ್ಲಿ ಸ್ಪರ್ಧಿಸಿದ್ದ 8,300ಕ್ಕೂ ಹೆಚ್ಚಿನ ಅಭ್ಯರ್ಥಿಗಳ ಪೈಕಿ ಶೇ 86ರಷ್ಟು ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದಾರೆ
- ಚಲಾವಣೆಗೊಂಡ ಒಟ್ಟು ಮತಗಳ ಪೈಕಿ ಶೇ 63ರಷ್ಟು ಮತಗಳು ರಾಷ್ಟ್ರೀಯ ಪಕ್ಷಗಳಿಗೇ ಬಿದ್ದಿವೆ





ಅಭಿನಂದನೆ

ನವದೆಹಲಿಯ ಭಾರತ ಮಂಟಪದಲ್ಲಿ ಗುರುವಾರ ನಡೆದ 'ವೀರ ಬಾಲ ದಿವಸ' ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ಪ್ರಶಸ್ತಿ ಪುರಸ್ಕೃತ ಮಕ್ಕಳನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದರು – ಪಿಟಿಐ ಚಿತ್ರ

ಸಂಕ್ರಾಂತಿ ಬಳಿಕ ಹಾಲು ದರ ₹5 ಏರಿಕೆ?

ಬೆಂಗಳೂರು: ಪ್ರತಿ ಲೀಟರ್ ಹಾಲಿಗೆ ₹5 ಹೆಚ್ಚಳ ಮಾಡುವಂತೆ ರೈತರಿಂದ ಬೇಡಿಕೆ ಬಂದಿದ್ದು, ದರ ಏರಿಕೆ ಬಗ್ಗೆ ಸಂಕ್ರಾಂತಿ ಹಬ್ಬದ ಬಳಿಕ ಸಭೆ ನಡೆಸಿ ತೀರ್ಮಾನಿಸ-ಲಾಗುವುದು ಎಂದು ಕೆಎಂಎಫ್ ಅಧ್ಯಕ್ಷ ಭೀಮಾ ನಾಯಕ್ ಹೇಳಿದ್ದಾರೆ. ಹಾಲಿನ ದರ ಏರಿಕೆಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುತ್ತೇವೆ. ಸರ್ಕಾರ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದ್ದಾರೆ.



'ಶೇ 30ಕ್ಕಿಂತ ಹೆಚ್ಚಿನ ಬಡ್ಡಿ ವಿಧಿಸಬಹುದು'

ಒಂದನೇ ಪುಟದಿಂದ...

'ಬಡ್ಡಿ ಹಾಕುವುದು ಸೇರಿದಂತೆ ಎಲ್ಲ ಮಾಹಿತಿಗಳನ್ನು ಬ್ಯಾಂಕುಗಳು ತಮ್ಮ ಗ್ರಾಹಕರಿಗೆ ಕಾಲ ಕಾಲಕ್ಕೆ ಮನದಟ್ಟು ಮಾಡಿರುತ್ತವೆ. ದೇಶದ ಯಾವ ಬ್ಯಾಂಕ್ ಕೂಡ ಆರ್‌ಬಿಐ ಸೂಚನೆಯನ್ನು ಇಲ್ಲಿಯವರೆಗೂ ಮೀರಿಲ್ಲ' ಎಂದು ಪೀಠ ಅಭಿಪ್ರಾಯಪಟ್ಟಿತು.

ಎನ್‌ಸಿಡಿಆರ್‌ಸಿ ನೀಡಿದ್ದ ಆದೇಶದ ವಿರುದ್ಧ 2008ರ ಜುಲೈನಲ್ಲಿ ಸಿಟಿಬ್ಯಾಂಕ್, ಅಮೆರಿಕನ್ ಎಕ್ಸ್‌ಪ್ರೆಸ್, ಎಚ್‌ಎಸ್‌ಬಿಸಿ ಮತ್ತು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ಗಳು ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿದ್ದವು. ಡಿ.20ಕ್ಕೆ ನ್ಯಾಯಾಲಯವು ತೀರ್ಪು ನೀಡಿದೆ.

ವಿದ್ಯಾವಂತರೇ ಕ್ರೆಡಿಟ್ ಕಾರ್ಡ್ ಹೊಂದಿರುತ್ತಾರೆ. ಸಮಯಕ್ಕೆ ಸರಿಯಾಗಿ ಬಾಕಿ ಪಾವತಿ ಮಾಡಬೇಕು ಎಂದು ಅವರಿಗೆ ತಿಳಿದಿರುತ್ತದೆ

ಸುಪ್ರೀಂ ಕೋರ್ಟ್

ರಾಜ್ಯದ 927 ಗ್ರಾಮಕ್ಕಿಲ್ಲ 4ಜಿ ಸಂಪರ್ಕ

ಒಂದನೇ ಪುಟದಿಂದ...

ಈ ಯೋಜನೆಯ ಅವಧಿ 2023–24ರ ಅಂತ್ಯಕ್ಕೇ ಪೂರ್ಣಗೊಂಡಿದೆ. ಆದರೆ ಎಲ್ಲ ಗ್ರಾಮಗಳಿಗೆ 4ಜಿ ಸಂಪರ್ಕ ದೊರೆತಿಲ್ಲ. 927 ಗ್ರಾಮಗಳಿಗೆ 4ಜಿ ಸಂಪರ್ಕ ಇಲ್ಲ ಎಂಬ ಮಾಹಿತಿಯನ್ನು ಸಚಿವಾಲಯ ನೀಡಿದೆಯೇ ಹೊರತು, ಯಾವ ಗ್ರಾಮಗಳು ಎಂಬುದನ್ನು ಹೆಸರಿಸಿಲ್ಲ.

ಬೆಂಗಳೂರು ನಗರ ಕೇಂದ್ರದಿಂದ 40–45 ಕಿ.ಮೀ. ದೂರದಲ್ಲಿರುವ ಕೆಲ ಗ್ರಾಮಗಳಲ್ಲೂ 4ಜಿ ಸಂಪರ್ಕ ಇಲ್ಲ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದಾಬಸ್‌ಪೇಟೆ ವ್ಯಾಪ್ತಿಯಲ್ಲಿ, ರಾಮನಗರ ಜಿಲ್ಲೆಯ ಮಾಗಡಿ ವ್ಯಾಪ್ತಿಯಲ್ಲಿ ಹಲವು ಗ್ರಾಮಗಳು ಇಂತಹ ಆಧುನಿಕ ಸವಲತ್ತುಗಳಿಂದ ವಂಚಿತವಾಗಿವೆ. ಇವು ಕೆಲವು ಉದಾ-ಹರಣೆಗಳಷ್ಟೆ. 927 ಕಂದಾಯ ಗ್ರಾಮಗಳು ಮಾತ್ರವಲ್ಲದೆ, ಅವುಗಳ ವ್ಯಾಪ್ತಿಯಲ್ಲಿ ಇರುವ ಕಾಲೊನಿಗಳೂ 4ಜಿ ಸಂಪರ್ಕದಿಂದ ವಂಚಿತವಾಗಿವೆ.

ಮರಣಪತ್ರ ಬರೆದಿಟ್ಟು ಗುತ್ತಿಗೆದಾರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೀದರ್: ಯುವ ಗುತ್ತಿಗೆದಾರ, ಭಾಲ್ಕಿ ತಾಲ್ಲೂಕಿನ ಕಟ್ಟಿತೂಗಾಂವ್ ಗ್ರಾಮದ ನಿವಾಸಿ ಸಿವಿಲ್ ಎಂಜಿನಿಯರ್ ಸಚಿನ್ ಮಾನಪ್ಪ ಪಾಂಚಾಳ್ (26) ನಗರದ ಬೀದರ್–ಹೈದರಾಬಾದ್ ರೈಲು ಮಾರ್ಗದ ಹಳಿಯಲ್ಲಿ ಗುರುವಾರ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಆಪ್ತ, ಕಲಬುರಗಿ ಕಾಂಗ್ರೆಸ್ ಮುಖಂಡ ರಾಜು ಕಪನೂರ ಸೇರಿ ಎಂಟು ಮಂದಿ ಹಣಕ್ಕೆ ಬೇಡಿಕೆ ಇಟ್ಟು ಕೊಲೆ ಬೆದರಿಕೆ ಹಾಕಿದ್ದರಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಅವರು ಡೆತ್‌ನೋಟ್ ಬರೆದಿಟ್ಟಿದ್ದಾರೆ.

ಮೃತ ಗುತ್ತಿಗೆದಾರ. ರೈಲು ಹಳಿ ಮೇಲೆ ಮಲಗಿ ಜೀವ ಬಿಟ್ಟಿರುವುದರಿಂದ ಅವರ ರುಂಡ ಬೇರ್ಪಟ್ಟಿತ್ತು. ದೇಹದ ಭಾಗಗಳು ಛಿದ್ರಗೊಂಡಿದ್ದವು.

ವಿಷಯ ತಿಳಿದು ಸ್ಥಳಕ್ಕೆ ಬಂದ ಕುಟುಂಬದ ಸದಸ್ಯರ ಆಕ್ರಂದನ ಮುಗಿಲು ಮುಟ್ಟಿತ್ತು. ಘಟನೆಗೆ ಕಾರಣರಾದವರನ್ನು ಸ್ಥಳಕ್ಕೆ ಕರೆಸುವಂತೆ ಆಗ್ರಹಿಸಿ ಪಟ್ಟು ಹಿಡಿದರು. ಮೃತದೇಹವನ್ನು ಸಾಗಿಸಲು ವಿರೋಧ ವ್ಯಕ್ತಪಡಿಸಿದರು. ಪೊಲೀಸರು ಅವರನ್ನು ತಡೆದು, ಬ್ರಿಮ್ಸ್‌ಗೆ ಮೃತದೇಹ ಸಾಗಿಸಿದರು. ಬೀದರ್ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಚಿನ್ ಅವರ ಸಹೋದರಿ ಸವಿತಾ ಅವರು ನೀಡಿರುವ ದೂರು ಆಧರಿಸಿ ರಾಜು ಕಪನೂರ ಸೇರಿದಂತೆ ಒಂಬತ್ತು ಜನರ ವಿರುದ್ಧ ಪ್ರಕರಣ ದಾಖಲಾಗಿದೆ. ಕಿರುಕುಳ ಮತ್ತು ಆತ್ಮಹತ್ಯೆಯಿಂದ ಸಹೋದರ ಮೃತಪಟ್ಟಿದ್ದಾನೆ ಎಂದು ಆರೋಪಿಸಿದ್ದಾರೆ.



ಸಚಿನ್



ರಾಜು

ಡೆತ್‌ನೋಟ್‌ನಲ್ಲಿ ಏನಿದೆ?: 'ಗುತ್ತಿಗೆ ಪಡೆಯುವ ವಿಚಾರಕ್ಕೆ ಸಂಬಂಧಿಸಿದಂತೆ ರಾಜು ಕಪನೂರ ಮತ್ತು ಅವರ ಗ್ಯಾಂಗ್‌ನವರು ಹಣಕ್ಕೆ ಬೇಡಿಕೆ ಇಟ್ಟು ಜೀವ ಬೆದರಿಕೆ ಹಾಕಿದ್ದರು' ಎಂದು ಸಚಿನ್ ಪಾಂಚಾಳ್ ಅವರ ಕೈಬರಹದ ಡೆತ್‌ನೋಟ್‌ನಲ್ಲಿ ಆರೋಪಿಸಲಾಗಿದೆ. ಸಹೋದರಿ ಕೊಟ್ಟಿರುವ ದೂರಿನಲ್ಲೂ ಇದೇ ವಿಷಯ ಪ್ರಸ್ತಾಪಿಸಿದ್ದಾರೆ.

ಡೆತ್‌ನೋಟ್‌ನಲ್ಲಿ ಸಚಿನ್ ಅವರು ಎಂಟು ಜನರ ಹೆಸರುಗಳನ್ನು ಉಲ್ಲೇಖಿಸಿದರೆ, ಅವರ ಸಹೋದರಿ ಸವಿತಾ ಅವರು ಒಂಬತ್ತು ಜನರ ವಿರುದ್ಧ ದೂರು ಕೊಟ್ಟಿದ್ದಾರೆ.

'ಮಾಜಿ ಕಾರ್ಪೊರೇಟರ್, ಕಲಬುರಗಿ ಕಾಂಗ್ರೆಸ್ ಮುಖಂಡ ರಾಜು ಕಪನೂರ, ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ನಂದಕುಮಾರ ನಾಗಭುಜಂಗೆ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಗೋರಖನಾಥ ಸಜ್ಜನ್, ಪ್ರತಾಪ್ ಧೀರ ಪಾಟೀಲ (ಪಪ್ಪು ಪಾಟೀಲ), ಸೊಲ್ಲಾಪುರದ ಕಾರ್ಪೊರೇಟರ್ ಮನೋಜ್ ಸೆಜವಾಲ್, ಬೆಂಗಳೂರಿನ ಯುನಿಟಿ ಇನ್ಫ್ರಾ ಬಿಲ್ಡ್ ವ್ಯವಸ್ಥಾಪಕ ನಿರ್ದೇಶಕ ವಿಕಾಸ್ ಎಚ್.ಎಂ., ಪ್ರಾಜೆಕ್ಟ್ ಮ್ಯಾನೇಜರ್ ವಿನಯ್ ಟಿ.ಪಿ., ಕಲಬುರಗಿಯ ಪ್ರಥಮ ದರ್ಜೆ ಗುತ್ತಿಗೆದಾರ ರಾಮನಗೌಡ ಪಾಟೀಲ ನನ್ನ ಆತ್ಮಹತ್ಯೆಗೆ ಕಾರಣ' ಎಂದು ಡೆತ್‌ನೋಟ್‌ನಲ್ಲಿ ಆರೋಪಿಸಿದ್ದಾರೆ. ಸಹೋದರಿ ಕೊಟ್ಟಿರುವ ದೂರಿನಲ್ಲಿ ಡೆತ್‌ನೋಟ್‌ನಲ್ಲಿರುವ ಈ ಎಂಟು ಜನರೊಂದಿಗೆ ಸತೀಶ ರತ್ನಾಕರ ಅವರ ಹೆಸರನ್ನೂ ಉಲ್ಲೇಖಿಸಿದ್ದಾರೆ.

'ದುಬಲಗುಂಡಿಯ ಸತೀಶ್ ರತ್ನಾಕರ್ ಎಂಬುವರಿಂದ ರಾಜು ಕಪನೂರ ಅವರ ಪರಿಚಯವಾಯಿತು. ವಿಕಾಸ್ ಎಚ್.ಎಂ. ಅವರು ಆರ್‌ಡಬ್ಲ್ಯುಎಸ್‌ಎಸ್‌ಡಿಯಲ್ಲಿ ಟೆಂಡರ್ ಹಾಕಿರುತ್ತಾರೆ. ಸುಮಾರು ₹12 ಕೋಟಿ ಟೆಂಡರ್ ಅದಾಗಿತ್ತು. ರಾಜು ಕಪನೂರ ಮಾಡಿಸಿಕೊಡುವುದಾಗಿ ಹೇಳಿರುತ್ತಾರೆ. ಇದಕ್ಕಾಗಿ ಶೇ 5ರಷ್ಟು ಹಣಕ್ಕೆ ಬೇಡಿಕೆ ಇಟ್ಟಿದ್ದರು. ಪ್ರಿಯಾಂಕ್ ಖರ್ಗೆ ಅವರು ನಾನು ಹೇಳಿದ ಮಾತು ದಾಟುವುದಿಲ್ಲ ಎಂದು ಹೇಳಿಕೊಂಡಿರುತ್ತಾರೆ. ಸುಮಾರು ಐದಾರು ಸಲ ಬೆಂಗಳೂರಿಗೆ ಹೋಗಿ ಮಂತ್ರಿಯ-ವರನ್ನೂ ಭೇಟಿಯಾಗಿದ್ದೇವೆ' ಎಂದು ಯುನಿಟಿ ಇನ್ಫ್ರಾ ಬಿಲ್ಡ್‌ನಲ್ಲಿ ಪ್ರಾಜೆಕ್ಟ್ ಎಂಜಿನಿಯರ್ ಆಗಿದ್ದ ಸಚಿನ್ ಪಾಂಚಾಳ್ ಡೆತ್‌ನೋಟ್‌ನಲ್ಲಿ ವಿವರಿಸಿದ್ದಾರೆ.

'ನಾನು ಜೂ ಅಥಾರಿಟಿ ಆಫ್ ಕರ್ನಾಟಕ, ಕಲಬುರಗಿಯಲ್ಲಿ ಸ್ವಂತ ದುಡ್ಡಿನಲ್ಲಿ ಟೆಂಡರ್ ಹಾಕಿದ್ದೆ. ಪಾರ್ಟನರ್ ಆಗಿ ಕೆಲಸ ಮಾಡಿದರೆ ಅದನ್ನು ಮಾಡಿಸಿಕೊಡುವುದಾಗಿ ಹೇಳಿದ್ದಾರೆ. ಆದರೆ, ಕೆಲಸ ಮಾಡಿಕೊಟ್ಟಿಲ್ಲ. ಪ್ರತಾಪ್ ಧೀರ್ ಪಾಟೀಲ ಮತ್ತು ಮನೋಜ್ ಸೆಜವಾಲ್ ಮೂಲಕ ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ. ಆದಕಾರಣ ನಾನು ತಲೆಮರೆಸಿಕೊಂಡೆ. ನನ್ನ ಕುಟುಂಬದವರಿಗೆ ಜೀವ ಬೆದರಿಕೆ ಹಾಕಿ, ಅಟ್ರಾಸಿಟಿ ಕೇಸ್ ಹಾಕುವ ಬೆದರಿಕೆಯೊಡ್ಡಿದ್ದಾರೆ. ಇದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊ-ಳ್ಳುತ್ತಿದ್ದೇನೆ. ಇವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ.

'ಅಂದೋಲಾ ಸ್ವಾಮೀಜಿ, ಕಲಬುರಗಿ ಬಿಜೆಪಿ ಮುಖಂಡ ಚಂದು ಪಾಟೀಲ, ಮಣಿಕಂಠ ರಾಠೋಡ್ ಹಾಗೂ ಶಾಸಕ ಬಸವರಾಜ ಮತ್ತಿಮಡು ಅವರ ಕೊಲೆಗೆ ಸಂಚು ರೂಪಿಸಿದ್ದಾರೆ' ಎಂದೂ ಸಚಿನ್ ಆರೋಪ ಮಾಡಿದ್ದಾರೆ.

'ಕ್ರಮ ನಿಶ್ಚಿತ'

ಬೆಳಗಾವಿ: 'ಬೀದರ್‌ನಲ್ಲಿ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ನಾನು ಕೂಡ ತನಿಖೆ ಆಗಲಿಯೆಂದು ಬಯಸುತ್ತೇನೆ. ಏನನ್ನೂ ಮುಚ್ಚಿಡುವ ಪ್ರಶ್ನೆಯೇ ಇಲ್ಲ. ತಪ್ಪಿತಸ್ಥರು ಯಾರೇ ಆಗಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳುವುದು ನಿಶ್ಚಿತ. ನನ್ನ ಆಪ್ತರು ತಪ್ಪು ಮಾಡಿದ್ದರೂ ಅಷ್ಟೇ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ರಾಜು ಕಪನೂರ ಏನಂತಾರೆ?

'ಸಚಿನ್ ಪಾಂಚಾಳ್ ಒಂದು ವರ್ಷದಿಂದ ನನಗೆ ಪರಿಚಯ. ಬಿಇ ಸಿವಿಲ್ ಎಂಜಿನಿಯರ್ ಮುಗಿದಿದೆ. ನಾನು ಪ್ರಥಮ ದರ್ಜೆ ಗುತ್ತಿಗೆದಾರ. ನನ್ನ ಬಳಿ ಲೈಸನ್ಸ್ ಇದೆ. ನಾನು ಓಡಾಡಿ ಕೆಲಸ ಮಾಡುತ್ತೇನೆ' ಎಂದು ಹೇಳಿದರು. ಮೊದಲು ಏರ್‌ಪೋರ್ಟ್ ಟೆಂಡರ್ ಹಾಕಿದ್ದೆವು. ಫೇಕ್ ಮಾಡಿದರು. ಆನಂತರ ಕೆಐಎಡಿಬಿ ಟೆಂಡರ್‌ಗೆ ಸಂಬಂಧಿಸಿದಂತೆ ಅವರ ಖಾತೆಗೆ ಹಣ ಹಾಕಿದೆ. ಮೊದಲು ₹65 ಲಕ್ಷ ಖಾತೆಗೆ ಹಾಕಿದೆ. ಬಳಿಕ ₹15 ಲಕ್ಷ ನಗದು ಕೊಟ್ಟಿದ್ದೆ. ಟೆಂಡರ್ ಇಂದು, ನಾಳೆ ಆಗುತ್ತದೆ ಎಂದು ಆರೇಳು ತಿಂಗಳು ಸತಾಯಿಸಿದ. ಬೆಂಗಳೂರಿಗೆ ಹೋಗಿ ವಿಚಾರಿಸಿದಾಗ ಟೆಂಡರ್ ಫೇಕ್ ಇರುವುದು ಗೊತ್ತಾಗಿದೆ. ಈ ಸಂಬಂಧ ಸಚಿನ್ ಅವರನ್ನು ಪ್ರಶ್ನಿಸಿದಾಗ, ನಮ್ಮ ತಂದೆಯಿಂದ ಹಣ ಕೊಡಿಸುತ್ತೇನೆ ಎಂದಿದ್ದಾನೆ' ಎಂದು ರಾಜು ಕಪನೂರ ಅವರು ವಿಡಿಯೊ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಒಂದೂವರೆ ತಿಂಗಳ ನಂತರ ನಾನು ಸಚಿನ್ ಅವರ ಮನೆಗೆ ಹೋಗಿ ವಿಷಯ ತಿಳಿಸಿದೆ. ಕಾಲಾವಕಾಶ ಕೊಡಬೇಕೆಂದು ಅವರ ಸಹೋದರಿಯರು ಕೇಳಿದರು. ಫೇಸ್‌ಬುಕ್‌ನಲ್ಲಿ ಇಂಥವರಿಂದ ಹಿಂಸೆಯಾಗಿದೆ ಎಂದು ಸಚಿನ್ ಹೇಳಿಕೊಂಡಿದ್ದಾನೆ. ಇದನ್ನು ಗಮನಿಸಿ ನಾನು ಗ್ರಾಮೀಣ ಠಾಣೆಗೆ ಹೋಗಿ ದೂರು ಕೊಟ್ಟಿದ್ದೇನೆ. ನಾನು ಟಾರ್ಚರ್ ಮಾಡಿಲ್ಲ, ಬಡ್ಡಿ ವ್ಯವಹಾರ ಮಾಡಿಲ್ಲ. ಲೈಸನ್ಸ್ ಇದೆ ಅನ್ನೋ ಕಾರಣಕ್ಕಾಗಿ ವ್ಯವಹಾರಕ್ಕೆ ಮುಂದಾಗಿದ್ದೆ. ಇದಕ್ಕೆ ಯಾವುದೇ ಬಣ್ಣ ಹಚ್ಚಬೇಕಿಲ್ಲ. ಸತ್ಯಾಸತ್ಯತೆ ಹೊರಬರಲಿ' ಎಂದಿದ್ದಾರೆ.

ನನ್ನ ಸಹೋದರ ಸಚಿನ್ ತನಗಾದ ಅನ್ಯಾಯದ ಬಗ್ಗೆ ಡೆತ್‌ನೋಟ್‌ನಲ್ಲಿ ಎಳೆಎಳೆಯಾಗಿ ಬರೆದಿದ್ದಾನೆ. ಅವನ ಸಾವಿಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು

ಸವಿತಾ, ಸಚಿನ್ ಸಹೋದರಿ

'ಚಾರಿತ್ರಿಕ ಸತ್ಯ ಹುಡುಕುವ ಹೋರಾಟ'

ಒಂದನೇ ಪುಟದಿಂದ...

ಈ ವಿವಾದವು ವ್ಯಕ್ತಿಗಳು ಮತ್ತು ಸಮುದಾಯಗಳಿಗೆ ನೀಡಲಾಗುವ ವಿವಿಧ ಸಾಂವಿಧಾನಿಕ ಹಕ್ಕುಗಳ ಬಗ್ಗೆ ಹೊಸ ಚರ್ಚೆ ಹುಟ್ಟುಹಾಕಿದೆ ಎಂದು ಹೇಳಿದೆ.

'ಈ ವಿವಾದವನ್ನು ಹಿಂದೂ ಮತ್ತು ಮುಸ್ಲಿಮರಿಗೆ ಸಂಬಂಧಿಸಿದ ವಿಚಾರ ಎಂಬುದಕ್ಕೆ ಸೀಮಿತಗೊಳಿಸಬಾರದು. ನೈಜ ಇತಿಹಾಸದ ಆಧಾರದ ಮೇಲೆ 'ನಾಗರಿಕತೆಯ ನ್ಯಾಯ'ದ ಅನ್ವೇಷಣೆಯ ಕುರಿತು ವಿವೇಕಯುತ ಚರ್ಚೆಯ ಅಗತ್ಯವಿದೆ' ಎಂದಿದೆ.

'ಕೆಲವು ವ್ಯಕ್ತಿಗಳು, ಅಯೋಧ್ಯೆಯ ರಾಮ ಮಂದಿರ ನಿರ್ಮಾಣದ ನಂತರ, ಅಂತಹ ವಿವಾದಗಳನ್ನು ಕೆರಳಿಸುವ ಮೂಲಕ ಹಿಂದೂಗಳ ನಾಯಕರಾಗಬಹುದೆಂದು ಭಾವಿಸಿದ್ದಾರೆ' ಎಂದು ಭಾಗವತ್ ಈಚೆಗೆ ಹೇಳಿದ್ದರು.

ಎಲ್ಲರನ್ನೂ ಒಳಗೊಳ್ಳುವ ಸಮಾಜದ ಅಗತ್ಯವಿದ್ದು, ದೇಶವು ಸಾಮರಸ್ಯದಿಂದ ಬದುಕಬಹುದು ಎಂಬುದನ್ನು ಜಗತ್ತಿಗೆ ತೋರಿಸಬೇಕಾಗಿದೆ ಎಂದಿದ್ದರು.

ರಾಜ್ಯದ ಮಾಹಿತಿಗೆ ಜೆಪಿಸಿ ಅತೃಪ್ತಿ

ಪ್ರಜಾವಾಣಿ ವಾರ್ತೆ

ವಕ್ಫ್ ಆಸ್ತಿ ವಿವಾದ

ನವದೆಹಲಿ: ಕರ್ನಾಟಕದಲ್ಲಿ ವಕ್ಫ್ ಭೂಮಿ ವಿವಾದದ ನಡುವೆಯೇ, ವಕ್ಫ್ (ತಿದ್ದುಪಡಿ) ಮಸೂದೆ ಪರಿಶೀಲಿಸುತ್ತಿರುವ ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) ಕರ್ನಾಟಕ, ಮಧ್ಯಪ್ರದೇಶ ಹಾಗೂ ರಾಜಸ್ಥಾನದ ಅಧಿಕಾರಿಗಳು ಮಾಹಿತಿ ನೀಡಿದರು. ಈ ರಾಜ್ಯಗಳು ನೀಡಿದ ಮಾಹಿತಿಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಮಿತಿಯು 15 ದಿನಗಳಲ್ಲಿ ವಿವರವಾದ ಉತ್ತರ ನೀಡುವಂತೆ ತಾಕೀತು ಮಾಡಿತು.

ವಕ್ಫ್ ಮಂಡಳಿಗಳು ಹಕ್ಕು ಸಾಧಿಸಿರುವ ಆಸ್ತಿಗಳು ಮತ್ತು ಸರ್ಕಾರ ಅಥವಾ ಸರ್ಕಾರಿ ಸಂಸ್ಥೆಗಳ ಅನಧಿಕೃತ ಸ್ವಾಧೀನದಲ್ಲಿರುವ ವಕ್ಫ್ ಆಸ್ತಿಗಳ ವಿವರ ಸಲ್ಲಿಸುವಂತೆ ವಿವಿಧ ರಾಜ್ಯಗಳಿಗೆ ಜೆಪಿಸಿ ಇತ್ತೀಚೆಗೆ ಸೂಚಿಸಿತ್ತು. ಜೆಪಿಸಿ ಅಧ್ಯಕ್ಷ ಜಗದಂಬಿಕಾ ಪಾಲ್ ನೇತೃತ್ವದ ಸಮಿತಿ ರಾಜ್ಯಗಳ ಅಭಿಪ್ರಾಯಗಳನ್ನು-ಆಲಿಸಿತು. ರಾಜ್ಯ ವಕ್ಫ್ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲಾನಿ ನೇತೃತ್ವದ ಅಧಿಕಾರಿಗಳ ತಂಡವು ವಿವರಗಳನ್ನು ಒದಗಿಸಿತು. ಸರ್ಕಾರಿ ಆಸ್ತಿಗಳನ್ನು ಗುರುತಿಸಲು ಮತ್ತು ಅತಿಕ್ರಮಣದಾರರಿಂದ ಅವುಗಳ ರಕ್ಷಣೆಗೆ ಕೈಗೊಂಡ ಕ್ರಮಗಳನ್ನು ವಿವರಿಸಿದರು. ಮೋಸದ ವಹಿವಾಟುಗಳನ್ನು ತಡೆಗಟ್ಟಲು ರಾಜ್ಯ-ಗಳಲ್ಲಿನ ಎಲ್ಲಾ ಆಸ್ತಿಗಳ ಡಿಜಿಟಲೀಕರಣ ಮತ್ತು ಆಧಾರ್ ಸೀಡಿಂಗ್ ಬಗ್ಗೆ ವಿವರ ನೀಡಿದರು. ರಾಜ್ಯದ ವಕ್ಫ್ ವಿವಾದದ ಬಗ್ಗೆಯೂ ಸಮಿತಿ ಮಾಹಿತಿ ಪಡೆಯಿತು.

'ಮೂರು ರಾಜ್ಯಗಳ ನಿಯೋಗಗಳು ನೀಡಿದ ಪ್ರತಿಕ್ರಿಯೆಗಳು ತೃಪ್ತಿಕರವಾಗಿಲ್ಲ. ಪ್ರತಿಕ್ರಿಯೆಗಳನ್ನು ಒದಗಿಸಲು ನಾವು 15 ದಿನ ಕಾಲಾವಕಾಶ ನೀಡಿದ್ದೇವೆ ಮತ್ತು ಅಗತ್ಯವಿದ್ದರೆ ಮತ್ತೆ ಕರೆಯುತ್ತೇವೆ' ಎಂದು ಜಗದಂಬಿಕಾ ಪಾಲ್ ತಿಳಿಸಿದರು.

ಪಕ್ಷ ಬಲವರ್ಧನೆ ಪಣ

ಒಂದನೇ ಪುಟದಿಂದ...

'2025 ಕಾಂಗ್ರೆಸ್ ಪಕ್ಷದ ಪುನಶ್ಚೇತನದ ವರ್ಷ. ರಾಜಕೀಯ ಆಂದೋಲನವಾಗಿ ಗ್ರಾಮ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಪಾದಯಾತ್ರೆ, ಸಮಾವೇಶ, ವಿಚಾರ ಸಂಕಿರಣಗಳನ್ನು ಆಯೋಜಿಸುತ್ತೇವೆ. ಮುಂಬರುವ ಏಪ್ರಿಲ್ ತಿಂಗಳಲ್ಲಿ ಗುಜರಾತ್‌ನಲ್ಲಿ ಎಐಸಿಸಿ ಪ್ರತಿನಿಧಿಗಳ ಸಮಾವೇಶ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ' ಎಂದರು.

ಜೈರಾಮ್ ರಮೇಶ್ ಮಾತನಾಡಿ, 'ಮುಂದಿನ ಫೆಬ್ರುವರಿಯಿಂದ ನವೆಂಬರ್‌ವರೆಗೆ ಯಾವುದೇ ಚುನಾವಣೆ ಇಲ್ಲ. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆ ಮಾಡಲಿದ್ದೇವೆ. ಬ್ಲಾಕ್, ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಪಕ್ಷವನ್ನು ಮರು ಸಂಘಟಿಸುವ ಕೆಲಸ ನಡೆಯಲಿದೆ. ಒಂದೇ ವರ್ಷದಲ್ಲಿ ಈ ಕೆಲಸ ಮುಗಿಸುತ್ತೇವೆ' ಎಂದರು.

'ಇದೇ ತಿಂಗಳ 27ರಿಂದ ಆರಂಭ-ವಾಗಲಿರುವ ಅಭಿಯಾನ 13 ತಿಂಗಳು ನಡೆಯಲಿದೆ. ಜನಜಾಗೃತಿಯಾಗಿ ನಡೆಸಲಿರುವ ಪಾದಯಾತ್ರೆಯು ಅಂಬೇಡ್ಕರ್ ಜನ್ಮಸ್ಥಳದಲ್ಲಿ ಸಮಾ-ರೋಪಗೊಳ್ಳಲಿದೆ. ಭಾರತ್ ಜೋಡೊ ಯಾತ್ರೆಯಿಂದ ಕಾಂಗ್ರೆಸ್‌ಗೆ ಸಂಜೀವಿನಿ ಸಿಕ್ಕಿದೆ. ಅದೇ ಮಾದರಿಯಲ್ಲಿ ಈ ಪಾದಯಾತ್ರೆ ನಡೆಯಲಿದೆ' ಎಂದರು.

'ಅಂಬೇಡ್ಕರ್ ಬಗ್ಗೆ ಆಡಿದ ಮಾತಿಗೆ ಅಮಿತ್ ಶಾ ಕ್ಷಮೆ ಕೇಳಲೇಬೇಕು. ಅವರು ಕ್ಷಮೆ ಕೇಳುವವರೆಗೆ ನಮ್ಮ ಹೋರಾಟ ನಡೆಯಲಿದೆ' ಎಂದು ಅವರು ಹೇಳಿದರು.

ರಾಜ್ಯ ಸರ್ಕಾರದ ವಿರುದ್ಧದ ಆರೋಪಗಳ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ವೇಣುಗೋಪಾಲ್, 'ಅವೆಲ್ಲ ಬಿಜೆಪಿಯವರ ಆರೋಪಗಳಷ್ಟೇ. ಕಾನೂನು ತನ್ನದೇ ನಿರ್ಣಯ ತೆಗೆದುಕೊಳ್ಳುತ್ತದೆ. ಈ ಪ್ರಶ್ನೆಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಸಚಿವರು ಈಗಾಗಲೇ ಉತ್ತರ ನೀಡಿದ್ದಾರೆ' ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಪುದುಚೇರಿಯ ಎನ್. ರಂಗಸ್ವಾಮಿ, ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಸೇರಿದಂತೆ ಕಾರ್ಯಕಾರಿಣಿ ಸಮಿತಿಯ ಸದಸ್ಯರು, ಪದಾಧಿಕಾರಿಗಳು, ಮಾಜಿ ಮುಖ್ಯಮಂತ್ರಿಗಳು ಸಭೆಯಲ್ಲಿ ಭಾಗವಹಿಸಿದರು.

ಸಂವಿಧಾನದ ವಿರುದ್ಧ ನಿರಂತರ ಅಪಪ್ರಚಾರ: ರಾಹುಲ್



'ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸ್ಪರ್ಧಿಸಿದ್ದ ನೂರಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ತಲಾ 25 ಸಾವಿರ ಮುನ್ನಡೆ ಬಂದಿದೆ. ಸರಾಸರಿ ಕ್ಷೇತ್ರವಾರು ಏರಿಳಿತ ಇಲ್ಲದೆ ಬಿಜೆಪಿಗೆ ಹೆಚ್ಚು ಮತಗಳು ಬಂದಿವೆ. ಕೆಲವು ಕ್ಷೇತ್ರಗಳಲ್ಲಾದರೂ ವ್ಯತ್ಯಾಸ ಆಗಬೇಕಿತ್ತು. ಆದರೂ ಇದು ಹೇಗೆ ಸಾಧ್ಯ' ಎಂದು ರಾಹುಲ್ ಗಾಂಧಿ ಸಭೆಯಲ್ಲಿ ಪ್ರಶ್ನಿಸಿದರು.

ಇತ್ತೀಚೆಗೆ ನಡೆದ ಪಂಚ ರಾಜ್ಯಗಳ ಚುನಾವಣೆ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದ ರಾಹುಲ್, ಈ ಬಗ್ಗೆ ಅನುಮಾನ ವ್ಯಕ್ತಪಡಿಸಿದರು ಎಂದು ಮೂಲಗಳು ಹೇಳಿವೆ. ಅಲ್ಲದೆ, ಸಂವಿಧಾನದ ವಿರುದ್ಧ ನಿರಂತರವಾಗಿ ಅಪಪ್ರಚಾರ ನಡೆಯುತ್ತಿದೆ. ಇದರ ವಿರುದ್ಧ ಹೋರಾಟ ನಡೆಸಬೇಕಿದೆ. ಎಲ್ಲ ಪಕ್ಷಗಳನ್ನು ಜೊತೆ ಸೇರಿಸಿ ಹೋರಾಟ ನಡೆಸಬೇಕು ಎಂದು ಪಕ್ಷದ ನಾಯಕರಿಗೆ ರಾಹುಲ್ ಮನವಿ ಮಾಡಿದರು ಎಂದೂ ಕಾಂಗ್ರೆಸ್ ಮೂಲಗಳು ತಿಳಿಸಿವೆ.

'2025 ಸಂಘಟನೆ ಬಲಪಡಿಸುವ ವರ್ಷ'

'ನಮಗೆ 2025 ಪಕ್ಷ ಸಂಘಟನೆ ಬಲಪಡಿಸುವ ವರ್ಷ. ಪಕ್ಷದಲ್ಲಿ ಖಾಲಿ ಇರುವ ಪದಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಉದಯಪುರ ಘೋಷಣೆಯನ್ನು ಸಂಪೂರ್ಣವಾಗಿ ಜಾರಿಗೊಳಿಸಬೇಕಿದೆ' ಎಂದು ಸಭೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಪ್ರತಿಪಾದಿಸಿದರು.

'ಬಿಜೆಪಿಯವರು ಸಾಂವಿಧಾನಿಕ ಸಂಸ್ಥೆಗಳ ಮೇಲೆ ಹಿಡಿತ ಸಾಧಿಸುತ್ತಿದ್ದಾರೆ. ಚುನಾವಣಾ ಆಯೋಗವು ನಿಷ್ಪಕ್ಷಪಾತ-ವಾಗಿದೆಯೇ ಎಂಬ ಬಗ್ಗೆ ಪ್ರಶ್ನೆಗಳು ಎದ್ದಿವೆ. ಚುನಾವಣಾ ಪ್ರಕ್ರಿಯೆಯಲ್ಲಿ ಜನರ ನಂಬಿಕೆ ಕ್ರಮೇಣ ಕಡಿಮೆಯಾಗುತ್ತಿದೆ. ಇದು ನಿಜಕ್ಕೂ ಕಳವಳಕಾರಿ. ನ್ಯಾಯಾಲಯದ ಆದೇಶದ ಮಾಹಿತಿಯನ್ನು ಹಂಚಿಕೊಳ್ಳಲು ಕೆಲವು ದಿನಗಳ ಹಿಂದೆ ಚುನಾವಣಾ ನಿಯಮಗಳನ್ನೇ ಬದಲಾ-ಯಿಸಲಾಗಿದೆ. ಮತದಾರರ ಹೆಸರು ಪಟ್ಟಿಯಿಂದ ಅಳಿಸಿ ಹೋಗುವುದು, ಮತದಾನ ಮಾಡದಂತೆ ತಡೆಯುವುದು ನಡೆದಿದೆ. ಪಟ್ಟಿಯಲ್ಲಿ ಮತದಾರರ ಸಂಖ್ಯೆ ದಿಢೀರ್ ಹೆಚ್ಚಳವೂ ಆಗಿದೆ. ಮತದಾನದ ಕೊನೆಯ ಕ್ಷಣದಲ್ಲಿ ಅನಿರೀಕ್ಷಿತವಾಗಿ ಮತ ಪ್ರಮಾಣ ಹೆಚ್ಚಾಗಿದೆ. ಇಂತಹ ಹಲವು ಪ್ರಶ್ನೆಗಳು ಎದ್ದಿವೆ ಎಂದು ಖರ್ಗೆ ಪ್ರಸ್ತಾಪಿಸಿದರು' ಎಂದು ಗೊತ್ತಾಗಿದೆ.

ಅಂಬೇಡ್ಕರ್ ಕುರಿತು ಅಮಿತ್ ಶಾ ಹೇಳಿಕೆಯನ್ನು ಪ್ರಸ್ತಾಪಿಸಿದ ಖರ್ಗೆ, 'ಸಂವಿಧಾನದ ನಿರ್ಮಾತೃಗೆ ಮಾಡಿದ ಅವಮಾನ. ಆದರೆ, ಪ್ರಧಾನಿ ಮತ್ತು ಕೇಂದ್ರ ಸರ್ಕಾರ ತಪ್ಪು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಶಾ ಅವರ ಕ್ಷಮೆ ಯಾಚನೆ, ರಾಜೀನಾಮೆ ಕೇಳುವ ಬದಲು ಪ್ರಧಾನಿ ಬೆಂಬಲಿಸಿದ್ದಾರೆ. ನಮ್ಮ ನಾಯಕ ರಾಹುಲ್ ಗಾಂಧಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ' ಎಂದು ತೀವ್ರ ಆಕ್ರೋಶ ಹೊರಹಾಕಿದರು ಎಂದೂ ಮೂಲಗಳು ಹೇಳಿವೆ.



ಬಾಕ್ಸಿಂಗ್ ಡೇ ಟೆಸ್ಟ್: ಉಸ್ಮಾನ್, ಲಾಬುಷೇನ್, ಸ್ಮಿತ್ ಅರ್ಧಶತಕ; ಆಸ್ಟ್ರೇಲಿಯಾ ಉತ್ತಮ ಮೊತ್ತ

ಬೂಮ್ರಾ ಸವಾಲು: ಸ್ಯಾಮ್ ಪ್ರತ್ಯುತ್ತರ

• ಮಧು ಜವಳಿ

ಮೆಲ್ಬರ್ನ್: ಆಸ್ಟ್ರೇಲಿಯಾದ ಬ್ಯಾಟರ್ ಟ್ರಾವಿಸ್ ಹೆಡ್ ಅವರು ಪ್ರಸ್ತುತ ಬಾರ್ಡರ್ –ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಭಾರತದ ಪಾಲಿಗೆ ದೊಡ್ಡ ಸಮಸ್ಯೆಯಾಗಿದ್ದಾರೆ. ಇನ್ನೊಂದೆಡೆ 'ಸಮಸ್ಯೆ ನಿವಾರಕ' ಜಸ್‌ಪ್ರೀತ್ ಬೂಮ್ರಾ ಅವರಿಗೂ ಹೆಡ್ ಅವರನ್ನು ಕಟ್ಟಿಹಾಕುವ ಪರಿಹಾರ ಲಭಿಸಿರಲಿಲ್ಲ.

ಗುರುವಾರ ಇಲ್ಲಿ ಹೆಡ್ ಅವರನ್ನು ಖಾತೆ ತೆರೆಯುವ ಮುನ್ನವೇ ಡಗ್‌ಔಟ್‌ಗೆ ಕಳಿಸುವಲ್ಲಿ ವಿಶ್ವದ ಅಗ್ರಮಾನ್ಯ ಬೌಲರ್ ಬೂಮ್ರಾ ಸಫಲರಾದರು. ಆದರೆ ಅದಕ್ಕಿಂತಲೂ ಮೊದಲು ಅಪರೂಪವೆಂಬಂತೆ ಬೂಮ್ರಾ ಅವರು ದಿನದಾಟದ ಆರಂಭಿಕ ಅವಧಿಯಲ್ಲಿ ಹೊಸ ಹುಡುಗ ಸ್ಯಾಮ್ ಕಾನ್‌ಸ್ಟಾಸ್ ಅವರಿಂದ ದಂಡನೆಗೊಳಗಾಗಿದ್ದರು.

ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ (ಎಂ.ಸಿ.ಜಿ) ಆರಂಭವಾದ ಬಾಕ್ಸಿಂಗ್ ಡೇ ಟೆಸ್ಟ್‌ನಲ್ಲಿ ಅಪಾರ ಸಂಖ್ಯೆಯ ಪ್ರೇಕ್ಷಕರ ಮುಂದೆ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ 19 ವರ್ಷದ ಸ್ಯಾಮ್ ದಿಟ್ಟ ಆಟವಾಡಿದರು. ಪ್ರಸ್ತುತ ಕ್ರಿಕೆಟ್‌ನಲ್ಲಿ ವಿಶ್ವದ ಎಲ್ಲ ಅನುಭವಿ ಬ್ಯಾಟರ್‌ಗಳಿಗೂ ಸಿಂಹಸ್ವಪ್ನವಾಗಿರುವ ಬೂಮ್ರಾ ಅವರ ಎಸೆತಗಳನ್ನು ಎದುರಿಸಲು ಸ್ಯಾಮ್ ಭಾರತದ ಬೌಲರ್‌ಗಳ ಎಸೆತಗಳಿಗೆ ಫಟಾಫಟ್ ಪ್ರತಿಕ್ರಿಯೆ ಅವರಿಂದ ಬಂದವು. 65 ಎಸೆತಗಳಲ್ಲಿ 60 ರನ್ ಗಳಿಸಿದ ಅವರ ಬ್ಯಾಟಿಂಗ್‌ನಲ್ಲಿ 4 ಬೌಂಡರಿ, ಎರಡು ಸಿಕ್ಸರ್‌ಗಳಿದ್ದವು.

ಅದರಲ್ಲೂ ಅವರ ಉತ್ಸಾಹಭರಿತ ಆಟದಲ್ಲಿ ಬೂಮ್ರಾ ಎಸೆತಗಳನ್ನು ಸ್ಕೂಪ್, ರಿವರ್ಸ್ ಶಾಟ್‌ಗಳನ್ನು ಆಡಿದರು. ಹೊಸ ಪ್ರತಿಭೆ ಸ್ಯಾಮ್ ಮತ್ತು ಅನುಭವಿ ಬೂಮ್ರಾ ನಡುವಣ ಈ ಜಿದ್ದಾಜಿದ್ದಿ ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂಚಲನ ಸೃಷ್ಟಿಸಿತ್ತು. ಈ ಭರಾಟೆಯಲ್ಲಿ ಇನ್ನೊಂದು ಬದಿಯಲ್ಲಿದ್ದ ಉಸ್ಮಾನ್ ಖ್ವಾಜಾ ಕೂಡ ಲಯ ಕಂಡುಕೊಂಡರು. ಕಳೆದ ಮೂರು ಪಂದ್ಯಗಳಿಂದ ಒಟ್ಟು 63 ರನ್ ಗಳಿಸಿದ್ದ ಅವರು ಇಲ್ಲಿ ಅರ್ಧಶತಕ (57; 121ಎ, 4X7) ಹೊಡೆದರು. ಇಬ್ಬರೂ ಸೇರಿ ಮೊದಲ ವಿಕೆಟ್ ಜೊತೆಯಾಟದಲ್ಲಿ 89 ರನ್‌ಗಳ ಅಡಿಪಾಯ ಹಾಕಿದರು.

ರವೀಂದ್ರ ಜಡೇಜ ಎಸೆತದಲ್ಲಿ ಎಲ್‌ಬಿಡಬ್ಲ್ಯು ಆದ ಸ್ಯಾಮ್ ನಿರ್ಗಮಿಸಿದರು. ಕ್ರೀಸ್‌ಗೆ ಬಂದ ಮಾರ್ನಸ್ ಲಾಬುಷೇನ್ ಅಪಾರ ಎಚ್ಚರಿಕೆಯಿಂದ ಆಟಕ್ಕೆ ಕುದುರಿಕೊಂಡರು. ಅವರೂ ಕೂಡ ಲಯ ಕಂಡುಕೊಂಡರು. ಲಾಬುಷೇನ್ (72; 145ಎ) ಮತ್ತು ಉಸ್ಮಾನ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 65 ರನ್ ಸೇರಿಸಿದರು. ಕೆ.ಎಲ್. ರಾಹುಲ್ ಪಡೆದ ಕ್ಯಾಚ್‌ಗೆ ಉಸ್ಮಾನ್ ಇನಿಂಗ್ಸ್ ಮುಗಿಯಿತು. ಬೂಮ್ರಾ ತಮ್ಮ ವಿಕೆಟ್ ಖಾತೆ ಆರಂಭಿಸಿದರು.

ಮಾರ್ನಸ್ ಜೊತೆಗೂಡಿದ ಸ್ಟೀವ್ ಸ್ಮಿತ್ (ಬ್ಯಾಟಿಂಗ್ 68) ತಂಡದ ಇನಿಂಗ್ಸ್‌ಗೆ ಬಲ ತುಂಬಿದರು. ಆಸ್ಟ್ರೇಲಿಯಾ ಹಿಡಿತ ಬಿಗಿಗೊಳ್ಳುತ್ತಿರುವಂತೆ ಕಂಡಿತು. ಮೂರನೇ ವಿಕೆಟ್ ಜೊತೆಯಾಟದಲ್ಲಿ 83 ರನ್ ಸೇರಿಸಿದರು. ಸ್ಪಿನ್ನರ್ ವಾಷಿಂಗ್ಟನ್ ಸುಂದರ್, ಲಾಬುಷೇನ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು. ತಂಡದಮೊತ್ತವು 3ಕ್ಕೆ237 ಆಗಿತ್ತು.

ಈ ಹೊತ್ತಿನಲ್ಲಿ ಬೂಮ್ರಾ 'ಮ್ಯಾಜಿಕ್' ಮಾಡುವ ಮೂಲಕ ಮತ್ತೆ ಭಾರತ ತಂಡದಲ್ಲಿ ಉತ್ಸಾಹ ಮರಳುವಂತೆ ಮಾಡಿದರು. ಹೆಡ್ ವಿಕೆಟ್ ಉರುಳಿಸಿದರು. ಗ್ಯಾಲರಿಯಲ್ಲಿ ಸಂಭ್ರಮ ಗರಿಗೆದರಿತು. ಕೆಲವು ನಿಮಿಷಗಳ ನಂತರ ಮಿಚೆಲ್ ಮಾರ್ಷ್ (4) ಕೂಡ ಬೂಮ್ರಾಗೆ ವಿಕೆಟ್ ಒಪ್ಪಿಸಿದರು. ಆಸ್ಟ್ರೇಲಿಯಾದ ಇನಿಂಗ್ಸ್‌ಗೆ ತೆರೆ ಎಳೆಯುವ ಬೌಲರ್‌ಗಳ ಪ್ರಯತ್ನಕ್ಕೆ ಸ್ಮಿತ್ ಮತ್ತು ಅಲೆಕ್ಸ್ ಕ್ಯಾರಿ (31 ರನ್) ಅಡ್ಡಿಯಾದರು. ಕ್ಯಾರಿ ವಿಕೆಟ್ ಗಳಿಸುವಲ್ಲಿ ಆಕಾಶ್ ದೀಪ್ ಯಶಸ್ವಿಯಾದರು. ಆದರೆ ಸ್ಮಿತ್ ಜೊತೆಗೆ ನಾಯಕ ಪ್ಯಾಟ್ ಕಮಿನ್ಸ್ (ಬ್ಯಾಟಿಂಗ್ 8) ಪಿಚ್‌ನಲ್ಲಿ ಉಳಿದುಕೊಂಡಿದ್ದಾರೆ. ತಂಡವು 86 ಓವರ್‌ಗಳಲ್ಲಿ 6 ವಿಕೆಟ್‌ಗೆ 311 ರನ್ ಗಳಿಸಿದೆ.

ದಾಖಲೆ: ಎಂಸಿಜಿಯಲ್ಲಿ ಪಂದ್ಯದ ಮೊದಲ ದಿನದಂದು 87,242 ಪ್ರೇಕ್ಷಕರಿದ್ದರು. ಭಾರತ ಮತ್ತು ಆಸ್ಟ್ರೇಲಿಯಾ ಪಂದ್ಯಗಳಲ್ಲೇ ಮೊದಲ ದಿನ ಅತಿ ಹೆಚ್ಚು ಜನರು ಸೇರಿದ ದಾಖಲೆ ಇದಾಗಿದೆ.

ದೀರ್ಘ ಕಾಲದ ನಂತರ ಜಸ್‌ಪ್ರೀತ್ ಬೂಮ್ರಾಗೆ ಸಿಕ್ಸರ್



ಶಿಸ್ತುಬದ್ಧ ಲೈನ್ ಮತ್ತು ಲೆಂಗ್ತ್ ಬೌಲಿಂಗ್‌ಗೆ ಹೆಸರಾಗಿರುವ ವೇಗಿ ಜಸ್‌ಪ್ರೀತ್ ಬೂಮ್ರಾ ಅವರ ಬೌಲಿಂಗ್‌ನಲ್ಲಿ 2021ರಿಂದ ಇಲ್ಲಿಯವರೆಗೆ ಯಾವುದೇ ಬ್ಯಾಟರ್‌ಗೂ ಸಿಕ್ಸರ್ ಹೊಡೆಯಲು ಸಾಧ್ಯವಾಗಿರಲಿಲ್ಲ. ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಈ ಅವಧಿಯಲ್ಲಿ ಹಾಕಿರುವ 4483 ಎಸೆತಗಳಲ್ಲಿ ಸಿಕ್ಸರ್ ಹೊಡೆಯಲು ಯಾರಿಗೂ ಆಗಿರಲಿಲ್ಲ. ಆದರೆ 19 ವರ್ಷ ವಯಸ್ಸಿನ ಸ್ಯಾಮ್ ಕೊನಸ್ಟಸ್ ತಮ್ಮ ಪದಾರ್ಪಣೆ ಪಂದ್ಯದಲ್ಲಿ ಬೂಮ್ರಾಗೆ ಎರಡು ಸಿಕ್ಸರ್ ಹೊಡೆದರು.

ಬೂಮ್ರಾ ಅವರು 2021ರಲ್ಲಿ ಸಿಡ್ನಿ ಟೆಸ್ಟ್‌ನಲ್ಲಿ ಕೊನೆಯ ಬಾರಿಗೆ ಸಿಕ್ಸರ್ ಕೊಟ್ಟಿದ್ದರು. ಅಲ್ಲಿಂದ ಇಲ್ಲಿಯವರೆಗೆ ಅವರು ಕಾಪಾಡಿಕೊಂಡಿದ್ದ 'ದಾಖಲೆ' ಈಗ ಮುರಿಯಿತು. ಇನಿಂಗ್ಸ್‌ನ ಏಳನೇ ಓವರ್‌ನಲ್ಲಿ ಬೂಮ್ರಾ ಹಾಕಿದ ಆಫ್‌ಸ್ಟಂಪ್ ಹೊರಗಿದ್ದ ಎಸೆತವನ್ನು ತಮ್ಮ ಸ್ವ್ಯಾನ್ಸ್ ರಿವರ್ಸ್ ಮಾಡಿಕೊಂಡ ಸ್ಯಾಮ್ ಸ್ಕೂಪ್ ಮಾದರಿಯಲ್ಲಿ ಹೊಡೆದರು. ಸ್ಲಿಪ್ ಫೀಲ್ಡರ್‌ಗಳ ತಲೆಯ ಮೇಲಿಂದ ಸಾಗಿದ ಚೆಂಡು ಬೌಂಡರಿಗೆರೆ ದಾಟಿತು. 11ನೇ ಓವರ್ ಬೌಲಿಂಗ್ ಮಾಡಿದ ಬೂಮ್ರಾ ಎಸೆತದಲ್ಲಿ ಲಾಂಗ್ ಆನ್‌ಗೆ ಸಿಕ್ಸರ್ ಎತ್ತಿದರು.

ಭಾರತದ ಬೌಲರ್ ಜಸ್‌ಪ್ರೀತ್ ಬೂಮ್ರಾ



ಸ್ಕೂಪ್ ಮಾಡುವ ಪ್ರಯತ್ನದಲ್ಲಿ ಆಸ್ಟ್ರೇಲಿಯಾದ ಬ್ಯಾಟರ್ ಸ್ಯಾಮ್ ಕಾನ್ಸಟಸ್ –ಎಎಫ್‌ಪಿ ಚಿತ್ರಗಳು

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 6 ವಿಕೆಟ್‌ಗೆ 311 (86 ಓವರ್‌ಗಳಲ್ಲಿ)
ಸ್ಯಾಮ್ ಎಲ್‌ಬಿಡಬ್ಲ್ಯು ಬಿ ಜಡೇಜ 60 (65ಎ, 4x6, 6x2)
ಖ್ವಾಜಾ ಸಿ ರಾಹುಲ್ ಬಿ ಬೂಮ್ರಾ 57 (121ಎ, 4x6)
ಲಾಬುಷೇನ್ ಸಿ ಕೊಹ್ಲಿ ಬಿ ವಾಷಿಂಗ್ಟನ್ 72 (145ಎ, 4x7)
ಸ್ಟೀವನ್ ಸ್ಮಿತ್ ಔಟಾಗದೇ 68 (111ಎ, 4x5, 6x1)
ಹೆಡ್ ಬಿ ಬೂಮ್ರಾ 0 (7ಎ)
ಮಾರ್ಷ್ ಸಿ ಪಂತ್ ಬಿ ಬೂಮ್ರಾ 4 (13ಎ, 4x1)
ಕ್ಯಾರಿ ಸಿ ಪಂತ್ ಬಿ ಆಕಾಶ್‌ದೀಪ್ 31 (41ಎ, 6x1)
ಪ್ಯಾಟ್ ಕಮಿನ್ಸ್ ಔಟಾಗದೇ 8 (17ಎ, 4x1)
ಇತರೆ: 11 (ಲೆಗ್‌ಬೈ 7, ನೋಬಾಲ್ 4)
ವಿಕೆಟ್ ಪತನ: 1-89 (ಸ್ಯಾಮ್ ಕಾನ್ಸಟಸ್ 19.2), 2-154 (ಉಸ್ಮಾನ್ ಖ್ವಾಜಾ, 44.1), 3-237 (ಮಾರ್ನಸ್ ಲಾಬುಸೇನ್, 65.1), 4-240 (ಟ್ರಾವಿಸ್ ಹೆಡ್, 66.3), 5-246 (ಮಿಚೆಲ್ ಮಾರ್ಷ್, 68.6), 6-299 (ಅಲೆಕ್ಸ್ ಕ್ಯಾರಿ, 82.1)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 21–7–75–3, ಮೊಹಮ್ಮದ್ ಸಿರಾಜ್ 15–2–69–0, ಆಕಾಶ್ ದೀಪ್ 19–5–59–1, ರವೀಂದ್ರ ಜಡೇಜ 14–2–54–1, ನಿತೀಶ್ ಕುಮಾರ್ ರೆಡ್ಡಿ 5–0–10–0, ವಾಷಿಂಗ್ಟನ್ ಸುಂದರ್ 12–2–37–1

ಕೊಹ್ಲಿಗೆ ದಂಡ, ಡಿಮೆರಿಟ್ ಪಾಯಿಂಟ್

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾದ ಯುವ ಆಟಗಾರ ಸ್ಯಾಮ್ ಕೊನಸ್ಟಸ್ ಅವರೊಂದಿಗೆ ವಾಗ್ವಾದ ನಡೆಸಿದ ಭಾರತದ ಬ್ಯಾಟರ್ ವಿರಾಟ್ ಕೊಹ್ಲಿ ಅವರಿಗೆ ದಂಡ ಹಾಗೂ ಡಿಮೆರಿಟ್ ಪಾಯಿಂಟ್ ವಿಧಿಸಲಾಗಿದೆ.

ಇನಿಂಗ್ಸ್‌ನ 10ನೇ ಓವರ್ ಮುಗಿದ ನಂತರ ಪಿಚ್ ದಾಟುವಾಗ ಕೊಹ್ಲಿ ಅವರು ಸ್ಯಾಮ್ ಅವರಿಗೆ ಡಿಕ್ಕಿ ಹೊಡೆದರು. ಪರಸ್ಪರ ಭುಜಗಳು ಡಿಕ್ಕಿಯಾದವು. ಇದರಿಂದಾಗಿ ಕೊಹ್ಲಿಯ ಮೇಲೆ ಐಸಿಸಿ ನಿಯಮಾವಳಿಯ ಲೆವಲ್ ಒನ್ ಉಲ್ಲಂಘನೆಯ ಅಡಿಯಲ್ಲಿ ದಂಡ ವಿಧಿಸಲಾಗಿದೆ. ವಿರಾಟ್ ತಮ್ಮ ಪಂದ್ಯ ಶುಲ್ಕದ ಶೇ20ರಷ್ಟನ್ನು ದಂಡ ರೂಪದಲ್ಲಿ ನೀಡಬೇಕು. ಅವರಿಗೆ ಒಂದು ಡಿಮೆರಿಟ್ ಪಾಯಿಂಟ್ ಕೂಡ ಹಾಕಲಾಗಿದೆ.

ಅಂಪೈರ್‌ಗಳಾದ ಜೋಲ್ ವಿಲ್ಸನ್, ಮೈಕೆಲ್ ಗಾಫ್, ಮೂರನೇ ಅಂಪೈರ್ ಶರ್ಫುದೌಲಾ ಇಬ್ನಿ ನಾಲ್ಕನೇ ಅಂಪೈರ್ ಶಾನ್ ಕ್ರೇಗ್ ದೂರುಪಟ್ಟಿ ಸಲ್ಲಿಸಿದರು. ಮ್ಯಾಚ್ ರೆಫರಿ ಆ್ಯಂಡಿ ಪೈಕ್ರಾಫ್ಟ್ ಅವರು ತೀರ್ಪು ಪ್ರಕಟಿಸಿದರು. 'ವಿರಾಟ್ ಕೊಹ್ಲಿ ಅವರು ತೀರ್ಪು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಯಾವುದೇ ವಿಚಾರಣೆ ಮತ್ತು ಹೇಳಿಕೆಗಳನ್ನು ಪಡೆಯುವ ಅಗ್ಯವಿಲ್ಲ' ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಇದು ಆಕಸ್ಮಿಕವಾಗಿ ನಡೆದ ಘಟನೆ. ವಿರಾಟ್ ಕೊಹ್ಲಿ ಪಿಚ್ ದಾಟುವಾಗ ಆಕಸ್ಮಿಕವಾಗಿ ಅವರ ಭುಜವು ನನ್ನ ಭುಜಕ್ಕೆ ತಾಕಿತು' ಎಂದು ಸ್ಯಾಮ್ ಪಂದ್ಯದ ನಂತರ ಸುದ್ದಿಗಾರರಿಗೆ ಹೇಳಿದರು.

ಮ್ಯಾಚ್ ರೆಫರಿ ಪೈಕ್ರಾಫ್ಟ್ ಶತಕ!

ಮೆಲ್ಬರ್ನ್ (ಪಿಟಿಐ): ಜಿಂಬಾಬ್ವೆ ಕ್ರಿಕೆಟ್ ತಂಡದ ಮಾಜಿ ನಾಯಕ ಆ್ಯಂಡಿ ಪೈಕ್ರಾಫ್ಟ್ ಅವರು ಮ್ಯಾಚ್ ರೆಫರಿಯಾಗಿ 100 ಟೆಸ್ಟ್ ಪಂದ್ಯಗಳನ್ನು ಪೂರ್ಣಗೊಳಿಸಿದ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ.

ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಬಾಕ್ಸಿಂಗ್ ಡೇ ಟೆಸ್ಟ್ ನೊಂದಿಗೆ ಈ ಮೈಲುಗಲ್ಲು ತಲುಪಿದರು. ಪುರುಷರ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಈ ಸಾಧನೆ ಮಾಡಿದ ನಾಲ್ಕನೇ ವ್ಯಕ್ತಿ 68 ವರ್ಷ ವಯಸ್ಸಿನ ಪೈಕ್ರಾಫ್ಟ್ ಆಗಿದ್ದಾರೆ.

ಶ್ರೀಲಂಕಾದ ಮಾಜಿ ಆಟಗಾರ ರಂಜನ್ ಮದುಗಲೆ 225 ಟೆಸ್ಟ್ ಗಳೊಂದಿಗೆ ಅತ್ಯಂತ ಅನುಭವಿಮ್ಯಾಚ್ ರೆಫರಿಯಾಗಿ ದ್ದಾರೆ. ನ್ಯೂಜಿ ಲೆಂಡ್‌ನ ಜೆಫ್ ಕ್ರೋವ್ (125) ಮತ್ತು ಇಂಗ್ಲೆಂಡ್‌ನ ಕ್ರಿಸ್ ಬ್ರಾಡ್ (123) ನಂತರದ ಸ್ಥಾನದಲ್ಲಿದ್ದಾರೆ.

ಮಯಂಕ್ ಶತಕಕ್ಕೆ ಒಲಿದ ಜಯ

ವಿಜಯ್ ಹಜಾರೆ ಟ್ರೋಫಿ: ಅಗ್ರಸ್ಥಾನಕ್ಕೇರಿದ ಕರ್ನಾಟಕ

ಬೆಂಗಳೂರು: ಏಕಾಂಗಿ ಹೋರಾಟ ನಡೆಸಿದ ನಾಯಕ ಮಯಂಕ್ ಅಗರವಾಲ್ (ಔಟಾಗದೇ 139; 127ಎ) ಅವರ ಅಮೋಘ ಶತಕದ ನೆರವಿನಿಂದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ರೋಚಕ ಜಯ ಸಾಧಿಸಿತು. ಇದರೊಂದಿಗೆ ಸಿ ಗುಂಪಿನಲ್ಲಿ ಹ್ಯಾಟ್ರಿಕ್ ಸಾಧಿಸಿತು.

ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ (ಬಿ) ಗುರುವಾರ ನಡೆದ ಹಣಾಹಣಿಯಲ್ಲಿ ಮಯಂಕ್ ಬಳಗವು 1 ವಿಕೆಟ್‌ನಿಂದ ಪಂಜಾಬ್ ತಂಡವನ್ನು ಮಣಿಸಿತು. ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು.

ಈ ಮೊದಲು ಮುಂಬೈ ಮತ್ತು ಪುದುಚೇರಿ ತಂಡವನ್ನು ಹಣಿದಿದ್ದ ಕರ್ನಾಟಕ ತಂಡ, ಒಟ್ಟು 12 ಅಂಕ ಸಂಪಾದಿಸಿದೆ. ಅಗ್ರಸ್ಥಾನದಲ್ಲಿದ್ದ ಅಭಿಷೇಕ್ ಶರ್ಮಾ ನಾಯಕತ್ವದ ಪಂಜಾಬ್ (8 ಅಂಕ) ಈ ಸೋಲಿನೊಂದಿಗೆ ಮೂರನೇ ಸ್ಥಾನಕ್ಕೆ ಸರಿಯಿತು. ಮುಂಬೈ (8) ಎರಡನೇ ಸ್ಥಾನದಲ್ಲಿದೆ.

ಟಾಸ್ ಗೆದ್ದ ಕರ್ನಾಟಕ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ 49.2 ಓವರ್‌ಗಳಲ್ಲಿ 247 ರನ್‌ಗಳಿಗೆ ಆಲೌಟ್ ಆಯಿತು. ಕರ್ನಾಟಕದ ಅಭಿಲಾಷ್ ಶೆಟ್ಟಿ (44ಕ್ಕೆ 5) ಅವರ ಪರಿಣಾಮಕಾರಿ ಬೌಲಿಂಗ್ ದಾಳಿ ನಡೆಸಿದರು. ಪಂಜಾಬ್ ತಂಡದ ಅನ್ಮೋಲ್‌ಪ್ರೀತ್ ಸಿಂಗ್ (51;60ಎ) ಮತ್ತು ಅನ್ಮೋಲ್ ಮಲ್ಹೋತ್ರಾ (42;43ಎ) ಉಪಯುಕ್ತ ಕಾಣಿಕೆ ನೀಡಿದರು. ಪಂಜಾಬ್ ನಾಲ್ಕು ವಿಕೆಟ್‌ಗಳಿಗೆ 192 ರನ್ ಗಳಿಸಿ ಸುಸ್ಥಿತಿಯಲ್ಲಿದ್ದಾಗ ವೇಗದ ಬೌಲರ್ ಅಭಿಲಾಷ್ ದಾಳಿಗಿಳಿದು, ಕೇವಲ 10 ರನ್ ಅಂತರದಲ್ಲಿ ನಾಲ್ಕು ವಿಕೆಟ್ ಕಬಳಿಸಿ ಪಟ್ಟು ನೀಡಿದರು. ವಾಸುಕಿ ಕೌಶಿಕ್ ಮತ್ತು ನಿಕಿನ್ ಜೋಸ್ ತಲಾ ಎರಡು ವಿಕೆಟ್ ಪಡೆದರು.

ಗುರಿ ಬೆನ್ನತ್ತಿದ ಕರ್ನಾಟಕ ತಂಡಕ್ಕೆ ಮಯಂಕ್ ಮತ್ತು ನಿಕಿನ್ (13) ಮೊದಲ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು. ಆದರೆ, 84 ರನ್ ಗಳಿಸುವಷ್ಟರಲ್ಲಿ ಪ್ರಮುಖ ನಾಲ್ಕು ವಿಕೆಟ್‌ಗಳು ಪತನಗೊಂಡು ಆತಂಕ ಸೃಷ್ಟಿಯಾಯಿತು. ಮುಂಬೈ ಮತ್ತು ಪುದುಚೇರಿ ವಿರುದ್ಧ ಕ್ರಮವಾಗಿ ಅಜೇಯ ಶತಕ ದಾಖಲಿಸಿದ್ದ ಕೆ.ಎಲ್.ಶ್ರೀಜಿತ್ (9), ಮತ್ತು ಆರ್.ಸ್ಮರಣ್ (5) ನಿರಾಸೆ ಮೂಡಿಸಿದರು. ಕೆ.ವಿ. ಅನೀಶ್ (7) ಅವರೂ ಬೇಗನೆ ನಿರ್ಗಮಿಸಿದರು.

ಈ ಹಂತದಲ್ಲಿ ಮಯಂಕ್ ಜವಾಬ್ದಾರಿಯುತ ಆಟವಾಡಿದರು. ಐದನೇ ವಿಕೆಟ್ ಜೊತೆಯಾಟದಲ್ಲಿ ಶ್ರೇಯಸ್ ಗೋಪಾಲ್ (29; 39ಎ) ಅವರೊಂದಿಗೆ 67 ರನ್ ಸೇರಿದರು. ನಂತರ ಬಂದ ಪ್ರವೀಣ್ ದುಬೆ (11) ಮತ್ತು ಅಭಿನವ್ ಮನೋಹರ್ (20) ಅವರು ಮಯಂಕ್‌ಗೆ ಸಾಥ್ ನೀಡಿ, ತಂಡದ ಮೊತ್ತವನ್ನು 200ರ ಗಡಿ ತಲುಪಿಸಿದರು. ಈ ವೇಳೆ ಮೂರು ರನ್ ಅಂತರದಲ್ಲಿ ಮೂರು ವಿಕೆಟ್ ಪತನಗೊಂಡು, ಪಂದ್ಯ ಮತ್ತೆ ತಿರುವು ಪಡೆಯಿತು.



ಮಯಂಕ್ ಅಗರವಾಲ್

ಮತ್ತೊಂದೆಡೆ ಗಟ್ಟಿಯಾಗಿ ನಿಂತಿದ್ದ ಮಯಂಕ್ ಧೃತಿಗೆಡದೆ, ಒತ್ತಡವನ್ನು ನಿಭಾಯಿಸಿಕೊಂಡು ಮುರಿಯದ 10ನೇ ವಿಕೆಟ್ ಜೊತೆಯಾಟದಲ್ಲಿ ವಾಸುಕಿ ಕೌಶಿಕ್ (7;10ಎ) ಅವರೊಂದಿಗೆ 48 ರನ್ ಸೇರಿಸಿ ಗೆಲುವಿನ ರೂವಾರಿಯಾದರು. ಅವರ ಇನಿಂಗ್ಸ್‌ನಲ್ಲಿ 17 ಬೌಂಡರಿ ಮತ್ತು ಮೂರು ಸಿಕ್ಸರ್ ಒಳಗೊಂಡಿದ್ದವು. ಇನ್ನೂ 15 ಎಸೆತ ಬಾಕಿ ಇರುವಂತೆ ಕರ್ನಾಟಕ 9 ವಿಕೆಟ್‌ಗೆ 251 ರನ್ ಗಳಿಸಿ ಜಯ ಸಾಧಿಸಿತು. ಪಂಜಾಬ್ ಸ್ಪಿನ್ನರ್ ಅಭಿಷೇಕ್ ಶರ್ಮಾ ನಾಲ್ಕು ವಿಕೆಟ್ ಪಡೆದರೆ, ಅರ್ಷದೀಪ್ ಸಿಂಗ್ ಮತ್ತು ಸನ್ವೀರ್ ಸಿಂಗ್ ತಲಾ ಎರಡು ವಿಕೆಟ್ ಗಳಿಸಿದರು.

ಕರ್ನಾಟಕ ಶನಿವಾರ ಅರುಣಾಚಲ ಪ್ರದೇಶ ತಂಡವನ್ನು ಎದುರಿಸಲಿದೆ. ಆಡಿರುವ ಮೂರೂ ಪಂದ್ಯಗಳನ್ನು ಸೋತಿರುವ ಅರುಣಾಚಲ ಪ್ರದೇಶ 8 ತಂಡಗಳ ಗುಂಪಿನಲ್ಲಿ ಕೊನೆಯ ಸ್ಥಾನದಲ್ಲಿದೆ.

ಸಂಕ್ಷಿಪ್ತ ಸ್ಕೋರ್: ಪಂಜಾಬ್: 49.2 ಓವರ್‌ಗಳಲ್ಲಿ 247 (ಪ್ರಭಸಿಮ್ರನ್ ಸಿಂಗ್ 26, ಅನ್ಮೋಲ್‌ಪ್ರೀತ್ ಸಿಂಗ್ 51, ನೆಹಾಲ್ ವಧೇರಾ 37, ಅನ್ಮೋಲ್ ಮಲ್ಹೋತ್ರಾ 42, ಸನ್ವೀರ್ ಸಿಂಗ್ 35; ವಾಸುಕಿ ಕೌಶಿಕ್ 43ಕ್ಕೆ 2, ಅಭಿಲಾಷ್ ಶೆಟ್ಟಿ 44ಕ್ಕೆ 5, ನಿಕಿನ್ ಜೋಸ್ 47ಕ್ಕೆ 2). ಕರ್ನಾಟಕ: 47.3 ಓವರ್‌ಗಳಲ್ಲಿ 251 (ಮಯಂಕ್ ಅಗರವಾಲ್ ಔಟಾಗದೇ 139, ಶ್ರೇಯಸ್ ಗೋಪಾಲ್ 29, ಅಭಿನವ್ ಮನೋಹರ್ 20; ಅಭಿಷೇಕ್ ಶರ್ಮಾ 56ಕ್ಕೆ 4, ಅರ್ಷದೀಪ್ ಸಿಂಗ್ 48ಕ್ಕೆ 2, ಸನ್ವೀರ್ ಸಿಂಗ್ 33ಕ್ಕೆ 2). ಫಲಿತಾಂಶ: ಕರ್ನಾಟಕಕ್ಕೆ ಒಂದು ವಿಕೆಟ್ ಜಯ, ನಾಲ್ಕು ಅಂಕ. ಪಂದ್ಯದ ಆಟಗಾರ: ಮಯಂಕ್ ಅಗರವಾಲ್.

(ಮಾಹಿತಿ: ಬಿಸಿಸಿಐ.ಟಿವಿ)

ಜೈಪುರ ಪಿಂಕ್ ಪ್ಯಾಂಥರ್ಸ್, ಯು ಮುಂಬಾಗೆ ನಿರಾಸೆ

ಸೆಮಿಫೈನಲ್‌ಗೆ ಯೋಧಾಸ್, ಪೈರೇಟ್ಸ್

ಪುಣೆ (ಪಿಟಿಐ): ಭವಾನಿ ರಜಪೂತ್ ಅವರ ರೇಡಿಂಗ್ ಬಲದಿಂದ ಯುಪಿ ಯೋಧಾಸ್ ಪ್ರೊ ಕಬಡ್ಡಿ ಲೀಗ್‌ನ 11ನೇ ಆವೃತ್ತಿಯ ಮೊದಲ ಎಲಿಮಿನೇಟರ್ ಪಂದ್ಯದಲ್ಲಿ 46–18ರಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿತು.

ಬಾಲೆವಾಡಿ ಒಳಾಂಗಣ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯವು ಆರಂಭದಿಂದಲೇ ಏಕಪಕ್ಷೀಯವಾಗಿ ಸಾಗಿತು. ಮೊದಲಾರ್ಧದಲ್ಲಿ 15 (23–8) ಪಾಯಿಂಟ್ಸ್‌ಗಳಿಂದ ಮುನ್ನಡೆ ಸಾಧಿಸಿದ್ದ ಯೋಧಾಸ್, ಉತ್ತರಾರ್ಧದಲ್ಲೂ ಪಾರಮ್ಯ ಮೆರೆದು ಗೆಲುವಿನ ಅಂತರವನ್ನು 28 ಅಂಕಗಳಿಗೆ ಹೆಚ್ಚಿಸಿಕೊಂಡಿತು. ಎರಡು ಬಾರಿಯ ಚಾಂಪಿಯನ್ ಪ್ಯಾಂಥರ್ಸ್ ಯಾವ ಹಂತದಲ್ಲೂ ಪ್ರತಿರೋಧ ತೋರದೆ ಟೂರ್ನಿಯಿಂದ ಹೊರಬಿತ್ತು.

ಸಾಂಘಿಕ ಪ್ರದರ್ಶನ ನೀಡಿದ ಯೋಧಾಸ್ ಆಟಗಾರರು ಎದುರಾಳಿ ತಂಡವನ್ನು ನಾಲ್ಕು ಬಾರಿ ಆಲೌಟ್ ಮಾಡಿ ಎಂಟು ಅಂಕ ಸಂಪಾದಿಸಿದರು. 12 ಅಂಕ ಗಳಿಸಿದ ಭವಾನಿ ಅವರಿಗೆ ಕನ್ನಡಿಗ ಗಗನ್ ಗೌಡ (5) ರೇಡಿಂಗ್‌ನಲ್ಲಿ ಸಾಥ್ ನೀಡಿದರು. ಡಿಫೆಂಡರ್‌ಗಳಾದ ಹಿತೇಶ್ ಮತ್ತು ಸುಮಿತ್ ಕ್ರಮವಾಗಿ 6 ಮತ್ತು 5 ಅಂಕ ಗಳಿಸಿದರು. ಪ್ಯಾಂಥರ್ಸ್‌ನ ರೇಜಾ 5 ಪಾಯಿಂಟ್ಸ್ ಸಂಪಾದಿಸಿದರು.

ಅಜೇಯ ಓಟವನ್ನು 10 ಪಂದ್ಯಗಳಿಗೆ ವಿಸ್ತರಿಸಿಕೊಂಡ ಯೋಧಾಸ್ ತಂಡವು ಶುಕ್ರವಾರ ನಾಲ್ಕರ ಘಟ್ಟದ ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡವನ್ನು ಎದುರಿಸಲಿದೆ. ಕಳೆದ ಆವೃತ್ತಿಯ ರನ್ನರ್ಸ್ ಅಪ್ ಹರಿಯಾಣ ತಂಡವು ಗುಂಪು ಹಂತದಲ್ಲಿ ಅಗ್ರಸ್ಥಾನ ಪಡೆದು ನೇರವಾಗಿ ಸೆಮಿಫೈನಲ್ ಪ್ರವೇಶಿಸಿತ್ತು. ಎರಡೂ ತಂಡಗಳು ಚೊಚ್ಚಲ ಪ್ರಶಸ್ತಿಯನ್ನು ಎದುರು ನೋಡುತ್ತಿವೆ.

ಪಟ್ನಾ ಸೆಮಿಗೆ: ಮತ್ತೊಂದು ಪಂದ್ಯದಲ್ಲಿ ಮೂರು ಬಾರಿಯ ಚಾಂಪಿಯನ್ ಪಟ್ನಾ ಪೈರೇಟ್ಸ್ ತಂಡವು 31-23ರಿಂದ ಯು ಮುಂಬಾ ತಂಡವನ್ನು ಮಣಿಸಿ ನಾಲ್ಕರ ಘಟ್ಟಕ್ಕೆ ಮುನ್ನಡೆಯಿತು. ಶುಕ್ರವಾರ ನಡೆಯುವ ಎರಡನೇ ಸೆಮಿಫೈನಲ್‌ನಲ್ಲಿ ಪಟ್ನಾ ತಂಡವು ಡೆಲ್ಲಿ ದಬಾಂಗ್‌ಗೆ ಸವಾಲೊಡ್ಡಲಿದೆ.



ಪ್ರೊ ಕಬಡ್ಡಿ ಲೀಗ್‌ನ ಎಲಿಮಿನೇಟರ್ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡದ ರೇಡರನ್ನು ಹಿಡಿದೆಳೆದ ಯು.ಪಿ. ಯೋಧಾಸ್ ಆಟಗಾರರು.

PRO KABADDI

ಇಂದಿನ ಪಂದ್ಯಗಳು
ಹರಿಯಾಣ ಸ್ಟೀಲರ್ಸ್ ಯು.ಪಿ.ಯೋಧಾಸ್ (ರಾತ್ರಿ 8)
ಡೆಲ್ಲಿ ದಬಾಂಗ್ ಪಟ್ನಾ ಪೈರೇಟ್ಸ್ (ರಾತ್ರಿ 9)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಸ್ನಿ ಹಾಟ್‌ಸ್ಟಾರ್

ಕಿಂಗ್ ಕಪ್ ಬ್ಯಾಡ್ಮಿಂಟನ್: ಕಣಕ್ಕೆ ಲಕ್ಷ್ಯ ಸೇನ್



ಶೆಂಜೆನ್, ಚೀನಾ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ಆಟಗಾರ ಲಕ್ಷ್ಯ ಸೇನ್ ಅವರು ಶುಕ್ರವಾರ ಆರಂಭವಾಗಲಿರುವ ಚೊಚ್ಚಲ ಕಿಂಗ್ ಕಪ್ ಇಂಟರ್‌ನ್ಯಾಷನಲ್ ಬ್ಯಾಡ್ಮಿಂಟನ್ ಓಪನ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ಕಿಂಗ್ ಕಪ್ ಟೂರ್ನಿಯಲ್ಲಿ 12ನೇ ರ‍್ಯಾಂಕ್ ಆಟಗಾರ ಲಕ್ಷ್ಯ ಅವರೊಂದಿಗೆ ಮೊದಲ ಸುತ್ತಿನಲ್ಲಿ ಹಾಂಗ್‌ಕಾಂಗ್‌ನ ಅಂಗೂಸ್ ಎನ್‌ಜಿ ಕಾ ಲಾಂಗ್ ಸವಾಲೊಡ್ಡಲಿದ್ದಾರೆ.

ಕ್ಲೀನ್‌ಸ್ವೀಪ್‌ನತ್ತ ಭಾರತದ ಚಿತ್ತ

ವಡೋದರ(ಪಿಟಿಐ): ಆತಿಥೇಯ ಭಾರತ ಮಹಿಳೆಯರ ತಂಡವು ವೆಸ್ಟ್ ಇಂಡೀಸ್ ಎದುರಿನ ಏಕದಿನ ಸರಣಿಯಲ್ಲಿ ಕ್ಲೀನ್‌ಸ್ವೀಪ್ ಸಾಧನೆಯತ್ತ ಚಿತ್ತ ನೆಟ್ಟಿದೆ.

ಶುಕ್ರವಾರ ನಡೆಯಲಿರುವ ಸರಣಿಯ ಮೂರನೇ ಮತ್ತು ಕೊನೆಯ ಪಂದ್ಯದಲ್ಲಿ ಜಯಿಸುವ ವಿಶ್ವಾಸದಲ್ಲಿ ಹರ್ಮನ್‌ಪ್ರೀತ್ ಕೌರ್ ಬಳಗವಿದೆ. ಸರಣಿಯ ಮೊದಲೆರಡೂ ಪಂದ್ಯಗಳಲ್ಲಿ ಭಾರತದ ವನಿತೆಯರು ಜಯ ಸಾಧಿಸಿದ್ದಾರೆ. ಸ್ಮೃತಿ ಮಂದಾನ ಉತ್ತಮ ಲಯದಲ್ಲಿದ್ದಾರೆ. ಕಳೆದ ಪಂದ್ಯದಲ್ಲಿ ಹರ್ಲೀನ್ ಡಿಯೊಲ್ ಕೂಡ ಶತಕ ಬಾರಿಸಿದ್ದರು.

ಆದರೆ ಪದಾರ್ಪಣೆ ಸರಣಿ ಆಡುತ್ತಿರುವ ಪ್ರತೀಕಾ ರಾವಳ್ ಅವರು ದೊಡ್ಡ ಮೊತ್ತ ಗಳಿಸಲಿಲ್ಲ. ಬೌಲಿಂಗ್‌ನಲ್ಲಿ ರೇಣುಕಾ ಠಾಕೂರ್, ತಿತಾಸ್ ಸಾಧು ಮತ್ತು ಸ್ಪಿನ್ನರ್ ಪ್ರಿಯಾ ಮಿಶ್ರಾ ಪರಿಣಾಮಕಾರಿ ದಾಳಿ ನಡೆಸಿದ್ದರು. ವಿಂಡೀಸ್ ತಂಡದ ಹೆಯಲಿ ಮ್ಯಾಥ್ಯೂಸ್ ಅವರು ಉತ್ತಮ ಲಯದಲ್ಲಿದ್ದಾರೆ. ಅವರು ಕಳೆದ ಪಂದ್ಯದಲ್ಲಿ ಶತಕ ಹೊಡೆದಿದ್ದರು. ಸಮಾಧಾನಕರ ಜಯ ಸಾಧಿಸುವ ಛಲದಲ್ಲಿರುವ ಅವರಿಗೆ ಉಳಿದ ಆಟಗಾರ್ತಿಯರಿಂದಲೂ ಸೂಕ್ತ ಬೆಂಬಲದ ಅವಶ್ಯಕತೆ ಇದೆ.

ಪಂದ್ಯ ಆರಂಭ: ಬೆಳಿಗ್ಗೆ 9.30, ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ



ಬಿಯುಎಫ್‌ಸಿ ತಂಡದ ಅಮರ್‌ಜಿತ್ ಸಿಂಗ್ (ಎಡ) ಮತ್ತು ರೆಬೆಲ್ಸ್ ಎಫ್‌ಸಿ ತಂಡದ ಆಲೆನ್ ಹೆರಿಕ್ ಅವರು ಚೆಂಡಿಗಾಗಿ ಪೈಪೋಟಿ ನಡೆಸಿದರು ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ಸ್ಪೋರ್ಟಿಂಗ್ ಕ್ಲಬ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತರುಣ್ ಕುಮಾರ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡ ಗುರುವಾರ ನಡೆದ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ ಸುಲಭ ಗೆಲುವು ಸಾಧಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ 4–0 ಗೋಲುಗಳಿಂದ ಎಫ್‌ಸಿ ಅಗ್ನಿಪುತ್ರ ತಂಡವನ್ನು ಮಣಿಸಿತು. ಸ್ಪೋರ್ಟಿಂಗ್ ಕ್ಲಬ್‌ನ ತರುಣ್ ಕುಮಾರ್ (24ನೇ ಮತ್ತು 60ನೇ ನಿಮಿಷ) ಮತ್ತು (90 + 3ನೇ) ಗೋಲುಗಳನ್ನು ಬಾರಿಸಿದರು. ಬಿ ಬಾಬು (90 + 4ನೇ) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಬಿಯುಎಫ್‌ಸಿ ತಂಡ 4–2 ಗೋಲುಗಳಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ಸೋಲಿಸಿತು. ಬಿಯುಎಫ್‌ಸಿ ತಂಡದ ಬೊನಿಸನ್ ನೊಂಗ್‌ಮೈಥೆಮ್ (29ನೇ), ಲಾಯಿಶ್ರಾಮ್ ಅಮಿತ್ ಸಿಂಗ್ (37ನೇ), ಅರುಣ್ ತಮನ್‌ಟಿಜಿ (44ನೇ ಮತ್ತು 86ನೇ) ಗೋಲು ಬಾರಿಸಿದರು. ರೆಬೆಲ್ಸ್ ತಂಡದ ಪರ ಅವಿನಾಶ್ ವಿ. (45 + 2ನೇ) ಮತ್ತು ಹಿಜಾಮ್ ಲೆನಿನ್ ಸಿಂಗ್ (51ನೇ) ಗೋಲು ಹೊಡೆದರು.

ಮೂರನೇ ಪಂದ್ಯದಲ್ಲಿ ಮೊಹಮ್ಮಡನ್ ಸ್ಪೋರ್ಟಿಂಗ್ ಎಫ್‌ಸಿ 2–1ರಿಂದ ಅಲ್ ಫತೇಹ ಎಫ್‌ಸಿ ತಂಡವನ್ನು ಮಣಿಸಿತು. ನಾಲ್ಕನೇ ಪಂದ್ಯದಲ್ಲಿ ಜೂನೊ ಎಫ್‌ಸಿ ತಂಡ 1–1 ಗೋಲುಗಳಿಂದ ಟೆಕ್‌ನಿಕೊ ಎಫ್‌ಎಫ್ ವಿರುದ್ಧ ಡ್ರಾ ಸಾಧಿಸಿತು. ಐದನೇ ಪಂದ್ಯದಲ್ಲಿ ಸೌತ್ ಇಂಡಿಯಾ ಎಫ್‌ಸಿ ತಂಡ 1–0 ಗೋಲುಗಳಿಂದ ಅಂಚೆ ಇಲಾಖೆ ಎಫ್‌ಸಿ ವಿರುದ್ಧ ಗೆಲುವು ಸಾಧಿಸಿತು.

ಪ್ಯಾಟರ್ಸನ್ ದಾಳಿ: ಕುಸಿದ ಪಾಕ್

ಸೆಂಚುರಿಯನ್ (ಎಎಫ್‌ಪಿ): ಪಾಕಿಸ್ತಾನ ತಂಡವು ಗುರುವಾರ ಇಲ್ಲಿ ಆರಂಭವಾದ ಮೊದಲ ಟೆಸ್ಟ್ ಪಂದ್ಯದಲ್ಲಿ ಆತಿಥೇಯ ದಕ್ಷಿಣ ಆಫ್ರಿಕಾದ ವೇಗಿ ಡೇನ್ ಪ್ಯಾಟರ್ಸನ್ (61ಕ್ಕೆ5) ಅವರ ದಾಳಿಗೆ ಕುಸಿಯಿತು.

ಸೂಪರ್‌ಸ್ಪೋರ್ಟ್ಸ್ ಪಾರ್ಕ್‌ನಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಪಾಕ್ ತಂಡವು 57.3 ಓವರ್‌ಗಳಲ್ಲಿ 211 ರನ್‌ಗಳಿಗೆ ಆಲೌಟ್ ಆಯಿತು. ಕಮ್ರನ್ ಗುಲಾಮ್ (54; 71ಎಸೆತ) ಅವರು ಅರ್ಧಶತಕ ಗಳಿಸಿದರು. ಇದಕ್ಕುತ್ತರವಾಗಿ ದಕ್ಷಿಣ ಆಫ್ರಿಕಾ ತಂಡವು ದಿನದಾಟದ ಕೊನೆಗೆ 22 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 82 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಾಕಿಸ್ತಾನ: 57.3 ಓವರ್‌ಗಳಲ್ಲಿ211 (ಕಮ್ರಾನ್ ಗುಲಾಮ್ 54, ಅಮೀರ್ ಜಮಾಲ್ 28, ಡೇನ್ ಪ್ಯಾಟರ್ಸನ್ 61ಕ್ಕೆ5, ಕಾರ್ಬಿನ್ ಬಾಷ್ 63ಕ್ಕೆ4, ಮಾರ್ಕೊ ಯಾನ್ಸನ್ 43ಕ್ಕೆ1) ದಕ್ಷಿಣ ಆಫ್ರಿಕಾ: 22 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 82 (ಏಡನ್ ಮರ್ಕರಂ ಬ್ಯಾಟಿಂಗ್ 47, ತೆಂಬಾ ಬವುಮಾ ಬ್ಯಾಟಿಂಗ್ 4, ಖುರಮ್ ಶಹಜಾದ್ 28ಕ್ಕೆ2, ಮೊಹಮ್ಮದ್ ಅಬ್ಬಾಸ್ 36ಕ್ಕೆ1).